**Government Oriental Library Series.**

EDITED BY PANDITS UNDER THE SUPERVISION OF THE CURATOR, GOVT. ORIENTAL LIBRARY, MYSORE.

KANNADA SECTION—No. III.

# THE MAHABHARATA

## The PAULOMA and ASTIKA Parvas

BY

**SADANANDA-YOGINDRA**

# ಮಹಾಭಾರತಂ

ಸದಾನಂದ ಯೋಗೀಂದ್ರ ವಿರಚಿತ

ಪೌಲೋಮ ಆಸ್ತೀಕ ಪರ್ವಗಳು

EDITED BY

V. SYAMACHARYA,

*Pandit, Govt. Oriental Library, Mysore.*

PUBLISHED UNDER THE AUTHORITY OF THE GOVERNMENT OF HIS HIGHNESS THE MAHARAJA OF MYSORE

MYSORE:
PRINTED AT THE GOVERNMENT BRANCH PRESS
1911

# ಅವತರಣಿಕೆ.

ಈ ಪುಸ್ತಕದಲ್ಲಿ ಶ್ರೀಮನ್ಮಹಾಭಾರತದಲ್ಲಿರುವ ಪೌಲೋಮಪರ್ವ ಆಸ್ತೀಕಪರ್ವಗಳ ಕಥಾವಿವರಣರೂಪವಾದ ಕನ್ನಡಪದ್ಯಕಾವ್ಯವು ಅಡ ಗಿದೆ. ಈಕಾವ್ಯವು ಶ್ರೀಕುಮಾರವ್ಯಾಸಕವಿಯಿಂದ ರಚಿತವಾಗಿ ಪ್ರಸಿದ್ಧಿ ಹೊಂದಿರುವ ಕರ್ಣಾಟಕ ಮಹಾಭಾರತಮಂಜರಿಯಲ್ಲಿ ವಿಶದವಾಗದೇ ಇರುವ ಭಾಗವನ್ನು ವಿಶದಪಡಿಸುವುದಕ್ಕೋಸ್ಕರ ಭಾಮಿನೀಷಟ್ಪದಿ ಯಲ್ಲಿ ರಚಿಸಲ್ಪಟ್ಟಂತೆ ಕಾಣುತ್ತಿದೆ. ಆದುದರಿಂದೇ ಪುಸ್ತಕಲೇಖಕ ರಿಂದ ಬಹುಪುಸ್ತಕಗಳಲ್ಲಿ ಕುಮಾರವ್ಯಾಸಕವಿಯ ಭಾರತದೊಡನೆ ವಿಭಾಗವು ತಿಳಿಯದಂತೆ ಸೇರಿಸಲ್ಪಟ್ಟಿದೆ. ಆದಾಗ್ಯೂ ಕೆಳಗೆ ವಿವರಿ ಸುವ ಕಾರಣಗಳಿಂದ ಈಗ್ರಂಥವು ಕುಮಾರವ್ಯಾಸಕವಿಕೃತವಲ್ಲವೆಂತ ನಿಶ್ಚಯಿಸಿ, ಗ್ರಂಥಭೇದಜ್ಞಾನಕ್ಕಾಗಿಯೇ ಬೇರೇ ಪುಸ್ತಕವನ್ನಾಗಿ ನೋಡಿ ಮುಂದೆ ಪ್ರಚುರಮಾಡಲ್ಪಡುವ ಕುಮಾರವ್ಯಾಸಕವಿಕೃತಿಗೆ ಇದೊಂದು ಉಪೋದ್ಘಾತವಾಗಿರಬಹುದೆಂದು ಪ್ರಚುರಪಡಿಸಿರುವೆವು.

ಈಗ ಈ ಗ್ರಂಥವು ಯಾವ ಕವಿಯಿಂದ ಯಾವ ಕಾಲದೇಶಗಳಲ್ಲಿ ಎಂತಹ ಭಾಷೆಯಲ್ಲಿ ರಚಿತವಾಗಿದೆ ಯೆಂಬುದು ವಿಚಾರಕ್ಕೆ ತಕ್ಕ ವಿಷ ಯವಾಗಿದೆ. ಅದರಲ್ಲಿ ಈ ಕವಿಯ ಕಾಲದೇಶಗಳನ್ನು ಕುರಿತು ಒಂದು ನಿಷ್ಕೃಷ್ಟಾಭಿಪ್ರಾಯವನ್ನು ಪಡೆಯಲು ಸರಿಯಾದ ಸಾಧನಗಳಾವವೂ ದೊರೆಯುವದಿಲ್ಲ. ಆದರೂ ಈಗ್ರಂಥದ ಪ್ರತಿಸಂಧಿಯ ಕೊನೆಯಲ್ಲಿ 'ನಿತ್ಯಾತ್ಮ' 'ನಿತ್ಯಾತ್ಮನಾರಾಯಣ' 'ನಿತ್ಯಾತ್ಮಪದುಮದೃಶ' ಈರೀತಿ ಯಾಗಿ ಅಂಕನವು ಇರುವಂತೆಯೆ, ಕರ್ಣಾಟಕ ಭಾಗವತದಲ್ಲಿಯೂ ಸಂ ಧ್ಯಂತ್ಯಪದ್ಯಗಳಲ್ಲಿ 'ನಿತ್ಯಾತ್ಮನಾರಾಯಣ' 'ನಿತ್ಯಾತ್ಮ' 'ನಿತ್ಯಾತ್ಮಪದುಮ ದೃಶ' 'ನಿತ್ಯಾತ್ಮಕೃಷ್ಣ' 'ನಿತ್ಯಾತ್ಮಗೋಪೀನಾಥ' ಇವು ಮೊದಲಾದ ಅಂಕನಗಳಿರುವುದರಿಂದ, ಈ ಗ್ರಂಥಕರ್ತನಾದ ಕವಿಯು ಭಾಗವತಪ್ರಣೇ

ತ್ರವಾದ ಕವಿಯೂ ಒಬ್ಬನೇ ಎಂದು ಹೇಳಬಹುದಾಗಿದೆ. ಮತ್ತು ಅಲ್ಲಲ್ಲಿ ಲಕ್ಷಣಶಾಸ್ತ್ರಗಳಿಗೆ ವಿರುದ್ಧವಾದ ಒಂದೇವಿಧವಾದ ಪ್ರಾಸ, ಸಂಧಿ, ಅಪ್ರಯುಕ್ತಶಬ್ದಗಳೂ ಇವೇ ಮೊದಲಾದವುಗಳು ಉಭಯಗ್ರಂಥಗಳಲ್ಲಿಯೂ ದೊರೆಯುತ್ತವೆ. ಈ ಕಾರಣಗಳಿಂದಲೂ ಮೇಲೆ ಹೇಳಿದ ಎರಡು ಗ್ರಂಥಗಳ ಕರ್ತರೂ ಒಂದೇ ಎಂದು ಊಹಿಸಬಹುದು. ಭಾಗವತಪ್ರಣೇತೃ ಕವಿಯ ಜೀವಿತಕಾಲವು ಕ್ರೈಸ್ತವಸಂವತ್ಸರಗಳ ಹದಿನಾರನೆಯ ಶತಕದ ಅಂತ್ಯಭಾಗವೆಂದು ಕೆಲವರು ಶೋಧಕರು ಊಹಿಸಿರುವರು. ಅಂತಹ ಊಹೆಗೂ ತಕ್ಕ ಸಾಧಕಗಳು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ.

ಈ ಕವಿಯು ಉಪಯೋಗಿಸಿರುವ ಭಾಷೆಯ ಸ್ಥಿತಿಯನ್ನು ನೋಡಲಾಗಿ ಮೈಸೂರಿಗೆ ಕೇವಲ ಸಮೀಪದೇಶದವನಲ್ಲವೆಂದುಮಾತ್ರ ಹೇಳಬಹುದು. ಈಕವಿಯು ತನ್ನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡಿರುವುದಿಲ್ಲ. ಆದರೆ ಕೆಲವರು ಗ್ರಂಥಾಂತಪದ್ಯಗಳ ಆಧಾರದಿಂದ "ಚಾಟುವಿಠಲನಾಥ" ನೆಂದು ಈಕವಿಯ ಹೆಸರನ್ನು ಹೇಳುವರು. ಆದರೆ ಅದೂ ಒಂದು ಬಿರುದು ಎಂದು ನಮಗೆ ತೋರುತ್ತದೆ. ಆದರೆ ಭಾಗವತದಶಮಸ್ಕಂಧದ ಉಪಾಂತ್ಯ ಪದ್ಯದಲ್ಲಿ

"....ಯೋಗೀಂದ್ರನಖಿಳೋದಿತಸದಾನಂದ
ಮುದದಲಭಿವರ್ಣಿಸಿದಂ"

ಎಂದು ಹೇಳಿರುವುದರಿಂದ 'ಸದಾನಂದಯೋಗೀಂದ್ರ' ನೆಂದು ಈತನ ಹೆಸರು ಹೇಳುವುದು ಯುಕ್ತವು. ಇದರಿಂದಲೇ ಈತನು ಬ್ರಾಹ್ಮಣನೆಂದೂ ಭಾಗವತಸಂಪ್ರದಾಯಕ್ಕೆ ಸೇರಿದವನೆಂದೂ ನಿರ್ಣಯಿಸಬಹುದಾಗಿದೆ. ಇಂತಹ ಹೆಸರುಗಳು ಭಾಗವತಸಂಪ್ರದಾಯದ ಗುರುಪರಂಪರೆಯಲ್ಲಿ ಕೆಲವರಿಗೆ ಇರುವುದೆಂಬುದು B78 ನೆಯ ನಂಬರುಳ್ಳ 'ಭಾಗವತಾಹ್ನಿಕ' ವೆಂಬ ಈ ಕೋಶಾಗಾರದ ಲಿಖಿತಪುಸ್ತಕದಿಂದ ವ್ಯಕ್ತವಾಗುತ್ತದೆ. ಮತ್ತು ಯೋಗೀಂದ್ರನೆಂದು ಹೇಳಿಕೊಂಡಿರುವುದರಿಂದ ತನ್ನ ಗುರುವಿನ ಹೆಸರನ್ನು 'ಅಚ್ಯುತಾರಣ್ಯಾಖ್ಯ ಯತಿರಾಯ' ಎಂದು ಹೇಳಿರುವುದರಿಂದೂ ಈತನು ಸಂನ್ಯಾಸಿ ಎಂದು ತಿಳಿದು ಬರುತ್ತದೆ.

ಈ ಕವಿಯು ಭಾರತದಲ್ಲಿ ಕೆಲವು ಪರ್ವಗಳನ್ನು ಮತ್ತು ಸಮಗ್ರ ಭಾಗವತವನ್ನೂ ಕನ್ನಡಿಸಿರುವುದಲ್ಲದೆ 'ವಿದಗ್ಧಚೂಡಾಮಣಿ' ಎಂಬ ಗ್ರಂಥವನ್ನು ಕೂಡ ರಚಿಸಿದಂತೆ ಹೇಳುತ್ತಾರೆ. ಆದರೆ ಕೊನೆಗೆ ಹೇಳಿದ ಗ್ರಂಥವು ದೊರೆತಿರುವುದಿಲ್ಲ.

ಈಗ ಈಕವಿಯು ಉಪಯೋಗಿಸಿರುವ ಭಾಷೆಯನ್ನು ಕುರಿತು ವಿಚಾರಮಾಡುವುದಕ್ಕಾಗಿ ಕರ್ಣಾಟಕಭಾಷೆಯ ಸಾಮಾನ್ಯವಿಷಯವನ್ನು ಸ್ವಲ್ಪವಾಗಿ ನಿರೂಪಿಸುವೆವು. ಪ್ರತಿಯೊಂದು ಭಾಷೆಯು ಆಯಾ ದೇಶದ ಸಾಮಾನ್ಯಜನಗಳ ಮೂಲದಿಂದ ವ್ಯವಹಾರನಿರ್ವಾಹಾರ್ಥವಾಗಿ ಬಳಕೆಯಲ್ಲಿ ಬಂದು, ಆಯಾ ಕಾಲಗಳಲ್ಲಿದ್ದ ದೇಶಾಭಿಮಾನಿಗಳಾದ ರಾಜರ ಪ್ರೋತ್ಸಾಹನಕ್ಕೆ ವಶರಾದ ಸಂಸ್ಕೃತಪಂಡಿತರುಗಳು ಆಯಾ ಭಾಷೆಗಳಲ್ಲಿ ವ್ಯಾಕರಣ, ಛಂದಸ್ಸು, ನಿಘಂಟು, ಅಲಂಕಾರಶಾಸ್ತ್ರ, ಇವೇಮೊದಲಾದವುಗಳನ್ನು ಸಂಸ್ಕೃತಭಾಷೆಯಲ್ಲಿರುವಂತೆ ರಚನೆಯನ್ನು ಮಾಡಿ ಕೆಲವು ನಿಯಮಗಳನ್ನು ಉಂಟುಮಾಡಿದ ಬಳಿಕ ದೇಶಭಾಷೆಗಳಲ್ಲಿ ಸುಶಬ್ದಾಪಶಬ್ದವಿವೇಕವೂ ಕಾವ್ಯಗುಣದೋಷವ್ಯವಸ್ಥೆಯೂ ಉಂಟಾಗಿರುವುದು ಸರ್ವರಿಗೂ ತಿಳಿದ ವಿಷಯುವಷ್ಟೆ? ಈರೀತಿಯಿಂದ ಉಂಟಾದ ವ್ಯವಸ್ಥೆಯ ಕಾಲಕ್ಕೆ ಪೂರ್ವದಲ್ಲಿದ್ದ ಬಹುಪ್ರಾಚೀನ ಶಾಸನಾದಿಗಳಲ್ಲಿ ಈಗಲೂ ಕಂಡುಬರುವ, ಈಗ ನಮಗೆ ದೊರೆಯುವ ವ್ಯಾಕರಣಾದಿಗಳ ಸಹಾಯಗಳಿಂದ ನಿಷ್ಪಾದಿಸಲು ಅಶಕ್ಯವಾದ ಶಬ್ದಗಳುಳ್ಳ ಭಾಷೆಗೆ "ಪೂರ್ವದ ಹಳಗನ್ನಡ" ವೆಂದು ಹೆಸರನ್ನು ಹೇಳಬಹುದು. ನೃಪತುಂಗ ನಾಗವರ್ಮ ಕೇಶಿರಾಜ ಭಟ್ಟಾಕಳಂಕ ಮೊದಲಾದವರ ಗ್ರಂಥಗಳಿಂದ ಸಿದ್ಧಿಸುವುದಾಗಿ ಜೈನವೈಷ್ಣವಶೈವಕವಿಗಳಿಂದ ಗ್ರಂಥಗಳಲ್ಲಿ ಉಪಯೋಗಿಸಲ್ಪಟ್ಟಿರುವ ಶಬ್ದಗಳುಳ್ಳ ಭಾಷೆಗೆ "ಹಳಗನ್ನಡ" ವೆಂದು ಹೆಸರು. ಅಲ್ಲಿಂದೀಚೆಗೆ ಕಾಲಕ್ರಮದಿಂದೂ ಮತ್ತು ನಾನಾದೇಶದ ಜನಗಳ ಸಮಾವೇಶದಿಂದೂ ಆಯಾಯಾ ದೇಶಾಭಿಮಾನಿಗಳಾದ ಮುಖ್ಯಪುರುಷರ ಸ್ವವಂಶದೇಶಭಾಷಾಭಿಮಾನಮೂಲಕಸಹಾಯದಿಂದೂ ಮೇಲೆ ಹೇಳಿದ ವ್ಯಾಕರಣಾದಿನಿಯಮಗಳಿಗೆ ಬಳಪಡದ ಶಬ್ದಗಳಿಂದ ಪ್ರಚುರವಾಗಿ

ರಚಿಸಲ್ಪಡುತ್ತಾ ಬಂದ ಗ್ರಂಥಗಳ ಭಾಷೆಯು "ಹೊಸಕನ್ನಡ" ವೆಂದು ಕರೆಯಲ್ಪಡುವುದು.

ಪ್ರಕೃತ ಈ ಕವಿಯು ತನ್ನ ಗ್ರಂಥದಲ್ಲಿ ಉಪಯೋಗಿಸಿರುವ ಭಾಷೆಯನ್ನು ಹೊಸಕನ್ನಡವೆಂದು ಹೇಳಬೇಕಾಗಿದೆ. ಈಹೊಸಕನ್ನಡ ಭಾಷೆಯು ಅನೇಕ ಮತದ ಪಂಡಿತರಿಂದ ಆಯಾಮತಗಳ ರಹಸ್ಯವನ್ನು ಬೆಳ್ನುಡಿ (ಸ್ಫುಟಾರ್ಥಕಶಬ್ದ) ಗಳಿಂದ ಸಾಧಾರಣಜನಗಳಿಗೂ ತಿಳಿಯು ವಂತೆ ಷಟ್ಪದಿಗಳಲ್ಲಿಯೂ ರಗಳೆಮೊದಲಾದವುಗಳಲ್ಲಿಯೂ ಬಳಕೆಯಲ್ಲಿ ತರಲ್ಪಟ್ಟಿದೆ. ಈ ಭಾಷೆಗೆ ಹಳಗನ್ನಡದ ವ್ಯಾಕರಣಾದಿಲಕ್ಷಣಗ್ರಂಥ ಗಳ ವಿರೋಧವು ದೂಷಣವಲ್ಲವೆಂದು ಆದಿತ್ಯಪುರಾಣವೆಂಬ ಗ್ರಂಥದ 1ನೆಯ ಸಂಧಿಯ 36ನೆಯ ಪದ್ಯದಿಂದ ವಿಶದವಾಗುವುದು.

ಶಬ್ದಮಣಿಮೊದಲಾದ ಶಾಸ್ತ್ರದ।
ಹೊದ್ದಿಕೆಯು ಸಾಹಿತ್ಯಕಲ್ಲದೆ।
ಹೃದ್ಯಷಟ್ಪದಿಹಾಡುಗಬ್ಬಳಿಂಗೆ ಬೇಡೆಂದು ॥
ಸಿದ್ಧನೂತನಕವಿಗಳುಸುರಿದ।
ಪದ್ಧತಿಯೊಳಡಹಿ ಬೀಳುತ।
ಬುದ್ಧಿಯುಱಿವೆಂತೊರೆವೆನಿದ ಬೆಳ್ನುಡಿಯ ಬೆರಕೆಯಲಿ ॥

ಹೀಗೆಂಬುವುದರಿಂದ ಈ ಭಾಷೆಯಲ್ಲಿ ಸುಶಬ್ದಾಪಶಬ್ದವಿವೇಕವಿ ಲ್ಲದೇ ಕವಿಗಳು ಪ್ರಯೋಗಿಸಿದಾರೆಂದು ಭಾವಿಸಕೂಡದು. ಹಳಗನ್ನಡ ವ್ಯಾಕರಣದಿಂದ ಯಥಾಶ್ರುತ ಕ್ರಮದಿಂದ ನಿಷ್ಪನ್ನವಾಗದೇ ಯಿದ್ದಾಗ್ಯೂ ಅಲ್ಲಿ ಹೇಳಿರುವ ನ್ಯಾಯಗಳ ಸಾಮ್ಯದಿಂದ ಹೇಗೋ ಒಂದು ವಿಧದಲ್ಲಿ ನಿರ್ವಹಿಸಬಹುದಾದ ರೂಪಸಿದ್ಧಿಯುಳ್ಳ ಗ್ರಾಮ್ಯರಲ್ಲದ ಜನಗಳು ಉಪ ಯೋಗಿಸುವ ಶಬ್ದಗಳನ್ನು ಮಿಶ್ರಮಾಡಿ ಗ್ರಂಥವನ್ನು ಬರೆದಿದಾರೆಂದು ಹೇಳುವುದು ಯುಕ್ತವು. ಈ ವಿಷಯಕ್ಕೆ ಉದಾಹರಣರೂಪವಾಗಿ ಈ ಕವಿಯು ಉಪಯೋಗಿಸಿರುವ ಕೆಲವು ಪದಗಳ ಸಿದ್ಧಿಯನ್ನು ಕುರಿತು ವಿಚಾರವನ್ನುಮಾಡಿ ತೋರಿಸುವೆವು.

ಈ ಗ್ರಂಥದ 11ನೆಯ ಸಂಧಿಯ 20ನೆಯ ಪದ್ಯದ ಉತ್ತರಾ ರ್ಧವು ಈಕೆಳಗೆ ಬರೆಯಲ್ಪಟ್ಟಿದೆ.

ಅಷ್ಟಮೂರುತಿ ಕಡೆಗೆ ಹಣೆಗಣ ।
ದೃಷ್ಟಿಯಲಿ ಹೋವಿಸುವನಿದನು ।
ತ್ಕೃಷ್ಟಮತಿ ಮೀಱುವನದಾವನು ತಂದೆಗಳಿರೆಂದ ॥

'ಹಣೆಗಣ' ಎಂಬ ಪದವು ದೃಷ್ಟಿಗೆ ವಿಶೇಷಣವಾಗಿ ಪ್ರಯೋಗಿಸಲ್ಪಟ್ಟಿರುವಂತೆ ಕಾಣುತ್ತದೆ. ಇದನ್ನು ವಿಶೇಷಣವಾಗಿ ನಿಷ್ಪಾದನಮಾಡಬೇಕಾದರೆ ಸಪ್ತಮೀಸಮರ್ಥವಾದ ಹಣೆ ಎಂಬ ಶಬ್ದದ ಮೇಲೆ 'ದಿಕ್ಛಬ್ದಾದಣಃ' ಎಂಬ (ಪುಟ 201 ಸೂತ್ರ 421) ಶಬ್ದಾನುಶಾಸನಪ್ರಕಾರ ಅಣ ಪ್ರತ್ಯಯವನ್ನು ಮಾಡಬೇಕಷ್ಟೆ? ಹಾಗೆ ಮಾಡುವುದಕ್ಕೆ ಎರಡು ಅನುಪಪತ್ತಿಗಳಿವೆ. ಒಂದನೆಯದು—'ಹಣೆ' ಎಂಬ ಶಬ್ದವು ಮೂಡ, ತೆಂಕ, ಇವೇ ಮೊದಲಾದ ಶಬ್ದಗಳಂತೆ ದಿಗ್ವಾಚಕವಲ್ಲದೆ ಇರುವುದು. 2 ನೆಯದು—ಸಪ್ತಮೀಸಮರ್ಥವಾದ 'ಹಣೆ' ಶಬ್ದದ ಮೇಲೆ ಅಣ ಪ್ರತ್ಯಯವನ್ನು ಮಾಡಿದರೆ 'ಹಣೆಯಣ' ಎಂತಲೇ ರೂಪವು ಸಿದ್ಧಿಸಬೇಕೆಂಬುದು. ಇದರಲ್ಲಿ 1ನೆಯ ಅನುಪಪತ್ತಿಯನ್ನು ಹಣೆಯ ಪ್ರದೇಶವು ನೇತ್ರದ ನಿಜಸ್ಥಳದಕಿಂತಲೂ ಊರ್ಧ್ವಪ್ರದೇಶವಾದಕಾರಣ ವೈವಕ್ಷಿಕದಿಕ್ಛಬ್ದತ್ವವನ್ನು ಸಂಪಾದಿಸಿಕೊಂಡು ಏನೋ ಒಂದು ಬಗೆಯಿಂದ ಸಮಾಧಾನ ಮಾಡಬಹುದು. ಈ ಸಮಾಧಾನಗಳನ್ನು ವ್ಯಾಖ್ಯಾನಕಾರರು ಒಪ್ಪಿರುವುದಿಲ್ಲ. ನ್ಯಾಯಸಾಮ್ಯದಿಂದ ಮಾತ್ರ ಹೇಳಬೇಕಾಗಿರುವುದು. 2ನೆಯ ಅನುಪಪತ್ತಿಗೆ 'ಹಣೆಯಣ' ಎಂದೇ ಆಗಲಿ 'ಹಣಿಗಣ' ಎಂದಾಗಲಿ ಪಾಠಶೋಧನ ಮಾಡುವುದು ಪರಿಹಾರವು. 'ಹಣಿಗಣ' ಎಂದು ಶೋಧನ ಮಾಡುವಪಕ್ಷದಲ್ಲಿ 'ಫಣಿಕಾ' ಎಂಬ ಸಂಸ್ಕೃತಶಬ್ದದಿಂದ 'ಹಣಿಗೆ' ಎಂಬ ಅಪಭ್ರಂಶವು ಸಿದ್ಧಿಸುವುದರಿಂದ ಸಪ್ತಮೀಸಮರ್ಥವಾದ ಆ ಶಬ್ದದ ಮೇಲೆ ಅಣಪ್ರತ್ಯಯ ಮಾಡಿದರೆ ಈ ರೂಪವು ಸಿದ್ಧವಾಗುತ್ತದೆ.

ಈ ಗ್ರಂಥದಲ್ಲಿ ಅಲ್ಲಲ್ಲಿ 'ಒಂದಿನ' ಎಂಬ ಪದವು ಪ್ರಯುಕ್ತವಾಗಿದೆ. ಉದಾಹರಣೆಗಾಗಿ 13 ನೇ ಸಂಧಿಯ 33 ನೆಯ ಪದ್ಯವನ್ನು ತೋರಿಸಿದೇವೆ.

ಇರೆ ವರಜರತ್ಕಾರು ವೊಂದಿನ ।
ಭರದಲೈದಿದರಣ್ಯವ ಗಿರಿಶಿ ।
ಖರದಲಿ ಮುದದಿ ನಿಂದು ವಿಜನವಿದೆಂದು ನಿಶ್ಚಯಿಸಿ ॥

ಈ ಶಬ್ದವು ಶಬ್ದಾನುಶಾಸನಾದಿಗಳಿಂದ ಸಿದ್ಧವಾಗುವುದಿಲ್ಲ. ಆದರೆ 'ಎಣ್ಬಾವುದಂ' 'ನಾಲ್ಮೊಗಂ' 'ಐಮೂಲೆ' 'ಮೊದಲೆ' ಇವೇ ಮೊದಲಾದ ಶಬ್ದಗಳಲ್ಲಿ ದುಲೋಪವನ್ನು ಕೆಲವು ಸೂತ್ರಗಳಿಂದ ಹೇಳಿರುವ ನ್ಯಾಯವನ್ನು ಅವಲಂಬಿಸಿ 'ಒಂದು' ಎಂಬ ಶಬ್ದದಲ್ಲಿಯೂ ದುಲೋಪವನ್ನು ಮಾಡಬಹುದೆಂಬ ಅಭಿಪ್ರಾಯದಿಂದ ಈ ಪದವನ್ನು ಕವಿಯು ಪ್ರಯೋಗಿಸಿರಬಹುದು. ಮತ್ತು ಸಂಸ್ಕೃತಭಾಷೆಯಲ್ಲಿ ಏಕೋನವಿಂಶತಿ ಎಂಬುದು ಮೊದಲಾದವುಗಳಂತೆ ಕನ್ನಡ ಭಾಷೆಯ ಒಂಬತ್ತು ಎಂಬ ಪದವು ಯೌಗಿಕವೆಂತ ಹೇಳುವುದೇ ಯುಕ್ತವಾದ ಕಾರಣ ಒಂದು ಕಡಿಮೆ ಪತ್ತು ಎಂಬ ಅರ್ಥದಲ್ಲಿ 'ಒಂಬತ್ತು' ಎಂದು ಮಧ್ಯಮಪದಲೋಪಿಸಮಾಸವು ಮಾಡಬೇಕಾಗಿರುತ್ತದೆ. ಇಲ್ಲಿ ಅವಶ್ಯವಾಗಿ ಒಂದು ಶಬ್ದಕ್ಕೆ ದುಲೋಪವನ್ನು ಮಾಡಬೇಕಾಗಿರುವುದರಿಂದ ಅನುಶಿಷ್ಟವಲ್ಲದಿದ್ದರೂ ದುಲೋಪವು ಉಪಸಂಖ್ಯೇಯವಾಗಿರುತ್ತದೆ. ಅಲ್ಲದೆ ಪಂಪರಾಮಾಯಣದ 9 ನೆಯ ಆಶ್ವಾಸದ 28 ನೆಯ ಪದ್ಯದಲ್ಲಿ ಈ ಶಬ್ದವು ಪ್ರಯುಕ್ತವಾಗಿದೆ—

ತನಯನ ತಲೆಯೊಂದೆಸೆಯೊಳ್ ।
ತನುವೊಂದೆಸೆಯೊಳ್ಪಡಿಲ್ದು ಕೆಡದಿರೆ ಕಂಡಾ
ವನಿತೆ ಭಯರಸದಿನೆರ್ದೆವಾ ।
ವನೆ ಪಾಱೆ ವಿಷಾದವಹ್ನಿಗಿಂಧನಮಾದಳ್ ॥

ಆದಕಾರಣದಿಂದಲೂ ಒಂದಿನ ಎಂಬ ಪ್ರಯೋಗದಲ್ಲಿ ದೋಷವಿಲ್ಲ. ಇದೇರೀತಿಯಲ್ಲಿ ಈಕವಿಯು ಪ್ರಯೋಗಿಸಿರುವ ಶಬ್ದಾಂತರಗಳಲ್ಲಿಯೂ ಉಪಪತ್ತಿಗಳನ್ನು ಬುದ್ಧಿಮಂತರು ಊಹಿಸಬಹುದು.

ಮತ್ತು ಈ ಕವಿಯು ಸ್ತುತಿಪ್ರಕರಣದಲ್ಲಿ 'ಜಯ' 'ಜಯತು' ಎಂಬ ಸಂಸ್ಕೃತ ತಿಙಂತವನ್ನು 'ನಮಃ' ಎಂಬ ವಿಸರ್ಗಾಂತ ಸಂಸ್ಕೃತಶಬ್ದವನ್ನೂ ಸೇರಿಸಿ ಪ್ರಯೋಗಿಸಿರುವನು. (ಪು130.ಸಂ.12,ಪ.15. ನೋಡುವುದು.) ಇಂತಹ ಪದಗಳನ್ನು ಕನ್ನಡಭಾಷೆಯಲ್ಲಿ ಪ್ರಯೋಗಿಸಬೇಕಾದರೆ 'ಎನ್' ಧಾತುವಿನೊಡನೆ ತಮ್ಮ ಪ್ರಯೋಗಕ್ಕೆ ಅನುಕರಣ

ತ್ವವು ಸೂಚಿತವಾಗುವಂತೆ ಪ್ರಯೋಗಿಸಬೇಕೆಂದು ಸಂಧಿಪ್ರಕರಣ ಸೂತ್ರಗಳಿಂದ ಸ್ಪಷ್ಟವಾಗುವುದು. ಆದರೆ ಮೇಲೆ ತೋರಿಸಿರುವ ಪದ್ಯ ದಲ್ಲಿ 'ಜಯನಮೋ' 'ಜಯ ಜಯತು' ಎಂಬ ಸಂಸ್ಕೃತ ಪದಗಳಿಗೆ ಅನ್ಯವಧಾನದಿಂದ 'ಎನ್' ಧಾತುವನ್ನು ಪ್ರಯೋಗಿಸಿರುವುದಿಲ್ಲ. ಸ್ತುತಿ ವಾಕ್ಯವೆಲ್ಲವೂ ಮುಗಿದ ಬಳಿಕ "ತಂದೆ ರಕ್ಷಿಸೆನುತ್ತೆ ಚರಣದ್ವಂದ್ವದಲಿ" ಎಂಬ ಅದೇ ಸಂಧಿಯ ಹದಿನಾರನೆಯ ಪದ್ಯದಲ್ಲಿ 'ಎನುತ್ತೆ' ಎಂದು ಈ ಧಾತುವಿನ ಪ್ರಯೋಗವಿದೆ; ಅದರನ್ನೇ 'ಜಯನಮೋ' 'ಜಯಜಯತು' 'ಜಯ' ಎಂದಿರುವ ಪ್ರತಿಯೊಂದು ಸ್ಥಳದಲ್ಲಿಯೂ ಆವೃತ್ತಿ ಅಥವಾ ತಂತ್ರ ನ್ಯಾಯದಿಂದ ಅನುಸಂಧಾನಕ್ಕೆ ತಂದುಕೊಂಡರೆ ವ್ಯಾಕರಣವಿರೋ ಧವಿಲ್ಲದೆ ಉಪಪನ್ನವಾಗುವುದು.

ಹೀಗೆಯೇ ಅಲ್ಲಲ್ಲಿ 'ಸರ್ವಥಾ' ಎಂದು ಸಂಸ್ಕೃತ ತದ್ಧಿತಾಂತಾವ್ಯಯ ವನ್ನು 'ಪುನರಪಿ' ಎಂದು ನಿಪಾತ ಸಮುದಾಯವನ್ನು 'ತವೆ' ಎಂದು ಸುಬಂತರೂಪವನ್ನು ಕವಿಯು ಪ್ರಯೋಗಿಸಿರುತ್ತಾನೆ. ಇದು ಅನುಕ ರಣ ಸ್ಥಳಗಳಲ್ಲದ್ದರಿಂದ ಮೇಲೆ ಹೇಳಿದ ಸಮಾಧಾನಕ್ಕೆ ವಿಷಯವಲ್ಲ. ಆದರೂ ಆ ಶಬ್ದಗಳು ಸಂಸ್ಕೃತದಲ್ಲಿ ಹೇಗೆ ಶ್ರುತವಾಗಿರುವುದೋ ಅದೇ ರೀತಿಯಾಗಿ ತತ್ಸಮತ್ವಬುದ್ಧಿಯಿಂದ ಪ್ರಯುಕ್ತವಾಗಿದೆ ಯೆಂದು ಸಮಾ ಧಾನವನ್ನು ಊಹಿಸಬಹುದು. 'ಪುನರಪಿ' ಎಂಬುದು ಏಕನಿಪಾತವಲ್ಲ. ನಿಪಾತದ್ವಯವು. ಆದಾಗ್ಯೂ ಸಂಸ್ಕೃತದಲ್ಲಿ 'ಕಿಮುತ' ಇದೇ ಮೊದ ಲಾದವುಗಳಂತೆ ಸಮುದಾಯದಿಂದ ಏಕಾರ್ಥದಲ್ಲಿ ಪ್ರಯೋಗಿಸಲ್ಪಡುತ್ತಾ ದ್ದರಿಂದ ಏಕನಿಪಾತದಂತೆ ಭಾವಿಸಿ ಕವಿಯು ಪ್ರಯೋಗಿಸಿರುತ್ತಾನೆ.

ಇದೇರೀತಿಯಾಗಿ ಕವಿಯು ಅಲ್ಲಲ್ಲಿ ಉಪಯೋಗಿಸಿರುವ 'ತೊಳ್ವುತ್ತ' ಎಂಬುದು ಮೊದಲಾದ ಶಬ್ದಗಳಲ್ಲಿ ಯಗಾಗಮಸ್ಥಾನದಲ್ಲಿ ಬಂದಿ ರುವ ವಗಾಗಮವು ಸೂತ್ರದಲ್ಲಿನ ಬಹುಳಗ್ರಹಣದಿಂದ ವ್ಯವಸ್ಥಿತವಿಭಾ ಷಾತ್ವವನ್ನಾಶ್ರಯಿಸಿ ಸಮಾಧಾನಮಾಡತಕ್ಕದ್ದಾಗಿರುತ್ತದೆ.

ಮತ್ತು ಕೆಲವೆಡೆಯಲ್ಲಿ ಸಂಧಿಯನ್ನೇ ಮಾಡಿರುವುದಿಲ್ಲ.

ಪದೇ ತು ಸಂಹಿತಾ ನಿತ್ಯಾ ನಿತ್ಯಾ ಧಾತೂಪಸರ್ಗಯೋಃ ।

ನಿತ್ಯಾ ಸಮಾಸೇ ವಾಕ್ಯೇ ತು ಸಾ ವಿವಕ್ಷಾಮಪೇಕ್ಷತೇ ''
ಎಂದು ವಾಕ್ಯಸಂಧಿಯು ಕವಿಯ ವಿವಕ್ಷೆಯನ್ನು ಅನುಸರಿಸಿದ್ದಾಗಿರುತ್ತದೆ, ಎಂದು ತಿಳಿದು ಬರುವುದರಿಂದ ಅದೂ ದೋಷವಲ್ಲ.

ಇನ್ನು ಮುಂದೆ ಈ ಕವಿಯು ಈ ಗ್ರಂಥವಲ್ಲಿ ಉಪಯೋಗಿಸಿರುವ ವೃತ್ತವನ್ನು ಕುರಿತು ವಿಚಾರಮಾಡಬೇಕಾಗಿದೆ. ಈ ಗ್ರಂಥವೆಲ್ಲವೂ ಭಾಮಿನೀಷಟ್ಪದೀ ವೃತ್ತರೂಪವಾಗಿರುತ್ತದೆ. ಇದು ಮೂರು ಮೂರು ಪಾದಗಳುಳ್ಳ ಎರಡು ಅರ್ಧಗಳುಳ್ಳದ್ದಾಗಿರುವುದರಿಂದ 'ಷಟ್ಪದಿ' ಯೆಂದು ಕರೆಯಲ್ಪಡುವುದು. ಇದರಲ್ಲಿ ಮೊದಲೆರಡು ಪಾದಗಳು ಸಮವಾಗಿಯೂ ಮೂರು ಆರನೆಯ ಪಾದಗಳು ಮೊಂದೆರಡರಕಿಂತ ವಿಷಮವಾಗಿಯೂ ಇರುತ್ತದೆ ಈ ವೃತ್ತದಲ್ಲಿ ಮಾತ್ರಾತ್ರಯಾತ್ಮಕವಾದ ಗಣವು ವಿಷಮಸ್ಥಾನದಲ್ಲಿಯೂ ಮಾತ್ರಾಚತುಷ್ಟಯಾತ್ಮಕವಾದ ಗಣವು ಸಮಸ್ಥಾನದಲ್ಲಿಯೂ ಇರಬೇಕು. ಪ್ರಥಮ ದ್ವಿತೀಯ ಪಾದಗಳಿಗೆ ಮೇಲೆ ಹೇಳಿದ ಪ್ರಕಾರ ನಾಲ್ಕು ಗಣಗಳು ಅಂದರೆ ಹದಿನಾಲ್ಕು ಮಾತ್ರೆಗಳು, ತೃತೀಯ ಪಾದಗಳಿಗೆ ಆರು ಗಣಗಳು ಒಂದು ಗುರು ಅಂತು ಇಪ್ಪತ್ತು ಮೂರು ಮಾತ್ರೆಗಳು ಇರುತ್ತಿವೆ. ಸಮಸ್ಥಾನದಲ್ಲಿ ಬರುವ ಮಾತ್ರಾ ಚತುಷ್ಟಯಾತ್ಮಕವಾದ ಗಣವು ಜಗಣಭಿನ್ನವಾಗಿಯೇ ಇರಬೇಕು. ಮಾತ್ರಾತ್ರಯಾತ್ಮಕಗಣವು ಗುರುಯುಕ್ತವಾಗಿದ್ದ ಪಕ್ಷದಲ್ಲಿ ಗುರ್ವಕ್ಷರಾದಿಯಾಗಿರಬೇಕು. ಈ ನಿಯಮವನ್ನು ಚನ್ನಾಗಿ ದೃಷ್ಟಿಕೊಟ್ಟು ರಚಿಸಿದರೇನೇ ಈ ವೃತ್ತವು ಶ್ರಾವ್ಯವಾಗಿ ಇರುತ್ತದೆ. ಇದನ್ನು ಉಲ್ಲಂಘಿಸಿ ಕೇವಲ ಮಾತ್ರಾಸಂಖ್ಯಾದೃಷ್ಟಿಮಾತ್ರದಿಂದಲೇ ಗಣನಿಯಮವನ್ನು ಉಲ್ಲಂಘಿಸಿ ಕೆಲವರು ರಚಿಸಿರುವ ಈವೃತ್ತದ ಪದ್ಯಗಳು ಶ್ಲಾಘ್ಯವಲ್ಲವೆಂದು ತಿಳಿಯತಕ್ಕದ್ದು. ಮುದ್ರಣಾರಂಭಕಾಲದಲ್ಲಿ ದೊರೆಕಿದ ಕೆಲವು ಪುಸ್ತಕಗಳಲ್ಲಿ ಪೂರ್ವೋಕ್ತ ವೃತ್ತಲಕ್ಷಣಕ್ಕೆ ವಿರುದ್ಧವಾಗಿ ಕೆಲವು ಪಾಠಗಳು ಇದ್ದದ್ದರಿಂದ ಅದನ್ನು ಕವಿಯೇ ಹಾಗೆ ರಚಿಸಿರಬಹುದೆಂದು ಕೆಲವು ಸ್ಥಳಗಳಲ್ಲಿ ಮುದ್ರಿಸಿದ್ದೆವು. ಆದರೆ ಕೆಲವುದೂರ ಮುದ್ರಿಸಿದ ಬಳಿಕ ದೊರೆತ ಪುಸ್ತಕಾಂತರಗಳನ್ನು ನೋಡಲಾಗಿ ಲಕ್ಷಣವಿರುದ

ವೆಲ್ಲದ ಪಾಠಗಳು ಕಂಡು ಬಂದುದರಿಂದ ಆ ಶೋಧನಗಳನ್ನು ಶೋಧನ ಪತ್ರಿಕೆಯಲ್ಲಿ ಕಾಣಿಸಿರುತ್ತೇವೆ.

ಈ ಕವಿಯು ಛಂದೋಲಕ್ಷಣದ ಮುಖ್ಯಾಂಶವಾದ 'ಪ್ರಾಸ' ಅಂದರೆ ದ್ವಿತೀಯಾಕ್ಷರ ನಿಯಮ, ಅದರ ವಿಷಯದಲ್ಲಿ ಕೆಲವು ಸ್ಥಳಗಳಲ್ಲಿ ಲಕ್ಷಣಗ್ರಂಥಗಳಿಗೆ ವಿರುದ್ಧವಾಗಿ ರಚಿಸಿರುವನು. ಅದು ಹೇಗೆಂದರೆ, ಆದಿ ಪಾದದ ದ್ವಿತೀಯಾಕ್ಷರವೇ ಆಗಲಿ ಆದಿಪಾದದ ದ್ವಿತೀಯಾಕ್ಷರಕ್ಕೆ ಕ್ರಮ ದಿಂದ ಬರುವ ವರ್ಗಾಕ್ಷರವಾಗಲಿ ಪ್ರಾಸಾಕ್ಷರವೆನಿಸುವುದಲ್ಲವೆ? ಹೀಗಿ ರುವಾಗ ಈಕವಿಯು ಕೆಲವು ಪದ್ಯಗಳಲ್ಲಿ ಸಂಯುಕ್ತಾಕ್ಷರವು ದ್ವಿತೀಯ ವಾದಾಗ ಈನಿಯಮವನ್ನು ಸಂಪೂರ್ಣವಾಗಿ ಅನುಸರಿಸದೆ ಸಂಯುಕ್ತಾ ಕ್ಷರದಲ್ಲಿ ಸೇರಿರುವ ಯಾವದಾದರೊಂದು ವ್ಯಂಜನಾಕ್ಷರದ ಸಂಬಂಧಮಾ ತ್ರದಿಂದಲೇ ಪ್ರಾಸಪೂರ್ತಿಯಾದಂತೆ ಭಾವಿಸಿರುವನು. ಹೀಗೆ ಮಾಡಿರು ವುದು ಈ ಕವಿಯು ಒಬ್ಬನೇ ಅಲ್ಲ. ಇನ್ನೂ ಷಟ್ಪದಿಯಲ್ಲಿ ಗ್ರಂಥಗ ಳನ್ನು ರಚಿಸಿದ ಕವಿಗಳೆಲ್ಲರೂ ಇದೇ ರೀತಿಯಾಗಿ ಏಕೈಕವರ್ಣಾನು ಗಮದಿಂದ ಪ್ರಾಸವನ್ನು ಒಪ್ಪಿರುವುದಾಗಿ ಕೆಳಗೆ ತೋರಿಸುವ ಅವರ ಪ್ರಯೋಗಗಳಿಂದ ಸ್ಪಷ್ಟವಾಗುತ್ತದೆ.

ರಾಘವಾಂಕಕವಿಯು ತನ್ನ ಹರಿಶ್ಚಂದ್ರಕಾವ್ಯದಲ್ಲಿ (13—4)

> ಇನ್ನೇನ ಕಾಣಲಿರ್ದಪೆ ನರಸ ಕೇಳದೊಡೆ।
> ನಿನ್ನ ಮಗನಂ ಕೊಂದ ಪಾಪಿಯಾನೆಂದಾಡಿ।
> ಯನ್ಯಾಯದಿಂ ಸಾವೆನೆನುತ ಬರಲೋಲಗದ ಕಳಕಳವ
> [ನೇನೆಂಬೆನು ॥

ಅದೇ ಗ್ರಂಥದಲ್ಲಿ (6—29)

> ಮೃತ್ಯುರೂಪಿನ ಹಂದಿ ಕಾನನದೊಳೊಕ್ಕಲಿ।
> ಕ್ಕಿತ್ತು ನೆಱೆ ಸುತ್ತಿ ಬೆಂಬತ್ತಿ ತಲೆಯೆತ್ತಿ ಮನ!
> ವೆತ್ತಿ ಯುರಿಯುತ್ತ ತಿರುಗುತ್ತ ಹಿರಿಯುತ್ತ ಬೆದರು
> [ತ್ತೆಯ್ದೆ ಬಲವೆಲ್ಲವ॥

ಭಾಸ್ಕರಕವಿಯು ತನ್ನ ಜೀವಂಧರ ಚರಿತೆಯಲ್ಲಿ (3—23)

> ಭ್ರಷ್ಟನೋ ತಾನಾಗಿ ಪುರುಷರ

ಮುಟ್ಟುವುದು ಸತಿಯರಿಗೆ ಹೀನವೆ
ನಿಷ್ಟವೆನಗಾಯ್ತೆಂದು ಬೆರಗಾದಳು ಸರೋಜಾಕ್ಷಿ ॥

ಅದೇ ಗ್ರಂಥದಲ್ಲಿ (3—24)

ಮುಗ್ಧೆಯರೊಳತಿ ಹೀನವಹುದೆಂ
ದೆದ್ದು ನೋಡುವ ಮರೆದು ಮಲಗಿರೆ
ಮಧ್ಯರಾತ್ರಿಯೊಳೆದ್ದು ಕಾಷ್ಠಾಂಗಾರಸೈವರಿದ ॥ ”

ಈರೀತಿಯಾಗಿ ಸರ್ವಕವಿಸಾಧಾರಣಗಳಾದ ರೀತಿಯಿಂದಲೇ ಈಗ್ರಂಥವು ರಚಿತವಾಗಿರುತ್ತದೆ. ಆದುದರಿಂದ ಈ ಗ್ರಂಥವು ಇತರಗ್ರಂಥಗಳಂತೆ ಉಪಾದೇಯವೆಂದು ಪ್ರಕಟಿಸಲ್ಪಟ್ಟದೆ.

ಈಗ್ರಂಥದ ಶೋಧನವು ನಾಲ್ಕುಪ್ರತಿಗಳ ಆಧಾರದಿಂದ ನಡೆದಿದೆ. ಅದರಲ್ಲಿ ಮೂರು ಪ್ರತಿಗಳು ತಾಳಪತ್ರಾತ್ಮಕಗಳು, ಒಂದುಮಾತ್ರ ಕಾಗದದ್ದು. ತಾಳಪತ್ರದ ಪ್ರತಿಒಂದು, ಕಾಗದದ ಪ್ರತಿ ಒಂದು ಸಹ ಒಂದೇ ಮೂಲಪ್ರತಿಯಿಂದ ಬರೆಯಲ್ಪಟ್ಟದ್ದಾಗಿ ಕಾಣುತ್ತಿವೆ. ಉಳಿದ ಪ್ರತಿಗಳೆಲ್ಲವೂ ಭಿನ್ನಭಿನ್ನ ಪಾಠಾದಿಯುಕ್ತವಾಗಿ ಇರುವುವು. ಅದರಲ್ಲಿ ಎರಡುಪ್ರತಿಗಳ ಆಧಾರದಿಂದ ಮುದ್ರಣ ಆರಂಭಿಸಿ ಕೆಲವು ದೂರ ಸಾಗಿದ ಮೇಲೆ ಮತ್ತೆರಡು ಪ್ರತಿಗಳು ದೊರೆತದ್ದರಿಂದ ಮುಂದಿನ ಭಾಗವು ಚನ್ನಾಗಿ ಶೋಧಿತವಾಗಲವಕಾಶ ಸಿಕ್ಕಿತು. ತತ್ಪೂರ್ವಭಾಗವನ್ನು ಈ ಎರಡು ಪ್ರತಿಗಳ ಸಹಾಯದಿಂದೂ ಶೋಧಿಸಿ ಶೋಧನಪತ್ರಿಕೆಯಲ್ಲಿ ವ್ಯಕ್ತ ಪಡಿಸಿರುವೆವು. ಆದುದರಿಂದಲೇ ಶೋಧನಪತ್ರಿಕೆಯು ಸ್ವಲ್ಪಹೆಚ್ಚಿರುವುದು. ಅಲ್ಲಲ್ಲಿ ಪುಸ್ತಕಭೇದದಿಂದ ಕಂಡು ಬಂದ ಪಾಠಭೇದಗಳನ್ನು ಆಯಾ ಪುಟಗಳ ಅಡಿಯಲ್ಲಿ ತೋರಿಸಿರುವೆವು. ಅಯುಕ್ತವಾದ ಪಾಠಭೇದಗಳನ್ನು ಬಿಟ್ಟಿರುವೆವು. ಕೆಲವು ಸ್ಥಳಗಳಲ್ಲಿ ಮಾತ್ರ ಸ್ವತಂತ್ರಶೋಧನೆಯೂ ಆವಶ್ಯಕವಾಗಿ ಮಾಡಬೇಕಾಯಿತು.

ಈ ವಿಷಯಗಳನ್ನು ಅಭಿಜ್ಞರೂ ಮತ್ತು ಗುಣಗ್ರಾಹಿಗಳೂ ಆದವರೆಲ್ಲರೂ ಮನಸ್ಸಿಗೆ ತಂದು ಆನಂದಿಸುವರೆಂದು ನಂಬಿರುತ್ತೇವೆ.

# ವಿಷಯಾನುಕ್ರಮಣಿಕೆ.

# ಶೋಧನಪತ್ರಿಕೆ.

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 5 | 3 | ವೊಡಾ | ವೊಡುವೆ |
| ,, | ,, | ಯೆಂಬಳಿ | ಯೆಂಬರಿ |
| 7 | 4 | ನೊಡನೆ | ಗೊಡನೆಯೆ |
| ,, | 7 | ಳ್ಳುದನೇಮಹಾತ್ಮ | ನಾನದಮಹಾತ್ಮನೆ |
| ,, | 10 | ಖ್ಯೆಯ | ಖ್ಯಾನದ |
| ,, | ,, | ನೀನಖಿಳ | ನೀ |
| ,, | 12 | ನುಳಿ | ನುಟಿ |
| ,, | ,, | ಲಳಿ | ಲಟಿ |
| ,, | 18 | ತಾದೆ | ತಿದೆ |
| 8 | 6 | ನೊರೆವೆ | ನೊರವೆನಾ |
| ,, | ,, | ತೆನುತಲಾಕ್ಷಣ | ತೆನುತ |
| ,, | ,, | ಚಿಂತಿಸಿದ | ಚಿಂತಿಸುತಿರ್ದ |
| 9 | 6 | ಹಿಡಿದಿವನೆಯ್ದ | ಹಿಡಿದು ಹಿರಿದಹ |
| 10 | 20 | ಕೆಂಬುವೆ | ಕ್ಕೆಂಬುವೆ |
| 12 | 4 | ನಿಂದೆನ್ನ | ನೀನೆನ್ನ |
| 12 | 18 | ನೆನಲಧ | ನನಲನದ |
| ,, | ,, | ಸುತ್ತ | ಸುತ |
| 13 | 13 | ನನಿಲನುಪುತ್ರ | ನನಿಲನ ಮಿತ್ರ |
| 15 | 24 | ದೇತಕ | ದೇಕ |
| 16 | 7 | ನಡ | ನಡೆ |
| ,, | 15 | ತೆಗದು | ತೆಗೆದು |
| 18 | 1 | ಕಾಯ್ವೆ | ಕಾವೆ |
| 19 | 9 | ವಡೆ | ವೊಡೆ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ,, | 20 | ಬಿಡುಬಿಡು | ಬಿಡು |
| 20 | 13 | ಚರಿತ್ರವ | ಚರಿತವ |
| 21 | 6 | ಳಲೆತಂದೆನೀ | ಳಲ್ಲೈತಂದೆ |
| 22 | 5 | ರಾಬ್ಯೈ | ರಾಜ್ಯೈ |
| 23 | 16 | ನುಚಿತ್ತ್ರದಿ | ನ.ಚಿತದಿ |
| 25 | 5 | ಸಿದಂದವದಾಯ್ತ್ತಂ | ಯಿಸುವುದಾಯಿತದಂ |
| ,, | ,, | ಸಹಿತವೂ | ಸಹಿತಪ |
| ,, | ,, | ಛಲಿಛಾಯೆಶಶಿಯ | ದುಛಾಯೆಶಶಿಯನು |
| 26 | 17 | ಗಡೆದಳು | ಗೆಡೆದಳು |
| ,, | 21 | ಹುವ್ವಿನ | ಹೂವಿನ |
| ,, | ,, | ಜಂಗೆನೆ | ಜಗ್ಗನೆ |
| 27 | 9 | ದರ್ಥಕ್ಕೆ | ದರ್ಥಕೆ |
| 28 | 12 | ನಾವೆಯೆ | ನಾವೆಯ |
| ,, | 14 | ಪೊಡವಂಟ | ಪೊಡವಟ್ಟ |
| 29 | 4 | ಕೂರವಿಗಸಾಧ್ಯ | ಕೂರವೆಗಳಿಗಸಾಧ್ಯ |
| 30 | 17 | ವೆಂದೆಸಿಸುವ | ವೆಂಬುದ |
| ,, | ,, | ಆಅರೆಶ್ವಾ | ಆಅರೇ |
| 31 | 1 | ತನ್ನ | ತಸ್ನಯು |
| ,, | ,, | ನೊಂದಳತೆ | ನೊಳಗೊಂದಳತೆ |
| ,, | 24 | ವನೀ | ವನ್ನು |
| 32 | 18 | ತನ್ನಾಯುಷಾರ್ಥವನು | ತಸ್ನಾಯುಷ್ಯದರ್ಥ |
| ,, | 25 | ವೆಗ್ರತ | ವೇಗವ |
| 33 | 22 | ತಿರ್ದುದಾ | ತಿರ್ದುದಂದಾ |
| 34 | 9 | ಗೃಹಕ್ಕೆ | ಗೃಹಕೆ |
| ,, | 18 | ತೊರದ | ತೊರೆದ |
| ,, | 19 | ಹೊರವ | ಹೊರೆವ |
| ,, | 21 | ದಲ್ಲಿ | ದಲಾ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 35 | 5 | ಕೊಯ್ಯುವನಲ್ಲ | ಕೊಯ್ಯದಿರನ್ನ |
| 37 | 3 | ಸಾಹಸ್ರ | ಸಹಸ್ರ |
| ,, | 21 | ಸಾಸ್ರವಗೈದ | ಸಾಸ್ರಮಾಡಿದ |
| ,, | 22 | ಜನ್ಮ | ಜನನ |
| 38 | 7 | ನಿಂದನೀಕ್ಷೆ | ನಿಂದಿರಲೀಕ್ಷೆ |
| ,, | 11 | ಯುನ್ನೊಡನೆ | ಯೆನ್ನೊಡನೆ |
| ,, | 17 | ದಲೆನ್ನ | ದೆನ್ನನು |
| ,, | 20 | ಕಾರುಣೀಕನೆ | ಕಾರುಣಿಕನೇ |
| 39 | 11 | ನೆನೆಱೆ | ನೇನೆಱೆ |
| ,, | 16 | ದಾತನನು | ದೆಂದಾತನನು |
| 40 | 8 | ಧರಾ | ಭೂಮ್ಯ |
| ,, | 23 | ನನಿಯುನು | ನವನಿಯುನು |
| 41 | 5 | ಮಾಡೆ | ಮಾಡಿ |
| 41 | 6 | ಕೊಲ್ಲು | ಕೊಲು |
| 42 | 10 | ದಲ್ಲಿ | ವಲಿತ್ರಿ |
| ,, | 15 | ನೆಕೇಳಿ | ನೆಱೆಕೇಳಿ |
| 47 | 8 | ಕೆಡದ | ಕೆಡೆದ |
| ,, | 18 | ತಾನಂಜದಿರುದುದಕಳ | ನಂಜದಿರುಬಂದುದಕಳಲಬೇಡೆಂಪ |
| ,, | 24 | ವೀರನು | ವೀರನಹ |
| ,, | ,, | ವಿಲ್ಲಂ | ದಲಂ |
| 48 | 20 | ಲರುಣ | ಲುವರುಣ |
| 49 | 15 | ತುರಗವಿದು | ರತುನವು |
| ,, | ,, | ಗೆವಿನತೆ | ಗಾವಿನತೆ |
| ,, | 19 | ನಗುತವಳು | ನಗುವವಳ |
| 50 | 3 | ಬಱಿದೆ | ಬಱಿದೇ |
| 51 | 15 | ವಿದೆಂ | ವೀದಿಂ |
| 52 | 14 | ಮಾಡುವ | ಮಾಡುವು |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧಿ |
|---|---|---|---|
| ,, | 25 | ಕದು | ಕದ್ರು |
| 53 | 1 | ಇಂತ | ಇಂತು |
| ,, | 12 | ವುತ್ಸವ | ದುಸ್ಸಹ |
| ,, | 20 | ಯುಡೆ | ಯೊಡೆ |
| 54 | 17 | ಮುನ್ನಡವಿಯುಲಿರಿಸಿದಗರ್ಭವ | ಮುನ್ನಿರಿಸಿದಡವಿಯುಗರ್ಭವನು |
| 55 | 5 | ದವೆ | ದವೇ |
| ,, | ,, | ನುತ್ತ | ನುತ |
| ,, | 6 | ಬಾಯು | ಬಾಯು |
| ,, | ,, | ಧರೆ | ಧರೆಗೆ |
| ,, | 11 | ನಿನಿಚುವ | ನಿಮಿಚುವ |
| ,, | 15 | ಗಗಣ್ಯ | ಗಣ್ಣ |
| ,, | ,, | ಪೂರ್ವಾರ್ಜಿತ | ಪೂರ್ವಾರ್ಜಿತದ |
| ,, | 22 | ಯಿಂದು | ಲಿಂದು |
| 56 | 1 | ಕಾಣುತ್ತ | ಕಾಣುತ |
| ,, | 10 | ತಾನೆನುತ | ತಾನೇನೆನುತ |
| ,, | 11 | ತಾಶನ | ತಾಶ |
| ,, | ,, | ಹೊಯಿಲನು | ಹೊಯಿಲುಗಳ |
| ,, | 16 | ಕೇಡಿನಂದಿನವೊಲುನೀಘಾಸಿ | ಕೇಡಿನಂದದದಿನದವೊಲುನೀ |
| ,, | 17 | ಮಾಡಿದೆ | ರೂಡಿಮಾಡಿದೆ |
| ,, | ,, | ಕಳುಹೆ | ಕಳುಹಿ |
| ,, | 18 | ವೋಡು | ಓಡು |
| 56 | 20 | ಕವಿವುತಿದೆ | ಕಪಿವುತ್ತಿದೆ |
| ,, | 24 | ಯೊಗುವದು | ಯೊಗುವುದು |
| 57 | 8 | ದನದಲಿಸಂಸ್ತುತೆಯುನು | ದನದಿಸಂಸ್ತುತೆಯುನ್ನು |
| 59 | 4 | ಕಂಕುಳಲಿ | ಕೊಂಕುಳಲಿ |
| ,, | 8 | ಘಾಟಕೆ | ಘಾಟಕೆ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ,, | 21 | ತೊತ್ತು | ಹೆತ್ತು |
| 62 | 20 | ಮಹೇಂದ್ರ | ಮಾಹೇಂದ್ರ |
| ,, | ,, | ಸ್ತುತಿಸಿ | ನುತಿಸಿ |
| ,, | 23 | ತಟಕಿಟೆ | ತನಿಟೆ |
| ,, | ,, | ಸೂರಿಯನಿಟಿವಂತೆ | ಸೂರ್ಯನಿಟಿವಂದದಲಿ |
| 63 | 19 | ನಾಕಾನನಕ್ಕೈದಿ | ನಾನದಲ್ಲೈದಿದ |
| 64 | 12 | ಸಲ್ಲಲಿತ | ಲಲಿತದ |
| ,, | 17 | ಇಟ್ಟಿದುದು | ಇಟೆದು |
| ,, | ,, | ಮತ್ತೆ | ಮತ್ತಾ |
| ,, | 18 | ಖಿಳ | ಖಳ |
| ,, | ,, | ವುವುದೆಲ | ಕರೆದೆಲ |
| ,, | 20 | ಜಲನಿಧಿಯುತಾನಲ್ಲಿ | ಜಲನಿಧಿಗೆತಾನಂದು |
| 65 | 3 | ವನಿತೆ | ವಿನುತೆ |
| ,, | 6 | ತುರಗವನಾವು | ತುರಗವನುನೆಱೆ |
| ,, | 9 | ವಗಡಿಸಿಕೇಳೆ | ವಗಡಿಸುತಕೇಳಿವರೆ |
| ,, | ,, | ಹೇಟಿದೆನುನಾ | ಹೇಟೆದೆ |
| 66 | 1 | ವಿಧಿಯುತನ್ನ | ವಿಧಿಯನ್ನ |
| 67 | 24 | ಜ್ಜೀವಿಸಿ | ಜ್ಜೀವಿಸಿಯೆ |
| ,, | ,, | ಮರಳುವುದೇ | ಮರಳುವುದೆ |
| 68 | 9 | ಹರಿಸಿ | ಹರಸಿ |
| ,, | 19 | ವೆನುನೀನು | ವೆನೀನೇ |
| 69 | 2 | ಯೆಂದೆನೆ | ನೀನೆನೆ |
| ,, | 11 | ನಱೆಯು | ನಱಿಯೆ |
| 70 | 9 | ದೆಲ್ಲವೆ | ದಲ್ಲವೆ |
| ,, | 10 | ಪೊಡೆ | ಪಡೆ |
| ,, | 15 | ವಡೆಯು | ವಡೆದ |
| ,, | ,, | ಯುವಳೊರ್ವಳನೆಡೆ | ಯುಳೊರ್ವಳನಡೆಡೆ |

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| 71 | 6 | ದೀಕೆಯನು | ದೀಕೆಯ |
| ,, | ,, | ಕಾವುದೆನೆ | ಕಾವುದೆನಲು |
| 72 | 6 | ಯೋಜನದನೀಳದಿಹನು | ಯೋಜನನೀಳದಿರುವನು |
| 73 | 5 | ವಾತಿನಿಂದೇ | ವೂತಿಂದವೇ |
| 74 | 21 | ಟ್ಟನ್ನು ವುದು | ಟ್ಟನ್ನ ವದು |
| 75 | 12 | ಶಶಿ | ಚಂದ್ರ |
| 76 | 19 | ಧಿಕ್ಕರಿಸಿಕರೆದಸುಪ್ಪ | ದಿಕ್ಕರಿನಿಕರದಸುಪ್ಪೈ |
| 77 | 12 | ನಿಲ್ಲದಲಂಬವೆಂಬ | ನಿಲ್ಲದಲ್ಲಂಬಾಖ್ಯ |
| ,, | 21 | ಗಿದವು | ಗಿದುವು |
| ,, | 22 | ಣಗಿದವ | ಣಗಿದುವ |
| 78 | 17 | ವೇಣ್ | ವೇಣು |
| 79 | 7 | ವುಚುದು | ವುಚುದುದದು |
| ,, | 19 | ಶಾಖೆಯುತಾಬ | ಶಾಖೆಯನುತಾ |
| ,, | 20 | ಚಿಕ್ಕರಿಸಿದೊಡೆಶಾಪವುತನ್ನ | ನಿಕ್ಕಿದೊಡೆಶಾಪಾಗ್ನಿಯೆನ್ನನು |
| 80 | 14 | ಗದೆಯು | ಗಚಿಯು |
| ,, | 17 | ಕಳೇವರವುನಕ | ಕಳೆವರವನಿಕ್ಕ |
| 82 | 14 | ಕೈಗಾಯ್ವ | ಕೈಗಾಯ್ವ |
| ,, | 17 | ದೋಷವನೀವು | ದೋಷವನುನೀವ್ |
| 84 | 16 | ಹೆಮ್ಮರದಕೋಟೆವುಡೆಯ | ಹೆಮ್ಮರಕಡೆಯೊಲುಡಿಯುಲು |
| 85 | 9 | ಮಲವುದೆ | ಮಲೆವುದೇ |
| ,, | ,, | ವಳಿಗೆ | ವಳಿ |
| ,, | 10 | ಯೆಂದೆ | ಗೆಂದೆ |
| 86 | 12 | ಹೊಯ್ದು | ಹಾಯ್ದು |
| ,, | 13 | ಆಪ | ಅಪ |
| 87 | 3 | ಸುರಪ | ಸುರಪವಸು |
| ,, | ,, | ಗಣದ | ಗಳ |
| 88 | 5 | ಬಾಹ | ಭಾರ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ,,, | 15 | ನುನವ | ಘನ |
| ,, | ,, | ಪೀರವುಹಾ | ಪೀರ್ಯವಿಕ್ರಮ |
| ,, | 17 | ಯಾದವಹ | ಯಾಹವದೆದಿ |
| 89 | 3 | ಕನಖಲವುಂಟೆನಗೆ | ಕನದಖಲದಿಂದವೆ |
| 91 | 7 | ನೋಡುವೆವ್ಯೆ | ನೋಡುವೆವು |
| ,, | ,, | ಯೇನು | ಯೆನುತಿರ |
| ,, | 8 | ತತ್ತ | ಲತ್ತ |
| 93 | 4 | ನಃವೊಂದೇ | ನದೊಂದೇ |
| ,, | 21 | ರೊಬ್ಬರು | ರೊಬ್ಬರೊ |
| ,, | 22 | ಅದಟ | ಳದಟ |
| 95 | 9 | ವೊಂದೆ | ನೊಂದೆ |
| ,, | ,, | ತೆಱೆಯ | ಕೆಱೆಯ |
| 100 | 13 | ಕೊಂಡೊ | ಕೊಂಡ |
| ,, | 18 | ರುಯೆ | ರಿದೆ |
| 101 | 9 | ನನಗದು | ನೆನಗದು |
| 102 | 14 | ಲಯುದಿ | ಲಯುಕೆ |
| 103 | 6 | ಲಕ್ಷ್ಮೀ | ಲಕ್ಷ್ಮಿಯು |
| ,, | 7 | ಲೋಚನ | ಲೋಚನೆ |
| ,, | ,, | ಭವರೇ | ಭವಭವ |
| ,, | 8 | ಸಪು | ಸುಪೌ |
| ,, | 9 | ಸುರರಲಿ | ಸುರರೀ |
| ,, | 24 | ವ್ಯೆರಿ | ನ್ಯೆರಿ |
| 105 | 20 | ತೋಱಿಸು | ತೋರಿಸಿ |
| 101 | 13 | ಕೆಯೊಂದ | ಕೆಂದ |
| 112 | 3 | ಲ್ಲವೆಯಲ್ಲ | ಲ್ಲವೇಯಿ |
| ,, | 4 | ಅಲ್ಲ | ನ್ನಲ್ಲ |
| ,, | 5 | ರಹ | ರಹೆ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 114 | 18 | ತತು್ತ | ತುತ್ತು |
| 115 | 18 | ವಿಡಿಯೆನುಡಿ | ವಿಡಿಯೆ |
| ,, | 19 | ದರು | ನುಡಿದರು |
| ,, | ,, | ಕೊವೆ್ಮ | ಕೊವ್ಮೊವ್ಮೆ |
| 119 | 12 | ತಪೋ | ತಪೋಗ್ನಿ |
| ,, | 14 | ಸುರಿದನೆ | ಸರಿದನೇ |
| ,, | 15 | ಗಾಲ | ಗಾಲಿ |
| 125 | 11 | ದುರಿತಾಘ | ದುರಿತೌಘ |
| 134 | 6 | ಹೆವ್ಮ ಗಂಡೆನು | ಹವ್ಮೆ ಗೊಳ್ಳನು |
| 145 | 22 | ವೆಸಗಿ | ನೆಸಗಿ |
| 146 | 7 | ಬೆಱಸಿತು | ಬೆರಸಿತು |
| 148 | 3 | ವೆತ್ತಣ | ಲೆತ್ತಣ |
| ,, | 23 | ವದ | ವುದ |
| 150 | 8 | ಬಳ | ಬಳೆ |
| ,, | 9 | ಬಳ | ಬಳೆ |
| 160 | 13 | ಭೂಪನನು | ಭೂಪನದ |
| ,, | 14 | ಬಂದನು | ನಿಂದನು |
| 158 | 23 | ರೂಪಕ | ರೂಪಕನೆ |
| 192 | 18 | ಮುನಿಸು | ಮುನಿಯು |
| 193 | 6 | ವಯೋಧ | ಪಯೋಧ |
| 211 | 20 | ಸುವ | ಸುವೆ |
| 224 | 23 | ಪದ | ಪರಿ |
| ,, | 24 | ದಿಂದ | ಯಿಂದ |

ಗ. ಪುಸ್ತಕಪಾಠ

| ಪೇಜು | ಪದ್ಯಸಂಖ್ಯೆ | ಪಾದ |
|---|---|---|
| 137 | 3 | 3 |

ವೆಂದೆನಿಸಿ ನಿಲಿಪಿದನು ಕಾಣದೆ ಘೋರತರಭಯುವ ॥

ಶ್ರೀ

ಶುಭಮಸ್ತು

# ಮಹಾಭಾರತ

## ಆದಿಪರ್ವ.

### ಮೊದಲನೆಯ ಸಂಧಿ.

ಸೂಚನೆ.

ಸೂತನಭಿವರ್ಣಿಸಿದನಮಲ
ಖ್ಯಾತಪಾಲೋಮವನು ತತ್ಕುಲ
ಜಾತಶೌನಕಮುಖ್ಯಮುನಿಸಭೆ ಮೆಚ್ಚಲೊಲವಿನಲಿ ||

ಇಷ್ಟಪ್ರಾರ್ಥನೆ.

ಶ್ರೀಮದಮರಪ್ರವರಮಕುಟ
ಸ್ತೋಮಮಣಿಗಣಕಿರಣಕೀರ್ಣೋ
ದ್ದಾಮನವ್ಯಪದಾಬ್ಜ ಪೀಠನನಂತಗುಣನಿಳಯ |
ಭೂಮಿಭೂಸುರಗೋಸುಧರ್ಮ
ಸ್ತೋಮಕಾರಣಮೂರ್ತಿಯಹ ಲ
ಕ್ಷ್ಮೀಮನೋರಮ ನೀಗೆ ಯೆಮಗಿಷ್ಟಾರ್ಥ [1]ಸಂಪದವ || ೧

ಪ್ರಸ್ತಾವನೆ.

ನೈಮಿಶದಲೊಂದಾಯ್ತು ಸುಜನ
ಸ್ತೋಮ ಶೌನಕಮುಖ್ಯರೆನೆ ಸು

1 'ಸೀಯೆಮಗೆ ಯಿಷ್ಟಾರ್ಥ' ಕ. ಖ.

ತ್ರಾಮಲೋಕಹಿತಾರ್ಥದಲಿ ಸತ್ರವನು ವಿರಚಿಸಲು ।
ಆಮಹಾಜನದುತ್ಸವಕೆ ಸು
ತ್ರಾಮ ಯಾಮಿಯ ವೋಲು ಬಂದನು
ರೋಮಹರ್ಷಣನಂದನನು ಸೂತನು ತದಾಶ್ರಮಕೆ ॥ ೨

ಸತ್ಕರಿಸಿ ಸೂತನನು ಬರಲ
ಪ್ರತಿಮನನು ಕುಶಲೋಕ್ತಿಯಲಿ ಸು
ವ್ರತಿಗಳಿಷ್ಟಫಲಾಪ್ತಿ ಯಾ [1]ಯ್ತೆನುತತುಳಹರುಷದಲಿ ।
ವಿತತವಿಜ್ಞಾರೂಢನನು ಪುಳ
ಕಿತಶರೀರರು ಕೇಳಿದರು ವಿ
ಶ್ರುತಮಹಾಖ್ಯಾನಂಗಳನು ಪುಣ್ಯಾವಹಂಗಳನು ॥ ೩

ಬಲ್ಲೆ ಯಲ್ಲೈ ಸೂತ ಸಜ್ಜನ
ವಲ್ಲಭನೆ ಪಾರಾಶರನೊರೆ[2]ದ
ದೆಲ್ಲವನ[3]ಸಂಖ್ಯಾತವಹ ಪೌರಾಣಸಂಗತಿಯು ।
ಎಲ್ಲವನು ಕೇಳಿದೆವು ಪಿತೃಮುಖ
ದಲ್ಲಿ ಭಾರತಪುಣ್ಯಕಥನವ
ನಿಲ್ಲಿ ವಿಸ್ತರವಾಗಿ ಕರುಣಿಸಬೇಹುದೆಮಗೀಗ ॥ ೪

ಮೊದಲದಕೆ ಪೌಲೋಮವೆಂಬರು
ಸದಮಳನೆ ಹೇಪೆಮಗೆ ಬುಧಸಂ
ಘದೊಳು ನೀ [4]ವಿಖ್ಯಾತ ಗಡ ತತ್ಸಂಗತಿಯುನೊಲಿದು ।
ವಿದಿತವಹುದಭಿವರ್ಣಿಸುವುದೆಂ
ಮದೆಯ ಸಂಶಯಶಲ್ಯವನು ಕಳೆ
ವುದು ಮಹಾತ್ಮ ಯೆನುತ್ತ ಸಭೆಯಲಿ ಶೌನಕನು ನುಡಿದ ॥ ೫

1 'ಫಲಾಪ್ತಿಪ್ರಿಯವಾ' ಕ. ಖ. 2 ಪಾರಾಶರ್ಯನೊರೆ, ಕ. ಖ 3 ದೆಲ್ಲವಾ, ಕ ಖ.
4 ದೊಳಗೆ, ಕ ಖ.

ಪುಣ್ಯವೀಯಾಶ್ರಮವು ಮುಖವಿದು
ಪುಣ್ಯವಲ್ಲಿಂಮೇಲೆ ಪುಣ್ಯಕೆ
ಪುಣ್ಯದಂತಿರೆ ಬಂದೆ ಭಾಗ್ಯಾಧಿಕನೆ ಮನವೊಲಿದು ।
ಪುಣ್ಯಕಥೆಯನು ಕೇಳುವೀಬಹು
ಪುಣ್ಯವೊಡಗೂಡಿದರೆ ಜಗದಲಿ
ಪುಣ್ಯವಂತರದಾರು ತಮ್ಮಂತೆಂದನಾಮುನಿಪ ॥ ೬

ಎನಲು ನುಡಿದನು ಸೂತನಾಮುನಿ
ಜನಕೆ ನಿಮಗಿದ ವರ್ಣಿಸುವೆನೆನು
ತನುಪಮಿತರುತ್ತಮಭೃಗೂದ್ವಹರಮಳರನ್ವಯವ ।
ಅನುಸರದಲಿಂತೆಂದನಾವರ
ಮುನಿಪತಿ ಪರಿಕಿಸಲು ಕಣ್ದೆರೆದು
ವನಜನಾಭನ [1]ನೆನೆದು ನುಡಿದನು ಶೌನಕಾದ್ಯರಿಗೆ ॥ ೭

ಮುನ್ನ ವೇದವ್ಯಾಸಮುನಿ ಕರು
ಣಾರ್ಣವನು ಕೃಪೆಮಾಡಿದನಲೈ
ತನ್ನ ಪಿತೃಮುಖದಲ್ಲಿ ತನಗಧ್ಯಯನವಾಯ್ತೆಂದ ।
ಮಾನ್ಯರಿರ ನಿಮಗದನು ತಾನಭಿ
ವರ್ಣಿಸುವೆನುತ್ತಮಭೃಗೂದ್ವಹ
ರನ್ವಯವ ಚಿತ್ತಾನುಸಾರದಲೆಂದನಾಮುನಿಪ ॥ ೮

ಭೃಗುವಂಶ.

ನಿಗಮನಿಷ್ಠನೆ ಕೇಳು ಶೌನಕ
ಜಗದಧೀಶ್ವರನಿಕರಪೂಜಿತ
ಭೃಗುಕುಲಾಮಲಚರಿತವನು ಬಹುಪುಣ್ಯಫಲದವನು ।
ಜಗದುದರನುದರೋದ್ಭವನಲಾ

[1] 'ನೆನೆವುತ ವನಜನಾಭನ ಚರಣಕಮಲವ' ಕ. ಖ.

ನಿಗಮಗರ್ಭನ ತನುಜತನುಜನು
ಭೃಗು ತಪಾತ್ಮಜನಾಚ್ಯವನಸಂಜ್ಞಿತನು ಕೇಳೆಂದ ॥ ೯
ಚ್ಯವನನಿಂದಾಪ್ರಮತಿ ಕೇಳುದು
ಭವಿಸಿದನು ಬಳಿಕಾಪ್ರಮತಿಸಂ
ಭವನು ರುರು ರುರುವಿಂಗೆ ಶುನಕನು ಶುನಕನೆಂಬವಗೆ ।
ಭುವನನುತ ಶೌನಕನು ನೀನುದು
ಭವಿಸಿದೆಯಲಾ ತಂದೆ ಭೃಗುವಂ
ಶವಿದ ಸಂಕ್ಷೇಪದಲಿ ನಿನಗಿಂತೊರೆದೆ ತಾನೆಂದ ॥ ೧೦

### ಭೃಗುಚರಿತ್ರೆ.

ಹವಣಿಸಿದಿರೆಲೆ ಸೂತ ಹೇಳೈ
ಚ್ಯವನನೆಂದೆಂತಾಯ್ತು ಹೆಸರೆಂ
ಮವರ ಕುಲಪಾವನಮಹಾಭೃಗುಮುನಿಯ ತನಯುಂಗೆ ।
ವಿವರಿಸೈ ಪುಣ್ಯಾತ್ಮ ಪುಣ್ಯ
ಶ್ರವಣವಲ್ಲೈ ಕಥನವಿದು ದುರಿ
ತವನು ಧುವ್ವಾಳಿಸುವುದೇನುಂಟಿನ್ನು ಹೇಳೆಂದ ॥ ೧೧

ಆದೊಡವಧರಿಸೆಲೆ ಮುನಿಪ ಭಾ
ಗ್ಯೋದಧಿಯಲಾ ನೀನು ನಿನ್ನಂ
ತಾದರಿಸುವವರಾರು ಪುಣ್ಯಾಖ್ಯಾನಕಥೆಗಳನು ।
ಮೇದಿನೀಪಾವನರು [1]ಮೊದಲಲಿ
ಭೂದಿವಿಜರವರೊಳಗೆ ವೈಷ್ಣವ
ರಾವ ನಿನ್ನಂತವರ್[2] ರಲಿಕಿನ್ನಾವುದರಿದೆಂದ ॥ ೧೨

### ಭೃಗುಪತ್ನಿ ಪುಲೋಮೆಯ ಗರ್ಭಧಾರಣೆ.

ಕೇಳು ಶೌನಕ ಸಕಲಮುನಿಗಳು
ಕೇಳಿರೈ ಭೃಗುಮುನಿವರನ ವಧು

---

[1] ಪಾಲಕರು, ಕ. ಖ. [2] ನಿನ್ನಂದದಲಿ, ಕ. ಖ.

ಲೋಲಲೋಚನೆ ರೂಪಗುಣಸೌಭಾಗ್ಯವರವನಧಿ ।
ಶೀಲವಂತೆ ಪುಲೋಮೆ ಯೆಂಬಳು
ಹೋಲಿಸುವಡಾಲಕ್ಷ್ಮಿಯೆಂಬಳಿ
ಗೇಳುಮೆಡಿ ಪತಿಭಕ್ತಿಭಾವಿತಚಿತ್ತೆ ಸುಚರಿತ್ರೆ ॥ ೧೩

ಧರಿಸಿದಳು ಗರ್ಭವನು ಮುನಿಪನ
ವರತಪಸ್ಸಾಮರ್ಥ್ಯ ಸಿದ್ಧಿಯು
ಧರಿಸುವಂತಿರೆ ಧರ್ಮರತೆ ವರವನಿತೆ ನಿಜವನಿತೆ ।
ತರುಣಿ ತರುಣಮೃಗಾಕ್ಷಿಯಂತೆಸೆ
ದಿರಲು ತನ್ನಯ ಗೃಹಕೆ ಪರಮಾ
ಭರಣದಂತಿರಲಾದ ಹದನನು ವಿವರಿಸುವೆನೆಂದ ॥ ೧೪

ರಾಕ್ಷಸ ಪುಲೋಮಾಗಮನ.

ಒಂದುದಿನ ಮುನಿನಾಥನಾನಿಜ
ಮಂದಿರವ ಹೊರವಂಟು ಮನೆಯೊಳ
ಗಿಂದುಮುಖಿ ಯಿರಲೊಬ್ಬಳ್ ಸ್ನಾನವನು ರಚಿಸುವೊಡೆ ।
ಸಂದನತ್ತಲು ಸಲಿಲಸನ್ನಿಧಿ
ಗೆಂದು ರಾಕ್ಷಸನೊಬ್ಬನಿತ್ತಲು
ಬಂದನಾಕ್ಷಣದೊಳಗೆ ಬಾಲಮೃಗಾಕ್ಷಿಯಿದ್ದೆಡೆಗೆ ॥ ೧೫

ಮರೆಸಿ ನಿಜವೇಷವನು ದುರ್ಮತಿ
ಬರಲದನು ಕಾಣುತ್ತ ದೂರದ
ಲಿರದೆ ಕಮಲದಳಾಕ್ಷಿ ವಿಪ್ರನೆನುತ್ತ ಸತ್ಕರಿಸಿ ।
ಬರವಿದೆತ್ತಣದೇನು ಕುಳ್ಳಿರು
ಧರಣಿಯಮರ ಯೆನುತ್ತ ಸತಿಯುಪ
ಚರಿಸಿದಳು ಚಪಲನನು ಚಾರುಮೃದುಸ್ಮಿತೋಕ್ತಿಯಲಿ ॥ ೧೬

ಕೇಳುತಲೆ ನುಡಿಗಳನು ಕಿವಿಗಳು
ಕೊಳುವೋದವು ಕಂಗಳಖಿಲೆಯು

ಮೇಲೆ ಬಿದ್ದವು ಬಿಗಿದುದಂತಃಕರಣವಂಗನೆಯು ।
ತೋಳ ಕೈ ಕೊಂಡುದು ಮನೋಗತಿ
ಹೇಳಲೇಕಂಗಜನ ಹೊಂಗರಿ
ಗೋಲು ಮರುಮೊನೆಗಂಡುದಾಖಳನೊಡಲು ಕಂಪಿಸಿತು ॥ ೧೭

ನಟ್ಟ ದಿಟ್ಟಿಯು ದೃಢತೆಯಲಿ ಮರ
ವಿಟ್ಟುದೊಡಲು ದುರಾತ್ಮನಿರ್ದನು
ನಟ್ಟ ಕಂಬದವೋಲು ನಯನಪ್ರೀತಿರಸ ಮಿಗಲು ।
ನಟ್ಟಮೂರ್ಛೆಯನೆರಡುಘಳಿಗೆಗೆ
ಬಿಟ್ಟ [1]ಧೃತಿಯನು ಮನ್ಮಥನ ಸರ
ಳಟ್ಟ ಸುಡುತಿರೆ ನೋಡಿದನು ಕೆಲಬಲನನಮರಾರಿ ॥ ೧೮

ತಿರುಗಿ ಕಂಡನು ವಿಜನದೊಳಗಾ
ತರುಣಿ ಯೊಬ್ಬಳ್ ಯಿಹುದನೆನಗವೆ
ಸರವಿದಹುದಬಲೆಯನು ಕೊಂಡೊಯ್ವೆನು ನಿಜಾಲಯಕೆ ।
ನಿರುತವಿವಳಾರಂಗನೆಯೊ ಹರ
ಹರ ಮಹಾಸತಿ ತಾನು ಮುನ್ನವೆ
ವರಿಸಿದವಳವಳಾಗಬೇಕೆಂದನು ಖಳೋತ್ತಮನು ॥ ೧೯

ಇತ್ತು ತನಗೀಕೆಯನು ಪೂರ್ವದ
ಲಿತ್ತನಾಭೃಗುವಿಂಗೆ ಕಾಂತೆಯ
ಹೆತ್ತವನು ತನ್ನುವನು ನಂಬಿಸಿ ಹುಸಿದ ನಾದ್ವಿಜನು ।
ಸತ್ಯವಿದು ಸಂದೇಹವಲ್ಲಿದು
ಮತ್ತಕಾಶಿನಿ ತನ್ನ ವನಿತೆ ಭೃ
ಗೂತ್ತಮನ ಸತಿಯಹಳ ಯೆಂದನು ರಾಕ್ಷಸನು ನೋಡಿ ॥ ೨೦

---

1 ಕೊಟ್ಟು, ಕ. ಖ.

### ಅಗ್ನಿಪುಲೋಮರ ಸಂವಾದ.

ಎನುತ ಕಂಡನು ತಿರುಗಿ ಭೃಗುವಿನ
ಮನೆಯ ಯಜಮಾನನ ಪ್ರೊಲುಜ್ವಲ
ನೆನಿಪ ಪಾವಕನೊಡನೆ ನಿಶಾಚರನು ಯಿಂತೆಂದ ।
ತನಗೆ ಹೇಪ್ಪೈ ನೀನು ಭೃಗುವಿನ
ವನಿತೆ ಯಹಳೇ ಯಿಾಮಹಿಳೆ ಯಿವ
ಳನಘ ಯೆನುಳ್ಳುವನೇ ಮಹಾತ್ಮ ಹೇಳು ನೀನೆಂದ ॥ ೨೧

ನೀನಲಾ ಸಕಲಾತ್ಮಕನು ಪವ
ಮಾನಸಖನೆಂದೆನಿಸಲೇ ವೈ
ಶ್ವಾನರಾಖ್ಯೆಯಲಿ ನೀನಖಿಳ ಜಠರಸ್ಥನೆಂದೆನಿಪ ।
ನೀನು ಜೀವಾಧಾರನಲ್ಲೆ
ನೀನುಳಿಯಲಳಿವುದು ಜಗತ್ತ್ರಯ
ಭಾನುವಂತನೆ ಹೇಳು ಸತ್ಯವನೆಂದನಾದನುಜ ॥ ೨೨

ತನ್ನ ಸತಿ ಪೂರ್ವದಲಿ ತಾನದ
ನಿನ್ನು ವರ್ಣಿಸಲೇಕೆ ಕೊಟ್ಟನು
ತನ್ನ ವಂಚಿಸಿ ಬಾಲಿಕೆಯನೀಬಾಲಿಕೆಯ ಪಿತನು ।
ಬನ್ನವನು ಹೇಳುವೊಡೆ ನಾಚಿಕೆ
ತನ್ನ ಮನದೊಳಗಾಗುತದೆ ನೀ
ನನ್ನಿಯುಳ್ಳವನುಳ್ಳುದನು ಹೇಳಾರ ವಧುವೆಂದ ॥ ೨೩

ಸತ್ಯಸಂಧನೆ ಹೇಳು ಭೃಗುವಿನ
ಚಿತ್ತವಲ್ಲಭೆ ಯಾದಡೀಕೆಯ
ಹೊತ್ತುಕೊಂಡೊಯ್ವೆನು ನಿಜಾಲಯಕೆಂಬ ಮನವೆನಗೆ ।
ಹತ್ತಿದಕೆ ಮುನಿದವನೆ ಹೇಳು ಮ
ಹೋತ್ತಮನೆ ಹೇಪೆನುತ ಪಾವಕ
ನತ್ತಲಭಿಮುಖವಾಗಿ ನಿಂದನು ಕರಗಳನು ಮುಗಿದು ॥ ೨೪

ಇರಲು ಖಳನುಕ್ತಿಯನು ವೈಶ್ವಾ
ನರನು ಕೇಳುತ ಭೀತಿವಿಹ್ವಲ
ಕರಣನಾಗುತ ಧರ್ಮಸಂಕಟವಾಯ್ತಲಾ ಯೆನುತ ।
ನಿರುತವನು ಹೇಳಿದರೆ ಮುನಿಪತಿ
ಕೆರಳಿ ಶಾಪವ ನೀವನನೃತವ
ನೊರೆವೆನೆಂತೆನುತಲಾಕ್ಷಣ ಚಿಂತಿಸಿದನಳವಳಿದು ॥ ೨೫

ಶಾಪವಾಗಲಿ ವರವೆ ಯಾಗಲಿ
ಕೋಪಿಸಲಿ ಮುನಿ ಮೇಣು ಸತ್ಯಕೆ
ಲೋಪವನು ತಾ ಮಾಡಲಂಜುವೆನೆಂದು ಭೃಗುಮುನಿಗೆ ।
ಓಪಳೆಂದಱುಹುವೆನು ಬಳಿಕಂ
ದಾಪುಲೋಮೆಯನೆಂದ ಖಳಗಾ
ದೀಪಶಿಖೆಯನು ಶಲಭನುಪಭೋಗಿಸಲು ಹಿಡಿವಂತೆ ॥ ೨೬

ಪುಲೋಮೆಯ ಹರಣ.

ಸಿಕ್ಕಿದೆಯಲಾ ಯೆನುತ ಹಿಡಿದನು
ರಕ್ಕಸನು ಮುಂದಲೆಯನಂಗನೆ
ಬಿಕ್ಕಿಬಿರಿವಳುತಿರಲು ಮಿಗೆ ಕರೆಕರೆದು ಕಾದಲನ ।
ಅಕ್ಕಟಾರೋ ಗತಿ ಮಹಾಸತಿ
ಸೊಕ್ಕಿದಸುರನ ಕಂಕುಳೊಳಡಗ[1]
ಲಕ್ಕುಳಿಸಿ ಕುಱಿಯುವ[illegible]ಯವೊಲಿರೆ ಬೆದಱಿ ಮೃಗನಯನೆ ॥ ೨೭

ಹಾ ಪತಿಯೆ ಹಾ ಗತಿಯೆ ಹಾ ಹಾ
ರೂಪ ದೋಱಿ ಯದೇಕೆ ತನ್ನನು
ಕಾಪಟಿಗನೆಳದೊಯ್ದ ನಿರದಬಲೆಯನನಾಥೆಯನು ।
ಗೋಪರಿಲ್ಲದ ಪಶುವ ಹೆಬ್ಬುಲಿ

[1] ಳೊಳಗಡ. ಕ. ಖ.

ಕೋಪಿನಲಿ ಹಿಡಿದಂದವಾಯ್ತಿ
ನ್ನಾಪಥವನಾರಱಿವರೆಂದೊಱಲಿದಳು ಲಲಿತಾಂಗಿ ॥ ೧೮

ಒಡೆಯರಿಲ್ಲದ ಮನೆಯೊಳಗೆ ನಾಯ್
ತುಡುಕಿ ಹವಿಯನು ತಿಂದ ತೆಱನಾ
ಯ್ತಡವಿಯಲಿ ಪತಿಯಿಲ್ಲದೆಡೆ ಹೊತ್ತೆನ್ನ ನೀಕುನ್ನಿ ।
ಹಿಡಿದಿವನೆಯ್ದ [1]ಹಂದಿಯಾದನು
ಕೊಡಹಿ ವಿಪ್ರಾಕೃತಿಯ ಸಿಪನನು
ತಡೆಯಲಾರಿರೆ ತರುಗಳಿರ ನೀವೆಂದಳಬುಜಾಕ್ಷಿ ॥ ೧೯

ಗರ್ಭಚ್ಯವನದಿಂದ ಪುಲೋಮನ ನಾಶ.

ಕೊಡಹಿ ಕೈಕಾಲ್ಗಳನು ತನುಬಲ
ವುಡುಗಿ ಬಸವಳಿದಬಲೆ ಕಂಬನಿ
ಗಡಲ ವೊಪ್ಪದವೋಲು ತನಿಗೆಡದಸುರನಂಗವಲಿ ।
ಮಿಡುಕುತಿರಲಾಕ್ಷಣಕೆ ಸಲೆ ಬಸು
ಱೊಡೆದು ಬಿದ್ದುದು ಗರ್ಭವವನಿಗೆ
ವೊಡನಪರರೂಪಿನಲು ದುರ್ಧರತೀವ್ರತೇಜದಲಿ ॥ ೨೦

ಬಿದ್ದ ಗರ್ಭದ ತೇಜದಲಿ ಖಳ
ನೆದ್ದು ಭಸ್ಮೀಭೂತನಾದನು
ಬಿದ್ದುತತ್[2]ಕ್ಷಣದೊಳಗೆ ಬಿಟ್ಟು ಮಹಾಪತಿವ್ರತೆಯ ।
ಬಿದ್ದು ಹೋಗರೆ ಬಲ್ಲಿರೇ ನಿರ
ವದ್ಯರನು ಬಾಧಿಸುವ ಖಳರೆನು
ತಿರ್ವ್ವದಂಬರದೊಳಗೆ ಸುರಮುನಿನಿಕರ ಹರುಷದಲಿ ॥ ೨೧

ಅಲ್ಲಿ ಬ್ರಹ್ಮನ ಅಭಯೋಕ್ತಿ.

ಮಲ್ಲಿಗೆಯ ಮಱೆಗಱಿವರಂದು
ತ್ಫುಲ್ಲಮುಖಿಯಂಗದಲಿ ಕಮಲಜ

---

[1] ಹಿಡಿದೆಯ್ದುಯಿವ, ಕ. ಖ.		[2] ಬಿದ್ದನಾ, ಕ. ಖ.

ನಲ್ಲಿಗೆಯ್ತಂ[1]ದನಖಿಳಸುಮನಸರ ಮುನೀಶ್ವರರ ।
ಸಲ್ಲಲಿತಸಂಸ್ತುತಿಗಳಸೆಯಲು
ಸೊಲ್ಲಸೂಸಿದನಂಗನೆಗೆ ಬಲು
ಹುಳ್ಳವಳು ಪತಿಭಕ್ತಿಯಲಿ ನೀನೆಂದನಬುಜಭವ ॥ ೩೦

ಎತ್ತಿಕೊಳ್ಳಾಶಿಶುವನಂಗದ
ಮುತ್ತ ನಮ್ಮನ್ವಯದ ತೇಜದ
ಬಿತ್ತವೆನೆ ನೀಂ ತಳಿಸು [2]ಹಾ ಹಾ ವನಿತೆ ಶುಭಚರಿತೆ ।
ಮೃತ್ಯುಮೃತ್ಯುವ ಕಂಡಡಂಜದಿ
ರುತ್ತಮಾಂಗನೆ ಭೀತಿ ಬೇಡೆನು
ತೆತ್ತಿದನು ಪದಕಮಲಸನ್ನತೆಯನು ಸರಾಗದಲಿ ॥ ೩೩

ತೊಡೆದನಬಲೆಯ ಕಂಬನಿಯುನೆಲೆ
ಯೊಡತಿ ತಾಯೆ ಮಹಾಸತಿಯೆ ಸಾ
ಕೊಡಲ ಕಂಪವ ಬಿಡು ನಿರಾಮಯುವಿನ್ನು ನಿನಗೆನುತ ।
ನುಡಿದನೀಕಂಬನಿಯು ಹೆಗ್ಗಡ
ಲಡವಿಯಲಿ ನದಿಯಾಗಿ ಹರಿಯಲಿ
ಪೊಡವಿಪಾವನವಾಗಲಿಂತಿದು ತೀರ್ಥವಹುದೆಂದ ॥ ೩೪

ಕಂಬನಿಯು ಕಡಲಿದು ವಧೂಸರ
ವೆಂಬ ಹೆಸರಲಿ ಸಕಲಭುವನಕ
ದಂಬದಲಿ ಪೆಸರಾಗಿ ಹರಿಯಲಿ ಸಾಗರಪ್ರಾಂತ[3] ।
ಕೆಂಬುವೆ ಜನರಿಪಱಲಿ [4]ವಿಾವುದು ।
ನಂಬಿಹುದು ಬಹುಪುಣ್ಯವೆಂದೆಂ
ದಂಬುಜಾಸನದೇವನಾಘೋಷಿಸಿದನಭಿಜನಕೆ ॥ ೩೫

---

1 ಗಿಳಿತಂದ, ಕ. ಖ. 2 ವನಿತಳಿಸುವೆ, ಕ. ಖ. 3 ಸಾಗರಾಂತವೆನೆ, ಕ. ಖ.

4 ಗೊಂಬುಪಿದನಿದರೊಳಗೆ, ಕ. ಖ.

ಬ್ರಹ್ಮನ ಅಪ್ಪಣೆಯಂತೆ ಚ್ಯವನನೊಡನೆ ಆಶ್ರಮಕ್ಕೆ ಹೋಗುವಿಕೆ.

ತಾಯೆ ನಡೆ ಸುಖಿಯಾಗೆನುತ್ತವೆ
ಮಾಯೆಯನು ಕೈಕೊಂಡನತ್ತಲು
ಜೀಯ ಭಾಪು ಕೃಪಾಂಬುನಿಧಿ ಯೆಂದಖಿಳಜನ ಹೊಗಳೆ ।
ಹಾ ಯೆನುತ ಹರುಷದಲಿ ಕಮಲದ
ಳಾಯತಾಕ್ಷಿ ನಿಜಾತ್ಮಭವನನು
ಬಾಯಬಿಡುತಿರಲೆತ್ತಿಕೊಂಡಳು ಬಂದಳಾಶ್ರಮಕೆ । ೨೬

ಚ್ಯವನನೆಂಬಭಿಧಾನವಾಯ್ತುದು
ಭವಿಸಿದಾಶಿಶುವಿಂಗೆ ಗರ್ಭ
ಚ್ಯವನದಿಂದಲೆ ಮುನಿಪ ಬಳಿಕಾಶಿಶುವನೊಡಗೊಂಡು ।
ಭುವನಪೂಜಿತೆ ಬಂದಳಾನಿಜ
ಭವನದಲ್ಲಿಗೆ ಕೋಪಮೂರ್ಛಿತ
ಭವನಪರಮೂರ್ತಿಯುವೊಲಿರ್ದಾ ತನ್ನ ಪತಿಯೆಡೆಗೆ ॥ ೨೭

ಭೃಗು ಪುಲೋಮೆಯರ ಸಂವಾದ.

ಹೋದೆಯೆಲ್ಲಿಗೆ ಕಾಂತೆ ಮಸಣಕೆ
ಹೋದೆ ಯೆನ್ನಯಮಾತದೇಕೆಂ
ಬಾದಿ[1]ಯನು ಬೆಸಗೊಂಬರಾರೇನಾದಳೆಂಬುದನು ।
ಆದರಿಸುವೊಡನಾಥೆಯಾದೆನು
ಪಾದಸೇವಕೆಯಾದಕಾರಣ
ಕಾದುದಿದು ನಿಮ್ಮೊಲುಮೆ ಯೆನುತಳವಳಿದಳಾಕಾಂತೆ ॥ ೨೮

ಪತ್ತಹದನನು ಹೇಳಲೆಲ್ಲವೆ
ಚಿತ್ತವಿಸುತಿಂತೆಂದನೆನ್ನಯ
ವೆತ್ತಕಾಶಿನಿಯೆಂದು ನಿನ್ನನದಾರು ಹೇಳಿದರು ।

---

1 ಬೋಧೆ, ಕ. ಖ.

ವೃತ್ತವಿರಹಿತೆ ಹೇಪೆನಲು ದು
ರ್ವೃತ್ತಿಯಲ್ಲದನಱಿಯಿರೆನ್ನಯ
ವೃತ್ತವನು ನೀವೆನುತ ಕಂಬನಿದುಂಬಿದಳು ತರಳೆ ॥ ೩೯

ಬಱಿದೆ ನಿಂದೆನ್ನಬಲೆ ಯೆಂಬುದ
ನೊರೆದರನು ತಾ ಹೇೞು ಕೋಪದ
ಹೊಱೆಯುನಿಳುಹುವೆನಾತನಲಿ ಹೇೞುವೊಡೆ ಮನೆಯೊಳಗೆ ॥
ಹೊಱಗಣವರಾರೊಬ್ಬರಲ್ಲದೆ
ಬಱಿದೆ ಬಳಲಿಸಬೇಡೆನಲು ಮುನಿ
ಗುಱುವ ಮಾನಿನಿ ತೋಱಿದಳು ಕೈನೀಡಿ ಪಾವಕನ ॥ ೪೦

ಅಗ್ನಿಗೆ ಭೃಗುಶಾಪ.

ಹೋ ಹೊ ಬದುಕಿದೆ ಕಾಂತೆ ಕಂಗಳು
ಕಾಹು ಕಾಸಿದುವಂಗವಟ್ಟವು
ಮೋಹುಗೊಂಡುದು ಮಾಣುಮಾಣಿನ್ನಂಜಬೇಡೆನುತ ।
ದೇಹದೊಳಗಿರ್ದಲವೊ ಹವಿಗಳ
ವಾಹನನೆ ವಿಪರೀತಕರ್ಮವ
ನೂಹಿಸಿದೆ ದುಷ್ಟಾತ್ಮಯೆಂದನು ಭೃಗು ಹುತಾಶನಗೆ ॥ ೪೧

ಕನಲುತಿತ್ತನು ಸರ್ವಭಕ್ಷಕ
ನೆನಿಸು ಹೋಗೆಂದೆನುತ ಶಾಪವ
ನೆನಲದನಾಲಿಸುತ್ತ ಹೋ ಹೋ ನಿರಪರಾಧಿಯನು ।
ಮುನಿಪತಿಯೆ ಶಪಿಸಿದೆಯಲಾ ನಾ
ನನೃತಭಾಷಿತನಲ್ಲ ನಿನ್ನನು
ಮುನಿದು ಶಪಿಸಲು ಬಲ್ಲೆನೊಮ್ಮೆಗೆ ಸೈರಿಸಿದೆನೆಂದ ॥ ೪೨

ಮಾನ್ಯರಲ್ಲಾ ವಿಪ್ರರದಱಿಂ
ಮನ್ನಿಸಿದೆನೆಂದುದನು ಸಾಕ್ಷಿಗೆ

ವಹ್ನಿಯನು ಹೇಳುವುದು ಧರ್ಮವಲಾ ವಿಚಾರಿಸಲು ||
ನನ್ನಿಯನು ಹೇಳಿದಿರೆ ನರಕಮ
ಹಾರ್ಣವದಲಾಳುವರೆ ನಿನಗಾ
ನೆನ್ನೆ ನೀ ಸರ್ವಜ್ಞನೆಂದನು ಪಾವಕನು ಮುನಿಗೆ || ೪೩

ಕಂಡುದನು ಕೇಳ್ದುದನು ಮುಂಬೆಸ
ಗೊಂಡುದನು ವುಸುರದ ಮಹಾತ್ಮರು
ದಿಂಡುಗೆಡವರು ನರಕದಲಿ ಬಲ್ಲುದನು ವಂಚಿಸಲು |
ಪಂಡಿತನೆ ನೀನೆಂದುದಕೆ ಕೈ
ಕೊಂಡು ನಾನಾನಾಮರೂಪದಿ
ನುಂಡುದಕೆ ಸರ್ವವನು ಪಾತಕವಿಲ್ಲ ತನಗೆಂದ || ೪೪

ಎನಲು ಲೇಸಘವಿಲ್ಲ ಕೇಳೆಂ
ದನುಪಮನು ಮನ್ನಿಸಿದನಗ್ನಿಯ
ಮುನಿಪನನಿಲನು ಪುತ್ರನನು ಮನ್ನಿಸಿದೆನೆಂದೆನಲು |
ವನಿತೆಯನು ತನಯನನು ಕರುಣಾ
ವನಧಿ ತೆಗೆದಪ್ಪಿದನು ನಿಂದನು
ಮನದೊಳಗೆ ನಿತ್ಯಾತ್ಮನಾರಾಯಣನ ಭಾವಿಸುತ || ೪೫

ಮೊದಲನೆಯ ಸಂಧಿ ಮುಗಿದುದು.

## ಎರಡನೆಯ ಸಂಧಿ.

ಸೂಚನೆ.

ಹೇಳಿದನು ಭಾರ್ಗವನೆನಿಪ ಸುವಿ
ಶಾಲನಹ ರುರುನಿಜಚರಿತ್ರವ
ಶೀಲನಿಧಿಶೌನಕಗೆ ಸೂತನು ಸಾಮನಸ್ಯದಲಿ ||

ಶೌನಕಪ್ರಶ್ನೆ.

ಸೂತ ಹೇಳೈ ಸಕಲಭುವನ
ಖ್ಯಾತನಹ ಪಾವಕಗೆ ಬಂದುದು
ಪಾತಕವಲಾ ಶಾಪವಾವಂದದಲಿ ತತ್ಫಲವ |
ಘಾತಿಸಿದನದನೊರೆವುದೆಮಗಾ
ಜಾತಭೃಗುಕುಲಮುಖ್ಯಚರಿತವ
ನೋತು ವಿವರಿಸಬೇಹುದೆನಲಿಂತೆಂದನಾಸೂತ || ೧

ಅಗ್ನಿ ಅಡಗಿದುದರಿಂದ ಆದ ಬಾಧೆ.

ಕೇಳು ಶಾಪವನಿತ್ತ ಮುನಿಯುದ
ಮೌಳಿಯಲಿ ಧರಿಸುತ್ತ ಸಂಶಯ
ಲೋಲನಾದನು ದೇವಪಿತೃತುಷ್ಟಿಯಲಿ ತನಗಿನ್ನು |
ಪಾಲಿಸುವಪರಿಯೆಂತು ಸುಡು ಸುಡು
ಹೇಳಲಾಗದು ಸತ್ಯವನು ತಾ
ಹೇಳಿ ಕೆಟ್ಟೆನಲಾಯೆನುತ ಚಿಂತಿಸಿದನಳವಳಿದು || ೨

ತನ್ನ ಮುಖದಲಿ ಹವ್ಯಕವ್ಯವ
ರಾನ್ನವನು ಭೋಗಿಸುವರಲ್ಲೈ
ಮನ್ನಣೆಯ ಸುರವರರು ಪಿತೃಗಳು ಸಹಿತ ಮಖಗಳಲಿ |
ಉನ್ನತ ಶ್ರಾದ್ಧಾದಿಕದಲಾ
ನಿನ್ನ ಸಲುವೆನೆ ಸರ್ವಭಕ್ಷಕ
ನೆನ್ನ ಹೋಲುವಘಾತ್ಮರಾರೆಂದಳಲಿ ಬಿಸುಸುಯ್ದು ‖ ೩

ಏನಿದಕೆ ಕರ್ತವ್ಯವೆಂಬುದ
ನಾನಱಿಯೆನೆಂದೆನುತದೃಶ್ಯ
ಸ್ಥಾನವನು ಗಮಿಸಿದನು ಪಾವಕನಡುಗಿ ನಿಜತನುವ |
ಏನಿದೆಂಬೆನು ಜಗವಿದಗ್ನಿವಿ
ಹೀನವಾದುದು ತೀರ್ದುವಮಳವಿ
ಧಾನಯಜ್ಞಕ್ರಿಯೆಗಳದ್ದಲಿಯಾಯ್ತು ಕೆಂಡಗಳು[1] ‖ ೪

ಊದಿನೋಡಿದರೊಲೆಯೊಳಗೆ ಬಱಿ
ಬೂದಿಯುೞಿದುದು ಯಜ್ಞವಾಟದ
ವೇದಿಗಳು ಬಿಸಿಯಾಱಿದವು ಬೀಸಿದರೆ ಕೆದಱಿದವೆ |
ಹೋದುದುದರಕೃಶಾನು ಜೀರ್ಣಿಸ
ದಾದುದುಂಡುದ ಲೋಕ ಶೋಕವ
ಹೋದಧಿಯು ಬಲುಗಡಲೊಳದ್ದುದು ನಿಮಿಷಮಾತ್ರದಲಿ ‖ ೫

ಹಸಿಯ ಫಲವನು ಮೆದ್ದಡದು ಜೀ
ರ್ಣಿಸದೆ ಬಿದ್ದುದು ಹೊಟ್ಟೆಯನು ಹೊಸೆ
ಹೊಸೆದು ಕಾಱಿದರಖಿಳಧರಣೀ [2]ಭುಜನಿವಾಸಿಗಳು |
ಮಸಗಿ ಕಾಷ್ಠಂಗಳಲಿ ಕಾಣರು
ಬಿಸಿಯನಾಯ್ತು ಚರಾಚರಕೆ ಬಂ
ಣಿಸಲದೇತಕವಸಾನವಾಪವಮಾನಸಖನಡಗೆ ‖ ೬

---

[1] ನಿಮಿಷದಲಿ, ಕ. ಖ.	[2] ಜನಭೂ, ಕ. ಖ.

ಋಷಿಸಹಿತ ದೇವತೆಗಳು ಬ್ರಹ್ಮನನ್ನು ಪ್ರಾರ್ಥನೆಮಾಡಿದುದು.

ಸುಯ್ದು ಚಿಂತಿಸಿ ಕ್ರತುವಿಹೀನರು
ಬಯ್ದರಾಭೃಗುಮುನಿಯನೀತನೆ
ಕೊಯ್ದನೆಲ್ಲರ ಕೊರಳನಕಟಕಟಿತ್ತು ಶಾಪವನು ।
ಮೆಯ್ದಗದನದಱಿಂದನಲನೇನು
ತೆಯ್ದ ನೆರೆದುದು ಋಷಿನಿವಹ ನಭ
ವೆಯ್ದುದೆನೆ ನಡದಮರರಿಗೆ ಹೇೞಿದರು ಬೇಗಡೆಯ ॥ ೭

ಅಮರರಮರಾಧಿಪಸಹಿತರಾ
ಕ್ರಮವಿದೇನೆಂದೆನುತ ಹೋದರು
ಕಮಲಸಂಭವನಲ್ಲಿಗಾಋಷಿನಿವಹದೊಡಗೂಡಿ ।
ನಮಿಸಲವರನು ನೋಡಿದನು ಸಂ
ಭ್ರಮಿಸುವಿರಿ ನೀವೇಕೆ ಶೀಘ್ರದಿ
ಗಮನಕಾರಣವೇನೆನುತ ಬೆಸಗೊಂಡನಬುಜಭವ ॥ ೮

ಭೃಗು ಮುನಿದು ಶಾಪವನು ಕೊಟ್ಟೊಡೆ
ತೆಗದು ನಿಂದನು ವಹ್ನಿ ಕೆಟ್ಟುದು
ಬಗೆಯೆ [1]ಜೀವವ್ರಾತವೆಂದೀ ಋಷಿಗಳೆಮ್ಮೊಡನೆ ।
ನಿಗಮಗರ್ಭಗೆ ಹೇೞದೆಮ್ಮಲಿ
ಮುಗಿವುದಲ್ಲೆಂದೆನುತ ಬಂದೆವು
ಬಗೆವುದೊಡೆಯರು ಮೇಲೆಕಾರ್ಯವನೆಂದುದಮರಗಣ ॥ ೯

ಧಾರುಣಿಯ ಮೇಲೆಲ್ಲ ಹಾ ಹಾ
ಕಾರವಬ್ರಹ್ಮಣ್ಯವಾದುದು
ಭೂರಿಜಗವಿದು ಯಜ್ಞಭಾಗವಿಹೀನವೆಂದೆನಿಸೆ ।
ವಾರಿಜಾಸನ ಹೇೞು ಕೆಟ್ಟೆವು

1 ಜಗದ, ಕ. ಖ.

ಬೇಱೆ ಗತಿ ತಮಗಾವುದೆಂದಾ
ಕಾರವನು ತೋಱೆನುತ ಬಿನ್ನಹಮಾಡಿದರು ಸುರರು ॥ ೧೦

ಬ್ರಹ್ಮನು ಸುರರಿಗೆ ಅಭಯವಂ ಕೊಟ್ಟು ಅಗ್ನಿಯಂ
ಸಮಾಧಾನಮಾಡುವಿಕೆ.

ಅಂಜದಿರಿ ಸುರವರರೆ ಮುನಿವರ
ರಂಜದಿರಿ ಶಾಪಕ್ಕೆ ತಡೆದು ಧ
ನಂಜಯನು ಜಾಱಿದನು ಕೈವಿಡಿಱಿದನೆ ಸುರವರರ ।
ಸಂಜನಿಸಿತೇ ಪ್ರಳಯ ಲೋಕಕೆ
ಕಂಜನಾಭನ ಪದವಲಾ ಪವಿ
ಪಂಜರವು ನಮಗೆನುತ ಕರೆದನು ಹವ್ಯವಾಹನನ ॥ ೧೧

ಎಲೆ ಹುತಾಶನ ಭೂತಭಾವನ
ಎಲೆ ಸಮಸ್ತಪ್ರಾಣಿಜೀವನ
ಎಲೆ ಚರಾಚರಜಠರವಾಸಿ ಪವಿತ್ರಗುಣರಾಶಿ ।
ಎಲೆ ನವೀನನೆ ಲೋಕಪಾಲನೆ
ಹೊಳಹುದೋಱು ಮಹಾತ್ಮಯೆನುತಾ
ನಳಿನಭವನಭ್ಯರ್ಥಿಸಲು ಮೈದೋಱಿದನು ವಹ್ನಿ ॥ ೧೨

ಬಂದು ಚರಣದಲೆಱಗಲಂಬುಜ
ನಂದನನು ಮೈದಡವಿ ಕರುಣದ
ಲೆಂದನೇನೆಲೆ ಮಗನೆ ಮಾಡಿದೆ ಲೋಕ ನಿಷ್ಫಲವ ।
ತಂದೆ ನೀನಿಲ್ಲದಿರೆ ಜೀವಿಸು
ವೆಂದವೆಂತಿದು ಜಗಕೆ ದೇವಮು
ಕುಂದನಾಜ್ಞಾವರ್ತಿಗಳು ನಾವೆಂದನಬುಜಭವ ॥ ೧೩

ದೇವಪಿತೃಮರ್ತ್ಯರಿಗೆ ನೀನೇ
ಜೀವನವಲಾ ಸಕಲಜೀವದ
ಜೀವಭೂತನು ನೀನಲಾ ಜಠರಸ್ಥನೆಂದೆನಿಸಿ ।

ಕಾಯ್ವೆ ಜಗವನು ಮಗುವೆ ಕಡೆಯಲಿ
ಸೋವೆ ಸಂವರ್ತನನ ರೂಪದ
ಲಾವನೈ ನಿನ್ನುವನು ಪರಿಭವಿಸುವನು ಹೇಪೆಂದ ॥ ೧೪

ಅಂಜಬೇಡೆಲೆ ಮಗನೆ ಪಾಪದ
ಪುಂಜ ನಿನ್ನನು ಹೊದ್ದಲರಿಯದು
ಮಂಜು ಮುಸುಕಲು ಬಲ್ಲುದೇ ಮಾರ್ತಾಂಡಮಂಡಲವ ।
ಕಂಜನಾಭನ ಕರುಣವುಳ್ಳವ
ರಂಜುವರೆ ಬಂದುದಕೆ ಬೆದಱದಿ
ರಂಜಲಿಸದಪಕೀರ್ತಿ ನಿನ್ನನು ಚಿಂತೆ ಬೇಡೆಂದ ॥ ೧೫

ರವಿಕರಂಗಳು ಶುದ್ಧವಹ ವ
ಸ್ತುವನು ಮೇಣ್ಚಂಡಾಲಗೃಹವನು
ಕವಿದು ಬೆರಸವೆ ಬಂದಭಂಗವದೇನು ಭಾನುವಿಗೆ ।
ಜವವೆಱಿಯದಿರು ಜರುಗದಿರು ಮಾ
ಧವನ ಮನದೊಲವಿನ ಕಟಾಕ್ಷದ
ಕವಚರಕ್ಷಿತರಾವು ನಮಗಿನ್ನಾವ ಭಯವೆಂದ ॥ ೧೬

ವಾಯು ಬೆರಸದೆ ಜಗದಮೇಧ್ಯನಿ
ಕಾಯವನು ಚಂಡಾಲಗೃಹವನು
ಬಾಯಬಿಟ್ಟನೆ ನಿನ್ನವೋಲ್ ದೈವದಲಿ ಬಂದುದಕೆ ।
ಆಯುವಂತನೆ ನಾವಲಾ ನಾ
ರಾಯಣಾಜ್ಞಾವರ್ತಿಗಳು ತ
ತ್ಕಾಯವೀತೋಱುವ ಜಗತ್ತ್ರಯವೆಂದನಬುಜಭವ ॥ ೧೭

ಅಪ್ಪುಗಳು ಲೋಕದ ಸಮಸ್ತವ
ನೊಪ್ಪುಗೊಳವೇ ನೆಱೆ ಪವಿತ್ರತೆ
ತಪ್ಪಿಹೋದುದೆ ಮಿಂದು ಪಾವನವಾಗದೇ ಲೋಕ ।

ಸರ್ಪರಾಜಮಹಾಶಯುನನೊಲಿ
ದೊಪ್ಪುಗೊಂಡ ಮಹಾತ್ಮರೊಲಿದಂ
ತಿಪ್ಪರೆಂದಱಿ ತದ್ವಿಧಾಪಿತವೃತ್ತರಾವೆಂದ ॥ ೧೮

ಹೇಸಿದಳ ಧರೆ ಸಲೆ ಶುಭಾಶುಭ
ವಾಸನೆಗಳಿಗೆ ನಿನ್ನವೋಲೆಲೆ
ಭಾಸುರಾಂಗನೆ ಮಾಡುವಡೆ ಮೇಣ್ನಿನ್ನ ತನ್ನಳವೆ ।
ವಾಸುದೇವನ ಸೂತ್ರ ನೀ ನಿ
ರ್ದೋಷ ನಿಜಮುಖದಿಂದ ಸುರರು ಹು
ತಾಸನವ ಕೈಕೊಳಲಿ ಪಿತೃಗಳು ಸಹಿತ ಕೇಳೆಂದ ॥ ೧೯

ನಿನ್ನ ಮುಖವೇ ಮುಖವೆನಗೆ ಕೇ
ಳ್ನಿನ್ನ ಮುಖವೇ ಮುಖವು ಸುರರಿಗೆ
ನಿನ್ನ ಮುಖವೇ ಸಕಲಪಿತೃಮುಖ್ಯರಿಗೆ ಮುಖವೆಂದ ।
ನಿನ್ನ ಮುಖವೇ ಭಾವಿಸುವೊಡೆ ಜ
ಗನ್ನಿವಾಸನ ಮುಖವು ಹವಿಯನು
ಮುನ್ನ ನೀ ಕೊಳಲಧ್ವರಂಗಳವೆಂದನ [1]ಬುಜಭವ ॥ ೨೦

ಸೋಕೆ ನಿನ್ನನು ರವಿಯ ರಶ್ಮಿಯು
ಪಾಕಕರ್ತುವೆ ಜಲವನವನಿಯು
ಲೋಕಪಾವನವಾಗಲಶುಚಿದ್ರವ್ಯಚಯಸಹಿತ ।
ಏಕೆ ನಿನಗ [2]ಶುಚಿತ್ವವೆಂಬೀ
ಶೋಕ ಬಿಡುಬಿಡು ಸಂಶಯುವನೆಂದಾ
ಲೋಕಕಾರಣಮೂರ್ತಿ ಸಂತಯಿಸಿದನು ಪಾವಕನ ॥ ೨೧

ಬ್ರಹ್ಮನ ಅಪ್ಪಣೆಯುಂತೆ ಅಗ್ನಿಯ ಪೂರ್ವಸ್ಥಿತಿ.

ಎನೆ ಹಸಾದವೆನುತ್ತ ಪಾವಕ
ನನುನಯವ ಕೈಕೊಂಡು ನಿರ್ಮಳ

---

1 ಗಳುಯೆಂದ, ಕ. ಖ. 2 ನಿನಗೆಯು, ಕ. ಖ.

ಮನದಲಬುಜಭವಂಗೆ ಕರಗಳ ಮುಗಿದು ತಲೆವಾಗಿ ।
ಅನಿಮಿಷದೆ ಸುರವರರು ಸಹಿತಂ
ದನಲನೈದಿದ ನಾಕವಾಸವ
ನನುಪಮನೆ ಕೇಳಾಯ್ತು ಮಂಗಳವೀ ಜಗಂಗಳಲಿ ॥ ೨೨

ಸಂತವಾದುದು ಸುರರಿಗಾಋಷಿ
ಸಂತತಿಗೆ ಪರಿತೋಷವಾದುದು
ಚಿಂತೆ ಬಿಟ್ಟುದು ಸಕಲಲೋಕ ಪ್ರಾಣಿಜೀವನವ ।
ಅಂತರಾಯುವಪಾಯುಗಂಡುದು
ತಂತಮಗೆ ಜನ ಸಕಲಸಪ್ತಸು
ತಂತುಗಳ ಸಾಗಿಸಿತು ಭೋಗಿಸಿ ಶಿಷ್ಟವಹ ಸುಖವ ॥ ೨೩

### ಚ್ಯವನಸಂತತಿಯುಲ್ಲಿ ರುರುವಿನ ಜನನ.

ಅವಧರಿಸಿದ್ಯೆ ಮುನಿಪ ಶೌನಕ
ಪವನಸಖನ ವಿಚಿತ್ರಚರಿತ್ರವ
ನವನಿಪಾವನವೆನಿಪ ಪುಣ್ಯಾಖ್ಯಾನಸಂಗತಿಯು ।
ಅವಧರಿಸು ಮೇಲಾದಮುನಿಭಾ
ರ್ಗವಚರಿತ್ರವ ನಾನೊರೆವೆ[1] ನೈ
ಚ್ಯವನನವನತರಕ್ಷಕನು ತಾನೆನಿಸೆ ಧರಣಿಯುಲಿ ॥ ೨೪

ಭುವನನುತನು ಮಹಾತ್ಮನೆನಿಪಾ
ಚ್ಯವನಮುನಿಗೆ ಸುಕನ್ಯೆಯುಲಿ ಸಂ
ಭವಿಸಿದನಲಾ ಪ್ರಮತಿ ಬಳಿಕಾಪ್ರಮತಿಯೆಂಬವಗೆ ।
ದಿವಿಜವನಿತೆ ಘೃತಾಚಿಯುಲಿ ಸಂ
ಭವಿಸಿದನು ರುರುವೆಂಬವನು ತ
ದ್ಭವನು ಶುನಕನಲಾ ಪ್ರಮದ್ವರೆ ಯಾತ್ಮಭವನೆಂದ ॥ ೨೫

---

[1] ನೂಹಿಸಿದ್ಯೆ, ಕ, ಖ.

ನೀನಲಾ ಮುನಿನಾಥ ಶುನಕನ
ಸೂನು ನಿನ್ನ ಪಿತಾಮಹನು ತಾ
ನೇನ ಮಾಡಿದನೆಂಬುದನು ಕೇಳದುಭುತದ ಕಥೆಯ ।
ಮೇನಕೆಯ ಮಗಳಾಪ್ರಮದ್ವರೆ
ತಾನು ಮರಣವನೈದಿ ಮಗುಟಾ
ಸ್ಥಾನದಲಿ ಜೀವಿಸಿದಳಲೆ ತಂದೆ ನೀ ಕೇಳೆಂದ[1] ॥ ೨೬

ಮೇನಕೆಯಿಂ ಪ್ರಮದ್ವರೆಯ ಜನನ.

ಒಂದುದಿನ ಗಂಧರ್ವರಾಜನು
ಬಂದು ಕಂಡನು ಮೇನಕೆಯನವ
ಳಂದೆ ಸಲೆ ವಿಶ್ವಾವಸುಸಮಾಹ್ವಯನು ಕಡುನೊಂದು ।
ಇಂದುಮುಖಿಯನು ಕೂಡಿದನು ಬಳಿ
ಕಂದು ಗರ್ಭವ ತಳೆದು ಬಿಸುಟಳು
ಸಂದ ವಿಪಿನಾಂತರದಲೆಲೆ ಮುನಿನಾಥ ಕೇಳೆಂದ ॥ ೨೭

ಸ್ಥೂಲಕೇಶಾಹ್ವಯಮಹಾಮುನಿ
ಯಾಲಯದ ವಳಯದಲಿ ಬಿದ್ದುದು
ಲೋಲಲೋಚನೆ ಬಿಸುಟ ಗರ್ಭವದೊಂದು ವರನದಿಯ ।
ಕೂಲದಲಿ ಜನಿಸಿದಳು ಕನ್ನಿಕೆ
ಭಾಳನೇತ್ರನ ವಧುವೊ ಲಕ್ಷ್ಮಿಯೊ
ಹೇಪೆನಲು ತೊಳತೊಳಗಿ ಬೆಳಗಿದಳಖಿಳದಿಕ್ತಟವ ॥ ೨೮

ಕಂಡನಾ ಮುನಿನಾಥನೀ ಭೂ
ಮಂಡಲಕೆ ತೊಡವೆನಿಪ ಕನ್ಯಾ
ಮಂಡಲಮಹಾರತ್ನವನು ತನ್ನಾಶ್ರಮಕ್ಕೊಲಿದು ।
ಕೊಂಡುಹೋದನು ಸಲಹಿದನು ತನು

1 ಲೈತಂದೆಕೇಳೆಂದ, ಕ, ಖ,

ಗೊಂಡಲಾವಣ್ಯದವರೊಳೆಲ್ಲಾ
ಪುಂಡರೀಕಾಕ್ಷಿಯರಿಗಧಿಕೆಯೆನಿಪ್ಪ ಬಾಲಿಕೆಯ ॥ ೬೯

ಪ್ರಮದೆ ತಾನೆಲ್ಲರಿಗೆ ತಾನು
ತ್ತಮೆಯೆನಿಸುವದಱಿಂದ ಮುನಿಪತಿ
ಕಮಲಮುಖಿಗೆ ಪ್ರಮದ್ವರಾಖ್ಯೆಯನಧಿಕವೋಹದಲಿ ।
ಸುಮತಿ ರಚಿಸಿದನಿಂತು ಬಳೆದಳು
ವಿಮಲಪಕ್ಷದ ವಿಧುವಿನಂತಿರೆ
ರಮಣಿ ರಕ್ಷಾಮಣಿಯೊಳಿರ್ದಳು ವರಮನೋಭವನ ॥ ೭೦

ರುರುವಿಗೆ ಪ್ರಮದ್ವರೆಯಲ್ಲಿ ಅಭಿಲಾಷೆ.

ಮುನಿಪ ಕೇಳೊಂದುದಿನ ಕಂಡನು
ಮನುಮಥನ ಮಸೆದಲಗನಾರುರು
ವನದೊಳೊಬ್ಬಳೆಯಾಡುತಿರಲಾಲೋಲನೇತ್ರೆಯನು ।
ಮನವನಾವರಿಸಿತ್ತು ತತ್ಕೃತ
ಘನತರಜ್ವರ ಕಂಗಳಬಲೆಯ
ತನುವಿನೊಳಗಱಿಸಿದವು ತತ್ಪ್ರತಿಕಾರದೌಷಧವ ॥ ೭೧

ತನಗೆ ಸಾಧ್ಯವೆನುತ್ತ ಮನದಲಿ
ವನಿತೆಯನು ನೆನೆವುತ್ತ ದುಗುಡದ
ಲನುಪಮನು ನಡೆತಂದು ಹೊಕ್ಕನು ರುರು ನಿಜಾಲಯವ ।
ಜನಿಸದಾದುದು ನಿದ್ರೆ ವಿಗತಾ
ಶನನು ಕೃಶತರಗಾತ್ರನಾಗಿರೆ
ತನಯನನು ಬೆಸಗೊಂಡನಂದಾಪ್ರಮತಿ ಶಂಕಿಸುತ ॥ ೭೨

ಪ್ರಮತಿರುರುಗಳ ಸಂವಾದ.

ಏನಿದೇನೈ ಮಗನೆ ಚಿತ್ತ
ಗ್ಲಾನಿ ನಿನಗೆಲೆ ತಂದೆ ಹೇಳೆನೆ

ತಾನು ಹೋದೆನು ತಂದೆ ಕಂಡೆನು ಕಮಲಲೋಚನೆಯ |
ಕಾನನದ ಲಕ್ಷ್ಮಿಯೊ ಧರಿತ್ರಿಗೆ
ತಾನು ಸುಳಿದಾಗಿರಿಜೆಯೋ ಮಿಗೆ
ಮಾನವಾಂಗನೆಯಲ್ಲ ಸೋತುದು ತನ್ನ ಮನವೆಂದ || ೨೩

ಮಱೆಯುದೆನ್ನೀ ಮನವಿದ[1] ಬಲೆಯು
ಸೆಱಗು ಸೋಂಕುವೊಡಂಜಿ ಬಂದೆನು
ಬಱಿಮನದ ಬಾಹಿರನ ಬೆಸಗೊಳಲೇಕೆ ಮುನಿನಾಥ |
ಸೆಱೆಗೆ ನೂಕಿದಳೆನ್ನ ವಿಂತೆನ
ಲಱಿವೆನದನಾನೆನುತ ಹೋದನು
ಮಱುಗಿಸುವ ಮಾನಿನಿಯುದಾರೆನುತಾಶ್ರಮಕೆ ಬಂದ || ೨೪

ಪ್ರಮತಿಯು ಪ್ರಮದ್ವರೆಯುಂ ರುರುವಿಗೆ ಘಟನೆಮಾಡಿದುದು.

ಕಂಡನಾಮುನಿ ಯಾಶ್ರಮದಲಾ
ಪುಂಡರೀಕಾಕ್ಷಿಯನು ಕಾಮನ
ಖಂಡೆಯದ ನೊರೆಗಳದು ಹೊಗರಿಟ್ಟಂತೆರಂಜಿಸಲು |
ದಂಡದಂತಿರೆ ನಮಿಸಲಾ ಮುನಿ
ಕಂಡನೀತನನು ಚಿತ್ತದಿನಿದಿ
ರ್ಗೊಂಡು ತೆಗದಪ್ಪಿದನು ಕುಶಲೋಕ್ತಿಯಲಿ ಬೆಸಗೊಂಡ || ೨೫

ಹೇಳಿದೇನೈ ಬಂದೆ ನೀನ
ಮ್ಮಾಲಯಕೆ ಕಾರ್ಯವನು ಹೇಳೆನೆ
ಹೇಳಿದನು ಬಾಲಿಕೆಯ ಬಲೆಯಲಿ ಬಿದ್ದ ಸುತನಿರವ |
ಮೇಲೆ ನೀನೇ ಬಲ್ಲೆಯೆನೆ ಸಮ
ಶೀಲನಾದನೆನುತ್ತ ಕೊಟ್ಟನು
ಲೋಲಲೋಚನೆಯನು ಮಹಾಮುನಿ ವರಮುಹೂರ್ತದಲಿ || ೨೬

1 ದೀಮನವೆನಗೆನ, ಕ. ಖ.

ವಿವಾಹವಾಗುವಿಕೆ.

ಆದುದಾತನ ಮದುವೆ ಮನದ ವಿ
ಷಾದವಡಗಿತು ಕಾಮನಲಗನು
ಕೋದ ನೆರೆಯುಲಿ ಮರೆಯಮಾತೇಕಿನ್ನು ಮಂಗಳದ ।
ಪಾದವಭಿನವವಾಯ್ತು ಹರುಷಮ
ಹೋದಧಿಗೆ ಪೂರ್ಣೆಂದು ವಾಯ್ತು ತ
ಳೋದರಿಯ ವೈವಾಹರಚನಾರಂಭಸಂರಂಭ ॥ ೩೭

ಬಸಗೆ ಮಿಗಲಂದಾಮಹಾಸತಿ
ಶಶಿಮುಖಿಯು ಸಂಮೋಳದಲಿ ರಂ
ಜಿಸಿದನಭಿಜನಸಮ್ಮತಾಮಳಪುಣ್ಯಕೃತ್ಯದಲಿ ।
ವಸುಧೆ ಪಾವನವಾಗಲಮರರ
ಬಸುಱು ದಣಿದುದು ಹವ್ಯಕವ್ಯ
ಪ್ರಸರದಲಿ ಪಿತೃನಿಕರವಧಿಕಾನಂದದಲಿ ಮುಳುಗೆ ॥ ೩೮

ಹೇೞಿದನು ಮುನಿನಾಥ ಪಾವಕ
ನೂೞಿಗವನುಪಶಮಿಸಿದಂದವ
ನಾಲತಾಂಗಿ ಪ್ರಮದ್ವರೆಯ ವಿವಾಹಸಂಗತಿಯ ।
ಹೇೞುವರಿಗಿಷ್ಟಾರ್ಥಸಿದ್ಧಿಯ
ಮೂಲವಿದು ಕೇಳುವ ಮಹಾತ್ಮರ
ಪಾಲಿಸುವನುರುಮಹಿಮ ನಿತ್ಯಾತುಮನು ಮುರವೈರಿ ॥ ೩೯

ಎರಡನೆಯ ಸಂಧಿ ಮುಗಿದುದು.

# ಮೂರನೆಯ ಸಂಧಿ.

ಸೂಚನೆ.

ಚಿತ್ತವಿಸು ಶೌನಕ ಪ್ರಮದ್ವರೆ
ಮೃತ್ಯುಮುಖದಲಿ ಬಿದ್ದು ಮಗುಪೆ ಸು
ವೃತ್ತಿ ತಾ ಜನಿಸಿದಂದವದಾಯ್ತೆಂದ [1] ನಾ ಸೂತ ॥

ರುರುಪ್ರಮದ್ವರೆಯರ ಗಾರ್ಹಸ್ಥ್ಯವರ್ಣನೆ.

ಕೇಳು ಶೌನಕ ರುರು ಸಮಗ್ರಗು
ಣಾಲಯನು ತಾನೆನಿಸಿ ಪುಣ್ಯಾವ
ಮೇಳವಿಸಿದನು ಯಜ್ಞದಾನತಪೋವ್ರತಂಗಳಲಿ ॥
ಶೀಲನಿಧಿ ಗುಣನಿಧಿ ದಯಾನಿಧಿ
ಬಾಲಿಕೆ ಪ್ರಮದ್ವರೆ ಸಹಿತ ಪೂ
ರ್ಣಾಲಯದೊಳಸೆದಿರ್ದನುತ್ತಮಕರ್ಮಸಿದ್ಧಿಯಲಿ ॥ ೧

ಹರಿಪದಾಂಬುಜಭಕ್ತನುನ್ನತ
ಗುರುಪದೋಪಾಸಕನುಪಾಶ್ರಿತ
ಸುರಪಿತೃದ್ವಿಜಚರಣ ಭೃಗುಕುಲಕುಮುದಹಿಮಕಿರಣ ।
ಶರಣಜನರಕ್ಷಕನಹಿಂಸಾ
ಪರನನಾರತಧರ್ಮಪರತ
ತ್ಪರನೆನಿಸಿ ಗಾರ್ಹಸ್ಥ್ಯದಲಿ ಪರಿತುಷ್ಟನಾಗಿರ್ದ ॥ ೨

1 ಜನಿಸಿವಂದವನೆಂದ, ಕ. ಖ

ವರಪತಿವ್ರತೆ ಸತ್ಯರತೆ ಸ
ಚ್ಚರಿತೆ ಸೌಭಾಗ್ಯಯುತೆ [1] ಶೀಲಾ
ಭರಣೆ ವಂಶೋದ್ಧರಣೆ ಯಘಕುಲನಿಕರಸಂಹರಣೆ ।
ಪರಮಪಾವನೆ ಪುಣ್ಯಭಾವನೆ
ಸುರಪಿತೃದ್ವಿಜಭಕ್ತೆ ಭುವನೋ
ತ್ತರಮಹಾಗುಣಯುಕ್ತೆ ಯೆಸೆದಳು ಸತಿ ಭೃಗೂದ್ವಹನ ॥ ೩

ಕಾಡಿನಲ್ಲಿ ಸರ್ಪದಂಶನದಿಂದ ಪ್ರಮದ್ವರೆಯ ಮೃತಿ.

ಒಂದುದಿನ ವರವನಿತೆ ಕೆಳದಿಯ
ರೆಂದು ವರಮುನಿಗಳ [2] ವಧೂಜನ
ವೃಂದಸಹಿತಾಡುತ್ತ ತದ್ವಿಪಿನಾಂತರದಲೊಲಿದು ।
ಮುಂದೆ ಕಾಳೋರಗನು ಬಿದ್ದಿರ
ಲಿಂದುಮುಖಿ ನೋಡದೆ ಮಹಾವಿಷ
ದಿಂದ ಸಂಪನ್ನನನು ಮೆಟ್ಟಿದಳಗ್ರಪಾದದಲಿ ॥ ೪

ಮೆಟ್ಟಿದಾಗಳ ಕೆರಳಿ ಕೋಪಾ
ವಿಷ್ಟಕಾಯನು ಕಾಂತೆಯನು ನಸು
ಮುಟ್ಟಿದನು ವಿಷವೀರ್ಯದುರ್ಧರ ದಂಷ್ಟ್ರ [3] ಯುಗ್ರದಲಿ ।
ಕೆಟ್ಟುದೊಡಲ ಛವಿ ಛಾಯೆ ಶಶಿಯು [4]
ಮುಟ್ಟಿದಂತಿರೆ ಜೀವಧರಣವ [5]
ಬಿಟ್ಟಳಲ್ಲಿಯೆ ಬಾಲೆ ಬದಱಿದುದಾ ವಧೂನಿವಹ ॥ ೫

ಪ್ರಮದ್ವರೆಯಂ ನೋಡಿ ಋಷಿಗಳು ಶೋಚಿಸಿದುದು.

ದಿಂಡುಗಡೆದಳು ಧರೆಗೆ ಹುವ್ವಿನ
ದಂಡೆಯನು ಬಿಸುಟಂತೆ ಕೆದಱಿದ
ಮಂಡೆಯಲಿ ಬಿಡುಮುಡಿಯ ಮಲ್ಲಿಗೆ ಸೂಸಲವನಿಯಲಿ ।

---

1 ಭಾಗ್ಯದೆ ಭರಿತೆ, 2 ಮುನಿವಧೂಜನ, ಖ. 3 ದಾಡೆ, ಖ.
4 ಛವಿಶಶಾಂಕನ, ಕ. ಖ. 5 ಹರಣವ, ಖ.

ಕಂಡು ಕೆಳದಿಯರೊಱಲಿದರು ಋಷಿ
ಮಂಡಲವದೇನೆನುತ ಕೇಳುತ
ಪುಂಡರೀಕದಳಾಕ್ಷಿಯಲ್ಲಿಗೆ ಬಂದರಾಕ್ಷಣಕೆ ॥ ೬

ಕೇಳುತಲೆ ಹರಿತಂದನಂದಾ
ಸ್ಥೂಲಕೇಶನು ಮಗಳ ಮರಣ
ಜ್ವಾಲೆಯಲಿ ಮುೞುಗಿದನು ರುರುವಿನ ಮನದ ದುಸ್ಥಿತಿಯು ।
ಹೇೞಲೇಕಾಪ್ರಮತಿ ಯೊಡಲಲಿ
ಬಾಳಕೊರದಂತಾಯ್ತು ವರಮುನಿ
ಜಾಲ ಜಂಗೆನೆ ಜರಿದುದಂಗನೆಯಿರವನೀಕ್ಷಿಸುತ ॥ ೭

ಬಂದನಾತ್ರೇಯನು ಮಹಾಸತಿ
ಹೊಂದಿದಳ ಹಾ ಯೆನುತ ಕುಳಿತನು
ಬಂದನಱಲಿದನಾರ್ಷ್ಣಿಷೇಣನು ದೀರ್ಘಜಾನುಕನು ।
ಬಂದನಲ್ಲಿಗೆ ಕೋಣಕುತ್ಸನು
ಬಂದನಾಗೌತಮನು ಕೇಳ
ಯ್ತಂದನಿರದಾಶಂಖಮೇಖಲನಾಭರದ್ವಾಜ ॥ ೮

ಬಂದುದಾಮುನಿನಿವಹವವರಿವ
ರೆಂದು ಬಣ್ಣಿಸಲೇಕೆ ಕಾಣು
ತ್ತಿಂದುಮುಖಿಯನು ರಾಹುವಿಂ ಸದ್ಧರ್ಮ ಮುಗಿವಂತೆ[1] ।
ಅಂದು ಘೋರೋರಗದ ವಿಷದಲಿ
ಹೊಂದಿದಬಲೆಯನೀಕ್ಷಿಸುತ ಘೋ
ಷೆಂದು ಬಾಯನು ಬಿಟ್ಟುದಿಳ ಬಿರಿವಂತೆ ದುಃಖದಲಿ ॥ ೯

ರುರುವಿನ ಪ್ರಳಾಪ.

ಪದುಮಮುಖಿಯನು ಪರಿಹರಿಸಿ ದುಗು
ಡದಲಿ ಮುನಿಸಭೆ ಕುಳ್ಳಿರಲು ನಿಜ

---

1 ರಾಹು ಸದ್ಧರ್ಮಕ್ಕೆ ಮುನಿದಂತೆ, ಕ. ಖ.

ಸುದತಿಯನು ಕಾಣುತ್ತ ರುರು ರೋದನಕೆ ಲಜ್ಜಿಸುತ |
ಸದನವನು ಪೊಱಮಂಟು ಕಡು ವಿಜ
ನದಲಿ ಘೋರಾರಣ್ಯವನು ಪೊ
ಕ್ಕೊದಱದನು ಕೆದಱದನು ತದ್ವನವಾಸಿಖಗಮೃಗವ ॥ ೧೦

ಏಕೆ ಕಂಡೆನು ಪೂರ್ವದಲಿ ಭುವ
ನೈಕರತ್ನವೆನಿಪ್ಪ ಸತಿಯನು
ಸೋಕಿ ಕಂಗಳು ಕೋಳುವೋಗದದೇಕೆ ಭಾಮಿನಿಗೆ |
ಲೋಕದಲಿ ಹೋಲುವಳದಾರೆ
ನ್ನಾಕೆಯನುಪಮರೂಪಗುಣಶೀ
ಲಾಕೃತಿಯನಾನೆಂತು ಮಱೆಯುವೆ [1] ನೆಂದು ಹಲುಬಿಸಿದ ॥ ೧೧

ಎಲೆ ವಿಧಾತ್ರ ವೃಥಾವಿಯೋಗದ
ಬಲೆಯ ಬೀಸಿದೆ ಕಾಯದರ್ಥಕ್ಕೆ
ತಳುವಿದೇಕೀಯ [2] ರ್ಥವನು ನಿನಗೈದೆ ಸಾಧಿಸಲು |
ಹೊಳೆಯ ನಡುಗಡಲೊಳಗೆ ನಾವೆಯ
ಮುಳುಗಿಸಿದೆ ಮುಂದಱಯದವರನು
ಮೆಲವರವಿದೇಕೆಮ್ಮ ದೇಹದಲೆಂದು ಹಲುಬಿಸಿದ ॥ ೧೨

ಕೊಂಡುಹೋಗೆನ್ನುವನು ಬಿಡು ಮೇ
ಣ್ಪುಂಡರೀಕಾಕ್ಷಿಯನು ಕಾಯುವ
ಖಂಡಿತವೆ ಕೈಗಾದುದೇನುಂಟಯ್ಯ ಫಲವಿದಕೆ |
ಉಂಡುಹೋಗಲಿ ಕರ್ಮವೆಂಬೊಡೆ
ಪಂಡಿತನು ತಾನಲ್ಲ ಪಿತೃಋಣ
ಕೊಂಡು ಮುಳುಗಿತು ನರಕಕೂಪದಲೆನ್ನನಕಟೆಂದ ॥ ೧೩

ಅಷ್ಟದಿಗುಪಾಲರಿರ ವಿರಚಿಸಿ
ದಿಷ್ಟವುಳ್ಳೊಡೆ ಪೂರ್ತವುಳ್ಳೊಡೆ

1 ದಪೆ, ಕ. ಖ 2 ದೈದೇಕ, ಕ.

ಶಿಷ್ಟಜನಸಮ್ಮತನು ತಾನೆಂದೆನಿಸುವೊಡೆ ತನ್ನಾ ।
ದೃಷ್ಟಿಮೋಹನಮೂರ್ತಿಯನು ಪರಿ
ಶಿಷ್ಠೆಯನು ಮಾಡುವುದು ಕರುಣಾ
ದೃಷ್ಟಿಯಲಿ ನೀವೆನುತ ಕೈಗಳ ಮುಗಿದು ಪೊಡಮಂಟ ॥ ೧೪

ಉತ್ತಮರ ವಂಶದಲಿ ಜನಿಸಿದ
ವೃತ್ತವಂತನು ತಾನಹೊಡೆ ನಿಜ
ಮತ್ತಕಾಶಿನಿ ತನ್ನಮೆಱುಗಿಸವಂತೆ ಮಾಡುವುದು ।
ವೃತ್ರರಿಪುಮುಖ್ಯರಿಗೆ ತಾ ಕೈ
ಯೆತ್ತಿದೆನು ಪೊಡವಟ್ಟು ಪಿತೃಗಳ
ನೊತ್ತವನು ಮಱಿಹೊಕ್ಕೆನೆಂದನು ವಿಪ್ರನಭಿನಮಿಸಿ ॥ ೧೫

ಶ್ರೀನಿವಾಸಪದಾಬ್ಜಯುಗಳವ
ತಾನು ನಂಬಿದ ಭಕ್ತನಾದೊಡೆ
ಮಾನಿನಿಯು ಮರಣವನು ಮಾಣಿಸಿ ಕೊಡುವುದೆಮಗೊಲಿದು ।
ನೀನಲಾ ಜಗದುದುಭವಸ್ಥಿತಿ
ಹಾನಿಸಮ್ಮತಕರ್ಮ ನಿನಗಿ
ನ್ನೇನಸಾಧ್ಯವು ದೇವ ಕೃಪೆಮಾಡೆಂದನಾ ವಿಪ್ರ ॥ ೧೬

ರುರುವಿನ ಬಳಿಗೆ ದೇವತೆಗಳ ದೂತಪ್ರೇಷಣ.

ಎಂದು ತಲೆವಾಗಿರಲು ಸುರಪಿತೃ
ವೃಂದವದನಾಲಿಸುತ ಕರುಣಾ
ಕಂದಳಿತಕಮನೀಯಹೃದಯರು ತಮ್ಮೊಳೊಂದಾಗಿ ।
ಎಂದರಾದ್ವಿಜವರನ ಹುಯ್ಯಲು
ಬಂದುದಿದಕಿನ್ನೇನು ಗತಿ ಮತಿ
ಯಿಂದುಮುಖಿಯನು ಮಗುಟೆ ಬದುಕಿಸಬಲ್ಲರಾರೆನುತ ॥ ೧೭

ಇಲ್ಲ ಸತಿಗಾಯುಷ್ಯ ಜೀವಿಸ
ಬಲ್ಲರಾರಬಲೆಯನು ಲಕ್ಷ್ಮೀ

ವಲ್ಲಭನು ಹೊರಗಾಗಿಮಾರ್ಕಂಡೇಯಯುಗಂತಕನ ।
ಹಲ್ಲನೊದೆಯನೆ ಹಲವುಯುಗ ತರಿ
ಸಲ್ಲದೇ ತತ್ಪಾದಭಕ್ತರು
ಬಲ್ಲಿವರು ನೋಡುವೆವುಪಾಯವನೆಂದುದಮರಗಣ ॥ ೧೮

ತಿಳಿಹಿ ನೋಡುವೆವೆನುತ ದೂತನ
ಕಳುಹಿದರು ವಿಪ್ರೋತ್ತಮನ ಹೊರೆ
ಗಿಳಿದನಾತನು ಕಂಡನಾದ್ವಿಜವರನನಟವಿಯಲಿ ।
ಅಳಲಬೇಡೆಲೆ ವಿಪ್ರವರ ನಿಜ
ಲಲನೆಗಿಲ್ಲಾಯುಷ್ಯವಾರಿಗೆ
ಹಲುಬಿದೊಡೆ ಫಲವೇನು ಯೋಚಿಸುವೆಂ [1] ದನಾದೂತ ॥ ೧೯

ರುರು ದೇವದೂತರ ಸಂವಾದ.

ಆರು ಹೇಳೆಲೆ ತಂದೆ ಕಳುಹಿದ
ರಾರು ನಿನ್ನನು ತನ್ನ ಜಠರದ
ಕೂರಲಗಿನುಪಟಳವನುಪಶಮಿಸುವರದಾರಿನ್ನು ।
ನಾರಿಗಿಲ್ಲಾಯುಷ್ಯ ಗಡ ನೀ
ನಾರು ಹೇಳುವೊಡದನು ದೈವದ
ಕೂರಮಿಗಸಾಧ್ಯವೆಂದಿನಿಸುವದಾವುದುಂಟೆಂದ ॥ ೨೦

ಭೂವಿಬುಧವರ ಕೇಳು ದೂತನು
ದೇವಸಂತತಿಗಾನು ಕಳುಹಿದ
ರೀವಿಲಾಪವ ಕೇಳಿ ನಿನ್ನಲಿ ಕರುಣವನು ಮಾಡಿ ।
ಬೂವಿಗಿಷ್ಟಾಪೂರ್ತಚೇತರು
ದೈವವಶವಾಕರ್ಮವಿದು ತಾ
ನಾವವನು ಮಾಡಿಲು ಸಮರ್ಥನು ವಿಪ್ರ ಕೇಳೆಂದ ॥ ೨೧

1 ಸಾಧ್ಯವೆಯೆಂ, ಕ. ಖ.

ಆಱಿರೆ ತಾವ್ ಸುರವರರು ತನ್ನ
ನಾರಿಯನು ಬದುಕಿಸದೊ [1] ಡಕಟಾ
ತೋಱಲೇತಕೆ ಕರುಣವನು ತಾನವರಂಗವರೆನಗೆ ।
ಬೇಱೆ ದೂತನ ಕಳುಹಲೇತಕೆ
ದೂಱುವನು ತಾನಲ್ಲ ತನಗೀ
ಡೇಱದಿರ್ದರೆ ಬಂದಪಥದಲಿ ಹೋಗು ನೀನೆಂದ ॥ ೭೦

ಎಂದೊಡೆಂದನು ದೇವದೂತನು
ತಂದೆ ತಪ್ಪಿಸಲರಿದು ವಿಹಿತವ
ದಿಂದುಮೌಳಿಗೆ ಬಱಿವೆ ಜರಿಯದಿರಮರಪತಿಗಳನು ।
ಬಂದು [2] ಪಾಯವ ಹೇೞುವೆನು ಸುರ
ರೆಂದುದು ನಿಜಮತಕೆ ಬಹೊಡೆ ನಡೆ
ಯೆಂದನಾದ್ವಿಜಮುಖ್ಯಗಧಿಕಮನೋನುರಾಗದಲಿ ॥ ೭೧

ಹೇೞು ಹೇೞೆಲೆ ತಂದೆ ಹೇೞೆ
ನ್ನಾಳಿಯನು ನೆನೆಯದಿರೆ ತನ್ನಯ
ಲೋಲಲೋಚನೆ ಜೀವಿಸುವ ಪರಿ ಯೆಂತುಪಾಯವೆನು ।
ಹೇೞು ಬಲ್ಲರೆ ಬಾಂಧವನೆ ಕರು
ಣಾಳುಗಳಲಾ ದೇವರವರೆನೆ
ಹೇೞಿದನುಪಾಯವನು ಪಾವನಕೀರ್ತಿಗೊಲವಿನಲಿ ॥ ೭೨

ಬುದ್ಧಿವಂತನೆ ನಿಜಮನೋರಥ
ಸಿದ್ಧಿಯನು ಬಯಸುವೊಡೆ ಮನದಲಿ
ಕ್ರುದ್ಧನಾಗದಿರಾಯುವಂತನೆ ಕೊಡು ನಿಜಾಯುಷದ ।
ಅದ್ಧವನು ಸತಿ ಜೀವಿಸುವಳು ನಿ
ಬದ್ಧವದು ತನಗಿಷ್ಟವಾಯ್ತೆನ
ಲುದ್ಧವಾದನು ಮುನ್ನಿನೊಂದಳ [3] ತೆ ಮುನಿನಾಥ ॥ ೭೩

---

1 ಸುವೊ, ಕ. ಖ. 2 ಅಂದು, ಕ. 3 ನೊಂವುಳ, ಕ. ಖ.

ಹೇಳು ಹೇಳೆನ್ನೊಮ್ಮೆ ತಡೆಯದೆ
ಬಾಲೆಯ ಬದುಕಿಸಿದೊಡೆ ನಿನ್ನಯ
ಕಾಲಿಗೆಱಗುವೆನಿತ್ತ ಬಾ ಹತ್ತಿರಕೆ ಬಾ ತನ್ನ ।
ಬಾಲೆ ಬದುಕುವುಪಾಯವನು ನೀ
ಹೇಳೆದಾವಂದದಲಿ ಕೊಡುವೆನು
ಮೇಲಣಾಯುಷದರ್ಥವನು ವಿಧಿಕೋವಿದನೆ ಯೆಂದ ॥ ೨೬

ಎಲ್ಲವನು ತಾನೀವೆನೆನ್ನಯ
ವಲ್ಲಭೆಗೆ ಮೇಣರ್ಧವೆಂದೆನ
ಗಲ್ಲಿ ಸಂಶಯವಿಲ್ಲ ಕೊಟ್ಟೆನು ಕೊಟ್ಟೆನೆಂದೆನಲು ।
ಬಲ್ಲಿದನು ನೀನಹೆ ಸಮಂತ್ರಕ
ವಲ್ಲದಾಗದು ತವಕವುಳ್ಳರ
ಬಲ್ಲಹನೆ ಬಱಿಮಾತಿನಲಿ ಫಲವೇನು ಕೇಳೆಂದ ॥ ೨೭

ಮುನ್ನ ಮಾರ್ಕಂಡೇಯಮುನಿ ದು
ಗ್ಧಾರ್ಣವಾಲಯನೊಲವಿನಲಿ ಸಂ
ಪನ್ನಮೃತ್ಯುವ ಗೆಲಿದವೋಲು ತದೀಯಕರುಣದಲಿ ।
ನಿನ್ನಿನೀ ಮೃತ್ಯುವನು ಗೆಲ್ಲಿಂ
ದುನ್ನತಾಯುಷ್ಯಾರ್ಧದಲಿ ತಾ
ಮನ್ನಿಸಿದೆನೆನುತ ಸಜಲಾರ್ಪಣವ ನೀ ಮಾಡೆಂದ ॥ ೨೮

ರುರು ತನ್ನ ಅರ್ಧಾಯುವನ್ನು ಸತಿಗೆ ಕೊಡುವಿಕೆ.

ಶ್ರುತಿವಿಹಿತವೆಲೆ ತಂದೆ ಕೊಡುವುದು
ಸತಿಗೆ ಪತಿಯಾ ಪತಿಗೆ ಸತಿ [1] ಮೇ
ಣ್ಸತಿಗೆ ಕೊಡಿಸುವುದಾಯುಷಾರ್ಧವನುತ್ತ ಮಂತ್ರದಲಿ ।
ಹಿತವಿದನೆ ನೀ ಬೇಗ ಮಾಡೆನೆ
ಮತಿಯುತನು ಮಂತ್ರದಲಿ ಕೊಟ್ಟನು
ಸತಿಗೆ ತನ್ನಾಯುಷಾರ್ಧವನು ಸಹೋದ [2] ಕವನೆನಲು ॥ ೨೯

---

[1] ಸತಿಯಾ ಪತಿಗೆ ಪತಿ, ಕ. ಖ.  [2] ವಸೋದ, ಕ.

ದೇವತೆಗಳ ಪ್ರಾರ್ಥನೆಯಿಂದ ಯಮನು ಬದುಕಿಸುವಿಕೆ.

ಏಱಿಳೀತಕೆ ಯೆನ್ನ ಸತಿ ಯೆನೆ
ಹೇೞುವೆನು ತಾನೆನುತ ಪೋದನು
ಕಾಲನಲ್ಲಿಗೆ ದೂತನಾಗಂಧರ್ವಪತಿಸಹಿತ।
ಹೇೞಿದರು ಕಾಲಂಗೆ ಪರಮಕೃ
ಪಾಲಯಗೆ ಬಿನ್ನಹದ ಹದನನು
ಕೇಳಿ ಕಾರುಣ್ಯವನು ಮಾೞ್ಪುದು ತಮ್ಮ ಮೇಲೆನುತ॥ ೨೦

ಅವಧರಿಸು ರುರುವೆಂಬ ವಿಪ್ರನ
ಯುವತಿ ಮಡಿದಳು ಹೊಕ್ಕನಾತನು
ದಿವಿಜಪತಿಗಳ ಮಱೆಯನಾ ನಿಜಸುಕೃತವನು ತೋಱಿ।
ಅವಿತಥವಲಾ ವಿಪ್ರವಚನವ
ದೆವಗಸಾಧ್ಯವದೆಂದುಪಾಯವ
ಹವಣಿಸಿದೆವಾಯುಷ್ಯದರ್ಧವನಿತ್ತೊಡಹುದೆಂದು॥ ೨೧

ಇತ್ತನಾ ದ್ವಿಜವರನು ಕೇಳಿದು
ಚಿತ್ತವಲ್ಲಭೆಗರ್ಧಜೀವವ
ನೆತ್ತಿ ಕೊಡು ಬಾಲೆಯನು ಸುರರಭ್ಯರ್ಥಿಸಿದರೆನಲು।
ಇತ್ತೆನಾನೆನಗೇನು ಗಂಧ
ರ್ವೋತ್ತಮನೆ ಹೇೞ್ನನೇ ವಿಬು
ಧೋತ್ತಮರಿಗಾನೆನುತ[1] ಕೊಟ್ಟನು ಸತಿಯ ಜೀವನವ॥ ೨೨

ಬೞಿಕ ಋಷಿಗಳು ಸಂತೋಸಿದುದು.

ಕೊಟ್ಟನೆನ್ನದ ಮುನ್ನ ಜೀವವ
ತೊಟ್ಟಳಂಗನೆ ವಿಷದ ವೆಗ್ರತೆ
ಮಟ್ಟ ನೆಱೆ ನಿದ್ರಾವಸಾನದಲೇೞುವೆಂದದಲಿ।

1 ವಿಬುಧೋತ್ತಮರಿಗಾವೆನುತ, ಕ. ಖ,

ಬಿಟ್ಟ ಮೂರ್ಛೆಯಲೆದ್ದಳರಳಿತು
ದೃಷ್ಟಿ ಚೇತರಿಸಿತ್ತು ತನು ಗುಡಿ
ಕಟ್ಟಿ ಕುಣಿದುದು ವನದ ಸುಜನಸ್ತೋಮವೊಲವಿನಲಿ ॥ ೨೨

ಎದ್ದಳಾ ಸತಿ ರುರುವಿನಳಲನು
ಕದ್ದಳೋ ಕಾಲನ ಭಯವ ನೆಱೆ
ಗೆದ್ದಳೋ ಗುಣವುಳ್ಳವರಲಾ ಸುರಪತಿಗಳನುತ ।
ಹೊದ್ದಿದರು ಬಾಲಿಕೆಯನವನಿಯು
ಲಿದ್ದ ವಿಧಿಯಂತಾದಳಂಗನೆ
ಭದ್ದ[1] ವಾಯ್ತೆನುತಿರ್ದುದಾ ಸಕಲಮುನಿನಿವಹ ॥ ೨೪

ಮಾಡಿದರು ವೈವಾಹಿಕವನೊಡ
ಗೂಡಿ ಕನ್ಯಾವರರ ಪಿತೃಗಳು
ನೋಡಿ ಸುಮುಹೂರ್ತದಲಿ ಪುನರಪಿ ಪುಣ್ಯಕಾಲದಲಿ ।
ನೋಡಿ ಸಂತಸಬಟ್ಟುದಭಿಜನ
ಪಾಡಿದರು ಮಂಗಳವನಾದುದು
ಕೂಡವಲೆ ಮುನಿನಾಥ ದೈವಸುನಿಷ್ಟತರಿಗೆಂದ ॥ ೨೫

ವರತಪಸ್ವಿಗಳಿಂಗೆ ದುರ್ಲಭ
ತರವದಾವುದು ದೇವಋಷಿಪಿತೃ
ವಿರಚಿತಾನುಗ್ರಹಕ್ಕೆ ಬಾಧಕವುಂಟೆ ಪರಿಕಿಸಲು ।
ತೊರದ ವಸು ದೊರಕಿದಡೆ ವೋಲಾ
ಪರಮಪಾವನಚರಿತವನು ನೆಱೆ
ಹೊರವನಾನಿತ್ಯಾತ್ಮನಾರಾಯಣನು ಕರುಣದಲಿ ॥ ೨೬

ಮೂರನೆಯ ಸಂಧಿ ಮುಗಿದುದು.

---

1 ಭದ್ರ, ಕ. ಖ.

# ನಾಲ್ಕನೆಯ ಸಂಧಿ.

ಸೂಚನೆ.

ಡುಂಡುಭನ ರುರುವಿನ ಚರಿತ್ರವ
ಪಂಡಿತೋತ್ತಮನೊರೆದನಾ ಮುನಿ
ಮಂಡಲದಲ್ಲಿ [1] ಶೌನಕಂಗಾ ಸೂತನೊಲವಿನಲಿ ||

ಪ್ರಮದ್ವರೆಯು ಪತಿಗೃಹದಲ್ಲಿ ಸಂತೋಷದಿಂದ ಇರುವಿಕೆ.

ಕೇಳು ಶೌನಕಮುನಿಪ ರುರುವಿನ
ಲೋಲಲೋಚನೆಯಾ ಪ್ರಮದ್ವರೆ
ಕಾಲನನು ಕಡೆಗೊದೆದು ಪಾತಿವ್ರತ್ಯಶಕ್ತಿಯಲಿ |
ಮೇಲೆ ಮುನಿಪನ ವರತಪೋಜಂ
ಘಾಳಸಾಮರ್ಥ್ಯದಲಿ ಬದುಕಿ ನಿ
ಜಾಲಯದಲೆಸದಿರ್ದಳಧಿಕಮನೋನುರಾಗದಲಿ || ೧

ರುರು ಡುಂಡುಭನನ್ನು ನೋಡಿ ಸಂಹರಿಸಲು ಯತ್ನಿಸಿದುದು.

ಅಂದು ಮೊದಲಾ ರುರು ಮಹೋರಗ
ವೃಂದವನು ತನ್ನಬಲೆಯುನು ನೆಱೆ
ಕೊಂದವೈರವ ನೆನೆಯುತವೆ ಬಂದನು ಸರಾಗದಲಿ |
ಸಂದ ವಿಪಿನಾಂತರಗಳಲಿ ಬರು
ತೊಂದುದಿನ ಮುನಿವರನು ಕಂಡನು
ಮುಂದೆ ಭೀಕರರೂಪದಲಿ ಕೆಡದಿರ್ದ ಡುಂಡುಭನ || ೨

1 ಮಂಡಲದ, ಕ. ಖ.

ಕಾಣುತಲು ಕಿಡಿಗೊಂಡನುರಗ
ಶ್ರೇಣಿ ಹಗೆ ತನಗೆನುತ ವಿಗತ
ಪ್ರಾಣನನು ಮಾಡುವೆನು ತಾನೀ ವಿಷಧರನನೆನುತ ।
ಹೂಣಿಗನು ಹರಿತರಲು ಭೂಗೀ
ರ್ವ್ವಾಣನನು ಕಾಣುತ್ತ ಸಲೆ ಸಂ
ಕ್ಷೀಣಧೈರ್ಯನು ಬೆದಱಿ ನುಡಿದನು ವಿಪ್ರವರನೊಡನೆ ॥ ೩

ರುರುವನ್ನು ನೋಡಿ ಡುಂಡುಭನು ಹೇಳಿದ ಮಾತುಗಳು.

ಕೊಲ್ಲದಿರು ಕೊಲ್ಲದಿರು ಕೊಲ್ಲದಿ
ರಲ್ಲ ತಾನಪರಾಧಿ ಬಱಿದೇ
ಬಿಲ್ಲನೇಱಿಸಲೇಕೆ ಹಸುವಿಗೆ ಹಾರುವನೆ ನಿನ್ನ ।
ವಲ್ಲಭೆಗೆಲವೊ [1] ಮುನಿದವನು ತಾ
ನಲ್ಲ ಸತ್ಕುಲಸಂಭವನು ಮೇ
ಣಲ್ಲ ತನ್ನನು ಕೊಂದಡೇನು ಹಿತಾರ್ಥ ನಿನಗೆಂದ ॥ ೪

ಪಾವನನೆ ಭೂಸುರನೆ ಹಿಂಸೆಯು
ತಾವು ಶಾಸ್ತ್ರೋದಿತವೆ ಹೇಱೈ
ಈವಿಧಾನದ ವಿದ್ಯೆ [2] ನಿನಗಿದನಾರು ಕಲಿಸಿದರು ।
ಕೋವಿದನೆ ಹೇಱುವೊಡೆ ಬುದ್ಧಿಯು
ನಾವು ಶಾಸಕರಲ್ಲ ನೃಪತಿಗೆ
ಭಾವಿತವಲಾ ಧರ್ಮವಿದು ನಿನಗುಚಿತವಲ್ಲೆಂದ ॥ ೫

ದುಷ್ಟನಿಗ್ರಹ ಶಿಷ್ಟರಕ್ಷೆಗ
ಳಿಷ್ಟವಾಭೂಪರಿಗೆ ನೃಪತಿಗೆ
ಹುಟ್ಟಿದವನೇ ನೀನು ಭೃಗುಮುನಿವರನ ಕುಲಜನಲ ।
ಇಷ್ಟವೇ ತಾ ಹಿಂಸೆ ಯಿದು ವನು [3]

1 ವಲ್ಲಭೆಗೆ, ಕ. 2 ನೀವಿಧಾನದವಿಧ್ಯ, ಕ. ಖ. 3 ಭುವನವಿ, ಖ.

ಶಿಷ್ಟವಲ್ಲ ಭೃಗುವಿನ ವಂಶಕೆ
ಕಷ್ಟದನು ನೀನೇಕೆ ಜನಿಸಿದೆ ಯೆಂದುದಾ ಸರ್ಪ ॥ ೬

ಮುನಿಪ ಕೊಯ್ಯುವೆನಲ್ಲ ಕೊರಳನು
ತನಗೆ ವಿಷವಿನಿತಿಲ್ಲ ತತ್ಕುಲ
ಜನಿತನಲ್ಲದೆ ಗಂಧಮಾತ್ರವದಿಲ್ಲ ತತ್ಕುಲದ ।
ತನಗೆ ಮುನಿಯಲಿದೇಕೆ ಹೇಳೆನೆ
ಮುನಿಪನದ ಲಾಲಿಸುತ ತನ್ನೊಳು
ಮನದೊಳಗೆ ಸಂಶಯವಿಲೋಲನು ನುಡಿದನದಱೊಡನೆ ॥ ೭

ರುರುವು ಡುಂಡುಭನನ್ನು ನೀನಾರೆಂದು ಕೇಳಿದುದು.

ಆರು ನೀನೆಲೆ ಸರ್ಪ ಹೇಳು ಮ
ಹೋರಗನೊ ಗಂಧರ್ವನೋ ಸುವಿ
ಚಾರಿ ದೈತ್ಯನೊ ದೇವನೋ ದಿಟ ಸರ್ಪ ನೀನಲ್ಲ ।
ಕಾರಣವ ಹೇಳೆನಲು ಮುನಿಪನ
ಚಾರುಸೂಕ್ತಿಯ ಕೇಳಿ ತನ್ನಯ
ಪೂರುವದ ಸಂಗತಿಯ ನೆನವುತ್ತುರಗನಿಂತೆಂದ ॥ ೮

ಡುಂಡುಭನು ತನ್ನ ಪೂರ್ವ ವೃತ್ತಾಂತವನ್ನು ಹೇಳುವಿಕೆ.

ವಿಶ್ರುತದ್ವಿಜವರನೆ ಕೇಳ
ನ್ನ ಶ್ರುತಾಖ್ಯಾನವನು ತಾನು ಸಾ
ಹಸ್ರಪಾದಾಹ್ವಯನು ನೋಡೆಪ್ಪಡತೀತಭವದೊಳಗೆ ।
ಹಿಂಸ್ರಭಾವ[1] ದಲೊಬ್ಬ ಸಖನನು[2]
ಸಾಸ್ರನ ಗೈದ[3] ವಿಪ್ರಿಯದಲ
ಕ್ಷಿಶ್ರವಜನ್ಮವಾಯ್ತು ನಿನಗಿದನೊರೆವೆ ತಾನೆಂದ ॥ ೯

ಖಗಗಮನನೆಂಬದ್ವಿಜೋತ್ತಮ
ನೊಗುಮಿಗೆಯ ಸೌಖ್ಯವನು ತನ್ನಲಿ

---

1 ದುಸ್ಸ್ವಭಾವ, ಕ. ಖ. 2 ಸಖಪ್ರಿ, ಕ. ಖ. 3 ಪ್ರಶ್ರಮಾಡಿದ, ಕ. ಖ.

ನೆಗೞಿ ನಾನಂದದಲಿ ಹಿತಕರನಾಗಿ ನೆಱೆ ಯಿರಲು |
ಬಗೆಯುಲಾನೊಂದುದಿನ ಮಾಡಿದ
ಮುಗುದತನವನು ಕೇಳು ಕಟ್ಟೋ
ರಗನ ನಿರ್ಮಿಸಿ ಹಾಕಿದೆನು ಸಖಿವಿಪ್ರನಿದಿರಿನಲಿ ‖ ೧೦

ಬೆಚ್ಚಿ ಬೆದಱಿದ ನಾದ್ವಿಜೋತ್ತಮ
ಕಚ್ಚಿತೆನ್ನನು ಹಾವೆನುತ ತೆಗ
ದಚ್ಚು ತನೆ ಗತಿ ಯೆಂದು ನಿಂದನೀಕ್ಷಿಸುತಪಿೞಿದು |
ಹೆಚ್ಚಿದುದು ಕಡು ರೋಷ ಕಂಗಳು
ಕಿಚ್ಚಿನಂದದಲಾದವೆವುಡನು
ಕಚ್ಚಿ ಶಾಪವ ಕೊಟ್ಟನು ತನಗೆ ಮುನಿಪ ಕೇಳೆಂದ ‖ ೧೧

ದರ್ಪವೇ ಯು [1] ನ್ನೊಡನೆ ಫಡಫಡ
ಸರ್ಪನಾಗು ದುರಾತ್ಮ ನೀನೆನು
ತುಪ್ಪರದ ಕೋಪದಲಿ ಶಾಪವನಿತ್ತೊಡಾನಂಜಿ |
ತಪ್ಪಿದೆನನುಗ್ರಹವ ಮಾೞ್ಪುದು
ವಿಪ್ರವರ ಯೆನೆ ವಿಷರಹಿತವಾ
ಗಿಪ್ಪುರಗನಾಗೆಂದು ತನ್ನಲಿ ಮಾಡಿದನು ಕೃಪೆಯ ೧೨

ದಾರುಮಾಯಾಸರ್ಪದಲೆನ್ನ [2]
ಭೀರುವನು ಮಾಡಿದ ನಿಮಿತ್ತದಿ
ನಾರುವನು ಬಾಧಿಸದ ಡುಂಡುಭನಾಗು ನೀನೆಂದು |
ಕಾರುಣೀಕನೆ ಶಾಪಮೋಕ್ಷವ
ದಾರಕಯ್ಯಲಿ ಹೇಱೆನುತ ವಿ
ಚಾರಿಸಲು ರುರುಸಂಗದಲಿ ನಿನಗಹುದು ಹೋಗೆಂದ ‖ ೧೩

ಅದು ಘಟಿಸಿತೆನಗೆಂದು ತನ್ನ
ಭ್ಯುದಯವೇ ತನುಗೊಂಡವೋಲಲೆ

1 ಸರ್ಪನೆತ. ಕ. ಖ. 2 ನಲಿತನ್ನ, ಕ. ಖ.

ಸದಮಳಾಮಳಚರಿತ ನೀವ್ಮೈದೋಱಿದೆಲೆ ತನಗೆ ।
ಬದಿದೆನಾಶಾಪವನು ಕರುಣಾ
ಸ್ಪದನೆ ಹೇೞುವೆ ನೀನು ನಿಜದೇ
ಹದಲಿ ಮಾತನು ಬೞಿಕ ಕೇಳುವುದೆಂದನಾಸರ್ಪ ॥ ೧೪

ಡುಂಡುಭನು ಮನುಷ್ಯನಾಗಿ ಸರ್ಪಾಧ್ವರವನ್ನು ಸೂಚಿಸಿದುದು.

ಎಂದು ಸರ್ಪಾಕೃತಿಯನುೞಿದುರ
ಗೇಂದ್ರ ನೆಱೆ ನಿಜಪೂರ್ವರೂಪಿನ
ಲಂದು ಮಾತಾಡಿದನು ರುರು ಕೇಳೆಂದುಮೊದಲಾಗಿ ।
ತಂದೆ ಹಿಂಸಿಸದಿರು ಮಹೋರಗ
ವೃಂದವನು ಜನಮೇಜಯಾಖ್ಯನ
ರೇಂದ್ರನೆ ನೆಱೆ ಕೊಲುವವನು ಸರ್ಪಾಧ್ವರದಲೆಂದ ॥ ೧೫

ಸರ್ಪಾಧ್ವರಕ್ಕೆ ಕಾರಣವನ್ನು ಹೇಳದೆ ಅದೃಶ್ಯನಾಗುವಿಕೆ.

ಎನಲದಾರಕುಮಾರನಾತನು
ತನಗೆ ಹೇೞಾಸರ್ಪಯಾಗವ
ನನುಪಮನು ಮಾಡುವೊಡೆ ಕಾರಣವೇನು ನೀನದನು ।
ಮುನಿವರನೆ ಕರುಣಿಸುವುದಾತ
ನನು ರುರು ಬೆಸಗೊಳಲು ವಿಪ್ರ
ನನದಿನದನೆಲ್ಲವನು ಕೇಳಲುಬಹುದು ಹೋಗೆಂದ ॥ ೧೬

ಎಂದು ರುರುವನು ನಿಲಿಸಿ ಮುನಿಪತಿ
ನಿಂದನಂತರ್ಧಾನಗತಿ ನೆಱೆ
ಹೊಂದಿದನು ತಾ ಹೇೞದಾದನು ಸೂಚಿಸಿದ ಕಥೆಯ ।

ರುರು ತಂದೆಯನ್ನು ಸರ್ಪಾಧ್ವರದ ವೃತ್ತವನ್ನು ಹೇಳೆಂದು ಕೇಳಿದುದು.

ಎಂದು ಮನದಲಿ ಚಿಂತಿಸುತ ನಿಜ
ಮಂದಿರಕ್ಕೈತಂದು ತನ್ನಯ
ತಂದೆಯನು ಬೆಸಗೊಂಡನಾವೃತ್ತಾಂತಸಂಗತಿಯ ॥ ೧೭

ಕೊಂಡನೋ, ಕ. ಖ.

ಅಪ್ಪ ಕೇಳಾನಿಂದು ವನದಲಿ
ಸರ್ಪರೂಪಿನಲಿರ್ದ ಕೋವಿದ
ವಿಪ್ರನನು ತಾ ಕಂಡೆನದನುಳಿದಾತನೆನ್ನೊಡನೆ ।
ಸರ್ಪನಿಕರವ ಕೊಲ್ಲದಿರು ನಿನ
ಗೊಪ್ಪದಿದು ಜನಮೇಜಯಾಖ್ಯನು
ಸರ್ಪಯಾಗವನವಸಿಸತಿ ಮಾಡುವನು ಕೇಳೆಂದ ॥ ೧೮

ಅದಱ ವೃತ್ತಾಂತವನು ತಾ ಹೇ
ೞದಲೆ ಧರಾಮರರಲಿ ಕೇಳುವೆ
ಸದಮಲನೆ ಹೋಗೆಂದು ಸಂದನದೃಶ್ಯಸಂಸ್ಥಿತಿಗೆ ।
ವಿದಿತವಹೊಡಭಿವರ್ಣಿಸುವುದೆನ
ಗದಱ ಪೂರ್ವಾಪರವನೆನಲ
ಭ್ಯುದಿತಸಂತೋಷದಲಿ ಮುನಿ ವರ್ಣಿಸಿದನಾ ಕಥೆಯ ॥ ೧೯

ಸರ್ಪಾಧ್ವರದ ಕಥೆಯ ಉಪೋದ್ಘಾತ.

ಸೋಮವಂಶಸರೋಜಸೂರ್ಯನು
ಭೂಮಿಪಾಲಕಪಾಂಡುನಾಮನು
ಹಾಮಹೀಶನ ಪುತ್ರರಲಿ ಹಿರಿಯನು ಯುಧಿಷ್ಠಿರನು ।
ಭೀಮನರ್ಜುನನಕುಲಸಹದೇ
ವಾಮಲಾಹ್ವಯಯುತರನುಜರು ಮ [1]
ಹಾಮಹಿಮರೆಸೆವರು ಧರೆಗೆ ಪುಣ್ಯಾತ್ಮರೆಂದೆನಿಸಿ ॥ ೨೦

ಕೇಳು ಮಧ್ಯಮಪಾಂಡವನ ಸುತ
ನಾಲಿಸುವೊಡಭಿಮನ್ಯು ಸಮರಕ
ರಾಳವಿಕ್ರಮನಾತ್ಮಭವನು ಪರೀಕ್ಷಿತಾಹ್ವಯನು ।
ಪಾಲಿಸುವವನಿಯನು ಮೃಗಯಾ

---

[1] ಹಾಮಲಾಖ್ಯರೆಂಬರನುಜರುಮ, ಕ. ಖ.

ಕೇಳಿ ಶಾಪದಿ ಋಷಿಯ ಮಗನಲಿ
ಬೀಳಡೆ ತಕ್ಷಕಮುಖದಲಟಿವನು ಮಗನೆ ಕೇಳೆಂದ ‖ ೨೧

ಅವನ ಮಗನದಕೇಳಿ ಕಡುಕೋ
ಪವನು ತಳೆದು ಮಹೋರಗೇಂದ್ರರ
ನಿವಹವನು ಜನಮೇಜಯನು ಸರ್ಪಾಧ್ವರವ ಮಾಡೆ ।
ಸವೆಯ ಕೊಲ್ಲುವನು ತಕ್ಷಕನು ಬೀ
ಱುವದನೀಕ್ಷಿಸಿ ಬಹಳಕರುಣಾ
ರ್ಣವನಲಾ ಕೈಗಾದನಾಸ್ತೀಕಾಖ್ಯಮುನಿ ಯೆಂದ ‖ ೨೨

ಅದುನಿಮಿತ್ತದಲೆ ಮಗನೇ ಕೊ
ಲ್ಲದಿರು ಕಾರಣಸರ್ಪವರನೆಂ
ದುದು ದೃಢೋಕ್ತಿಯಲಿದನು ಮಾಪ್ಪೊಡೆ ಹಿಂಸೆ ಹಿತವಲ್ಲ ।
ಸದಮಳನೆ ಕೇಳೆಂದು ಸಂಶಯ
ಹೃದಯನನು ತಿಳಿಹಿದನು ಬಟಿಕಾ
ಸುದತಿಸಹಿತಾಶ್ರಮದಲೆಸೆದನು ಧರ್ಮಪರನೆನಿಸಿ ‖ ೨೩

ಪೌಲೋಮಪರ್ವದ ಫಲಕಥನ.

ರುರುವಿನಮಳಚರಿತ್ರವನು ವಿ
ಸ್ತರಿಸಿದೆನು ಪೌಲೋಮಪರ್ವವು [1]
ಪರಿಸಮಾಪ್ತವಘೌಘಹರ ವಿಷ್ಟಾರ್ಥಸಿದ್ಧಿಕರ ।
ಧರೆಗೆ ಪಾವನವಾದ ಭೃಗುಕುಲ
ಚರಿತವಿದನಾದರದಲೋದುವ
ನಿರತ ಕೇಳುವ ಪುಣ್ಯಪುರುಷರೆ ಧನ್ಯರವರೆಂದ ‖ ೨೪

ಇದು ಸದಾಯುಃಕೀರ್ತಿವರ್ಧನ
ವಿದು ಪರಮಮಂಗಳವಿವರ್ಧನ

1 ವಲ್ಲಿ, ಕ.

ವಿದು ಮನೋರಥಸಿದ್ಧಿದ ವಿಹಪರದ ಸಮೃದ್ಧಿಕರ।
ಇವನು ಪಠಿಸುವ ಪುಣ್ಯಪುರುಷರ
ಹೃದಯದಲಿ ಮನೆಮಾಡುವನು ಕರು
ಣದಲಿ ಸಲೆ ನಿತ್ಯಾತ್ಮನಾರಾಯಣನು ಮನವೊಲಿದು ॥ ೭೫

ನಾಲ್ಕನೆಯ ಸಂಧಿ ಮುಗಿದುದು.

ಇಂತು ಪೌಲೋಮಪರ್ವಂ.

## ಐದನೆಯ ಸಂಧಿ.

ಸೂಚನೆ.

ವರ್ಣಿಸಿದನಾಸೂತನಾದ್ವಿಜ
ರುನ್ನತಸಭಾಗ್ರದಲ್ಲಿ ಭುವನ
ವರ್ಣನೀಯಶ್ರೀದ [1] ಪುಣ್ಯಾಖ್ಯಾನಸಂಗತಿಯ ॥

ಶೌನಕಪ್ರಶ್ನ.

ಸೂತನನು ಬೆಸಗೊಂಡನಾಮುನಿ
ಜಾತ ಕೇಳಲು ಶೌನಕನು ಸಂ
ಜಾತಸಂತೋಷದಲಿ ಪೌಲೋಮವನು ನೆಱೆ ಕೇಳಿ।
ಕೌತುಕಿ [2] ಕಥಾಶ್ರವಣ ಪೀಯೂ
ಷಾತಿಶಯಲಾಭೈಕಲೋಲುಪ
ಶೀತಹೃದಯನು ಸದಯನಖಿಳಪ್ರಾಣಿನಿಕರದಲಿ ॥ ೧

ಹೇಳು ತನಗೆಲೆ ತಂದೆ ಭಾರತ
ಮೂಲವೆನಿಪಾಸ್ತೀಕಚರಿತವ

[1] ಶ್ರೀಕರ, ಕ. ಖ,

[2] ಕೌತುಕದ, ಖ.

ನಾಲಿಸುವೊಡಾರಾತ್ಮಭವನಾಸ್ತೀಕನೆಂಬುವನು।
ಮೇಲೆ ಸರ್ಪಾಧ್ವರಕೆ ತಾ ಪ್ರತಿ
ಕೂಲನಾದನ [1] ದೇಕೆ ಪನ್ನಗ
ಜಾಲಸಂಭವವೆಂತು ಹೇೞೆನಗೆಲ್ಲವನು ತನಗೆ ॥ ೨

ಕೇಳಬಹುದೈ [2] ಪುಣ್ಯಕಥನವ
ಹೇೞಲೊಲ್ಲದ ಪಾಪಿ ಮರ್ತ್ಯರ
ಬಾೞಿಕೆಗೆ ಫಲವೇನು ಮರನಂದದಲಿ ಬದುಕಿದರೆ ।
ಹೂೞುವನು ನರಕದಲಿ ಕುಲವನು
ಹೇೞು ನೀಸಿದಱಿಂದ ಸದ್ಬುದ್ಧಿ
ಧಾೞುವಹ ತನಗೆಂದು ನುಡಿದನು ಶೌನಕವ್ರತಿಪ ॥ ೩

ಬಲ್ಲೆ ನಾನೆಲೆ ಸೂತ ಧರ್ಮವ
ನೆಲ್ಲವನು ಶ್ರದ್ಧೆಯಲಿ ಬೆಸಗೊಳ
ಬಲ್ಲವರು ತಾವಿಲ್ಲ ಬೆಸಗೊಂಬೊಡೆ ಹಿತಾರ್ಥವನು ।
ಸೊಲ್ಲಿಸುವರಿಲ್ಲಱಿಯದವರಿಗೆ
ಬಲ್ಲತನವನು ಕೊಟ್ಟ ಸುಕೃತ
ಕ್ಕಿಲ್ಲಲಾ ಪಡಿಯಾದ ಸುಕೃತ ಮಹಾತ್ಮ ಕೇಳೆಂದ ॥ ೪

ಸೂತನು ಆಸ್ತೀಕಸಂಭವವ ಹೇಳಲಾರಂಭಿಸುವಿಕೆ.

ಎಂದೊಡಾ ಶೌನಕಮುನಿ ದ್ವಿಜ
ವೃಂದದಲಿ ನುಡಿದನು ಸರಾಗದ
ಲಂದು ಸರ್ಪದ [3] ಸತ್ರವನುಮಾಸ್ತೀಕಸಂಭವವ ।
ಸಂದ ಪೌರಾಣಿಕಶಿರೋಮಣಿ
ವಂದಿಸುತಲಾವ್ಯಾಸಸುತನನು
ಕಣ್ದೆಱೆದು ಕಾರುಣ್ಯನಿಧಿ ಹೇೞಿದನು ಸತ್ಕಥೆಯ ॥ ೫

---

1 ಪ್ರತಿಕೂಲವಾದ, ಕ  2 ಕೇಳಬಹುದು, ಕ  3 ಸರ್ಪ. ಕ. ಖ.

ಲೇಸನಾಡಿದೆ ವಿನುತಪರಹಿತ
ಭಾಷಿತವ ಹರಿಚರಣಕಮಲೋ
ಪಾಸಕರ ಬಲ್ಲಹನೆ ಭಾಗ್ಯೋದಧಿಯೆ ಗುಣನಿಧಿಯೆ ।
ಏಸು ಧನ್ಯನೊ ನಿಮ್ಮೊಡನೆ ಸಂ
ಭಾಷಣೆಯು ಪುಣ್ಯವೆದು ತನಗಾ
ವಾಸುದೇವನ ಕರುಣದಲಿ ದೊರೆಕೊಂಡುದಕಟೆಂದ ॥ ೭

ಕದ್ರುವಿನತೆಯರಿಗೆ ಕಶ್ಯಪರಿಂದ ವರದಾನ

ಜಲಜಭವಸುತತನಯ ಕಶ್ಯಪ
ಲಲಿತಪತ್ನಿಯರೆನಿಪ ಸನ್ನುತ
ಜಲಜನೇತ್ರೆಯರೆಸೆದರಂದಾ ಕದ್ರುವಿನತೆಯರು ।
ಒಲುವೆವರ ಸದ್ಭಾವಭಕ್ತಿಯ
ನಿಲವನದನಾಲಿಸುತ ಮೆಚ್ಚಿದೆ
ನಲರುಗಂಗಳ ಮಂಗಳಾನನೆಯರಿರ ನಿಮಗೆಂದ ॥ ೮

ವರವನೀವೆನು ಬೇಡಿಕೊಂಬುದು
ಪರಮಮಾನಿನಿಯರಿರ ನೀವೆನೆ
ಕರವ ಮುಗಿದಳು ಕದ್ರು ಕೊಡು ಸಾವಿರ ಮಹೋರಗರು ।
ವರತನಯರೆನಗಾಗಬೇಕೆನೆ
ತಿರುಗಿ ವಿನತೆಯು ಮೊಗವ ನೋಡಲು
ಚರಣದಲಿ ತಲೆವಾಗಿ ನುಡಿದಳು ನಿಜಮನೋರಥವ ॥ ೯

ಬೇಡುವೆನು ಸುತರಿಬ್ಬರನು ತಾ
ನಾಡೊಳತಿಶಯವೀರ್ಯವಂತರ
ನಾಡಿ ತೋಱಿಸಲೇಕೆ ಸವತಿಯ ಮಕ್ಕಳನು ಮಿಗುವ ।
ರೂಢಿಗತಿಶಯಪುಣ್ಯವಂತರ
ನೋಡದೀವುದು ತನ್ನೊಳಗೆ ಕೃಪೆ
ಮಾಡುವೊಡೆ ನಿಮ್ಮಡಿಯೆನಲು ನಗುತೆಂದನಾ ಮುನಿಪ ॥ ೧೦

ಸುರನರೋರಗವೀರರೊಳು ದು
ರ್ಧರಪರಾಕ್ರಮವೀರ್ಯಶೌರ್ಯೋ
ತ್ಕರುಷಬಲಸಂಪನ್ನರನು ನಿನಗೀವುದೆಂದೆಯಲೆ ।
ಪರಮಪಾವನಕೀರ್ತಿ ಕೇಳಾ
ವರಕುಮಾರರನಿತ್ತೆನೆನೆ ಪಂ
ಕರುಹಮುಖಿ ಪರಿತುಷ್ಟೆಯಾದಳು ಪತಿಯ ನುಡಿಗಳಲಿ ॥ ೧೧

ಸುದತಿ ಗರ್ಭವನೆರಡು ಸುಯತ್ನ
ನವಲಿ ರಕ್ಷಿಸೆನುತ್ತ ಮುನಿಪತಿ
ಪದುಳದಲಿ ಸತಿಗೊರೆದು ತೆರಳಿದನಾ ತಪೋವನಕೆ ।

ಕದ್ರುವಿನಲ್ಲಿ ಸರ್ಪೋತ್ಪತ್ತಿ.

ಮೊದದಲಂದಾಕದ್ರು ಪುತ್ರರ
ಪದೆದು ಪಡೆದಳು ಸಾವಿರವನ
ಗ್ಗದ ಮಹೋರಗನಿಕರವನು ಮುನಿವೀರ್ಯಸಂಭವರ ॥ ೧೨

ವಿನತೆಗೆ ಪುತ್ರಜನನವಿಲಂಬದ ಅನುತಾಪ.

ವಿನತೆ ಧರಿಸಿದಳಂಡವೆರಡನು
ವಿನುತಮುನಿವೀರ್ಯದಲಿ ಕಾಲದೊ
ಳನುಪಮಮಹಾಂಡಗಳ ತಾ ಬೆಸಲಾಗಿ ವನದೊಳಗೆ ।
ಜನಿಸಿದಂಡಗಳನ್ನು ಮಾನಿನಿ
ದಿನ ಹಲವನೀಕ್ಷಿಸಿದಳೊಡೆಯವು
ಜನಿಸಿದರು ಕದ್ರುವಿಗೆ ಸುತರೆಂದಳಲಿದಳು ತರಳೆ ॥ ೧೩

ವರುಷವೈನೂರಖಿಲ ಸವತಿಗೆ
ಬಿರಿದುವಂಡಗಳಾಸಭಾಗ್ಯೆಗೆ
ವರಕುಮಾರರು ಜನಿಸಿದರು ವಿಕ್ರಮಸಮನ್ವಿತರು ।

ಧರಿಸಿದೆನು ತಾನೆರಡ ಮತ್ತದ
ನೊರೆಯಲೇತಕೆ ಭಾಗ್ಯಹೀನೆಗೆ
ದೊರಕದಾತ್ಮಜವದನದರ್ಶನವೆಂದಳಬುಜಾಕ್ಷಿ ॥ ೧೪

ವೈಪರೀತ್ಯವಿದೇನು ಪತಿಯೂ
ಶಾಪವೇನಾಯ್ತಿತ್ತ ವರವಿದು
ರೂಪುದೋಱದು ಶಿವ ಶಿವಾ ಯೆಂದೆನುತ ಮನದೊಳಗೆ ।

ಜನಿಸಿದ ಮಗನ ಅಂಗವೈಕಲ್ಯದಿಂದ ವಿನತೆಗೆ ಚಿಂತೆ.

ತಾಪವನು ನೆಱೆ ತಳೆದು ಲಜ್ಜಾ
ಕೋಪವೇಗಪರೀತೆ ಯೊಡೆದಳು
ದೀಪದಂತಿರೆ ಬೆಳಗುವಂಡವನೊಂದನದಱೊಳಗೆ ॥ ೧೫

ಒಡೆದು ನೋಡಲಿಕಬಲೆ ಕಂಡಳು
ತೊಡೆಗಳಿಲ್ಲದ ಪುತ್ರವರನನು
ಕೆಡಿಸಿದುದಲಾ ಭಾಪು ಭಾಗ್ಯವು ಪಾಪಿ ತಾನೆನುತ ।
ಮಡದಿ ಮಱುಗುತ್ತಿರಲು ಕನಲ್ದಿರೆ
ನುಡಿದನಾತನು ತಾಯೆ ಯೆನ್ನನು
ವೊಡೆದು ಕೆಡಿಸಿದೆ ನೀನು ವಿಧಿಯನು ದೂರಲೇಕೆಂದ ೧೬

ಕಂಡೆಯಲ್ಲಾ ಪುತ್ರವದನವ
ಖಂಡಲಕ್ಷ್ಮಿಯನದನು ಸೇರಿಸ
ದಂಡವನು ನೀನೊಡೆದು ಮತ್ಸರಲೋಭವೇಗದಲಿ ।

ತುಂಡಿಸಿದೆ ತೊಡೆಗಳನು ತನ್ನನು
ಗಂಡುಗೆಡಿಸಿದೆ ಸವತಿಕದ್ರುಗೆ
ಮಂಡೆಯಲಿ ಹುಳ್ಳಯನು ಹೊಱು ತೊತ್ತಾಗು ಹೋಗೆಂದ ॥ ೧೭

ಮಾಱುವೋಗೆ ಸವತಿಗೆ ನೀನೈ
ನೂಱುವರುಷ ಕೃತಾನುಫಲವನು
ನೀಱೆ ಭೋಗಿಸು ಹೋಗೆನಲು ತನು ನಡುಗಿ ಬಸವಳಿದು ।
ಹೇಱಿದಳು ಹೇರಾಳಭಯವನು
ತೋಱಿದಳು ತನಯಂಗೆ ಕರುಣವ
ನೋಱುಗುಡಿಸಿದಳಬಲೆ ಕಂಬನಿದುಂಬಿ ಬಿಸುಸುಯ್ದು ॥ ೧೮

ಪೊಡಮಡಲು ಹಾ ಮೇಲೆ ದೇಗುಲ
ಕೆಡದವೋಲಾಯ್ತುಕಟ ವರವನು
ಪಡೆದಮಾತೆಲ್ಲಿಯದು ಹರ ಹರ ಮಗನನಾಶ್ರಯಿಸಿ ।
ಹಿಡಿದು ಬದುಕುವೆನೆಂಬ ತನ್ನನು
ಕಡಲೊಳದ್ದಿದೆ ಮಗನೆ ದುಃಖವ
ಕಡೆಗೆ ಚಾಚುವರಾರು ಕೆಟ್ಟೆನೆನುತ್ತ ಹಲುಬಿದಳು ॥ ೧೯

ಹೋ ಹೊ ಅಂಜದಿರಂಜದಿರು ನಿ
ರ್ವಾಹವನು ಹೇಳುವೆನು ಲೋಭವಿ
ಮೋಹದಲಿ ನೀನೊಡೆಯದಿರು ತನ್ನವರಜಾಂಡವನು ।
ಬೇಹ ಮಗನಹನಮರದೈತ್ಯರ
ಮೋಹರಕೆ ಬಲುಗೈ ವಿಶಾಪವ
ನೂಹಿಸುವೆ ತಾನಂಜದಿರಂದುದಕಳಬೇಡೆಂದ ॥ ೨೦

ಆರು ಮಾಡುವದೇನು ದೈವ
ಪ್ರೇರಿತವ ಗೆಲಲರಿದು ಕರ್ಮವೆ
ಕಾರಣವು ನೀನಲ್ಲ ತಾನಲ್ಲಾರು ವಾದೊಡದ [1]।
ಸೈರಿಸುವುದಾಕದ್ರುತನಯರ
ಬೇಱುಗೊಲೆಯನು ಮಾಡಲುಳ್ಳಹ
ವೀರನು ಸಂಶಯವಿಲ್ಲಂಜದಿರಿನ್ನು ಹೋಗೆಂದ ॥ ೨೧

1 ಪೂರುವದ, ಕ. ಖ.

ಎಂದೊಡಾಸತಿ ಸುತನ ನುಡಿಗಾ
ನಂದಪುಳಕಿತೆಯಾಗಿ ಜೀವಿಸು
ವಂದವೆಂತೆಲೆ ಮಗನೆ ಮಾಡಿದೆನನುಚಿತವನೆನಲು ।

ಸೂರ್ಯನು ಅರುಣನನ್ನು ಸಾರಥಿಯಾಗಿ ಸ್ವೀಕರಿಸುವಿಕೆ.

ಬಂದನಲ್ಲಿಗೆ ಸೂರ್ಯನೇತಕೆ
ಯಿಂದುಮುಖಿ ಮಱುಗುವೆ ವೃಥಾ ಯಿಾ
ಕಂದನನು ಕೊಡು ಯೆಂದು [1] ಬೇಡಿದನಳಲುವಂಗನೆಯ ॥ ೨೨

ವಾರಿಜಾನನೆ ತನಗೆ ಮೊಟ್ಟಿನು
ಸಾರಥಿತ್ವವನಂಜಬೇಡೀ
ವೀರನಚಿವ್ರಚಿವೆನ್ನದೆನುತರವಿಂದಸಖನೊಲಿದು ।
ಆರುಷಿಗಳನುಮತದಲೊಯ್ದನು
ವೀರನನು ನಿಜರಥಕೆ ತುರಗ
ಪ್ರೇರಕನು ತಾನಾಗಿ ನಿಂದನು ವರರಥಾಗ್ರದಲಿ ॥ ೨೩

ಅರುಣನೆಂದಭಿಧಾನವಡೆದನು
ತರುಣನಂದಿಂದಿತ್ತ ಸೂರ್ಯನ
ಕಿರಣದಿಂದಲೆ ಮುನ್ನ ಕೆದಱುವನುದಯದಲಿ ತನುವ ।
ಚರಣವೆರಡುಂಟಾದೊಡಾ ಹರಿ
ಹರವಿರಿಂಚ್ಯಾದ್ಯರನು ಕೊಂಬನೆ
ವರಕುಮಾರಕನೆಂದು ಕೊಂಡಾಡಿದುದು ಸುರನಿಕರ ॥ ೨೪

ನಿಂದನತ್ತಲರುಣತ್ರಿಭುವನ
ವಂದ್ಯ ಸಮ [2] ನಂತರದಲಿತ್ತಲು
ಬಂದಳಂದಾವಿನತೆ ಮನದಲಿ ಚಿಂತಿಸುತ ಮನೆಗೆ ।
ಇಂದುವದನೆಯರಂದು ಮತ್ಸರ

---

1 ತನಗೆಂದು, ಕ. ಖ.    2 ವಂದ್ಯನು ಅ, ಕ. ಖ.

ದಂದವನು ತೋಱಿಸದೆ ತಮ್ಮೊಳ
ಗೊಂದೆನಿಸಿ ಪೊಡಹುಟ್ಟಿದವರಿದ್ದರು ಸರಾಗದಲಿ ॥ ೨೫

ಉಚ್ಚೈಶ್ಶ್ರವವಂ ಕಂಡು ಕದ್ರುವಿನತೆಯರ ವಿವಾದ.

ಅವರು ಬೞಿಕೊಂದುದಿನ ಲವಣಾ
ರ ವಸಮೀಪದಲಂದು ಉಚ್ಚೈ
ಶ್ಶ್ರವಸಮಾಹ್ವಯಹಯವರವ[1] ಕಾಣುತ್ತ ವನದೊಳಗೆ ।
ಧವಳವರ್ಣವೊ ಕೃಷ್ಣವರ್ಣವೊ
ಯುವತಿ ತುರಗದ ಬಾಲ ನೀ ಹೇ
ೞುವುದು ತನಗೆಂದೆನುತ ನುಡಿದಳು ಕದ್ರು ವಿನಯದಲಿ ॥ ೨೬

ಆರಱಿವರೆಲೆಯಕ್ಕ ಕಂಗಳು
ತೋಱವಿಸುತಿದೆ ಮುಂದೆ ಧವಳಾ
ಕಾರವಿದೆಲಾ ಕಾಣಬಾರದೆ ತುರಗಬಾಲವನು ।
ದೂರವೇ ಭಾವಿಸಲಿಕಧಿಕ
ಕ್ಷೀರಸಾಗರಜನಿತತುರಗನು
ದಾರತುರಗವಿದು ಧವಳವೆಂದಳು ಕದ್ರುಗೆ ವಿನತೆ ॥ ೨೭

ಅಲ್ಲ ಹುಸಿ ನಿನ್ನಂತೆ ತಾಕ
ಣ್ಣಿಲ್ಲದವಳ ಕಱಿಯಹ[2] ಬಾಲದ
ಬಳ್ಳಿಯಂದದ ತುರಗವಿದೆಲಾ ಕಾಣದೇ ಲೋಕ ।
ಅಲ್ಲಿ ನೋಡಾ ನಗುವವಳು ತಾ
ನುಳ್ಳುದನು ಹೇೞಿದರೆ ನಿಂದಿಸ
ಬಲ್ಲೆ ಘಡ ಬಾಯ್ಬಡಿಕೆಯೆಂದಳು ಕದ್ರು ಖಾತಿಯಲಿ ॥ ೨೮

ಎನಿತೆನಿತ ನೀನೆಂದೊಡನಿತನಿ
ತನುಱಿ[3] ವರ್ಣಸೋಱಿಯಲೇತಕೆ

1 ಸಮಾಹ್ವಯ ಹಯವನು, ಕ. ಖ.  2 ಕಱಿಯ, ಕ. ಖ.  3 ತನು, ಕ. ಖ.

ಕನಲಿ ಕಣ್ಣನು ಕೆಂಪವಾಡುವೆ ಕಾಣದೇ ಲೋಕ ।
ವನಿತೆ ಕಣ್ಣ್ ನಿನಗಿಲ್ಲ ನಿನಗುಂ
ಟನುಚಿತವನೀಕ್ಷಿಪ್ಪೊಡೆ ಬಱಿದೆ
ಮನದ ಗರ್ವವಿದೇಕೆ ವಿಫಲವಿದೆಂದಳಾವಿನತೆ ॥ ೨೯

ಹೇಱು ಪಣವೇನಿದಕೆ ನಿನಗೆನೆ[1] ।
ಕೇಳ ದಿಟವಲ್ಲಶ್ವರಾಜನ
ಬಾಲ ಕಱಿದಾಗಿರ್ದೊಡಾಳಹೆ ನಾನು ನಿನಗೆಂದು ।
ಆಳು ನೀನಾಗೆನಗೆ ತುರಗದ
ಬಾಲ ಬಿಳಿದಾಗಿರ್ದೊಡೆನಲಾ
ಬಾಲೆ ಬೇಹುದನೆಂದೆ ಯೆಂದಳು ಹೊಯ್ದು ಕರತಳವ ॥ ೩೦

ಏಱು ನೋಡುವೆವೆನಲು ನೋಪ್ಪೆವು
ನಾಳೆ ತಾವೆಂದೆನುತ ತಮತ
ಮ್ಮಾಲಯಕೆ ನಡೆತಂದು ಹೊಕ್ಕರು ಮಾಡಿ ಸತ್ಯವನು ।

ಅಶ್ವದ ಬಾಲವು ಕಪ್ಪಾಗಿ ಕಾಣಲು ಉಪಾಯಚಿಂತನ

ಹೇಳಿದಳು ನಿಜಪುತ್ರರಿಂಗಾ
ಲೋಲಲೋಚನೆ ಕದ್ರು ಭಾಷೆಯ
ಪಾಲಿಸುವರಾರುಂಟು ಮಕ್ಕಳಿರೆಂದು ದುಗುಡದಲಿ ॥ ೩೧

ಭಾಷೆಯೇನೌ ತಾಯೆ ಚಿತ್ತದ
ಬೇಸರವಿದೇನಾನನದ ಸಿರಿ
ಮಾಸಿದಂತಿದೆ ಹೇಳು ಹೇಳೇನಾಯಿತೆನುತಿರಲು ।
ಸೂಸಿದಳು ಬಿಸುಸುಯಿಲ ತಂಗಿಗೆ
ದಾಸಿಯಹವಿಧಿಯಾಯ್ತು ಮಕ್ಕಳ
ದೇಸು ನೀವಿದ್ದೇನು ಫಲ ಹೇಳೆಂದಳಾಕದ್ರು ॥ ೩೨

[1] ನಿನಗೆ, ಕ. ಖ.

ಏನೆ ಮಾಡುವೆ ಹೋದೆ ತಾನಂ
ಭೋನಿಧಿಯ ಸನ್ನಿಧಿಗೆ ಕಂಡೆವು
ಭಾನುಮಂಡಲದಂತೆ ಬೆಳಗುವ ತುರಗರಾಜನನು ।
ತಾನದಱ ಬಾಲವನು ಕಱದೆಂ
ದೂನವಚನವನಾಡಿ ತಪ್ಪಿದೆ
ನೇನು ಗತಿ ಬಿಳಿದೆಂದಳುಳ್ಳುದ ಸವತಿ ತನ್ನೊಡನೆ ॥ ೩೩

ನಾಳೆ ನೋಡುವೆವೆಂದು ಬಂದೆವು
ಕೋಟುವೋದೆನೆಲಾ ಮಹಾಸತಿ
ಹೇಳಿದಳು ಸತ್ಯವನು ಮಿಥ್ಯೆಯುದಾಯ್ತು ನುಡಿ ತನ್ನ ।
ಹೇಳಿ ನೀವೇನುಂಟು ನಿಮ್ಮಲಿ
ಮೇಲೆ ಮಾಡುವುಪಾಯವೇನೆನೆ
ಹೇಟು ಕೇಳುವೆವವ್ವ ಯೆನಲಿಂತೆಂದಳಾಕದ್ರು ॥ ೩೪

ಸುತ್ತಿಕೊಂಬುದು ನೀವದನು ಕ
ಪ್ಪೊತ್ತಲಶ್ವದ ಬಾಲವನು ಸತಿ
ತೊತ್ತಹಳು ತನಗುಚಿತವಿದೆಂದೆಂನದೆಲ್ಲವನು ।
ಪುತ್ರರಿರ ಬೆಸಗೈವುದೆನೆ ಕೇ
ಳುತ್ತ ಕೆಲರದಱೊಳಗೆ ಸಂಶಯ
ಚಿತ್ತರಾದರು ಪಾಪಕರ್ಮವಿಲೇಪವಹುದೆಂದು ॥ ೩೫

ಆ ಉಪಾಯವನ್ನು ನಡಿಸಲೊಪ್ಪದವರಿಗೆ ಶಾಪ.

ಮಾಡೆವನ್ಯಾಯವವ ಸತ್ಯವ
ಮಾಡಿಗೆ ಯಲೌ ತಾಯೆ ತತ್ಫಲ
ಕೇಡು ತಪ್ಪದು ಕುಲಕೆ ಮಾಡುವುದೇನು ನಾವಿನ್ನು ।
ಬೇಡ ತಮಗಾಕರ್ಮವೆನೆ ಫಡ
ಹೇಡರಾದಿರೆ ಸರ್ಪಯಾಗವ
ಮಾಡಿ ಜನಮೇಜಯನು ಕೊಲಲೆಂದಬಲೆ ಶಪಿಸಿದಳು ॥ ೩೬

ಆ ಉಪಾಯವನ್ನು ಒಪ್ಪಿ ಆಚರಿಸಲು ವಿನತೆಯು ದಾಸಿಯಾಗುವಿಕೆ.

ಕೆಲರದನು ಕೈಕೊಂಡರೆಂದುವ
ತಲೆಯಲಾಂತೆವೆನುತ್ತ ಬಟಿಕಾ
ಲಲನೆ ಕರೆದಳು ವಿನತೆಯನು ವಿಶ್ವಾಸಘಾತಕದ ।
ಲಲಿತಮತಿ ತಾನೆತ್ತ ಬಲ್ಲಳು
ನಳಿನಲೋಚನೆಯೊಡನೆ ಹೋದಳು
ಜಲಧಿತೀರದ ತುರಗವನು ನೋಡುವೆವು ತಾವೆನುತ ॥ ೩೭

ಕಂಡರಾತುರಗವನು ವೇಷ್ಟಿಸಿ
ಕೊಂಡಿರಲು ಕಪ್ಪಾಗಿ ಫಣಿಗಳು
ಕೆಂಡ ನೀರಲಿ ಬಿದ್ದವೋಲಿರೆ ಕಾಣುತವೆ ಕಾಂತೆ ।
ಮಂಡೆಯನು ತುರಿಸಿದಳು ಹರ ಹರ
ಕಂಡವೋಲಿರದೇಕೆ ನುಡಿಯುನು
ಭಂಡುಮಾಡಿತು ದೈವಗತಿ ಯೆಂದಳಲಿದಳು ತರಳೆ ॥ ೩೮

ಅಳಲಿ ಮಾಡುವದೇನು ತಾ ಮು
ನ್ನೊಲಿದು ಮಾಡಿದ ಪಾಪಕರ್ಮದ
ಫಲವಲಾ ಬೆಂಬಿದ್ದೊಡಹುದೇ ಮೇಣು ಬಂದುದಕೆ ।
ಕೆಲಸ ಲೇಸಾಯ್ತೆನುತ ದಾಸ್ಯವ
ನೊಲಿದು ಕೈಕೊಂಡಳು ಮಹಾಸತಿ
ಚಲಿಸದಂತಃಕರಣದಲಿ ಕಾತರಿಸದಬುಜಾಕ್ಷಿ ॥ ೩೯

ಅಡಿಗಳನು ತೊಳೆವುತ್ತ ಕಾಂತೆಗೆ
ಪಡಿಗನು ನೀಡುತ್ತ ತಲೆಯನು
ಕೊಡಹಿ ನೇವರಿಸುತ್ತ ತುರುಬನು ಕಟ್ಟಿ ಹೂಮುಡಿಸಿ ।
ನುಡಿಗಳನು ಸೈರಿಸುತ ಸವತಿಯ
ಬಡಿಗಳನು ತಾಳುತ್ತ ಸೇವೆಯ
ನಡೆಸುತಿದ್ದಳು ವಿನತೆ ಲಜ್ಜಾವಿನತೆ ಕದ್ರುವಿಗೆ ॥ ೪೦

ಇಂತವನು ನೆನೆಯುತ್ತ ವಿನತಾ
ಕಾಂತೆ ಕಡುಗುವ ಮನದ ಶೋಕವ
ನಂತರಂಗದೊಳಡಗಿಸುತಲಿದ್ದಳು ಬೞಿಕ ಬಳಲುತ್ತ ।
ಸಂತತಿಯ ಜನನವನು ಮಾನಿನಿ
ಚಿಂತಿಸುತ ಮಱೆವೊಕ್ಕಳಾಶ್ರೀ
ಕಾಂತನಿತ್ಯಾತುಮಮುಕುಂದಪದಾಬ್ಜವನು ವಿನತೆ ॥ ೪೧

ಐದನೆಯ ಸಂಧಿ ಮುಗಿದುದು.

## ಆರನೆಯ ಸಂಧಿ.

ಸೂಚನೆ.

ಜನಿಸಿದನು ಜಗದೇಕವೀರನು ।
ದನುಜಮನುಜಭುಜಂಗನಿರ್ಜರ
ಜನಕೆ ವುತ್ಸವವೆನಿಸೆ ವಿನತಾನಂದನನು ಧರೆಗೆ ॥

ತನ್ನ ದಾಸೀತ್ವವನ್ನು ಕಳೆಯುವ ಮಗನುದಯಿಸದ ಅನುತಾಪ.

ತಂದೆ ಶೌನಕ ಕೇಳು ವಿನತಾ
ನಂದನನ ಸಂಭವವನಘಕುಲ
ಕಂದ [1] ವಿಚ್ಛೇದನವನಿಷ್ಟಫಲಾಪ್ತಿಸಾಧನವ ॥
ಸಂದುದಾಪರಿ ಕೆಲವುದಿನ ಪೂ
ರ್ಣೇಂದುಮುಖಿ ಹಾಱುತ್ತ ಮನದಲಿ
ನೊಂದು ಚಿಂತಿಸುತಿರಲು ನಿಜಪುತ್ರೋದಯವನಬಲೆ ॥ ೧

ನೋಡಿ ಸುಯ್ದಳು ನಳಿನಮುಖಿ ಯಡೆ
ಯಾಡಿ ವಿಪಿನಾಂತರಕೆ ಬಱಿದೇ
ಕಾಡೊಳಗೆ ತಾ ಕರುಳ ಬಿಸುಟೆನು ಕದ್ರುವಿನ ಮನವ ।

---

1 ವೃಂದ, ಕ. ಖ.

ಬೇಡಿದಿಷ್ಟಾರ್ಥದ ಫಲವು ಕೈ
ಗೂಡಿತಿನ್ನೇನೆನುತ ಬೆಂಬಲ
ಬಾಡಿದುದು ಕುಳ್ಳಿರ್ದಳಂಗನೆ ದಾಸ್ಯಕರ್ಮದಲಿ ॥ ೧

ಹಾರಯಿಸುತಿರಲಿಂತು ಸತಿಯು ಮ
ನೋರಥಾಂಕುರ ಫಲಿತವಾಯ್ತೆನೆ
ವೀರನಂದುದುಭವಿಸಿದನು ವರಪುಣ್ಯಕಾಲದಲಿ ।
ವಾರಿಜಾಸನಮುಖ್ಯಸುಮನೋ
ನಾರಿಯರು ಹರುಷಿಸಿದರಿತ್ತಲು
ನಾರಿಗಾಯ್ತುಟಿ [1] ಶಕುನಸೂಚನೆ ಮುನಿಪ ಕೇಳೆಂದ ॥ ೨

ವಿನತೆಗೆ ಆದ ಶುಭಸೂಚನೆ.

ಎಡದ ಬದಿ ತೋಳ್ಕಣ್ಣು ಹುಬ್ಬುಗ
ಳಡಿಗಡಿಗೆ ಕೆತ್ತಿದವು ವಿನತೆಯು
ಕಡು ನಿರೋಧಸ್ಥಿತಿಗೆ ಕಡೆ ಯಿಂದಿನಲ ಯೆಂಬಂತೆ ।
ಕಡುಗಿದುದು ಕದ್ರುವಿನೊಡಲು ಬಲ
ದೆಡೆಗಳಂಗಸ್ಪಂದವಾದವು
ತುಡುಕಿದುದು ದುರ್ಮ್ಮಾನ ನಭವನು ಕದ್ರುನಂದನರ ॥ ೪

ಹರ್ಷದಿಂದಡವಿಗೆ ಬಂದು ಗರ್ಭವಂ ಕಾಣದೆ ಚಿಂತಿಸುವಿಕೆ.

ಏನಿದಕೆ ಫಲವೆನುತ ಕಡುದು
ರ್ಮ್ಮಾನದಲಿ ಬಂದಳು ಮಹಾಸತಿ
ಕಾನನಕೆ ಮುನ್ನಡವಿಯುಲಿರಿಸಿದ ಗರ್ಭವ ನೋಡಿ ।
ಏನಿದೇಕೊಡೆಯಿತ್ತು ಕಾಣೆನಿ
ದೇನುವನು ಹಾ ವಿಧಿಯೆ ಪುಣ್ಯವಿ
ಹೀನೆ ನಾನೆಂದಳಲಿದಳು ಕಾಣದೆ ಕುಮಾರಕನ ॥ ೫

---

[1] ನಾರಿಗಾಯ್ತು, ಕ. ಮಿ.

ಒಡೆದು ಕೆಡಿಸಿದೆನೊಬ್ಬನನು ತಾ
ನೊಡೆಯದಾಗದೆನಲ್ಕೆ ಕಂದನ
ನುಡಿಯ ಮನ್ನಿಸಿ ನೂಕಿದೆನು ಹಲಕಾಲಪರ್ಯಂತ ।
ಹಿಡಿದು ಮೆಟ್ಟಿದ ಕೊಂಬುಗಳು ಭಾ
ಪುಡಿದವೆ ಹಾ ಯೆನುತ್ತ ಹೊಱಳದ
ಳಡವಿಯಲಿ ಬಾಯ ಬಿಡುತ ಕಂಬನಿ ಧರೆ ಕೆಸಱಿಡಲು ॥ ೬

ತನ್ನ ಸೆಱೆಯನು ಬಿಡಿಸುವನು ಸಂ
ಪನ್ನಬಲನೆಂದೆನಿಸಿ ಸುತನು
ತ್ಪನ್ನನೆಂದೆಂಬಾಶೆ ಮೋಸವದಾಯ್ತು ತನಗೆಂದು ।
ದುರ್ನಿರೂಪವದಾಯ್ತು ಬಾಗಿದ
ಬೆನ್ನನಿನಿಚುವವರನು ಕಾಣೆನು
ಮುನ್ನ ಮಾಡಿದ ದುಷ್ಕೃತವ ಫಲವೆಂದಳಾವಿನತೆ ॥ ೭

ದೋಷ ದುಷ್ಕೃತಫಲವಿದಲ್ಲದೊ
ಡೀಸು ದುಸ್ಥಿತಿಯಹುದೆ ಸವತಿಗೆ
ಸೂಸಿದುದು ಕಡೆಗಗಣ್ಯಪೂರ್ವಾರ್ಜಿತಪುಣ್ಯಫಲ ।
ದೇಶಗತನಿನ್ನಾರು ಗತಿ ಪತಿ
ಭಾಷಿತವಿದೇಕಫಲವಾಯ್ತೆನು
ತಾಸರೋರುಹನೇತ್ರೆ ಹೊಸೆದಳು ಬಸುಱನಡಿಗಡಿಗೆ ॥ ೮

ಆಗ ಉದಯಿಸಿದ್ದ ಗರುಡದರ್ಶನ.

ಎಂದು ದುಃಖಿಸುವಬಲೆಗಂಗ
ಸ್ಪಂದವಾಯ್ತೊಡದಲ್ಲಿ ಕಾಣುತ
ಯಿಂದುಮುಖಿ ಕಂಬನಿಯ ತೊಡೆದಳು ಶಕುನ ಶುಭವೆನುತ ।
ದುಂದುಭಿಯದೇನೆನುತ ಗಗನವ
ನಂದು ನೋಡಿದಳುರಿವ ಪಾವಕ
ನಂದದುತ್ಕಟವಿಹಗನನು ತಾ ಕಂಡಳಾವಿನತೆ ॥ ೯

ಮುಚಿದಳು ಕಂಗಳನು ಕಾಣುತ್ತ
ಸಚ್ಚರಿತೆ ನೆಱೆಯುದೆ ಕುಮಾರನ
ಹೆಚ್ಚಿದೊಡಲ ಮಹಾಪ್ರಭೆಯನೀಕ್ಷಿಸುವೊಡದಕಂಜಿ ।
ಅಚ್ಚರಿಯಿದೇನೆನುತಿರಲು ಸುರ
ರೊಚ್ಚತುಳಿದರು ನಭದಿನಾರವಿ
ಮುಚ್ಚಿಕೊಂಡನು ರಥವನೇನೆಂಬೆನು ದಿಗಂತರಕೆ ॥ ೧೦

ಸುರರು ಗರುಡನ ತೇಜೋರಾಸಿಯಿಂ ಘಾಸಿಪಟ್ಟು ಅಗ್ನಿಯನ್ನು
ಮರೆಹೊಕ್ಕದ್ದು.

ಘಾಸಿಯಾದರು ಸುರರು ತೇಜೋ
ರಾಶಿ ತಾನೆನುತ ಹೋಗಿ ಹು
ತಾಶನನಲ್ಲಿಗೆ ಹೊಯಿಲನು ಹಾಕಿದರು ಭೀತಿಯಲಿ ।
ವಾಸುದೇವಾಂಶೋದ್ಭವನೆ ದರ
ಹಾಸವಿಶದಮಹಾಪ್ರಭನೆ ಕರು
ಣಾಸಮುದ್ರನೆ ಕಾವುದೆಮ್ಮನೆನುತ್ತ ಕರುಣದಲಿ ॥ ೧೧

ಊಡಲಮ್ಮವು ದೇವ ಕಲ್ಪದ
ಕೇಡಿನಂದಿನವೊಲು ನೀ ಘಾಸಿ
ಮಾಡಿದೆ ಯಿಂದು ಬಹಳಜ್ವಾಲೆಯನು ಕಳುಹೆ ।
ನೋಡುವೊಡೆ ದೆಸೆಯಿಲ್ಲ ಗಗನದ
ಗೂಡು ನೆಱೆಯುವು ಕಮಲಜಾಂಡವ
ಕೂಡೆ ಕವಿವುತಿದೆ ಯೆನುತ ಗೋಳಿಟ್ಟುದಮರಗಣ ॥ ೧೨

ಅಗ್ನಿಯ ಅಭಯಪ್ರಧಾನ.

ಹೋ ಹೊ ಅಂಜದಿರಂಜದಿರಿದಾ
ದಾಹಿಸುವ ಕಿಚ್ಚಲ್ಲ ವಿನತೆಯ
ದೇಹಸಂಭವನೈದೆ ಮಱೆಯೊಗುವದು ತದಂಘ್ರಿಗಳ ।
ಕಾಹು ತೆಗಸುವನಾತನಲ್ಲದೆ

ಬಾಹಿರರ ಕೈಯಿಂದ ಹೋಗದು
ದಾಹವಿದು ನಿಮಗೆನುತ ನುಡಿದನು ಪಾವಕನು ನಗುತ ‖ ೧೩

ಎನಲು ನೆರೆದರು[1] ಸುರರು ಸಂಕ್ರಂ
ದನ ಹುತಾಶನ ಯಮ ನಿರುತಿ ವರು
ಣನು ಪವನಸೋಮೇಶರೆಂಬ ದಿಗೀಶ್ವರರು ಸಹಿತ ।
ತನತನಗೆ ಪೊಡವಂಟು ತೇಜೋ
ವನಧಿಯತ್ತಲು ಮುಗಿದು ಕರವ ವ
ದನದಲಿ ಸಂಸ್ತುತಿಯನು[2] ಮಾಡಿದರಧಿಕಹರುಷದಲಿ ‖ ೧೪

ಸುರರ ಸ್ತುತಿಗೆ ಮೆಚ್ಚಿ ಗರುಡನು ಅಭಯವಂ ಹೇಳುವಿಕೆ.

ಜಯ ನಮೋ ವಿಹಗೇಂದ್ರ ಜಯ ಜಯ
ಜಯ ನಮೋ ವಿಬುಧೇಂದ್ರವಂದಿತ
ಜಯ ನಮೋ ಲೋಕೈಕರಕ್ಷಕ ದುರಿತಭಕ್ಷಕನೆ ।
ಜಯ ನಮೋ ಜಗದೇಕವೀರನೆ
ಜಯ ನಮೋ ಬಲವೀರ್ಯಸಾರನೆ
ಜಯ ನಮೋನಂತೋರುತೇಜನೆ ಭುವನಭಾವನನೆ ‖ ೧೫

*ಜಯ ನಮೋ ಪಕ್ಷೀಂದ್ರಸುಜನಾ
ಶ್ರಯ ಸುಧರ್ಮರತೇ[3] ಷ್ಟಭಯಹರ
ಜಯ ನಮೋಸ್ತು ನಮೋಸ್ತುಎಂದಡಿಗಡದುರ್ದಮರಗಣ ‖ ೧೬

ನೀನೆ ರವಿ ಶಶಿ ಪವನ ಪಾವಕ
ನೀನೆ ಕಮಲಜ ರುದ್ರ ಗಣಪತಿ[4]
ನೀನೆ ವಿದ್ಯಾಧರ ಸುರೇಶ್ವರ ನಿಖಿಳಸಂಪೂಜ್ಯ ‖
ನೀನೆ ಸಾಕ್ಷಾದ್ವಿಷ್ಣು ಭುವನ

1 ನೆರೆದುದು, ಕ.　　2 ಸ್ತುತಿಯ, ಕ. ಖ.
3 ಸುಧಾರ್ಮಿಕೇ, ಕ. ಖ.　　4 ಗುಣಗಣ, ಕ. ಖ.
* 16 ನೇ ಪದ್ಯದಲ್ಲಿ ಪೂರ್ವಾರ್ಧವು ಹೋಗಿರುತ್ತದೆ.

ಸ್ಥಾನಸಂಭವಹೇತು ನೀನೇ
ನೀನೆ ಸಚರಾಚರವಿದೆಂದರು ಸುರರು ಕೈಮುಗಿದು ॥ ೧೭

ನಾವು ಮಱೆಹೊಕ್ಕೆವು ಮಹಾತ್ಮನೆ
ಬೇವುತಿದೆ ಯೆಮ್ಮೊಡಲು[1] ನಿನ್ನಮ
ಹಾವಿವೃದ್ಧತನೂತ್ಥಬಹಳಜ್ವಾಲೆಯಲಿ ಮುೞುಗಿ ।
ಕಾವುದೆಮ್ಮನು ವೀರ ಕಾರು
ಣ್ಯಾವಲೋಕನದಿಂದ ನಿನ್ನೀ
ಪಾವನಾಂಘ್ರಿಸಮಾಶ್ರಿತರನೆಂದುದು ಸುರಸ್ತೋಮ ॥ ೧೮

ಸುರಮುನೀಶ್ವರರಿಂತು ತನ್ನನು
ಶರಣುವೊಗಲೀಕ್ಷಿಸುತ ಖಗಪತಿ
ಕರತಳವ ನೆಗಹಿದನು ಹೋ ಹೋ ಭೀತಿ ಬೇಡೆನುತ ।
ಭರಿತತನುರಶ್ಮಿಗಳನುಪಸಂ
ಹರಿಸಿದನು ಬಳಿಕಾತ್ಮಜನನಿಯ
ಚರಣದಲಿ ತಲೆವಾಗಿ ನಿಂದನು ಮುಂದೆ ಕೈಮುಗಿದು ॥ ೧೯

ವಿನತೆಗೆ ನಮಿಸಿ ತಾನು ಮಗನೆಂದು ತಿಳಿಸಿ ಕದ್ರುವಿನ
ಮನೆಗೆ ಸೇರುವಿಕೆ.

ಹೇಳೆನಗೆ ಬೆಸವೇ[2]ನೆನುತಲಿರೆ
ಲೋಲಲೋಚನೆ ನಡುಗಿ ನಿಜವನು
ಹೇೞು ನಿನಗಾನಾರು ನಿನ್ನನು ಹೆತ್ತವಳ ದಿಟಕೆ ।
ಕಾಲಿಗೆಱಗುವಿ ನೀನದೇತಕೆ
ನೀಲಲೋಹಿತನೋ ವಿರಿಂಚಿಯೊ
ಪಾಲುಕಡಲ ಮಹಾತ್ಮನೋ ನೀನೆಂದಳಬುಜಾಕ್ಷಿ ॥ ೨೦

ಶಂಕೆ ಬೇಡೆಲೆ ತಾಯೆ ನಿನ್ನುದ
ರಾಂಕಸಂಭವ ನಾನು ಕಮಲಜ

---

1 ನಿನ್ನೊಡಲು, ಕ. ಖ. 2 ಬೆಸಸೇ, ಕ.

ಶಂಕರಾಚ್ಯುತರೆಂಬವರು ತಾನಲ್ಲ ನಿನ್ನೊಡಲ ।
ಶಂಕೆಯುನು ತಾ ಕಳೆವೆ ನಂಜದಿ
ರಂಕುಶವದಾರೆನಗೆ ಜಗವನು
ಕಂಕುಳಲಿ ಧರಿಸುವೆ[1] ನಡೆವೆನಂಬರವಲೆಂತೆಂದ ॥ ೬೧

ಸಿಕ್ಕಿದೆನೆಲಾ ಮಗನೆ ಸವತಿಯು
ತೆಕ್ಕೆಯಲಿ ಬಱಿಮಾತುಗಳ ಬಲೆ
ಯಿಕ್ಕಿ ಹಿಡಿದಳು ಕಪಟದಲಿ ತಾ ದಾಸಿ ಯೆಂಗೆನಲು ।
ಮಕ್ಕಳಾಟಕೆ ಬೇಡ ಸವತಿಯು
ಮಕ್ಕಳನು ನುಂಗುವೆನು ತಾ ಬಡ
ಹಕ್ಕಿ ಯೆನ್ನದಿರವ್ವ ಸಂಶಯವಿಲ್ಲ ಹೋಗೆಂದ ॥ ೬೨

ಎನಲು ಹರಸಿದಳಬಲೆ ಬಲುಗೈ
ಯೆನಿಸಿ ಬದುಕೆಂದೆನುತ ಪುಳಕಕೆ
ತನು ನೆರೆಯದೆನೆ ಹಿಗ್ಗಿದಳು ಹರುಷಾಂಬುಪೂರದಲಿ ।
ನೆನೆದು ಹೊಂದಿದಳಂಗವನು ನಿಜ
ತನಯನಂಗದಲಮರಿ ಬಿಟ್ಟಳು
ಮನದ ಸಂತಾಪವನು ತಕ್ಕೈಸುತ್ತ ನಿಜಸುತನ ॥ ೬೩

ತೊತ್ತುಗೆಲಸಕೆ ತಡೆಯದೇಪೆಲೆ
ಪುತ್ರ ಕಾಲಕ್ಷೇಪ ವಾಯ್ತೆನೆ
ಹೊತ್ತುಕೊಂಡನು ತಾಯಿ ತೋಱಮನೆಯ ತನಗೆನುತ ।

ಕದ್ರುವಿನತೆಯರ ಸಂವಾದ.

ತೊತ್ತತಾಯನು ಸವತಿಯಿದಿರಲಿ
ಹೊತ್ತು ತಂದಿೞುಹಿದನು ಕಾಣುತ
ಮತ್ತಿದೇನಾರಾತನೆಂದಳು ವಿನತೆಯೊಳು ಕದ್ರು ॥ ೬೪

---

1 ಧರಿಸುವೆನು, ಕ. ಖ.

ಅಱಿಯೆನಾರೆಂದಕ್ಕ ಮಗನೆಂ
ದೆಱಗಿದನು ಕಾಲಿಂಗೆ ತನ್ನಮ
ಬಱಿಯದಿದ್ದುದು ಕಂಡೆನೆಂಡವನಿಲಿಸಿದಂತಿರಲು ।
ಮಱುಗದಿರು ನೀನೆಂದನೆನಗೆನೆ
ಮಱೆಯ ಮಾತಿದು ಸಾರು ಕೆಲಸವ
ನೊಱಗಿಸದದಾರಾದೊಡಾಗಲಿ ಯೆಂದಳಾ ಕದ್ರು ॥ ೨೫

ಕದ್ರುವಿನ ಅಪ್ಪಣೆಯಂತೆ ಹೊತ್ತು ತಾಯಿಮಕ್ಕಳನ್ನು
ಅಂತರಿಕ್ಷದಲ್ಲಿ ಒಯ್ಯುವಿಕೆ.

ತೊತ್ತೆ ನೀ ಪೊಱು ನನ್ನನೆನ್ನಯ
ಪುತ್ರರನು ಮಗ ಹೊಱಲಿ ಸಾಗರ
ದತ್ತಲದೆಲಾ ರಮ್ಯತರವಹ ವನಮದಾತ್ಮಜರ ।
ಚಿತ್ತದಲಿ ಲೋಲುಪ್ತಿಯಾಯಿತು
ಪುತ್ರಸಂದರುಶನದಲೆನಲಾ
ಮತ್ತಕಾಶಿನಿ ಯಾವಿನತೆ ಹೊತ್ತಳು ಸರಾಗದಲಿ ॥ ೨೬

ಹೊಱು ಮಗನೆ ನೀನೆನಲು ಕುಳ್ಳಿರಿ
ಗಱಿಯ ಕಡೆಸೆಱಗಿನಲಿ ನೀವೆನು
ತೆಱಗಿ ಪಕ್ಕವನೊಡ್ಡೆ ತಾ ಹತ್ತಿದುದು ಫಣಿನಿಕರ ।
ಹೊಱಗುಟಿಯದಂತೈದೆ ಜಲಧಿಯ
ಕುಱುವದೆಲ್ಲಗೆ ಹೋಗು ನಾವಿಹ
ಪಿಱುಪುವೆಡೆ ಫಣಿನಿಕರವೆನೆ ಬೆಳಗುತ್ತ ದಿಗುತಟವ ॥ ೨೭

ಸೂರ್ಯನ ತಾಪದಿಂದ ಕದ್ರುಪುತ್ರರ ಕೆಂಗೆಡುವಿಕೆ.

ಮುಗುಧೆ ನಡೆದಳು ಹೊತ್ತುಕೊಂಡಾ
ಹೊಗೆಮುಖದ ಕದ್ರುವನು ಜಲಧಿಗೆ
ನೆಗೆದನಿತ್ತಲು ಪಕ್ಷಿರಾಜನು ಪವನವೇಗದಲಿ ।
ಗಗನಮಣಿಮಂಡಲದ ಸಮ್ಮುಖ

ಕೊಗುವಿಗೆಯ ರೋಷದಲಿ ಸುಮಹೋ[1]
ರಗನಿಕರ ಮುಮ್ಮೞಿಗೊಳಲು ಬಲುಬಿಸಿಲ ತಾಪದಲಿ ॥ ೨೮

ಹಾಱಿದನು ಖಗನಂಬರಾಗ್ರಕೆ
ತೋಱಿದನು ಬಿಸಿಲಿಂಗೆ ಬೆನ್ನನು
ಮೀಱಿದನು ಖೇಚರರ ಪಥವನು ಪನ್ನಗೇಶ್ವರರ ।
ಮಾಱಿದನು ಬಲುಮೂರ್ಛೆಗಳಲನು
ಹೋಱಿದನು ಕದ್ರುವಿನ ಗಂಟಲ
ನೂಱಿದನು ಹಾ ಯೆನಲು ಸುೞಿದಾಡಿದನು ಗಗನದಲಿ ॥ ೨೯

ಅದನ್ನು ಖೇಚರರ ವಚನದಿಂ ತಿಳಿದು ಕದ್ರು ಮಹೇಂದ್ರನಂ
ಮರೆ ಹೋಗುವಿಕೆ.

ಸತ್ತುದೋ ಉರಗಾಳಿ ಹರ ಹರ
ಕಿತ್ತುದೋ ನಾಗಾಲಯದ ಕದ
ಮೆತ್ತಿತೋ ಕದ್ರುವಿನ ಕುಲಕಲ್ಪದ್ರುಮದ ಬೇಱು ।
ಹೊತ್ತಿತೋ ಹೊಗುದುದೆ[2] ಮಹಾಖಗ
ಮೃತ್ಯುವಾದುದೆನುತ್ತ ಖೇಚರ
ರತ್ತರೊಱಲಲು ಕೇಳಿದಳು ಕೊಳುಗುಳವನಾಕದ್ರು ॥ ೩೦

ಭಯದಲಂದಾಕಂಪಿಸಿದಳ
ನ್ವಯವ ಕೆಡಿಸಿದಳಕಟೆನುತ ಹರಿ
ಹಯನನಭ್ಯರ್ಥಿಸಿದಳಂದಮರೇಂದ್ರಸೂಕ್ತದಲಿ ।
ಜಯ ನಮೋ ದೇವೇಂದ್ರ ಜಯ ಜಯ
ಜಯ ನಮೋ ಮಾಹೇಂದ್ರ ಜಯ ಜಯ
ಜಯ ನಮೋ ಸುಖಸಾಂದ್ರ ಭಕ್ತಚಕೋರಕುಲಚಂದ್ರ ॥ ೩೧

ನೀನೆ ರವಿ ಶಶಿ ನೀನೆ ಪಾವಕ
ನೀನು ನೀನೇ ವರುಣ ಪವನನು

1 ಮಹೋ, ಕ. ಖ. 2 ಹೊಗದುದೊ, ಕ. ಖ.

ನೀನೆ ಯಮ ವಿತ್ತೇಶನೀಶಾನನು ಸರೋಜಭವ ।
ನೀನೆ ನಾರಾಯಣನು ಭುವನ
ಸ್ಥಾನರಕ್ಷಕ ನಾಶಕಾರಣ
ನೀನೆ ಸಚರಾಚರಜಗನ್ಮಯನೆಂದಳಬುಜಾಕ್ಷಿ ॥ ೨೦

ಸ್ತುತಿಗೆ ತೆರಹಿಲ್ಲಕಟ ಕೆಟ್ಟೆನು
ಗತಿಯ ಕಾಣೆನು ಬೇಗ ಕರುಣಿಸು
ಶತಮುಖನೆ ಮಡೆಗಜಿ ಮಹೋರಗರೊಣಗಲಿನ ಮೇಲೆ ।
ಗತಿ ಯೆನಗೆ ಮತಿ ಯೆನಗೆ ನೀನೆನು
ತತುಳಮತಿಯಿಂ ಭಾವಿಸುತ್ತಿರೆ
ಶತಮುಖನು ಕಡಿ ಮೇಘನಿಕರದ ಸಂಕಲೆಯನೆಂದ ॥ ೨೨

ಇಂದ್ರನ ಪ್ರಸಾದದಿಂ ವೃಷ್ಟಿಯಾಗಲು ಕದ್ರುಪುತ್ರರ ದುಃಖನಾಶ.

ಕಡಿವುದೇ ತಡವಾಯ್ತು ಮೇಘದ
ಗಡಣವಾವರಿಸಿತ್ತು ನಭವನು
ಸಿಡಿಲು ಸಡಿಲಿದವಾಡಿದವು ಮಿಂಚುಗಳು ಚಂಚುಗಳ ।
ಕುಡಿಗಳಂತಿರೆ ಪಕ್ಷಿಪತಿಯಾ
ಯೊಡಲು ನೆನೆಯಲು ಗಗನಮಂಡಲ[1]
ವೊಡೆದುಸುಱಿವಂದದಲಿ ಸುಱಿದುದು ವೃಷ್ಟಿಯವನಿಯಲಿ ॥ ೨೪

ಚೇತರಿಸಿದುದು ಹೊತ್ತಿದುರಗ
ವ್ರಾತ ಸಪ್ರಾಣಿಸಿದಳವದಿರ
ಮಾತೆ ಮಹೇಂದ್ರನನು ಸ್ತುತಿಸಿದಳಧಿಕ ಹ[2]ರುಷದಲಿ ।
ಪೂತು ಮಝು ಸುರನಾಥ ಕಾರು
ಣ್ಯಾತಿಶಯಕಿದಿರುಂಟಲಾ ಯೆನ
ಲಾತಟಕಿಟಿದನು ಸೂರಿಯನಿಟಿವಂತೆ ಸಾಗರಕೆ ॥ ೨೫

---

1 ಗಗನ, ಕ. ಖ. 2 ಸ್ತುತಿಸಿದಳುಹ, ಕ. ಖ.

ಇಱುಹಿದನು ಪನ್ನಗರ ನಿವಹವ
ನೀಱುಹಿದನು ನಿಜಜನನಿಯೊಲವನು
ಸಲಹಿದನು ಪನ್ನಗರನಾಪ್ತರನೊಲಿದು ಕರುಣದಲಿ ।
ಹೊಳಹಿದನು ಕದ್ರುವಿನ ಖಾತಿಯ
ಕಳುಹಿದನು ಖಗಕುಲಶಿರೋಮಣಿ
ತಿಳುಹಿದನು ತಾಯಿಗಳನಧಿಕಮನೋನುರಾಗದಲಿ ॥ ೩೬

ಫಲಕಥನ.

ಇದು ಸಕಲಮಂಗಳಮಹೋದಧಿ
ಯಿದು ಸಕಲಪುರುಷಾರ್ಥಸನ್ನಿಧಿ
ಯಿದು ಸದಾಯುಃಕೀರ್ತಿಸಂಪತ್ಕರವಘೌಘಹರ ।
ಇದನು ಹೇಱುವ ಕೇಳುವಾ ಸದು
ಹೃದಯರನು ರಕ್ಷಿಸುವನೊಲಿದಾ
ಪದುಮದೃಶ ನಿತ್ಯಾತ್ಮನಾರಾಯಣನು ಕರುಣದಲಿ ॥ ೩೭

ಆರನೆಯ ಸಂಧಿ ಮುಗಿದುದು.

## ಏಳನೆಯ ಸಂಧಿ.

ಸೂಚನೆ.

ಪಕ್ಷಿರಾಜಮಹೇಶ್ವರನು ನೆಱೆ
ಭಕ್ಷಿಸಿದ ನಾಕಾರಿ ಖಳರನು
ರಕ್ಷಿಸಿದನಾಕಾನನಕ್ಕೈದಿ ಭೂಸುರಾಧಮನ ॥

ಗರುಡನು ಕದ್ರುಪುತ್ರರಿಂಗೂಡಿ ನಾಗಾಲಯಕೆ ಬಂದು
ಸಂತೋಷಪಡುವಿಕೆ.

ಕೇಳು ಶೌನಕ ಬಂದನಾನಾ
ಗಾಲಯಕೆ ನಾಗಾಂತಕನು ಸುವಿ
ಶಾಲಕಲ್ಪದ್ರುಮಲಲಿತವೇಷ್ಟಿತವನಾಂತರಕೆ ।
ಲೋಲತರಸಾರಂಗಶೃಂಗೋ
ತ್ತಾಲಮಲ್ಲೀ ವಿಹಗಕಿನ್ನರ
ಜಾಲಸೇವಿತರಮ್ಯರತ್ನಸ್ಥಳಮನೋಹರಕೆ ॥ ೧

ಫಲಿತಕುಸುಮಿತಪಲ್ಲವಿತತರು
ಗಳಲಿ ಪುಷ್ಪಾಮೋದರಮ್ಯಾ
ನಿಲನಿರಂತರವಿಚರಿತೋದ್ಯಾನದಲಿ ಸಾಗರದ ।
ಸಲ್ಲಲಿತವೀಚೀತತಿಮೃದೂ
ಚ್ಚಲಿತಜಲಚರನಿಕರಪರಿಮಂ
ಡಲಿತಪಾವನಭವನ ತಲೆದೂಗಿಸಿತು ಖಗಪತಿಯು ॥ ೨

ಕದ್ರುಪುತ್ರರ ಅಧಿಕ್ಷೇಪದಿಂ ಗರುಡನು ತಾಯಿಯಿಂದ ದಾಸ್ಯ
ಕಾರಣವನ್ನು ಅರಿಯುವಿಕೆ.

ಇಳಿದುದು ನಿಜಭವನದಲಿ ಮತ್ತ
ಖಿಳಮಹೋರಗನಿಕರವುಮದೆಲ
ವೆಲವೊ ದಾಸಿಯುಮಗನೆ ಬಲ್ಲಿದನಾದೆ ಸತ್ವದಲಿ ।
ಜಲನಿಧಿಯು ತಾನಲ್ಲಿ ರಮ್ಯ
ಸ್ಥಳಕೆ ನೀ ಹೊತ್ತೊಯ್ದು ನಮ್ಮನು
ಹೊಳಹುದೋಱದೆ ಹೋದೆಯೆಂದರು ಕದ್ರುನಂದನರು ॥ ೩

ಎಂದೊಡದನಾಲಿಸುತ ಮನದಲಿ
ನೊಂದು ನುಡಿದನು ತಾಯೆ ತೊತ್ತಾ
ದೆಂದುಮೊದಲಾಗೀ ಮಹೋರಗ ಸಂತತಿಗೆ ನೀನು ।

ಎಂದುಪರಿಯುಂತೇನು ಕಾರಣ
ವೆಂದೆನಲು ಕೇಳುತ್ತ ತನ್ನಯ
ನಂದನಂಗಿದನೆಂದಳಾಗಲೆ ವಿನತೆ ಸುರವನಿತೆ ॥ ೪

ಮಗನೆ ನೀನದನೇನು ಕೇಳುವೆ
ಹೊಗಿಸಿ ಬಡಿದಳು ಕದ್ರು ತನ್ನನು
ಮುಗುಧೆ ತಾ ಸುರತುರಗವ ನಾವು ಕಂಡೆವಬುಧಿಯಲಿ ।
ಭಗಿನಿ ಹೇೞೇ[1] ತುರಗವಾಲದ
ಬಗೆಯು ಬಿಳಿದೋ ಕಱಿದೊ ಯೆಂತಿದ[2]
ವಗಡಿಸಿ ಕೇಳ್ ಹೇೞಿದೆನು ನಾನದನು[3] ಬಿಳಿದೆಂದು ॥ ೫

ಅಲ್ಲ ಹುಸಿ ಕಱಿದೆಂದು ಹೇೞಿದ
ಳಲ್ಲದುದನಾ ಕದ್ರು ಪಣವೇ
ನಿಲ್ಲಿ ಸೋತರೆ ತೊತ್ತು ನಾವೊಬ್ಬೊಬ್ಬರಿಂಗೆನುತ ।
ಅಲ್ಲಿ ಭಾಷೆಯ ಮಾಡಿ ಬಂದೆವು
ಕಳ್ಳಮಕ್ಕಳ ಕರೆದು ಹೇೞಿದ
ಳೆಲ್ಲರಿಗೆ ನಿಜಮತವ ಕಱಿದನು ಮಾಡಿ ನೀವೆಂದು ॥ ೬

ಬೇಡ ತಮಗನ್ಯಾಯವೆನೆ ಕುಲ
ಗೇಡಿ ಕೊಟ್ಟಳು ಸರ್ಪಯಾಗವ
ಮಾಡಿ ಜನಮೇಜಯನು ಕೊಲ್ಲಲಿ ನಿಮ್ಮನೆಂದೆನುತ ।
ಆಡಿ ಶಾಪವನಲ್ಲಿ ಕೆಲರವ
ಳಾಡಿದುದಕೆ ಹಸಾದವೆಂದರು
ಕೂಡೆ ಹೊಕ್ಕರು ತುರಗಬಾಲವ ಕಾಮರೂಪಿಗಳು ॥ ೭

ಹೋಗಿ ಕಂಡೆವು ಮಱುದಿವಸ ಕಱಿ
ದಾಗಿ ತೋಱುವ ಬಾಲವನು ತಲೆ

1 ಕೇಳೀ, ಕ. ಖ. 2 ಹೇೞೆಂ, ಕ. 3 ಹೇೞಿದೆನದನು, ಕ. ಖ

ವಾಗಿಸಿತು ವಿಧಿಯು ತನ್ನನನ್ಯವಿಧ[1] ಪ್ರವೃತ್ತಿಯಲಿ ।
ಹೋಗಲದಕೇನೆಲೆ ಮಗನೆ ಹೊಱು
ಭೋಗಿನಿಕರವನೆನ್ನ ಬಸುಱಲಿ
ಭಾಗಧೇಯವಿಹೀನ ಜನಿಸಿದೆ ಯೆಂದಳಾತ್ಮಜಗೆ ॥ ೮

ಬಳಿಕ ಕುಪಿತನಾದ ಗರುಡನಿಗೆ ದಾಸ್ಯವನ್ನು ಕಳೆಯುವ
ಉಪಾಯವನ್ನು ಹೇಳುವಿಕೆ.

ಎಂದೊಡೆಂದನು ಸಾಕುಸಾಕಿ
ಲ್ಲಿಂದ ಮೇಲಲೆ ತಾಯೆ ಘಡ ತೊ
ತ್ತಿಂದರಾವೆಡೆ ತೊಡವೆನವದಿರ ಬಾಜಿನಕ್ಕರವ ।
ಕೊಂದಳನ್ಯಾಯದಲಿ ಹರಹರ
ಹಿಂದಿನಿತುದಿನ ಸಾಧ್ವಿಯನು ತಾ
ನಿಂದು ಮಱುಗಿದೊಡೇನು ಫಲವಿನ್ನೆಂದು ಬಿಸುಸುಯಿದ ॥ ೯

ಶೋಕವನು ಬಿಡು ತಾಯೆ ತಾನಿರ
ಲೇಕೆ ಭಯ ನಿನಗುರಗಗಿರಗರ
ಲೋಕವನು ನುಂಗುವೆನು ಮುನಿದರೆ ಪನ್ನಗೇಶ್ವರರ ।
ಸಾಕು ನಡೆ ಮನೆಗೆನಲು ಸತ್ಯವ
ನೇಕೆ ಕೆಡಿಸುವೆ ಮಗನೆ ಕೊಡು ಜಗ
ದೇಕವೀರನೆ ಕದ್ರು ಬೇಡಿದುದೆಂದಳಾ ವಿನತೆ ॥ ೧೦

ತಾಯೆ ನೀ ಬೆಸಸಾ ಮನೋಭಿ
ಪ್ರಾಯವೇನೆಂಬುದನು ಭುವನನಿ
ಕಾಯದೊಳಗೆನಗಿಲ್ಲ ದುರ್ಲಭವಾದ ಪುರುಷಾರ್ಥ ।
ಈಯಲಾಪೆನು ಕಾಯಲಾಪೆನು
ವಾಯುಭೋಜನರವ್ವೆಯೆಂದುದ
ನಾಯತಿಕೆಯಲಿ ತಿಳಿದು ಹೇಳೆನಗೆಂದನಾಗರುಡ ॥ ೧೧

1 ಅನನ್ಯ, ಕ.

ಎನಲು ಹೋದಳು ಕದ್ರುವಿನ ಮನೆ
ಗನುಪಮಮಹಾವಿನತೆ ತನ್ನಯ
ತನಯನೆಂದುವನೆಂದಳವಳಾಳೋಚನೆಯ ಹದನ ।
ಮನದೊಳಗೆ ನಿಶ್ಚಯಿಸಿ ದುರ್ಲಭ
ವೆನಿಪದನು ಜೇಡುವೆನು ತರಳಖಿ
ಯನು ವಿಹಂಗಮನೆನುತ ನುಡಿದಳು ಕದ್ರು ಮಿಗೆ ನಗುತ ॥ ೧೦

ಅಮೃತವನು ತಂದೀವುದುರುವಿ
ಕ್ರಮಪರಾಕ್ರಮಶಕ್ತಿಯುಳ್ಳೊಡೆ
ಸುಮತಿ ಸೆಱೆಯನು ಬಿಡುವೆನೆನ್ನಲಿ ಮಾತು ಹಲವಿಲ್ಲ ।
ಭ್ರಮಿತೆ ಹೋಗೆನೆ ಬಂದಳಾಸತಿ
ತಮವ ತುಗುಳುತ ತೀವ್ರತೇಜದ
ಕಮಲಮಿತ್ರನ ವೋಲು ಮೆಱೆವಾತ್ಮಜನ ಸನ್ನಿಧಿಗೆ ॥ ೧೩

ಈಕ್ಕುಲತೆ ಜೇಡೆಲೆ ಮಗನೆ ಗಂ
ಟಕ್ಕಿದೆನು ತಾ ಬಿಡಿಸಹೋದವ
ಳಕ್ಕನನು ಗೆಲಲರಿದು ಜೇಡಿದಳಮೃತವನು ತನಗೆ ।
ಎಕ್ಕತುಳದಲಿ ಹೋಗಿ ನೀ ತರ
ತಕ್ಕವನೆ ಸುಧೆಯನು ಸುರಾಲಯ
ಹೊಕ್ಕು ಹೊಱಡುವೊಡದು ಸದರವಲ್ಲೆಂದಳಾವಿನತೆ ॥ ೧೪

ದೇವದಾನವಮಥಿತಸಾಗರ
ದೇವನಲಿ ಸಂಭವಿಸಿತದಕಾ[1]
ದೇವರಿಪುಗಳು ಕಾದಿ ಸತ್ತರು ಪಡೆಯದಮೃತವನು ।
ಆವನೈ ನೀನದನು ತರಲು ವಿ[2]
ಭಾವಸುವಿನುರಿ ಹೊಕ್ಕು ಹೊಱಗು
ಜ್ಜೀವಿಸಿ ಮರಳುವ್ರದೇ ಮೋಣೆಂದಳು ಸರೋಜಮುಖಿ ॥ ೧೫

1 ತದನಾ. ಕ.  2 ನೀನದತಾಹೊಡೆ, ಕ. ಖ.

ಕದ್ರು ಬೇಡಿದ ಅವೃತವನ್ನು ತರಲು ಗರುಡನು ಒಪ್ಪಿಕೊಳ್ಳುವಿಕೆ.

ಸಾಕು ಭಯಬೇಡವ್ವ ತನಗಾ
ಪಾಕಶಾಸನನಲ್ಲ ವೈಣು ಪಿ
ನಾಕಿ ವಿಷ್ಣು ವಿರಿಂಚಿ ಯಿದಿರೇ ಕೊಡದೊಡಾಸುರರ ।
ಲೋಕವನು ನುಂಗುವೆನು ಸುಧೆ ಸಹಿ
ತೇಕೆ ಕಳವಳ ತಾಯೆ ತನ್ನನು
ನೂಕಿ ನೋಡದುಭುತವ ತೋಱುವೆನೆಂದನಾ ಗರುಡ ॥ ೧೬

ಗರುಡನಿಗೆ ವಿನತೆಯ ಶುಭಾಶಾಸನ.

ಎನಲು ಹರಿಸಿದಳಬಲೆ ಬಲ್ಲಿದ
ನೆನಿಸಿ ಬದುಕೆಂದಾಕೆ ರಕ್ಷೆಯ
ನನುಪಮಗೆ ಕಟ್ಟಿದಳು ಪಕ್ಷಂಗಳನು ರಕ್ಷಿಸಲಿ ।
ಅನಿಲನಪರಾಂಗವನು ಚಂದ್ರಮ
ನನಲನೀಶಿರವನು ಶರೀರವ
ದನುಜರಿಪು ರಕ್ಷಿಸಲಿ ಸರ್ವವನೆಂದಳಾ ವನಿತೆ ॥ ೧೭

ಮಗನೆ ತಾನನ್ನೆವರ ಕೃಛ್ರಾ
ದಿಗಳನಾಚರಿಸುತ್ತ ಶಕ್ರಾ
ದಿಗಳನಾ ಋಷಿಗಳನು ಪಿತೃಗಳನಖಿಳದೇವರನು ।
ಮುಗಿದ ಕೈಯುಲಿ ಭಜಿಸುವೆನು ಶಾಂ
ತಿಗಳನಭ್ಯರ್ಥಿಸುವೆನು ನೀನು
ಮಿಗಿಲು[1] ಸಾಹಸಿಯಾಗು ಹರಸಿದೆನೆಂದಳಾತ್ಮಜಗೆ ॥ ೧೮

ಆಗ ವಿನತೆಯನ್ನು ಆಹಾರ ಬೇಡುವಿಕೆ.

ಸಸಿನವಿರು ಸಂತವಿರು ಘಡ ಚಿಂ
ತಿಸದಿರೇನರಿದೆಂಬ ಸುರರನು
ಹೊಸೆದು ತಹೆನಮೃತವನು ಸಾಕಿನ್ನದಱ ಮಾತುಗಳ ।

[1] ನೀನೆನಗೆ, ಕ. ಖ.

ಹಸಿದೆನಾವುದು ಹೇಳು ನೀ ತನ[1]
ಗಶನ ಕಲ್ಪಿಸು ತೋಱು ಯೆಂದೆನೆ
ನಸುನಗುತ ನುಡಿದಳು ಲತಾಂಗಿ ನಿಜಾತ್ಮಸಂಭವಗೆ ॥ ೧೯

ಸಮುದ್ರಮಧ್ಯದಲ್ಲಿರುವ ಬೇಡರನ್ನು ಭಕ್ಷಿಸೆಂದು
ವಿನತೆಯು ಹೇಳುವಿಕೆ.

ಅದೆ ಸಮುದ್ರದ ಮಧ್ಯದಲಿ ತೋ
ರ್ಪುದು ನಿಶಿಚರರ ಕೇರಿ ನೀ ಹೋ
ಗಿ ದರಲದೆ ಅದೆ ಮಗನೆ ಖಳತದ್ಭವರಸಂಖ್ಯಾತ ।
ರುದರಪೋಷಣಕಹರು[2] ಧರಣೀ
ತ್ರಿದಶರನು ತಿನ್ನದಿರು ಹೋಗೆನ
ಲದನು ಕೇಳುತ ವಿಪ್ರರನು ತಾನಱಿಯನೆಂತೆಂದ ॥ ೨೦

ಅಱಿವೆ ನಾನೆಂತೆನಲು ಕೆಂಡದ
ತೆಱನಹುದು ಗಂಟಲಲಿ ನೀಬಾ
ಯ್ದೆಱೆದು ನುಂಗುತ್ತಿರಲು ಬಂದೊಡೆ ವಿಪ್ರನದಱೊಳಗೆ ।
ಕುಱುಹು ಹೋಗೆಂದೆನಲು ಚರಣದ
ಲೆಱಗಿದನು ಬಲವೆಂದು ಮನದಲಿ
ಮೆಱುಗಬೇಡೆಂದತ್ತಲಂಬರತಳಕೆ ಲಂಘಿಸಿದ ॥ ೨೧

ಹೊರಟು ಬೇಡರನ್ನು ತಿನ್ನುವಿಕೆ.

ರೂಡಿಯಲ್ಲಾಡಿತ್ತು ಪದಹತಿ
ಗೋಡಿದರು ಖೇಚರರು ಪಕ್ಷವ
ನೀಡಲಿಲ್ಲಂಬರವದೆನಲೈದಿದನು ಖಳವರರ ।
ಬೀಡ ಮುತ್ತಿದನೊತ್ತಿದನು ಕಡೆ
ವೀಡ ಕಲಕಲು ಪದರಜವು[3] ತಮ
ಗೂಡೆ ಕವಿದುದು ಕಂಗಳಿದಿರನು ಕಾಣಲರಿದೆನಲು ॥ ೨೨

1 ಹೇಱುತನ, ಕ. ಖ. 2 ಉದರಪೋಷಣಕಹದು, ಕ. 3 ರಜದ, ಕ.

ಹಾಸಿದನು ತುಟಿಯೊಂದನಿಳೆಗಾ
ಕಾಶಕೊಂಡನು ನೆಗಹಿದನು ಸಲೆ
ಸಾಸಿಗನು ಬಹುಮಾರ್ಗದಿದಿರಲಿ ನಿಂದು ಖಗರಾಜ ।
ಆ ಸುರಾರಿಗಳೇನಿದೇನೋ
ದೇಶವಿಪ್ಲವವೆನುತ ಕವಿದರು
ನಾಶಕಾಲವಿದೆಂದು[1] ಕೈದುವ ಸೆಳೆದು ತಮತಮಗೆ ॥ ೨೩

* ಕೆಡಸಿದುದು ಕಂಗಳನು ಕತ್ತಲೆ
ಕಡಿಕಡಿಯುವೀಪಕ್ಷಿತುಂಡವ
ನಡಸಿ ಹೊಕ್ಕದು ಬಾಯುದೆಲ್ಲವೆ ಮಾರ್ಗವೆಂದೆನುತ ॥ ೨೪

ಪೊಡೆ ನಿಷಾದಾಧಿಪರ ಸಹಿತರ
ನೊಡನೊಡನೆ ನುಂಗಿದನು ಹಸಿವಿಗೆ
ಕಡೆಯ ಕಾಣೆನೆನುತ್ತಲವಸಾನವನು ಖಳಕುಲದ ।

ಆಗ ವಿನತೆ ಹೇಳಿದಂತೆ ಬ್ರಾಹ್ಮಣನು ಗಂಟಲಲ್ಲಿ ಬಂದು ಸುಡುವಿಕೆ.

ನಡುವೆ ಭೂಸುರನೊರ್ವನಂತಳ
ವಡೆಯೆ ದಾಸಿಯುವಳೊರ್ವಳನೆಡೆ
ಬಿಡದೆ ವಿಷಯಾಸಕ್ತನನು ನುಂಗಿದನು ಕಂಡೊಡನೆ ॥ ೨೫

ಕಟ್ಟೆಯೊಡೆದಂದದಲಿ ಬಾಯುನು
ದುಷ್ಟಮನದ ನಿಷಾದಬಲ ಕಂ
ಗೆಟ್ಟು ಹೊಕ್ಕದು ಹೊಱಗೆ ಖಳನಿನ್ನೊಬ್ಬನುೞಿಯನೆನೆ ।
ಸುಟ್ಟನೊಬ್ಬನು ಗಂಟಲನು ಹಾ
ಕೆಟ್ಟೆನಾರೋ ವಿಪ್ರನೆನುತವೆ
ದುಷ್ಟಮರ್ದನನಾತನನು ನುಡಿಸಿದನು ತವಕದಲಿ ॥ ೨೬

---

1 ಕಾರಿಗಳೈದೆ, ಕ. ಖ. * 24ನೇ ಪದ್ಯದಲ್ಲಿ ಪೂರ್ವಾರ್ಧ ಹೋಗಿರುತ್ತದೆ.

ಅವನನ್ನು ವಿಚಾರಿಸಿ ದಾಸಿಯೊಡನೆ ಬಿಡುವಿಕೆ.

ಆರು ಹಾರುವನೈಯ ನಿನಗೀ
ವೂರಲಿರಲೇತಕೆ ನಿಷಾದಕು
ಮಾರಿ ಹೆಂಡತಿ ತನಗೆ ಲೇಸಾಯ್ತಣ್ಣ ಹೊಱವಡೆನೆ ।
ನಾರಿಸಹಿತಲ್ಲದೆ ವಿನಿರ್ಗಮ
ಸೇರದೀಕೆಯನು ಕಾವುದೆನೆ ವಿ[1]
ಚಾರವೇಕಧಿದೈವವಲ್ಲಾ ವಿಪ್ರವರರೆಂದ ॥ ೧೭

ಹೊಱವಡೆನೆ ಹೊಱವಂಟನತ್ತಲು
ಸೆಱಗ ಹಿಡಿದಂಗನೆಯನಾ ದ್ವಿಜ
ಪ್ರೊಱಮಡಿಸಿ ಹರಸಿದನು ನೆಱೆ ಬಲವಂತನಾಗೆಂದ ।
ತೆಱದ ಬಾಯನು ಮುಚ್ಚಿದನು ಬೞಿ
ಕೞಗಿ ಭಟನಾ ವಿಪ್ರನಂಘ್ರಿಗೆ
ಕೊಱತೆಯಾಯ್ತಾಹಾರವೆಂದೆನುತ ಪಸರಿಸಿ ಗಱಿಯ ॥ ೧೮

ಆಹಾರಸಾಲದೆ ಕಶ್ಯಪನನ್ನು ಯಾಚಿಸುವಿಕೆ.

ಮತ್ತೆ ಖಗನಲ್ಲಿಂದ ಹಾಯ್ದನು
ತುತ್ತು ತೋಱೆನಗೆನುತ ತಂದೆಯ
ಹತ್ತಿರಕೆ ಹೊಱವಂಟು ನಿಂದಿರೆ ಕಶ್ಯಪನು ನಗುತ ।
ಪುತ್ರ ಬಂದೆ ಯಿದೇನು ಹೇೞು ಮ
ಹೋತ್ತಮನೆ ಹೇೞೆನುತ ನುಡಿಸಿದ
ನುತ್ತಮಾಂಗವ ತಡವಿ ಕಡುಮೋಹದಲಿ ನಂದನನ ॥ ೧೯

ತಾಯಿ ತನಗಾಹಾರವನು ಕೊಡ
ಲಾಯಿತುದರಾರ್ಥಕ್ಕೆ ಕುಡು ತರು
ವಾಯುದೆನಗೆನಲದನು ಕೇಳುತ ಕಶ್ಯಪನು ನಗುತ ।

---

[1] ಸೇರದೈಕೈಗಾಯ್ವುದೇಕನೆ ವಿ, ಕ.

ಸಮುದ್ರ ತೀರದಲ್ಲಿರುವ ಗಜಗಚ್ಛಪರನ್ನು ತಿನ್ನಲು ಕಶ್ಯಪನಾಜ್ಞೆ.

ಆಯುವೆಂತನೆ ಕೊಟ್ಟೆನದಕೋ
ದಾಯುವೆನು ಗಜಕಚ್ಛಪಂಗಳ
ಕಾಯದಾಹಾರವನು ಸಾಗರತಡಿಯಲದೆಯೆಂದ ‖ ೩೦

ಆರುಯೋಜನದುದ್ದ ಗಜವೀ
ರಾರುಯೋಜನದ ನೀಳದಿಹನು
ಕೂರುಮನು ಯೋಜನಸಮುದ್ರದ ಶತಗುಣಾಯತವು ।
ಕಾರಣದಲುತ್ಪನ್ನವಾದವು
ವೀರ ನೀನಾ ಪ್ರಾಣಿಗಳನಾ
ಹಾರವನು ಮಾಡೆನಲು ನುಡಿದನು ತಂದೆಗಾ ಗರುಡ ‖ ೩೧

ಗಜಕಚ್ಛಪಜನ್ಮಕ್ಕೆ ಕಾರಣ.

ತಂದೆ ಹೇಳೆನಗೇನು ಕಾರಣ
ದಿಂದ ಗಜಕಚ್ಛಪರು ಜನಿಸಿದ
ರೆಂದದನು ವಿವರಿಸುವುದೆನೆ ವೃತ್ತಾಂತಸಂಗತಿಯ ।
ಕಂದ ಕೇಳುಪಕಥೆಯನೆಸೆದರು
ಮಂದಮತಿಗಳು ವಿಪ್ರರಿಬ್ಬರು
ಬಂದ ಭವಣೆಗೆಯನ್ನು ವಿಸ್ತರವಾಗಿ ಕೇಳೆಂದ ‖ ೩೨

ಧರೆಯಲೊಡಹುಟ್ಟಿದವರಿಬ್ಬರು
ವರವಿಭಾವಸುಸುಪ್ರತೀಕಾ
ಖ್ಯರು ವಿಭಾಗವ ಬೇಡೆ ಹಿರಿಯನನಾ ವಿಭಾವಸುವ ।
ಗುರುನಿರೋಧ ವ್ಯಸನ ಖತಿ ಮ
ತ್ಸರ ಮಮತೆ ಲೋಭಂಗಳೆಂಬಿವ
ತರಳ ನೀನಱಿಯೆ ಯೆಂದನು ತಮ್ಮನನುನೆಱೆ[1] ಜಱಿದು ‖ ೩೩

---

[1] ನೀನದನಱಿಯೆ ಯೆಂದನು ತಮ್ಮನನು, ಕ. ಖ.

ತೊಗಲು ಹರಿದರೆ ಮೈಯ್ಯಲಾನೊಣ
ಹೊಗುವವೊಲು ಬೇಱಾದೊಡಾ ದಾ
ಯಿಗರ ಮನವನು ಕೆಡಿಸುವರು ಕುಹಕಿಗಳು ಭೇದದಲಿ ।
ಬಗೆಯೆ ಬಾಂಧವಸಖ್ಯ ಕೆಡುವುದು
ಮುಗುಧ ಯಿಾಮಾತಿನಿಂದೇನೆನೆ
ಮೊಗದಿಱುಹಿದನು ಸುಪ್ರತೀಕನು ಕೇಳಿದನು ನಯದೆ ॥ ೩೪

ಹುರಿಯ ಬಿಡಿಸಿದೊಡಹುದೆ ಬಲುಹೆದೆ
ಮರುಳ ಪೊಡಹುಟ್ಟಿದವರೊಂದಾ
ಗಿರದೆ ಬೇಱಾಗಿರ್ದೊಡಹುದು ಮಹಾಘಸಂದೋಹ ।
ಗುರುವಿರೋಧ ವ್ಯಸನಖತಿ ಮ
ತ್ಸರ ಮಮತೆ ಲೋಭಂಗಳಂಬಿವ
ತರಳ ನೀನಱಿತಱಿತು ನಡೆ ಕೂಡಿಹುದು ಲೇಸೆಂದ ॥ ೩೫

ಮದಮುಖನೆ ಗಜವಾಗಿ ಬೀಟೆಂ
ದೊದಱಿ ಶಾಪವನಿತ್ತೊಡಾತನು
ಹದುಳ ಹಾಗಹುದೆನುತ [1] ಕೊಟ್ಟನು ಶಾಪವನು ಮಗುಪೆ ।
ಹ್ರದದ ಕಪನಾಚ್ಛಿಗೆನುತಲೊಂ
ದುದರದಲಿ ಜನಿಸಿದವರೀಪರಿ
ಯೆದೆಯ ಕಿಚ್ಚನು ಕಳದುಕೊಂಡರು ಮಗನೆ ಕೇಳಂದ ॥ ೩೬

ಅರ್ಥಲೋಭದಲವರು ವಿಗತ
ಸ್ವಾರ್ಥರೆನಿಸಿದರದುನಿಮಿತ್ತದೆ
ಯರ್ಥಲೋಭವನುೞಿವುದಱಿವುಳ್ಳ ಮಹಾತ್ಮಕರು ।
ಅರ್ಥಿಸುವೊಡೆಲೆ ಮಗನೆ ಕೇಳದ
ನರ್ಥಕೇ ಕಾರಣವದಲ್ಲೈ
ವ್ಯರ್ಥವನು ಮಾಡುವುದು ಬಹಳ ತಪೋವ್ರತವನೆಂದ ॥ ೩೭

1 ನೀನಹುದೆನುತ, ಕ. ಖ.

ಜನಿಸಿದರು ಬಳಿಕವರು ಕೇಳಲೆ
ತನಯು ಘನಗಜಕಚ್ಛಪಾಂಗದ
ಲನುಪಮನೆ ತಾವೊಂದೆಡೆಯಲಾಪೂರ್ವವೈರದಲಿ ।
ವನವ ಹೊಱವಂಟಾಮಹಾಗಜ
ವನಜಕಚ್ಛಪನಿರ್ದ ಮಡುವಿಗೆ
ಕನಲುತೈತಂದಱಸುವುದು ತಾ ಬೃಂಹಣವ ರಚಿಸಿ ॥ ೩೮

ಕೇಳುತವೆ ಗಜಬೃಂಹಣವ ನಾ
ಕೀಳು ಕಚ್ಛಪವಾ ಹ್ರದದಲೋ
ಲಾಳಿಸುತ ಕರಚರಣಹತಿಯಲಿ ಜಲಚರವ್ರಜವ ।
ಬೀಳುಹೊಯಿವುತ ಕಮಲವನು ತಾ
ಕೂಳುಗೈವುತ ಕುಮುದನಿಕರವ
ಕಾಲವನು ಕಾಣಿಸುತ ಹೊಱವಡುತಿಹುದು [1] ತತ್‌ಕ್ಷಣಕೆ ॥ ೩೯

ಮತ್ತಗಜವಾ ಕೂರ್ಮನನು ಕಾ
ಣುತ್ತ ಸೊಂಡಿಲ ಸುತ್ತಿ ದಂತದ
ಲೆತ್ತಿ ಕಾಲಲಿ ತುಳಿದು ಲಾಂಗೂಲಾಗ್ರದಲಿ ಹೊಡೆದು ।
ಮಿತ್ತುವನು ಕಾಣಿಸಲು ನೆರೆಯದೆ
ಕಿತ್ತೊಡದ ಕೋಪದಲಿ ಬಿಡೆ ಹಳ
ಚುತ್ತ ಬೃಂಹಣರವವ ಮಾಡುತ್ತಿಹುದು ಕೇಳೆಂದ ॥ ೪೦

ಗರುಡನು ಕಶ್ಯಪರು ಕೇಳಲು ತನ್ನ ಕಾರ್ಯವನ್ನು ಹೇಳುವಿಕೆ.

ತಿನ್ನು ಹೋಗವನೆರಡ ನಾಕೊ
ಟ್ಟೆನ್ನುವುದು ಮೇಲುಳ್ಳ ಕಾರ್ಯವ
ನಿನ್ನ ಹೇಳ್ವೈ ಬಂದ [2] ಕಾರಣ ತೀವ್ರ ವೇಗದಲಿ ।
ತನ್ನ ಸಿಂಗವೆ ಹೇಳು ನೀನೆನೆ

---

[1] ಹೊಱಡುವುದು, ಕ ಖ. [2] ಬಂದೆಯಿದೇನು, ಕ. ಖ.

ಪನ್ನಗರು ಪೀಯೂಷಕಾಂಕ್ಷೆಯ
ಲೆನ್ನನಟ್ಟಿದರಂಬೆಯನು ಬಿಡಹೇಳಿಸಿದರೆಂದ ॥ ೪೧

ಅಮೃತವನು ತಹೆನಪ್ಪ ನಿಮ್ಮಡಿ
ಮಮತೆಯುಂಟೆಲೆ ತಾಯ ಸೆರೆ ನಿ
ರ್ಗಮಿತವಾಗಲಿ ತಲೆಯಲಿಡು ಕರತಳವ ನೀನೆನಲು ।

ಕಶ್ಯಪರ ಶುಭಾಶಾಸನ.

ಅಮಲಹೃದಯನೆ ಜಯಿಸು ಹೋಗಾ
ಅಮರರನು ಸುಖಿಯಾಗು ಹೋಗೆನು
ತಮರಿದನು ಕರತಳವನಂಗದಲಧಿಕಕರುಣದಲಿ ॥ ೪೨

ರಕ್ಷಿಸಲಿ ನಿನ್ನನು ಧರಾಶ್ರೀ
ರಕ್ಷಕನಿಳಯು[1] ಜಲನಭಂಗಳು
ರಕ್ಷಿಸಲಿ ರವಿಶಶಿತಾರಾಗ್ರಹನಿಕರವೊಲಿದು ।
ರಕ್ಷಿಸಲಿ ಕಮಲಜನು ಮತ್ತಾ
ದಕ್ಷಮುಖವಿಧ್ವಂಸಿ ಗಡ ನೆರೆ
ರಕ್ಷಿಸಲಿ ನಿತ್ಯಾತ್ಮನಾರಾಯಣನ ಕರುಣದಲಿ ॥ ೪೩

ಏಳನೆಯ ಸಂಧಿ ಮುಗಿದುದು.

---

1 ರಕ್ಷಕನಿಳ, ಕ. ಖ.

# ಎಂಟನೆಯ ಸಂಧಿ.

ಸೂಚನೆ.

ಗಂಡುಗಲಿ ಗಜಕಚ್ಛಪಂಗಳ
ಕೊಂಡು ಹಾಯ್ದನು ವಾಲಖಿಲ್ಯರ
ಮಂಡಲವ ಕೈಗಾಯ್ದು ಖಗಪತಿ ಗಂಧಮಾದನಕೆ ॥

ಸರೋವರಕ್ಕೆ ಬಂದ ಗರುಡನಿಗೆ ಗಜಕಚ್ಛಪರ ದರ್ಶನ.

ಕೇಳು ಶೌನಕಮುನಿಪ ಖಗಕುಲ
ಮೌಳಿ ತಾ ನಿಜಜನಕನಂಘ್ರಿಯು
ಬೀಳುಕೊಂಡಭಿನಮಿಸಿ ಹಾಯ್ದನು ತತ್ಸರೋವರಕೆ ।
ಶೈಲರಾಜನ ತೆಱದಿ ಮೆಱೆವಾ
ಕೇಲಿ ಗಜಕಚ್ಛಪರನಾಸುವಿ
ಶಾಲತೆಯನೀಕ್ಷಿಸುತ ಮೆಱೆದನು ಹಸಿವೆನಾಗರುಡ ॥ ೧

ಅವುಗಳನ್ನು ಧರಿಸಿ ಅಂತರಿಕ್ಷಮಾರ್ಗದಿಂ ಅಂಬಾತೀರ್ಥಕ್ಕೆ ಬರುವಿಕೆ.

ಎರಡು ಕೈಯ್ಯಲಿ ನೆಗಹಿ ಕೊಂಡನು
ಕರಿಯುನಾಕಚ್ಛಪನನಂಬರ
ಚರರು ಭಾಪೆನೆ ಬೊಬ್ಬಿಱಿದು ಪುಟನೆಗೆದನಂಬರಕೆ ।
ಹರಹಿದನು ಪಕ್ಕವನು ದೆಸೆಗಳ
ಜಱಿದು ಧಿಕ್ಕರಿಸಿ ಕರೆದ ಸುಪ್ಪ
ಸರಿಸೆ ಪಕ್ಷಪುಟಪ್ರಭೂತೋದ್ದಂಡಪವನನಲಿ ॥ ೨

ಕಾಲುಗುರ ಕೊನೆದಾಗಿನಲಿ ಗಿರಿ
ಸೀಳಿದುದು ಧರೆ ಕುಸಿದುದಾಪಾ
ತಾಳದತ್ತಲು ಕದಡಿದವು ಪದಹತಿಗೆ ಶರಧಿಗಳು ।
ಬೀಳುಕೊಂಡನು ತರಣಿ ತಾರಾ
ಮಾಲೆಗಳ ಕೆದಱಿದನು ಜ್ಯೋತಿಷ
ಡಾಳಿಸಿತು ಜಗದೇಕದೇವರ ವೀರನುರವಣೆಗೆ ॥ ೩

ಎಲ್ಲಿರಿಸಿ ತಾ ತಿಂಬೆನೀಗಜ
ಮಲ್ಲಕಚ್ಛಪಗಳನೆನುತ ಖಗ
ಮಲ್ಲನಂಬರಮಾರ್ಗದಲಿ ಸಾಗರಸಮೀಪದಲಿ ।
ಸಲ್ಲಲಿತತರುಗಳನು ನೋಡು
ತ್ತಲ್ಲಿ ತನಗೀಡೇನಿದೆನುತವೆ
ನಿಲ್ಲದಲಂಬವೆಂಬ ತೀರ್ಥಕೆ ಬಂದನಾಗರುಡ ॥ ೪

ಆಗ ತದ್ವನಾಂತರದಲ್ಲಿರುವ ಒಂದು ದೊಡ್ಡಮರದ ಧ್ವನಿಕೇಳಿ ಬರುವಿಕೆ.

ದೇವವೃಕ್ಷಂಗಳ ಸುಬಹುಪು
ಷ್ಪಾವಳಿಯೆ ಫಲಗಳಲಿ ಧರಣೀ
ದೇವಸಂತುಷ್ಟಿಯನು ಮಾಡುತಲದಱೊಳಸೆದಿರಲು ।
ಈ ವಿಪಿನವತಿರಮ್ಯವಿದಱೊಳು
ಜೀವಭಕ್ಷಣೆ ಗೈವೆನೆನುತವೆ
ಪಾವಕಪ್ರತಿಮಾನನೈತಂದನು ವನಾಂತರಕೆ ॥ ೫

ನಡುಗಿದವು ಫಲನಿಕರವವನಿಗೆ
ಕಡಿದೊಣಗಿದವವೆಂಕುರಂಗಳು
ತುಡಿಕೆಗೊಂಡುದು [1] ಪತ್ರಚಯ ಬಾಡಿದವು ತಳಿರುಗಳು ।
ಕಡುಗಿ ಖಗನೈತರಲು ತರುಗಳು

---

1 ತುಡಿಕೆಗೊಂಡವು, ಕ. ಖ.

ನುಡಿದವೆಲೆ ಪುಣ್ಯಾತ್ಮ ನೀನಡಿ
ಯಿಡದಿರೆಮ್ಮಗೆ ಶಕ್ತಿಯಿನಿತಿಲ್ಲೆಂಪು ತಮತಮಗೆ ॥ ೬

ಕೇಳಿ ಹುಯ್ಯಲನತ್ತಲೇ ಖಗ
ಬೀಳುಕೊಂಡನು ಫಲವುವಿಧತರು
ಶೈಲನಿಕರಂಗಳನು ಕಳಕಳದತ್ತಲಂಬುಧಿಯು ।
ಕೂಲವನಗಳನೀಕ್ಷಿಸುತ ಬರೆ
ಕೇಳಬಂದುದು ಮತ್ತೆ ಹೆಮ್ಮರ
ನಾಲಪಿತವಾವೀರವಿಹಗೇಶ್ವರಗೆ ದೂರದಲಿ ॥ ೭

ಆಮರವು ತನಗೆ ಸ್ವಾಗತವನ್ನು ನುಡಿದು ಪ್ರಾರ್ಥಿಸಲಾಗಿ ಕೂಡುವಿಕೆ.

ತಂದೆ ಬಾರೈ ತನ್ನ ಶಾಖೆಯು
ದೊಂದಿಹುದು ಶತಯೋಜನವು ನೀ
ಬಂದು ಕುಳ್ಳಿಹುದದಱ ಮೇಲೆ ನಿರಾಮಯವು ತನಗೆ ।
ಹಿಂದುಗಳೆಯದಿದನು ಮಹಾಮತಿ
ತಿಂದು ಗಜಕಚ್ಛಪರನಿದಱೊಳು
ಮುಂದೆ ನಡೆ ನಿಜಕಾರ್ಯಸಂಗತಿಗೆಂದುದಾ ವೃಕ್ಷ ॥ ೮

ಧರಿಸಲುಱಿಯಲಿ ಮೇಣ್ ಚರಣ
ಸ್ಪರಶವಾಗಲಿ ಸಾಕು ಘನತರ
ದುರಿತವನು ಪರಿಹರಿಸುವೆನು [1] ತರುಜನ್ಮಸಂಭವದ ।
ಪರಮಪಾವನಮೂರ್ತಿ ಬಾ ಯೆಂ
ದಿರದೆ ಕರೆಯಲು ಕೇಳುತವೆ ಖಗ
ವರನು ತನಗೊಂದಾಶ್ರಯವದಾಯ್ತೆನುತ [2] ನಡೆತಂದ ॥ ೯

ಕಂಡನದಱ ಚ್ಛಾಯೆಯಲಿ ಕೆಳ
ಗೊಂಡು ಸುಖದಲಿ ವಿಶ್ರಮಿಸಿ ನೆಲೆ

1 ಪರಿಹರಿಸುವೆ, ಕ. ಖ. 2 ವಾಯ್ತೆನುತ, ಕ. ಖ.

ಗೊಂಡ ಖಗಮೃಗದೇವಕಿನ್ನರಮರ್ತ್ಯನಿಕರದಲಿ ।
ಅಂಡಜೇಂದ್ರನು ನಗುತ ಗಗನದ
ಮಂಡಲದಿ ನಿೞಿತಂದು ಶಾಖೆಗೆ
ಗಂಡುಗಲಿ ಕುಳ್ಳಿರ್ದನಾಕಾಲೂರಿ ಸಾಂಗದಲಿ ॥ ೧೦

ಆಗ ತಾನು ಕುಳಿತ ಶಾಖೆಯು ಮುಱಿಯಲು ಅದರಲ್ಲಿರುವ ವಾಲಖಿಲ್ಯರನ್ನು ನೋಡಿ ಚಿಂತಿಸುವಿಕೆ.

ಮುಱಿದು ಭೋಂಕೆನಲು ಪ್ರಳಯದ
ಬಱಸಿಡಿಲು ಹೊಡೆದಂತೆ ಚರಣದ
ಸೆಱಗು ಸೋಂಕಲು ಶಾಖೆ ವೀರವಿಹಂಗಮೋತ್ತಮನ ।
ತಿಱುಗಿ ಕಂಡನು ವಾಲಖಿಲ್ಯರು
ತುಱುಗಿ ತಲೆ ಕೆಳಗಾಗಿ ಹೊಸನೇ
ಸಱಿನ ಮಱಿಗಳವೋಲು ಜೋಲುತ್ತಿರಲು ಶಾಖೆಯಲಿ ॥ ೧೧

ಕಿಚ್ಚಿನಲಿ ಬಿದ್ದಂತೆ ಖಗಪತಿ
ಬೆಚ್ಚಿದನು ಬೆದಱಿದನು ಕಾಣುತ
ಸಚ್ಚರಿತರಿವರಾರೊ ಮಾರಿಯುದಾಯ್ತಲಾ ತನಗೆ ।
ಕೊಚ್ಚಿದೆನು ತರುಕೊರಳನೆನುತವೆ
ಹೆಚ್ಚಿ ಹಲುಬುತ ಬೀೞಲೀಸದೆ
ಕಚ್ಚಿಕೊಂಡನು ಶಾಖೆಯನು ತುಂಡಾಗ್ರದಲಿ ಗರುಡ ೧೨

ಅಕ್ಕಟಾ ತರುಶಾಖೆಯ[1] ತಾ ಬ
ಟಿಕ್ಕರಿಸಿದೊಡೆ ಶಾಪವು ತನ್ನ[2]
ಮುಕ್ಕುವದಲಾಪರಮಋಷಿಸಾಮರ್ಥ್ಯದಲ್ಲಿದಱ ।
ಇಕ್ಕೆ ಹಕ್ಕೆಯು ಮಾಡಿ ನೇೞಲಲಿ
ಸೊಕ್ಕಿ ಸುಖದಿಂದಿರ್ದವರ ಕೊಲೆ
ಯುಕ್ಕು ತನಗೆಂದು ಗರುಡನು [3]ಬಿಸುಸುಯ್ದು ಮನದೊಳಗೆ ॥

1 ಶಾಖೆಯನು, ಕ. ಖ. 2 ಶಾಪಾಗ್ನಿ ತನ್ನನು, ಕ. ಖ. 3 ತನಗೆಂದನು, ಖ. ಕ.

ತಪ್ಪಿಸಿದೆನಡಗಿರ್ದವರನೀ
ವಿಪ್ರಕುಲಕಿನ್ನೇನು ಗತಿ ಮತಿ
ತಪ್ಪಿತಾದುದು ಸಾಧಿಸುವರಾರೋ ಶಿವಾ ಯೆನುತ ।

ಏನೂ ತೋರದೆ ಶಾಖೆಯನ್ನು ಕಚ್ಚಿಕೊಂಡು ಅಂತರಿಕ್ಷದಲ್ಲಿ ತಿರುಗುವಿಕೆ.

ಉಪ್ಪರಿಸಿದನು ನಭಕೆ ರವಿರಥ
ತಪ್ಪೆ ಗೆಡೆಯಲು ಪಕ್ಷಪುಟದಲಿ
ಸರ್ಪಕುಲಕಾನನಕುಠಾರನು ಸುರರು ಭಾಪೆನಲು ॥ ೧೪

ಇರಿಸುವೆನು ತಾನೆಲ್ಲಿ ತಾಪಸ
ವರರನಿವರನೆನುತ್ತ ಗಗನೇ
ಚರನು ಚಿಂತಿಸಿ ಸುಯ್ದು ತೊಳಲಿದನಖಿಳದಿಕ್ತಟವ ।
ಗಿರಿಗಳೊಡೆದವು ಜಗಗಳಡಕಿಲು
ಜಱಿದು ಬೀೞಲು ಬಗೆದವೆಮರರ
ಗಿರಿ ಗದೆಯು ಹೊತ್ತಂತೆ ತೊಳಲುತ್ತಿರ್ದನಭ್ರದಲಿ ॥ ೧೫

ಇೞುಹಿದೊಡೆ ಕೋಪಿಸುವದೀ ಮುನಿ
ಕುಲವೆನುತ ಗಜಕಚ್ಛಪಂಗಳ
ಕಳೇವರವನು ಕಯ್ಯನಖಮುಖದಗ್ರದಲಿ [1] ಕೋದು ।
ಪ್ರಳಯಮೇಘವು ಪೈಸರಿಸದಂ
ತಲುಕಲೀಯದೆ ಶಾಖೆಯನು ಖಗ
ಕುಲಶಿರೋಮಣಿ ಕಚ್ಚಿಕೊಂಡೇ ತಿೞುಗಿದನು ಧರೆಯ ॥ ೧೬

ಆಗ ಸುರಮುನಿಗಳ ಸ್ತುತಿಯನಂಗೀಕರಿಸಿ ಗಂಧಮಾದನಕ್ಕೆ ಬರುವಿಕೆ.

ಭಾಪು ಭುವನಾಲಂಘ್ಯವಿಕ್ರಮ
ಭಾಪು ದುಸ್ಸಹಬಲಪರಾಕ್ರಮ

---

1 ನಖಮುಖಾಗ್ರದಲಿ ಕೊಯ್ದು, ಕ. ಖ.

ಭಾಪು ಪೃಥ್ವಿದೀಪ ಭದ್ರಾಪಚಿತಿಚಿತತೋಷ ।
ಭಾಪು ವಿಹಗಾಕಾರ ವಿಶ್ವಕ
ಳಾಪ ಜಯ ಜಯ ಜಯತು ಭಳಿರೇ
ಭಾಪೆನುತ ಹೊಗಳುತ್ತಲಿರ್ದುದು [1] ಸಕಲಮುನಿನಿಕರ ॥ ೧೭

ತರುಗಳನು ಮುಱಿಯುತ್ತ ಗಿರಿಗಳ
ಶಿರಗಳನು ಕೆಡವುತ್ತ ಗಗನೇ
ಚರರ ಗತಿಗೆಡಿಸುತ್ತ ರವಿಮಂಡಲವನಲೆಯುತ್ತ ।
ಇರದೆ ಭುವನಾವಳಿಗಳನು ಮಂ
ದರದ ವೋಲು ಮಥಿಸುತ ಬಂದನು
ಗರುಡದೇವನು ಗಗನಗತಿಯಲಿ ಗಂಧಮಾದನಕೆ ॥ ೧೮

ಕಶ್ಯಪರು ಅದಂ ಕಂಡು ಶಾಖೆಯಂ ಬಿಡಬೇಡವೆಂದು ಹೇಳುವಿಕೆ.

ಕಂಡನಾಗಿರಿವಿಪಿನದಲಿ ಮಾ
ರ್ತಾಂಡಮಂಡಲದಂತೆ ಬೆಳಗುವ
ಖಂಡತೇಜೋನಿಧಿಯ ನಾಕಶ್ಯಪಮಹಾಮುನಿಯ ।
ಕಂಡನೀತನನಾತನಂತದ
ದಂಡಧರನಂತಿರೆ ಕರಿಕಮಠ
ತುಂಡನಖಮುಖದೀಪ್ತದಿವ್ಯಶರೀರಯನು ಮುನಿಪ ॥ ೧೯

ಏನಿದೇನೈ ತಂದೆ ಮಾಡಿದೆ
ಯೇನನಕಟಕಟಾಯ್ತುಲಾ ಕಡು
ಹಾನಿ ಹರಹರ ಮಗನೆ ಕುಲಸಂಕ್ಷಯವ ತಂದುದಲ ।
ಭಾನುಸನ್ನಿಭಋಷಿಗಳ ಸ್ಥಿತಿ
ಗೇನು ಕಂಡೆ ಮಹಾತ್ಮ ಬಿಡದಿರು
ಮಾನಸಿಥ ಸುಯಿಧಾನದಲಿ ಶಾಖೆಯನು ಹಿಡಿಯೆಂದ ॥ ೨೦

[1] ಹೊಗಳುತ್ತಿರ್ದರು, ಕ. ಖ.

ಬಿಟ್ಟೊಡುರುಹುವರಿವರು ನಿನ್ನನು
ಸೃಷ್ಟಿವೃತಿಯದು ಮಗನೆ ಕೋಪಿಸಿ
ದೃಷ್ಟಿಯಲಿ ನೋಡಿದರೆ ಕಮಲಜರುದ್ರರೆಂಬವರು ।
ಕೆಟ್ಟರದಱಿಂ ಬಿಡದಿರೆಲೆ ಜಗ
ಜಟ್ಟಿವೀರನೆ ನಿಲ್ಲು ನಿಲ್ಲೆನು
ತುಟ್ಟಿಯುಪ [1] ಸಂಹರಿಸುತಿದ್ದನು ನೋಡಿ ಋಷಿಕುಲವ ॥ ೭೧

### ಬಾಲನ ಅಪರಾಧವನ್ನು ಕ್ಷಮಿಸಿ ರಕ್ಷಿಸಬೇಕೆಂದು ಕಶ್ಯಪರ ಪ್ರಾರ್ಥನೆ

ಮುಗಿದ ಕೈಯಲಿ ನಿಂದು ಮುನಿಪತಿ
ಮಗನ ಜೀವವ ಕಾಯಲೋಸುಗ
ಜಗದಧೀಶಾರಾಧಿತಾಂಘ್ರಿಗಳಿಂಗೆ ತಲೆವಾಗಿ ।
ಬಗೆಯಲಾಗದು ತಂದೆತಾಯ್ಗಳು
ಮಿಗೆಯೆ ಬಾಲಕೃತಾಪರಾಧವ
ಮುಗುಧನನು ಕೈಗಾಯ್ವುದೊಪಿನಲೆಂದನಾಮುನಿಪ ॥ ೭೨

ದೇವ ದೀನರನಾದರಿಸರೆಲೆ
ದೇವ ದೀನದಯಾಪರರಿರಾ
ಸೇವಕನ ಗುಣದೋಷವ ನೀವು ಕಾಯಬೇಕೆನುತ ।
ಭಾವಿಸಲಿ ನಿಮ್ಮಂಘ್ರಿಗಳಿಗೆ ಸು
ಭಾವನೆಯನಾಚರಿಸಿ ಬದುಕುವ
ದೇವ ದೀನಗೆ ದಯವ ಮಾಳ್ಪುದು ತಂದೆಗಳಿರೆಂದ ॥ ೭೩

ತಾಯ ಸೆಱೆಯನು ಬಿಡಿಸಲೋಸುಗ
ದಾಯಿಗರ ಮಾತಿನಲಿ ಬಂದನು
ಪೇಯವಹ ಪೀಯೂಷವನು ತಹಮನದ ಕಡುಹಿನಲಿ ।
ಕಾಯಬೇಹುದು ಸಕಲಜೀವನಿ

---

[1] ನಿಲ್ಲೆನು ತಟ್ಟಿದನು, ಕ, ಖ.

ಕಾಯಸಹಿತವ್ರತಿಗಳಿರೆನುತ[1] ಮ
ಹಾಯಶೋನಿಧಿ ಬೇಡಿಕೊಂಡನು ಬಹಳ ಮುನಿಕುಲವ ‖ ೨೪

ಆಗ ಅವರು ಅಭಯವಂ ಕೊಡುವಿಕೆ.

ಎಂದೊಡವನಾಲಿಸುತ ಮುನಿಕುಲ
ಕಂದೆಱೆದು ಕೈನೆಗಹಿ ಭಯಬೇ
ಡೆಂದು ಕಾರುಣ್ಯದಲವರು ಶಾಖಾಗ್ರದಿಂದಿೞಿದು ।
ಮಂದಿರವ ಮಾಡಿದರು ಹಿಮಗಿರಿ
ಕಂದರವನತ್ತಲು ಖಗಾಧಿಪ
ನೊಂದು ಮೃತ್ಯುವ ಗೆಲಿದೆನೆಂದನು ತನ್ನ ಮನದೊಳಗೆ ‖ ೨೫

ಕಶ್ಯಪರಿಂದ ಶಾಖೆಯನ್ನು ಬಿಡುವ ಸ್ಥಳವನ್ನು ತಿಳಿಯುವಿಕೆ.

ಬಿಡುವೆನೀಶಾಖೆಯನು ತಾನಾ
ವೆಡೆಯಲಿದಿರೊಳು ಬಿಡಲು ವಿಪ್ರರು
ಮಡಿವರೆನುತಾಬಾಲ ಶಾಖೆಯನೊಯ್ಯನೋಸರಿಸಿ ।
ನುಡಿದನಾವೆಡೆ ಕೊಂಬನಿಡುಕುವೆ
ನಡೆಯ ಹೇಳೆನೆ ಮಗನ ಮಾತನು
ಕಡುಕರುಣಿ ಕೇಳುತ್ತ ಮಗುಳಿಂತೆಂದನೊಲವಿನಲಿ ‖ ೨೬

ಪ್ರಾಣಬಾಧೆಗಳಾಗದೆಡೆಯನು
ಕಾಣೆ ನಾನೆಲೆ ಮಗನೆ ತುಹಿನ
ಕ್ಷೋಣಿಧರದಿಂದಾಚೆಯಲಿ ಹಿಮಸುರಿವ ಬಾಧೆಯಲಿ ।
ಪ್ರಾಣಿಮಾತ್ರವನುಳುಹ ಗಿರಿತಟ
ಕೂಣೆಗನೆ ಹೋಗಲರಿದು ವಂಶ
ಕ್ಷೋಣಿವೇತ್ರಪರೀತವದು ತಾವೆಹುದು ಕೇಳೆಂದ ‖ ೨೭

1 ಸಹಿತ ವರ್ತಿಗಳೆನುತ, ಖ, ಕ.

ಆಪ್ರಕಾರ ಹಿಮಗಿರಿಯ ಪಾರ್ಶ್ವದ ಗಿರಿಯಲ್ಲಿ ಶಾಖೆಯಂ ಬಿಸುಟು
ಗಜಕಚ್ಛಪಂಗಳನ್ನು ಭಕ್ಷಿಸುವಿಕೆ.

ತಿನ್ನು ನೀನದಱೊಳಗೆ ಹಿಡಿದುದ
ನೆನ್ನರಸ ಹೋಗೆನಲು ಕಶ್ಯಪ
ನುನ್ನತಾಂಘ್ರಿಗೆ ನಮಿಸಿ ನೀ ಗತಿಯೆನುತ ಬೀಳ್ಕೊಂಡ ।
ಹೊನ್ನಬಣ್ಣದ ಶಾಖೆ ಕಚ್ಛಪ
ಮನ್ನಣೆಯ ಗಜ ಸಹಿತ ಹಾಯ್ದನು
ದುನ್ನಿರೀಕ್ಷಣವೆನಿಪ ಗಿರಿಗೆ ಮನೋನುರಾಗದಲಿ ॥ ೨೮

ಗಂಡುಗಲಿ ಗಗನಾಂಗಣಕೆ ಬ್ರ
ಹ್ಮಾಂಡ ಗಱಿ ಹೊತ್ತಂತೆ ಹಾಯ್ದು
ದ್ದಂಡಪಕ್ಷಪುಟಪ್ರಹರದೆತಪನನ [1] ರಥವೊಡೆಯೆ ।
ಚಂಡವಿಕ್ರಮ ನೈದಿದನು ಕಡಿ
ಖಂಡವನು ಮಾಡುತ್ತ ತರುಗಳ
ತಂಡವನು ಸುಕ್ಷಿಪ್ರ [2] ಹಿಮಗಿರಿಪಾರ್ಶ್ವದಾಗಿರಿಗೆ ॥ ೨೯

ಬಿಸುಟನದಱೊಳು ಶಾಖೆಯನು ಧರೆ
ಕುಸಿಯೆ ಹೆಮ್ಮರದ ಕೋಟೆ ಪುಡಿಯೆ
ಮಸಗಿ ಬಱಸಿಡಿಲೆಱಗಿದಂತಾಯ್ತು ಮಹಾರಭಸ ।
ಬಸುಱ ಬಿಚ್ಚಿದನೆರಡಱಂಗದ
ಬಿಸಿರಕುತ ವನದೊಳಗೆ ಕಡಲಿಡೆ
ಮುಸುಡನೂಱಿದನಾ ಮಹಾಗಜಕಚ್ಛಪಂಗಳಿಗೆ ॥ ೩೦

ಹಳ್ಳಿಸಿದನಂಗವನು ರಕುತದ
ಹಳ್ಳವನು ಸೇದಿದನು ಬಾಯ್ದೆಱೆ
ದಳ್ಳಿ ಹಿಗ್ಗಲು ಮಾಂಸರಾಶಿಯನಗಿದನದ ಬಗಿದು ।

---

[1] ಪ್ರಹರದಲಿನನ, ಕ. ಖ. [2] ತಂಡವನು ಕ್ಷಿಪ್ರದೆ, ಕ. ಖ.

ಬಲ್ಲಹನು ತೇಗಿದನು ತಾನದ
ನೆಲ್ಲನಿತು ಹೊಱಗುೞಿಯದಂತಿರೆ
ಯೆಲ್ಲವನು ಜಠರೀಕರಿಸಿ ನಸು ಮಲಗಿದನು ಗರುಡ ॥ ೨೧

ಆಹಾರದಿಂದ ಕರ್ತವ್ಯಕಾರ್ಯದಲ್ಲಿ ಉತ್ಸಾಹಪಡುವಿಕೆ.

ತಂದೆನಾಗಳ್ ಸುಧೆಯುನಮರರ
ವೃಂದವನು ತಾ ಗೆಲಿದೆನಿನ್ನೇ
ನಿಂದುಧರನಡ್ಡೈಸಿದರೆ ಬಿಡುವೆನೆ ಜಗತ್ತ್ರಯವ ।
ಬಂದು ನಿಮಿಷದೊಳರಸುವೆನು ಘಡ
ಮಂದರ ಮಲವ್ರದೆ ಝುಷಾವಳಿಗೆ
ಯೆಂದೆನುತ ದಾಟವನು ಬಹಳಮನೋರಥಾಂಬುಧಿಯು ॥ ೨೨

ಗೆಲಿದೆನೆಂದುಪರಿಶ್ರಮವನೊಡ
ಲೊಳಗಣುರಿಯನು ನಂದಿಸಿದೆನೆಂ
ದೊಲಿದು ತನುವನು ಹೊಳ್ಳಿಸಿದನನುಭವಿಸಿದಾಯುಸವ ।
ಹಲವುಮಾತೇಕಾ ಮಹಾಮುನಿ
ಕುಲದ ಕೋಪಾಗ್ನಿಯಲಿ ತಪ್ಪಿಸಿ
ಸಲಹಿದನು ಪಿತನನುತ ಹೊಂಪುಳಿಯಾದನಾ ಗರುಡ ॥ ೨೩

ಫಲಕಥನ.

ಇದು ಸಕಲಲೋಕೈಕಪಾವನ
ವಿದು ಸಕಲಪುರುಷಾರ್ಥಸಾಧನ
ವಿದು ಸದಾಯುಃಕೀರ್ತಿಬಲವಿಕ್ರಮವಿವರ್ಧನವು ।
ಇದನೊಲಿದು ಕೀರ್ತಿಸುವ ಕೇಳುವ
ಸದುಹೃದಯರನು ರಕ್ಷಿಸುವನಾ
ಪದುಮದೃಶ ನಿತ್ಯಾತ್ಮನೀವನಭೀಷ್ಟಸಂಪದವ ॥ ೨೪

ಎಂಟನೆಯ ಸಂಧಿ ಮುಗಿದುದು.

## ಒಂಬತ್ತನೆಯ ಸಂಧಿ.

### ಸೂಚನೆ.

ರಾಯ ಮುನಿಕುಲಮಂಡನನು ರಿಪು
ರಾಯಖಂಡನನಮೃತವನು ಸುರ
ರಾಯ ರಾಯರ ಸದೆದು ಕೊಂಡನಖಂಡಬಲವನಧಿ ||

ಅಮೃತಾಹರಣಾರ್ಥವಾಗಿ ಗರುಡನು ಹಾರುವಿಕೆ.

ಕೇಳು ಶೌನಕ ಗರುಡನಾವರ
ಶೈಲದಲಿ ಗಜಕಚ್ಛಪಂಗಳ
ಮೂಲಶಾಪಪ್ರಾಪ್ತಜನ್ಮವನದನು [1] ಪರಿಹರಿಸಿ |
ಬೀಳುಕೊಟ್ಟನು ಸದ್ಗತಿಗೆ ಸುರ
ಪಾಲಲೋಕವನೆಯ್ದಲೆಂದು
ಬ್ಬಾಳತನದಲಿ ಹೊಯ್ದು ಬೊಬ್ಬಿಱಿವಭ್ರಮಂಡಲಕೆ || ೧

ಆಗ ಸುರಲೋಕದಲ್ಲಿ ಚಿಂತಾಕರವಾದ ಅಪಶಕುನಗಳು.

ಬರುತಿರಲು ಸುರಲೋಕದಲಿ ಮೋ
ಹರಿಸಿದುದಪಶಕುನವು ದಿಕ್ಪಾ
ಲರ ಮಹಾಮಂದಿರಗಳಲಿ ಸುರಪತಿಯ ಸದನದಲಿ
ಬಿರಿದುದಿಳೆ ಶಸ್ತ್ರಾಸ್ತ್ರನಿಕರದ
ಉರಿ ನೆಗೆದುದೆಡದಲ್ಲಿ ಗಾತ್ರ
ಸ್ಫುರಣವಾದುದು ಕಾದುವಾನಾಕಾಸಿಧಾರೆಗಳು || ೨

---

[1] ಜನ್ಮವದನು, ಕ. ಖ.

ಹಳಚಿದವು ದಿವ್ಯಾಸ್ತ್ರತತಿ ತ
ವ್ಮೊಳಗವಾವರುಣಯಮಪವನ
ಜ್ವಲನಧನದೇಶಾನಸುರಪಮರುದಶ್ವಿಗಣದ ।
ಜ್ವಲಿತಬಹಳಜ್ವಾಲೆಯಲಿ ದಿ
ಗ್ವಳಯಧೂಮೋದ್ಧತಘನಮಂ
ಡಲಸಮಾಹೃತವಾಯ್ತಲಾ ನಿಮಿಷಾರ್ಧಮಾತ್ರದಲಿ ॥ ೩

ಬಣಗಿದವು ತಾರಕೆಗಳುದಕದ
ಡೊಣೆಗಳಾರಿದವರಿಕದಂಬರ
ಮಣಿಗೆ ಮೈಲಿಗೆಯಾಯ್ತು ಬಿದ್ದುದು ಪೀಠವವನಿಯಲಿ ।
ಮಣಿಮಕುಟ ಜಾಱಿದುದು ತನು ಭೂ
ಷಣಗಳುಡುಗಿದುವಾರಿ ತೀರದ
ತೃಣಗಳೂಣಗಿದವೇನನೆಂಬೆನು ಸುರರ ದುಸ್ಸ್ಥಿತಿಯ ॥ ೪

ನೆತ್ತರಿನ ಮಳೆಗಱೆದುದಂಬರ
ಮತ್ತೆ ಮೇಘವ ಕಾಣದಗಲಕೆ
ಕೆತ್ತುದಂಧತಮಿಸ್ರವಿದಿಕ್ಕೈಯಲಿ ಸುರರೊಡಲ ।
ಹೊತ್ತಿದುದು ದೆಸೆದೆಸೆಗೆ ಮೊಱೆದುದು
ಮೊತ್ತದುಲ್ಕಾಪಾತವದಿತಿಯ
ಚಿತ್ತಚಂಚಲವಾಯ್ತು ಕಂಡನು ಶಕ್ರನಾಹದನ ॥ ೫

ಇಂದ್ರನು ಬೃಹಸ್ಪತ್ಯಾಚಾರ್ಯರಂ ಕರೆಸಿ ಯೋಚಿಸುವಿಕೆ.

ನಡುಸದನದೇನೇನು ಕಾರಣ
ಗಡಣದವಶಕುನಂಗಳಾರಿಗೆ
ತೊಡಕಹುದೊ ಕಲ್ಪಾಂತಕಾಲಪ್ರಳಯದಂತಿದೆಲ ।
ಕಡುಗಿ ಕಾದುವರಿಲ್ಲ ದೈತ್ಯರ
ನುಡಿಯನಱಿಯೆನೆನುತ್ತ ಸುರಸಭೆ
ಯೊಡನೆ ಬರಲೈತಂದು ಬೆಸಗೊಂಡನು ಬೃಹಸ್ಪತಿಯ ॥ ೬

ಏನಿದೇನೈ ತಂದೆ ಬಂದುದು
ಹಾನಿ ಯಾರಿಗೆ ನಿಮ್ಮಡಿಗಳಿದ
ನೇನ ಕಾಣಿರೆ ಕಡುಗುವುತ್ಪಾತಂಗಳುರವಣೆಯು ।
ಏನು ಕಾರಣ ವಿದಕೆ ಕಾಣೆನು
ದಾನವರದಾಹವಕೆ ಬಾಹರಿ
ದೇನೆನಲು ಮನದೊಳಗೆ ನಿಶ್ಚಯಿಸುತ್ತ ಗುರು ನುಡಿದ ॥ ೭

ಅಱಿತೆನಾನೆಲೆ ಮಗನೆ ಹಾನಿಯು
ಹೊರಿಗೆ ನಿಮ್ಮಲಿ ನೀನು ಮಾಡಿದ
ದುರಿತಫಲವಿದು ವಾಲಖಿಲ್ಯಮಹಾಮುನೀಶ್ವರರ ।
ಅಱಿಯದಂದಾಕ್ರಮಿಸಿದಘವಿದು
ಬಱಿದೆ ಹೋಹುದೆ ಕಂದ ಬಂದುದು
ಬಱಿಯ ಮಾತೇಕಟಿವು ನಿಮಗೆಂದನು ಸುರಾಚಾರ್ಯ ॥ ೮

ತನುಜ ಕೇಳಾ ಕಶ್ಯಪನ ವರ
ತನಯ ತಾ ಬಂದಿರ್ಪನು [1] ಗರುಡ
ನು ನವಮಹಾಬಲವೀರಮಹಾಗುಣಸಮನ್ವಿತನು [2] ।
ದನುಜಮನುಜಭುಜಂಗವೀರರ
ನೆನೆಯುನಱಿ ಯಾಹವದ ಕೊಂಡೊ
ಯ್ವನು ಮಹಾಮೃತಭಾಂಡವನು ಸಂದೇಹವಿಲ್ಲೆಂದ ॥ ೯

ಪರಿಹರಿಸುವೊಡೆ ಭಾಳನೇತ್ರಂ
ಗರಿದು ಜನನಿಯು ಸೆಱೆಯ ಬಿಡಿಸಲು
ನಿರುತ ಮಾಡಿದ ಭಾಷೆ ತಹೆನಮೃತವನು ತಾನೆಂದು ।
ಉರಗಪತಿಗಳನದಟಿನಲಿ ಗೆ
ಲ್ದರೆ ಪರಾಕ್ರಮವಲ್ಲ ತಾನದ
ಭರಿತವಾಗಿಯೆ ಮಾಡುವನು ಗೆಲೆ ಮಗನೆ ಹೋಗೆಂದ ॥ ೧೦

---

1 ಬಂದಿಹನು, ಕ. ಖ. 2 ವಿಕ್ರಮಗುಣಮಹಾನ್ವಿತನು, ಕ. ಖ.

ಗರುಡನು ಅಜೇಯನೆಂದು ತಿಳಿದು ದಿಕ್ಪಾಲರನ್ನು ಬೆಸಸುವಿಕೆ.

ಎನೆ ಹಸಾದ ಭವತ್ಕೃಪಾಲೋ
ಕನಬಲವುಂಟೆನಗೆ ಗರುಡಗಿರು
ಡನನು ತಾ ಕಾಣೆನು ಫಡಫಡ ಯೆನುತ್ತ ಬೀಪ್ಕೊಂಡು ।
ಅನಿಲ ಯಮ ನೈಋತ್ಯ ವರುಣನು
ಧನಪವಾಯುಮಹೇಶರೆಂಬವ
ರನು ಕರೆದು ಬೆಸಸಿದನು ದೆಸೆದೆಸೆಗಿರದೆ ದಿಗಧಿಪರ ॥ ೧೧

ಬೆಸಸಿದನು ಬಲವೀರ್ಯಯುಕ್ತರ
ವಸುಗಳನು ರುದ್ರರನು ಸೂರ್ಯರ
ನಸಮಬಲವಿಕ್ರಮರ ವೀರಮರುತರನಶ್ವಿಗಳ ।
ಹೆಸರ ವಿವರವನಾಮರುದ್ಗಣ
ವಿಸರವನು ಮುಂಕೊಂಡು ಘನಪಾ
ರುಷಪರಾಕ್ರಮಯುಕ್ತರನು ವಿಶ್ವಾಮರೋತ್ತಮರ ॥ ೧೮

ಬಲ್ಲಿದನು ಗಡ ಗರುಡನೆಂಬವ
ನೆಲ್ಲರಿಗೆ ಬಲವೀರ್ಯವಿತರಣ
ವುಳ್ಳವನು ಗಡ ಗೆಲಿದು ನಮ್ಮನು ವಿಹಗನಮೃತವನು ।
ಕೊಳ್ಳದಿರನೇಳದವ [1] ಮಾಡದೆ
ಕಳ್ಳನಯ್ತುರುವೆಲ್ಲವನು [2] ಕೈ
ಕೊಳ್ಳಿ ಹೊಗಲೀಸದೆ ಮಹಾಮೃತವಂದಿರವನೆಂದ ॥ ೧೨

ಹೊಕ್ಕು ಹೊಱವಡುವಾತನಾರಿದ
ನೆಕ್ಕತುಳದಲಿ ದೈತ್ಯದಾನವ
ರೊಕ್ಕಲಿಸುವರು ಪಡೆಯಲಮೃತವನಾಹವಾಗ್ರದಲಿ ।
ಲೆಕ್ಕಿಸುವರೇ ವಿಹಗಗಿಹಗನ
ವಿಕ್ಕಡಿಯ ಮಾಡುವೆನು ವಜ್ರದ
ಲಿಕ್ಕಿ ನೀವಿದಕಂಜಬೇಡಾನಿಹೆನು ಹೋಗೆಂದ ॥ ೧೪

1 ನೇಳಿಲವ, ಕ.　　2 ನೈತರನೆಲ್ಲವನು, ಕ. ಖ.

ಮಸೆಸು ಮಸೆಸಾಯುಧವನಸ್ತ್ರ
ಪ್ರಸರಗಳ ಬೀಯ್ಯಗವ ತೆಗೆಸಾ
ಯಸವಮುಸಲಮುಸುಂಡಿಮುದ್ಗರತೋಮರಂಗಳನು ।
ಎಸೆವ ಶೂಲಕೃಪಾಣಪಟ್ಟಿಶ
ವಿಸರವನು ದಿವ್ಯಾಸ್ತ್ರಧಾರಾ
ಪ್ರಸರವನು ಪರಿಭಾವಿಸೆಂದನು ಸಾರಥಿಗೆ ಶಕ್ರ ॥ ೧೫

ಮಾಡಿ ಸುವಿಧಾನವನು ಸುಧೆಯನು
ಕೂಡೆ ಕಾದಿಹುದಸ್ತ್ರಶಸ್ತ್ರದ
ಗೂಡುಬಲೆಗಳ ನೋಡಿ ಸಬಳಕಠಾರಿಕಕ್ಕಡಿಯ ।
ಮೂಡಿಗೆಯ ತಲೆಮೊನೆಯ ನೀಡಿ ವಿ
ಭಾಡಿಸಹಿತನ ಶಿರವನೆಸಕಲಿ
ಮಾಡಿ ಕೆಲಬಲವಾಗಿ ತೊಲಗಿಸಿ ಯೆಂದನಾ ಯೆಂದ್ರ ॥ ೧೬

ಯುದ್ಧಕ್ಕೋಸ್ಕರ ಸನ್ನದ್ಧರಾಗುವಿಕೆ.

ಎಂದು ಕಾಹನು ಹೇಳಿ ತಾನೇ
ನಿಂದ ಸುರರಲಿ [1] ತುಡುಕಿ ವಜ್ರವ
ನಿಂದ್ರನಮರರು ಭಾಪೆನಲು ಮಂಡಿಸಿ ಮದೇಭದಲಿ ।
ವಂದಿಗಳ ಮಾಗಧರ ಕಳಕಳ
ವಂದವಡೆದ ಮಹಾಮೃದಂಗದ
ದುಂದುಭಿಯ ಕಹಳೆಗಳ ರವವಾವರಿಸೆ ದಿಕ್ತಟವ ॥ ೧೭

ಆಗ ಗರುಡಾಗಮನವನ್ನು ನಿರೀಕ್ಷಿಸುತ್ತಿರಲು ಗರುಡನ ಬರುವಿಕೆ.

ಬಂದೊಡಹುದಾಹವಕೆ ಖಗಪತಿ
ನಿಂದನಾದೊಡೆ ಬಲ್ಲಿದನು ಗಡ
ಚಂದ್ರಮೌಳಿವಿರಿಂಚಿವಿಷ್ಣುಗಳೆಂಬವರು ಮೋಣ್ಮೇ ।

---

1 ನಿಂದ ದಿವಿಜರಲಿ, ಕ. ಖ.

ಣ್ಬಂದು [1] ನೋಡಲಿ ಬರಲಿ ಶಿಖಿಯನು
ಕಂದೆಖೆದು ಹೋಗುವದೆ ಶಲಭವ
ದೆಂದೆನುತ ಗರ್ಜಿಸುತಲಿರ್ದುದು ಕೂಡೆ ಸುರನಿವಹ ‖ ೧೮

ಮಿತ್ತುವಿಗೆ ಹೊಗಲರಿದು ಹೊಗುವೊಡೆ
ಯೆತ್ತಣದು ತಾ ವಿಹಗನರಗಿನ
ಪುತ್ತಳಿಯು ಪರಿಭವಿಸಲಳವೇ ಪಾವಕನ ಹೊಳಲ ।
ಮತ್ತೆ ನೋಡುವವೈ ಸಲೆ ಯೆನು
ತ್ತಿತ್ತ ಕೆಂಪೊತ್ತಿದುದು ನಭವನು
ಕೆತ್ತವೊಲು ತಾ ಕಾಣಬಂದುದು ಖಗನ ತನುಕಾಂತಿ ‖ ೧೯

ಬೀಸಿದುದು ಬಿಖುಗಾಳಿ ತೆಗೆದಾ
ಕಾಶಚಾರಿಗಳೊಡಲಿನುರಿಯುರ
ಗಾಶನನ ಪಕ್ಷಪ್ರಭೂತೋದ್ದಂಡಪವನನಲಿ ‖
ಸೂಸಿದುದು ಕೆಂದೂಳಿ ದೆಸೆಗಳ
ವೊಸಿದುದು ಸುರರೆದೆಯ ಧೈರ್ಯವ
ಕೀಸಿದುದು ತಡವಿಡುತ ಕಂಡುದು ಖಗಪತಿಯ ಬರವ ‖ ೨೦

ಮಂದರದ ಮಹಗಿರಿಗೆ ಗಖಿಗಳು
ಬಂದವೊಲು ಕೃತಪೂರ್ವಕಾಲದ
ಲಿಂದ್ರನುಖಿ ಧಾಳಿಯಿಟ್ಟನೊ ಶೈಲಗಳ ರಾಜಿಗೆನೆ ।
ಬಂದನಮರಾವತಿಗೆ ವಿನತಾ
ನಂದನನು ನತಜನರ ಹೃದಯಾ
ನಂದನನು ರಿಪುಕುಲಭಯಂಕರಮೂರ್ತಿಯುರವಣಿಸಿ ‖ ೨೧

ಇಂದ್ರನ ಬರುವಿಕೆ.

ರೂಢಿಗತಿಯಾಯ್ತಮರರಿಗೆ ನೆಖಿ
ಗಾಢವಿಕ್ರಮದಾರುಬಟಗಳ

1 ವೇಣ ಬಂದು, ಕ. ಖ.

ಪ್ರೌಢಿಮನು ನೋಡಿ ತೊಳತೊಳಗುವಲೋಕಪಾಲಕರ ।
ಗಾಢವಾಯ್ತಿನ್ನೇನು ನಿಮ್ಮನಿ
ರೂಢಿಯಿದು ತೆಗೆ ಮತ್ತೆ ಹಸ್ತಾ
ರೂಢನಿವನಾರೆನುತ ಬಂದನು ಹೊಱಗೆ ಸುರಪತಿಯು ॥ ೨೨

ಇಂದ್ರನ ಸ್ಪರ್ಧಾವಚನವು, ಉಭಯರ ಪರಾಕ್ರಮವು.

ಕಂಡನೀತನನಾತನೇನೈ
ಚಂಡವಿಕ್ರಮ ಬಂದೆ ಸುಧೆಯನು
ಕೊಂಡು ಹೋಹಭಿಲಾಷೆಯಲಿ ಕೈಯೆದೆಯಲಿರಿಸಿದೆಲ ।
ಪುಂಡರೀಕಾಸನನ ಸೃಷ್ಟಿಗೆ
ಗಂಡುಗಲಿ ನೀನೊಡೆಯನೊಬ್ಬನೆ
ಕೊಂಡು ಹೋಗಾ ಪಡೆ ನಿರೀಕ್ಷಿಸು ನಿಲ್ಲು ನೀನೆಂದ ॥ ೨೩

ನಿಂದನಿದೆ ಕೊಳ್ಳೆನುತ ಬಾಣದ
ವೃಂದವನು ಸೈಗಱೆದನಂದು ಪು
ರಂದರನು ಸಂಪೂರ್ಣಕೋಪಾಟೋಪದಲಿ ಜಱೆದು ।
ಮುಂದು ಗೆಡಿಸಿದನಕಟಕಟ ತಾ
ನಿಂದ್ರನಲ್ಲಾ ಯೆನುತ ಬಹ ಶರ
ವೃಂದವನು ತೂಱಿದನು ಪಕ್ಷಪುಟಾಗ್ರದಲಿ ಗರುಡ ॥ ೨೪

ತೋಱು ತೋಱಿನ್ನೊಮ್ಮೆ ತೋಱೆನು
ತೇಱಿಸಿದ ರೋಷದಲಿ ಕಡು ಕಾ
ಹೇಱಿ ಕಂಗಳನಮರಪತಿ ದಿವ್ಯಾಸ್ತ್ರಸಂತತಿಯ ।
ತೋಱಿದನು ಖಗಪತಿಗೆ ಬಲು ಬಿಲು
ಕಾಱನಹೆಯೋ ಯೆನುತ ಗಗನಕೆ
ಹಾಱಿಸಿದನಿನಿತುವನು ಬಾಯಲಿ ಕಚ್ಚಿ ಮುಱಿಮುಱಿದು ॥ ೨೫

ಘಡ ತೊಲಗು ತೊಲಗಸ್ತ್ರಶಸ್ತ್ರದ
ತೊಡಕು ತನಗೇಕೆ ತೆಗೆ ತೆಗೆಯೆನು

ತಡಸಿ ಪಕ್ಷಾಗ್ರದಲಿ ಬೀಸಿದನು ಸಲೆ ಸುರಪತಿಯ ॥
ಕೆಡಹಿ ಪ್ರಾಕಾರವನು ಬಾಗಿಲ
ನೊಡೆದು ಪೊಕ್ಕನು ಲೋಕಪಾಲರ
ನೊಡೆತುಱಿದು ಕಲಕಿದನು ವೊಂದೇನಿಮಿಷಮಾತ್ರದಲಿ ॥ ೨೬

ಹೊಕ್ಕನೋ ಖಗನಕಟದಟರನು
ಮಿಕ್ಕನೋ ಕೈಕೊಳ್ಳು ಕೊಳ್ಳನು
ತೆಕ್ಕಟಗನನು ಬೀೞುಹೊಯ್ಸುಬಳದಲಿ ಹೊಯ್ಯೆನುತ ।
ಕಕ್ಕಡೆಯೆ ಕಡಿ ತಲೆಯ ಸಬಳದ
ಚಕ್ರಮುಸಲಮುಸುಂಡಿಮುದ್ಗರ
ದುಕ್ಕುಹಿಡಿಗಳ ಗಡಣದಲಿ ಮುಸುಕಿದುದು ಸುರನಿಕರ ॥ ೨೭

ಕೈದುವಿನ ಮಳೆಗಳನು ಪಕ್ಷದ
ಲೈದೆ ಹೊೞಬೀಸಿದನು ನಖದಲಿ
ಕೊಯ್ದು ಬೀಸಾಡಿದನು ಗಜರಥತುರಗಪಙ್ಕ್ತಿಗಳ ।
ಭೇದಿಸಿದನತಿಬಲರ ತುಂಡದ
ಲೂದಿದನು ಕೆಲಬಲದ ಸುಭಟರ
ಹಾದಿಯಲಿ ಹರಹಿದನು ನೆರಹಿದನಂತಕನ ಪುರದಿ ॥ ೨೮

ಕೆದಱಿದನು ಕೆಂದೂಳಿಯನು ಪ
ಕ್ಷದಲಿ ಕಂಲಲಿ ಕಾಣಲರಿದಾ
ಕದನದಂಗವನೆನಲು ಕತ್ತಲೆ ಕೆತ್ತುದಂಬರವ ।
ಕದನಗಲಿಗಳು ಖಗನೆನುತ ಕಾ
ದಿದರು ತಮ್ಮೊಳಗೊಬ್ಬರೊಬ್ಬರು
ಅದಟರಿಱಿದರು ಕಾಣದಾಖಗಪತಿಯ ವಿಗ್ರಹವ ॥ ೨೯

ಇಂದ್ರನ ರಥವನ್ನು ಆವರಿಸಿದ ಧೂಳಿಯನ್ನು ವಾಯು ತೊಲಗಿಸುವಿಕೆ.

ಕಂಡನದನಾಕೊಳುಗುಳವನಾ
ಖಂಡಲನು ತನ್ನಯ ರಥಾಗ್ರದ
ಮಂಡಲಕೆ ಕೆಂದೂಳಿ ಕವಿದುದು ಕೆಟ್ಟೆನಾಹವವ ।

ಕಂಡು ಕಾದುವರಿಲ್ಲ ಕಲಿಗಳು
ಕೊಂಡನೋ ಖಗನಮೃತವನು ತರೆ
ಚಂಡಮಾರುತನಾದನೆಂದನು ಮೋಹರವ ನೋಡಿ ॥ ೨೦

ಜೀಯ ಬೆಸನೇನೆನುತ ಬಂದನು
ವಾಯು ತೆಗಸಾಕತ್ತಲೆಯ ಪೂ
ರಾಯುವಾದೀರಜದ ರಾಶಿಯ ಬೇಗ ಮಾಡೆನಲು ।
ಬಾಯ ಮುಚ್ಚುವ ಮುನ್ನ ಮೋಹರ
ವಾಯೆನಲು ಧೂಳೀಪಟಲವನು
ಬೀಯ ಮಾಡಿದನೆಲ್ಲವನು ಬೀಸಾಡಿ ದೆಸೆದೆಸೆಗೆ ॥ ೨೧

ಬಳಿಕ ಯುದ್ಧಾರಂಭ.

ಮತ್ತೆ ಮೋಹರಿಸಿತ್ತು ಸುರಬಲ
ವೆತ್ತ ವೆಣ್ದೆಸೆ [1] ಯೆತ್ತಲುರುಬುವ
ದೆತ್ತಲುಂ ವಿಹಗಪತಿ ತಾನೆತ್ತಣದದಿಂತೆನಲು [2] ।
ಮುತ್ತಿ ಮುಸುಕಿದರಸ್ತ್ರಶಸ್ತ್ರವ
ಮೆತ್ತಿದರು ಮೈನೆರೆಯದೆನೆ ಮೊಟಿ
ಗುತ್ತ ಮೇಘವ್ರಾತ ಗಿರಿಯನು ಮುಸುಕುವಂದದಲಿ ॥ ೨೨

ಹಾಱಿಸಿದನನಿತಸ್ತ್ರಶಸ್ತ್ರವ
ನೇಱಿಸಿದನಂಬರಕೆ ಧರಣಿಗೆ
ಮಾಱಿದನು ತೂಱಿದನು ಮಿಗೆ ತನ್ನೆರಡು ಪಕ್ಕದಲಿ ।
ತೋಱಿದನು ವಿಕ್ರಮದ ಕಡುಹನು
ಬೀಱಿದನು ಭಯರಸದ ಲಹರಿಯ
ಸಾಱಿಸಿದನಂತಕಗೆ ಬಿಸಿರಕುತದ ಮಹಾಧನವ ॥ ೨೩

ಒಡ್ಡಿ ಹರಿಗೆಯಲಿಱಿ ಕಠಾರದ
ಲಡ್ಡವಿಸು ಹೊಯ್ ಶೂಲದಿಂದಿಡು

1 ವೆಳೆದೆಸೆ, ಕ. ಖ. 2 ವಿಹಗಪತಿಯು ತಾನೆತ್ತಲಿಂದೆನಲು, ಕ, ಖ.

ವೊಡ್ಡಿಯಲಿ ವಧಿಯಿಸವನನು ಚಕ್ರದಲಿ ಕಡಿಯೆನುತ ।
ಗಡ್ಡವನು ಗಂಟಿಕ್ಕಿ ಕವಚದ
ದೊಡ್ಡದೇಹದಲಮರಿ ದಿಗಧಿಪ
ರಡ್ಡವಿಸಿದರು ಹೋ ಹೊ ನೀ ನಿಲ್ಲೆನುತ [1] ಖಗಪತಿಯ ॥ ೨೪

ಬಂದಿರೈ ಲೇಸಾಯ್ತು ತಪ್ಪೇ
ನೆಂದೆನುತ ಮೋಹರವನೊಡೆತುಱ
ದೊಂದುಗಲಿಸಿದನೊರಸಿದನು ಪಕ್ಷದಲಿ ಕೈಮುಗಳ ।
ಮುಂದುವರಿವಾ ದೆಸೆಯ ಪತಿಗಳ
ವೊಂದೆರಡು ಮೂಱೆಂದು ನಾಲ್ಕೈ
ದೆಂದು ನಖಮುಖಗಳಲಿ ಹೊಯ್ದಾಡಿದನು ದೆಸೆದೆಸೆಗೆ ॥ ೨೫

ತೆಱೆಯ ಹೊಕ್ಕಿಭದಂತೆ ಹಱುವನು
ಬಱಸಿಡಿಲು ಬಗೆವಂತೆ ಕಡುಗಾವ
ಕುಱಿಯ ಹಿಂಡನು ಹೊಕ್ಕ ಹೆಬ್ಬುಲಿಯಂತೆ ಸುರಬಲವ ।
ಮುಱಿದನೊತ್ತಿದ ನೆತ್ತಿದನು ಮು
ಕ್ಕುಱುಕಿ ಮೊಗದನು ಮೋದಿದನು ಹೊ
ಕ್ಕಿಱಿದನೊರಸಿದ ನಟನದಿಂದನಹಿತಕುಲಾರಾತಿ ॥ ೨೬

ಕಡಲು ಹರಿದುದು ಸೈನಿಕರ ಗಿರಿ
ಯೊಡೆದು ಹರಿವಂದದಲಿ ರಕುತದ
ಮಡು ಸುದುಸ್ತರವಾಯ್ತು ರಥಕರಿತುರಗಸಂತತಿಗೆ ।
ಕೆಡೆದುದಿಭಘಟೆ ನೆಗ್ಗಿದುದು ರಥ
ನೊಡಲನುಚಿದುದು ತುರಗ ಕಾಲಾ
ಳಡೆಗುಣಿವ ನೋಡಿದುದು ಕಾಲನ ಪುರಕೆ ಕಡಿವಡೆದು ॥ ೨೭

ದೇವತೆಗಳ ಪಲಾಯನ.

ಓಡಿದರು ಗಂಧರ್ವಸಾಧ್ಯರು
ಕೂಡೆ ಮೂಡಣದೆಸೆಗೆ ರುದ್ರರು

---

1 ನಿಲ್ಲುನಲ್ಲೆನುತ, ಕ. ಖ.

ಕೂಡೆ ವಸುಗಳು ಸಹಿತಲಾದಕ್ಷಿಣದಿಶಾವರವ |
ನೋಡಲದಿತಿಯ ಸುತರು ಪಡುವಣ
ಕಾಡ ಹೊಕ್ಕರು ಬಡಗದೆಸೆಯಲಿ
ಬೀಡ ಬಿಡಿಸಿದರಶ್ವಿನೀದೇವರುಗಳಳವಳಿದು || ೩೮

ಅನಲನಡಗಿದನಂತಕನು ಕಾ
ನನವ ಹೊಕ್ಕನು ನಿರುತಿ ವರುಣನ
ಮನೆಗೆ ಬಾ ನೀನೆಂಬನನಿಲಕುಬೇರರೆಂಬವರು |
ತನುವ ಮಱೆದರು ಮಿಕ್ಕವರ ಮಾ
ತೆನಗೆ ಬಾರದು ಪೇೞುವರು ವಾ
ಹನವನಿೞಿದಾಯುಧವನುೞಿದಾಲೆಂಕರಾವೆನುತ || ೩೯

ಅಮೃತಸ್ಥಾನಕ್ಕೆ ಗರುಡನು ಬಂದಾಗ ಯುದ್ಧಕ್ಕೆ ಬಂದ
ಭೌಮನನನ್ನು ಸೋಲಿಸುವಿಕೆ.

ಬಂದನಮೃತಾವಾಸಕೆಲ್ಲರೆ
ಹಿಂದುಳುಹಿ ಕಾಹಿನ ದುರಾತ್ಮರ
ಕೊಂದು ಹೊಕ್ಕನು ಮಿಕ್ಕನಾಸುರಕುಲದ ಮೋಹರವ |
ಮುಂದುವರಿವದಟನನು ಕಾಣು
ತ್ತೆಂದು ಕಾಹಿನ ನಾಯಕರ ನಿ
ಲ್ಲೆಂದು ಭೌಮನನೆಂಬವನು [1] ತಾಗಿದನು ಖಗಪತಿಯ || ೪೦

ಎಚ್ಚನಾತನು ಖಗನೊಡಲು ಧ
ಟ್ಟುಚ್ಚಲವುಳಾಸ್ತ್ರದಲಿ ಹೋಹೋ
ಮೆಚ್ಚಿದೆನು ಮತ್ತೇನು ವೀರರ ದೇವ ನೀನೆನುತ |
ಬೆಚ್ಚನೊಡಲಲಿ ತುಂಡದಗ್ರದೆ
ನೊಚ್ಚತುೞಿದನು ಜೀವಕಾಯುವ
ನುಚ್ಚಿದನು ಬೞಿಕಮೃತದಲ್ಲಿಗೆ ಬಂದನಾಗರುಡ || ೪೧

1 ಜೌವ್ವನನೆಂಬವನು, ಕ. ಖ.

ಅಲ್ಲಿ ಉಜ್ವಲನಾದ ಅಗ್ನಿಯಂ ಕಂಡು ಮಾರ್ಗವಂ ಪ್ರಾರ್ಥಿಸುವಿಕೆ.

ಕಂಡನದಱೊಳಗಾತನಾಬ್ರ
ಹ್ಮಾಂಡಪರಿಯಂತವನು ವೇಷ್ಟಿಸಿ
ಕೊಂಡು ಪಾವಕನುಜ್ಜ್ವಲಜ್ಜ್ವಾಲಾವಳಿಗಳಿಂದ [1] |
ಕೆಂಡಗೆದಱಲು ನೂಱುಯೋಜನ
ಮಂಡಲಾಕಾರದಲಿ ಕವಿದಿರೆ
ಕೊಂಡ ಹೆಜ್ಜೆಯ ತೆಗೆದು ನಿಂದನಿದೇನಿದೇನೆನುತ ॥ ೪೨

ಬಟ್ಟೆಗೊಡು ಹುತವಹನೆ ಲೋಕಾ
ಧಿಷ್ಠಿತನೆ ಸುರಪಿತೃಗಳಿಗೆ ನೀ
ನಿಷ್ಟನೆನಿಸುವೆ ನೋಡಲಾಭುವನೈಕಪಾವನನೆ |
ಬಟ್ಟೆಗೊಡು ಸುಜನೈಕವಂದ್ಯಾ
ಭೀಷ್ಟಮೂರ್ತಿಯೆ ಪುಣ್ಯಕೀರ್ತಿಯೆ
ಬಟ್ಟೆಗೊಟ್ಟುಳುಹೆನುತ ಖಗನಭ್ಯರ್ಥಿಸಿದನೊಲಿದು ॥ ೪೩

ಬಗೆವನೇ ಸಾಮವನು ಧಗಧಗ
ಭುಗಿಭುಗಿಲು ಭೋರೆಂದು ಕುಡಿನಾ
ಲಗೆಗಳಂಡಕಟಾಹವನು ಕಾಸಿದುದು ಕುಣಿಕುಣಿದು |
ಹೊಗೆಯ ಹೊರಳಿಯ ಕೆಂಗಿಡಿಯ ನೆಗ
ಱಿಗೆಯ ಸಂವರ್ತಾಗ್ನಿಯಂತಿರೆ
ಹೊಗುವ ಮಾತೇನೀಕ್ಷಿಸುವೊಡರಿದಾಯ್ತು ಖಗಪತಿಗೆ ॥ ೪೪

ಅಗ್ನಿಯು ಪ್ರಾರ್ಥನೆಗೆ ಒಲಿಯದಿರಲು ನದೀತಟಾಕಾದಿಗಳ
ನೀರನ್ನು ಕುಡಿದು ಕಾರಲಾಗಿ ಅಗ್ನಿಶಮನ.

ಕೆಟ್ಟೆನಿದು ವಿಪರೀತವಾಯ್ತೆನು
ತಟ್ಟಹಾಸವ ಮಾಡಿ ಖಗಪತಿ
ತೊಟ್ಟು ಸಾವಿರಮುಖಗಳನು ನಿಜಯೋಗಶಕ್ತಿಯಲಿ |

---

[1] ನುಜ್ಜ್ವಲಾವಳಿಗಳಿಂದ, ಕ. ಖ.

ಕಟ್ಟುಗೆಱೆ ಧುನಿನಿವಹಗಳ ಮುಖ
ವಿಟ್ಟು ಕುಡಿದನು ಕಾಱಿದನು ಜಗ
ಜಟ್ಟ ಪಾವಕನೊಳಗೆ ಸಂವರ್ತಾಭ್ರದಂದದಲಿ ॥ ೪೫

ಏನನೆಂಬೆನು ತೀರ್ದುದಾಪವ
ಮಾನಸಖನುಬ್ಬಟೆಯು ಕರ್ಬೊಗೆ
ಹಾಸಿಗೊಂಡುದು ಕಿಡಿಗಳಡಗಿದವಡಗಿತಾ ಜ್ವಾಲೆ ।

ಮುಂದೆ ಹೋಗಲಾಗಿ ಶಸ್ತ್ರದುರ್ಗದ ನಿವಾರಣೆ.

ಸ್ಥಾನ ಬಿಸಿಯಾರಿದುದು ಹೊಕ್ಕನು
ವೈನತೇಯನು ಮುಂದೆ ಕಂಡನು
ಭಾನುತೇಜದ ಶಸ್ತ್ರದುರ್ಗವ ನೋಡಲರಿದೆನಲು ॥ ೪೬

ಇದು ಪ್ರಳಯವಾಯ್ವಾವನೆಲೆ ಹೊ
ಕ್ಕಿದನು ಹೊಱವಡುವಧಿಕಬಲನೆನು
ತೊದೆದೆನಸ್ತ್ರದ ದುರ್ಗವನು ಪಕ್ಷದಲಿ ತುಂಡದಲಿ ।

ಚಕ್ರವಂ ಕಂಡು ಅಣುರೂಪದಿಂದ ಅದರ ನಾಭಿಯಲ್ಲಿ
ಪ್ರವೇಶ ಮಾಡುವಿಕೆ.

ಕೆದಱಿ ಹೊಕ್ಕನು ಮುಂದೆ ಕಂಡನು
ಕುದಿವ ಸಾಹಸ್ರಾರಘನಯಂ
ತ್ರದ ಮಹಾಚಕ್ರವನು ತಿಱುಗುತ್ತಿರಲು ತೀವ್ರದಲಿ ॥ ೪೭

ಕಂಡು ತಲೆದೂಗಿದನು ಖಗನು
ದ್ದಂಡಚಕ್ರವ ಗೆಲುವುಪಾಯವ
ಪುಂಡರೀಕಾಸನನೆ ಬಲ್ಲನೆನುತ್ತ ಬಿಸುಸುಯ್ದು ।
ಚಂಡಬಲನಣುರೂಪವನು ಕೈ
ಕೊಂಡು ಚಕ್ರದ ನಾಭಿಯೊಳಗಿರ
ಲಂಡಜೇಂದ್ರನು ಕಂಡನಮೃತವನದಱ ಕೆಳಗಿರಲು ॥ ೪೮

---

[1] ಪ್ರಳಯವಾಯ್ವಾವನೊ, ಕ. ಖ.

ಅದರ ಕೆಳಗಿರುವ ಸರ್ಪಗಳಂ ಕಂಡು ಜಾಗರೂಕತೆಯಿಂದ
ಅಮೃತಕಲಶವನ್ನು ಹರಿಸುವಿಕೆ.

ಮತ್ತೆ ಕಂಡನು ಕೆಳಗಿಱಿದು ಬಲು
ಮೃತ್ಯು ಬಾಯ್ದೆಱೆದೆರಡು ರೂಪವ
ಹೊತ್ತ ತೆಱವಲಿ ರೌದ್ರಮುಖದ ಭಯಂಕರಾನನದ ।
ಎತ್ತುದಲೆಗಳ ಕುಪಿತನಯನದ
ತತ್ತುಮಿಂಚನು ಜಱಿವ ಜಿಹ್ವೆಯ
ಹೊತ್ತುವುಸುರಿನ ಹೊಗುವ ದಾಡೆಯ ದಡಿಗಫಣಿವರರ ॥ ೪೯

ಘಾತುಕರು ನೋಡಿದರೆ ಭಸ್ಮೀ
ಭೂತರಹರಾರಾಗೊಡಾಗಲಿ
ಭೂತನಾಥಗೆ ಪುಗಲರಿದವರೊಡನೆ ಕಾದುವರೆ ।
ವೀತನಿದ್ರರು ವಿಹೃತನೇತ್ರರು
ಮಾತು ಹಲವೇನಮೃತಕಲಶದ
ಮಾತು ಬೇಡೆಂಬಂತೆ ಕಾದಿಹರೆರಡು ದಿಕ್ಕಿನಲಿ ॥ ೫೦

ನೆಗಹಿ ಕೊಂಡನು ಸುರರ ಸಿರಿಯನು
ನೆಗಹಿ ಕೊಂಬಂದದಲಿ ಚಕ್ರವ
ನುಗಿದು ಬಗಿದೋಡಿದನು ಹೊಱವಂಟನು ನಭೋಗತಿಗೆ ।
ಖಗವರನು ಕೈಕೊಂಡು ಮುನ್ನಿನ
ಜಗದಗಲವಾಕಾರವಮರರ
ತಗುಳಿದನು ನಿತ್ಯಾತ್ಮನಾರಾಯಣನ ಸನ್ನಿಧಿಗೆ ॥ ೫೧

ಒಂಬತ್ತನೆಯ ಸಂಧಿ ಮುಗಿದುದು.

# ಹತ್ತನೆಯ ಸಂಧಿ.

## ಸೂಚನೆ.

ಚಂಡವಿಕ್ರಮನಮರರನು ಬೆಂ
ಕೊಂಡು ತಂದನು ಸುಧೆಯನವನಿಗೆ
ಕಂಡು ನಾರಾಯಣನ ಕರುಣವ ಪಡೆದನಾ ಗರುಡ ॥

ಅಮೃತಹರಣದಿಂದಾದ ದುರ್ಗತಿಯನ್ನು ಸುರರು
ಹರಿಗೆ ಸೂಚಿಸುವಿಕೆ.

ಕೇಳು ಶೌನಕಮುನಿಪ ಸದೆದು ಸು
ರಾಳಿಯನು ಪೀಯೂಷದುರ್ಗವ
ಬೀಳುಹೊಯ್ದನು ಕೆಡಹಿದನು ಪೀಯೂಷಪಾಲಕರ ।
ಕೋಳು ವಿಡಿದಮೃತವನು ಹಾಯ್ದನು
ಹಾಳು ಮೋರೆಯ ತ್ರಿದಶಪುರವನು
ಬೀಳುಕೊಂಡೊಲೆವಂತೆ ಮೆಱೆದುದು ಸುರಪತಿಯ ವಿಭವ ॥ ೧

ಕೆಟ್ಟುದೋ ಸುರಲೋಕ ಭಂಗವ
ತೊಟ್ಟುದೋ ನೆಱೆ ತೊಡೆದುದೋ ತ್ರೈ[1]
ವಿಷ್ಟಪಾಧೀಶ್ವರರ ಹೆಸರನು ಹೇಳಲೇಕಿನ್ನು ।
ದುಷ್ಟಖಗನೆಳದೊಯ್ದನಮೃತವ
ನಟ್ಟಡವಿಯಾಯ್ತೂರು ಯೆನುತವೆ
ಬಿಟ್ಟು ಕೊಂಡರು ಬಾಯ ಬಿಡುತ ಕ್ಷೀರವಾರಿಧಿಗೆ ॥ ೨

---

1 ತೊಡೆದುದೊಮಹಾತ್ರೈ, ಕ. ಖ.

ಹುಯ್ಯಲಿಡುತವೆ ಹೋದರಮರರು
ಕೈಯ್ಯ ಸೊಪ್ಪನು ನೆಗಹಿ ಮನ್ಮಥ
ನಯ್ಯನಲ್ಲಿಗೆ ಭಕ್ತಿಯಲಿ ದುಗ್ಧಾಬ್ಧಿಯಭಿಮುಖಕೆ ।
ಮೆಯ್ಯನೀಡಾಡಿದರು ಸಂಸ್ತುತಿ
ಗೆಯ್ಯಲದನಾಲಿಸುತ ಪನ್ನಗ
ಶಯ್ಯನಂದು ನೆಗಹಿದನಬ್ಜಸಮಾಸ್ಯದಲಿ ನಗುತ ॥ ೩

ಹರಿ ಅಭಯವಂ ಕೊಟ್ಟು ಅಮರಾವತಿಗೆ ಬರುವಿಕೆ.

ಹೋಹೊ ಅಂಜದಿರಂಜದಿರಿ ನಿ
ವ್ಮೊಹವವ ನಾನಱಿದೆನಸಗದು
ಸಾಹಸದ ಸಂರಂಭವಾಗಂಭೀರವಿಕ್ರಮನ ।
ಬಾಹುಬಲವವನೊಡನೆ ಸಲ್ಲದು
ಸೋಹಿನಲಿ ತಾ ತೆಗೆವೆ ನಿಲ್ಲೆನು
ತಾ ಹರಿಯು ನೆಱೆ [1] ಬಂದನಮರಾವತಿಗೆ ಗೆಲವಿನಲಿ ॥ ೪

ನಡೆಯೆನುತ ನಯನಾಭಿರಾಮನು
ಪಡೆಗೆ ಕೈಬೀಸಿದನು ಬಂದನು
ಜಡಿವ ಘನಗಂಭೀರಭೇರೀಪಟಹಶಂಖದಲಿ ।
ಬಡೆದುದಬುಜಭವಾಂಡವೆನೆ ಬೆಳು
ಗೊಡೆಯು ಚಾಮರನಿಕರ ದೆಸೆಗು
ಗ್ಗಡದ ಪರಮೈಶ್ವರ್ಯದಲಿ ಖಗರಾಜನಿರ್ದೆಡೆಗೆ ॥ ೫

ನೀಲಮೇಘನಿಭಾಂಗಕಾಂತಿಯ
ಲೋಲಮಣಿಕುಂಡಲದ ವಿಮಲಕ
ಪೋಲಮಂಡಲದೆಸೆವ ಕಮಲದಳಾಯತೇಕ್ಷಣದ ।
ಶ್ರೀಲಲಾಟದ ಮೌಳಿಮಕುಟದ

1 ಮಹಾಹರಿ, ಕ, ಖ.

ಕೀಲಣದ ನವರತ್ನಕಾಂತಿಯು
ಜಾಲದಲಿ ಜಗದೇಕನಾಥನು ಬಂದನಾಹವಕೆ ॥ ೬

ಕೊರಳ ಹಾರದ ಕೌಸ್ತುಭದ ಪೇ
ರುರದ ವರಸಿರಿವತ್ಸನಾಭಿಯು
ಕರಕಮಲಕಂಕಣದ ಕೇಯೂರದ ಚತುರ್ಭುಜದ ।
ಅರಿಗದಾಶಾರ್ಙ್ಗದ ಭುಜಂಗಳ
ಭರಿತತೇಜದ ದಿವ್ಯಪೀತಾಂ
ಬರದ ಮಂಗಳಮೂರ್ತಿ ಬಂದನು ಗರುಡನಭಿಮುಖಕೆ ॥ ೭

ವಂದಿಗಳ ಕಳಕಳದ ಮಾಗಧ
ವೃಂದದೊತ್ತೊತ್ತುಗಳ ಸೂತರ
ಸಂದಣಿಯ ಗಂಧರ್ವಕಿನ್ನರಗೀತಸಂಸ್ತುತದ ।
ದುಂದುಭಿಯ ಕಳಕಳದ ಬಹುವಿಧ
ದಿಂದೆಸೆವ ಬಹುಭದ್ರವಾದ್ಯದ
ಸಂದ ಸುರರೈ[1]ಶ್ವರ್ಯದಲಿ ಬಂದನು ಸುರಾಲಯದಿ ॥ ೮

ಸುಱಿವ ಸುಮನೋವೃಷ್ಟಿಯಲಿ ಮಿಗೆ
ಮೊಱೆವ ವೀಣಾವೇಣುಮುರಜದ
ಕರಪುಟದ ಮೌಳಿಗಳಲೊಪ್ಪುವ ಲೋಕಪಾಲಕರ ।
ಸರಸಿಜಾಸನರುದ್ರವಿಬುಧೇ
ಶ್ವರನಿಷೇವಿತಪಾದಪೀಠದ
ಕರುಣಿಗಳ ದಾತಾರ ವೈದೋಱಿದನು ಖಗಪತಿಗೆ ॥ ೯

ಆಗ ಗರುಡನು ಹರಿಯುಂ ಕಂಡು ನೀನಾರೆಂದು ಕೇಳಲು
ಹರಿಯು ಉತ್ತರ.

ಗಂಡುಗಲಿ ಯಮೃತದ ಕಲಶವನು
ಕೊಂಡು ಹಾಯ್ದೆಯ್ತರಲು ನಭದಲಿ

[1] ಸುಮನ್ಯೈ, ಕ. ಖ.

ಕಂಡನಾಕಮನೀಯಕೀರ್ತಿಯ ದಿವ್ಯಮೂರ್ತಿಯನು ।
ಅಂಡಜೇಂದ್ರನು ನಗುತ ನಿಂದನು
ಪುಂಡರೀಕದಳಾಕ್ಷನಿದಿರಲಿ
ಪಂಡಿತನೆ ನೀನಾರು ಹೇಳೆನಗೆಂದು ಬೆಸಗೊಂಡ ॥ ೧೦

ಹೇೞು ಹೇಳ್ವೆ ಯೆನಲು ಖಗಪತಿ
ಪಾಲುಗಡಲ ಮಹಾತ್ಮ ಲಕ್ಷ್ಮೀ
ಲೋಲಲೋಚನ ಕಮಲಭವರೀ ಮುಖ್ಯರಿವರೆನಗೆ ।
ಕೇಳು ಪುತ್ರ ಸಪುತ್ರರೈ ಕೀ
ಟಾಳಿಗಳು ಸುರರಲಿ ಚರಾಚರ
ಜಾಲ ವೆನ್ನಯ ಲೀಲೆ ನಾರಾಯಣನು ತಾನೆಂದ । ೧೧

ಹರಿಯು ವರವಂ ಕೇಳೆನಲು ಗರುಡನ ಅನಾದರಕ್ಕೆ ಹರಿಯ
ಅಪಹಾಸ.

ಮೆಚ್ಚಿದೆನು ಖಗಮೞಿಯೆ ನಿನ್ನಯ
ನಿಚ್ಚಟದ ಬಲವೀರ್ಯಶೌರ್ಯದ
ಹೆಚ್ಚುಗೆಯ ವಿಕ್ರಮಪರಾಕ್ರಮಶಕ್ತಿಯನು ಕಂಡು ।
ಮೆಚ್ಚಿದೆನು ನೀ ಬೇಡಿಕೊಳ್ಳನ
ಲಚ್ಯುತನ ನುಡಿಗಳಿಗೆ ನಕ್ಕನು
ಮುಚ್ಚುಮಱೆಯಾಕಿವನು ತಾ ಸಾಮರ್ಥ್ಯದಿಹೆನೆಂದ [1] ॥ ೧೨

ನಕ್ಕನಸುರಾರಾತಿ ನೋಡಿದ
ನಿಕ್ಕೆಲದ ಕಮಲಜಭವಾದ್ಯರ
ನೆಕ್ಕಟಿಗನುಬ್ಬಾಳಿಯನು ಕಂಡಿರೆ ಖಗಾಧಿಪನ ।
ಸಿಕ್ಕಿಸುವೆನತಿಬಲನನೆನುತವೆ
ಚಿಕ್ಕಳಿಸಿ ಕಡೆಗಣ್ಣನೀಕ್ಷಿಸಿ
ರಕ್ಕಸರ ಕುಲವೈರಿ ನುಡಿದನು ನಗುತ ಖಗಪತಿಗೆ ॥ ೧೩

---

1 ಸಾಮರ್ಥ್ಯನಹನೆಂದ, ಕ. ಖ.

ತಿರುಗಿ ಉಭಯರ ಸಂವಾದದಲ್ಲಿ ವಾಹನನಾಗೆಂದು ಕೇಳುವಿಕೆ.

ಈವೆ ನೀನೆನಗೇನನಿಲ್ಲದೊ
ಡಾವದಡಿಯಲಿ ಬಿದ್ದ ನಿನ್ನನು
ಕಾವ ದಾತರ [1] ಗಂಡನೆಂಬ ಮಹಾತ್ಮ ಮರುಳನಲ ।
ದೇವರೆಂಬವರ್ಕೈದೆ ತನಗನು
ಜೀವಿಗಳು ತಾವೇನು ಕಾಣದೆ
ಗಾವಿಲನೆ ತಾನೀವೆ ನೆಲ್ಲವ ಬೇಡಿಕೊಳ್ಳೆಂದ ॥ ೧೪

ಆಗಲದಕೇನಾಯ್ತು ತಪ್ಪೇ
ನೀಗಳೆಂದನು ವರತಪೋವ್ರತ
ಯೋಗನಿಷ್ಠ ದ್ವಿಜರು ತನಗಧಿದೈವರವರಿತ್ತ ।
ಭಾಗಧೇಯವಿದೆನಗೆ ವಾಹನ
ವಾಗು ನನಗೆಂದರ್ಥಿಸಿದನಾ
ಯೋಗಮಾಯಾಧೀಶ್ವರನು ನಗುತಾ ಖಗೇಶ್ವರನ ॥ ೧೫

ಅದಕ್ಕೊಪ್ಪಲು ಹರಿಯು ನೀನು ವರವಂ ಬೇಡೆನಲು
ರಕ್ಷಣೆಯನ್ನು ಕೇಳುವಿಕೆ.

ಕೇಳಿ ತಲೆದೂಗಿದನು ಹೋಹೋ
ಕೋಳುವಿಡಿದೈ ತನ್ನನಾರಿಗೆ
ಹೇಳುವೆನು ತಾನಾಗಿ [2] ವರವನು ಕೆಡಿಸಿದಕಟಕಟ ।
ಕಾಲನಿಡು ಮಸ್ತಕದೆಲೆಲೆ ಕರು
ಣಾಳುಗಳ ದಾತಾರ ಅಹಿಕುಲ
ಕಾಲನೊಡನಿಂತೆಂದನಧಿಕಮನೋನುರಾಗದಲಿ ॥ ೧೬

ಬೇಡಿಕೊಂಡೆನು ವರವ ನೀನುಂ
ಬೇಡಿಕೊಳ್ಳಲೆ ವೀರ ತನ್ನನು
ಜೋಡು ಮಾಡದಿರೆನ್ನ ದರುಶನ ವಲ್ಲವಲ್ಲಿಳಗೆ ।

---

1 ಪೂರ್ವದಾರಶ, ಕ. ಖ. 2 ವಾಹಂತೆ, ಕ, ಖ.

ಬೇಡು ಮೆಚ್ಚಿದೆನೆನಲು ಖಗನೀ
ಡಾಡಿದನು ಪದದಲಿ ತನುವನಾ
ಬೇಡುವೆನು ತನಗೊಡೆಯರಾಜಾಜ್ಞಾ ಪಿಸುವುದದನೆಂದ ॥ ೧೨

ಮತ್ತೆ ದುರ್ಲಭವೇನು ನಿನ್ನನು
ಹೊತ್ತು ನಡೆವೆಂಗೆನಗೆ ತನ್ನಯು
ತೊತ್ತಲಾ ವರಮುಕ್ತಿ ನಿನ್ನಪದಾಬ್ಜ ಸೇವಕಗೆ ।
ಮೃತ್ಯು ಜರೆ ಯೆರಡಿಲ್ಲದಂತೊಲಿ
ದಿತ್ತು ರಕ್ಷಿಸನಾಥ ನಾನೆನ
ಲುತ್ತಮಾಂಗವ ತಡವಿ ಸೂಸಿದನಂಜಬೇಡೆಂದ ॥ ೧೪

ಅಮೃತವನ್ನು ಇಲ್ಲೇ ಬಿಡೆಂದು ಹೇಳಲು ತಾಯ ಸೆರೆಯನ್ನು ಬಿಡಿಸಲು
ಒಯ್ಯಬೇಕೆಂದು ಹೇಳುವಿಕೆ.

ಕಂದ ಕೇಳ್ಕ ಕಾಡುತಿದೆ ಸುರ
ವೃಂದ ತನ್ನನು ಸುಧೆಗೆ ಕೇಳಿ
ನ್ನೊಂದು ಮಾತನು ಕೊಂಡು ಹೋಹುದಯೋಗ್ಯವಮೃತವನು ।
ಬಂದುಸಿಮಿಷವಿದಿಲ್ಲದಿರೆ ನೆಚಿ
ಹೊಂದುವುದು ಸುರಕುಲವೆನಲು ಗೋ
ವಿಂದನಂಘ್ರಿಗೆ ನಮಿಸಿ ಬಿನ್ನಹಮಾಡಿದನು ಗರುಡ ॥ ೧೯

ತಾಯ ಸೆಜೆಯಲಿ ಹಿಡಿದು ಪನ್ನಗ
ದಾಯಿಗರು ನಾಚಿಸಿದರೆನ್ನನು [1]
ಪಾಯವ ಬಿಡಿಸುವವರೆ ಗಡ ತೋಱುಸು ದುರಾತ್ಮರಿಗೆ ।
ಬಾಯ ಹೊಗಲೀಸೆನೆ ನಿಜಾಭಿ
ಪ್ರಾಯವನು ನಾ ಬಲ್ಲೆನೆನೆ ನಾ
ರಾಯಣನು ನಸುನಗುತ ಮನ್ನಿಸಿ ಕಳುಹಿದನು ಖಗನ ॥ ೨೦

1 ನಾಚಿಸಿದರೆ ನಗೆವ್ರ, ಕ. ಖ.

ಹರಿಯು ಶುಭಾಶಾಸನವಮಾಡಿ ಕಳುಹಿಸಲು ಮಾರ್ಗದಲ್ಲಿ ಇಂದ್ರ
ನೊಡನೆ ಸಂವಾದ.

ನೆನೆದ ಹೊತ್ತೊಳಿತಹುದು[1] ಸುಖಿಯಾ
ಗೆನುತ ಮೈದಡವಿದನು ಕರುಣಾ
ವನಧಿ ವಿಹಗೋತ್ತಮನನನುರಾಗದಲಿ ಬೀಳ್ಕೊಟ್ಟು ।
ನೆನೆದನಂತರ್ಧಾನವನು ಬಳಿ
ಕನುಪಮನು ಗಗನದಲಿ ಬರುತಿರ
ಲನಿಮಿಷೇಂದ್ರನು ತಾಗಿದನು ಬೆಂಬತ್ತಿ ಮಾರ್ಗದಲಿ ॥ ೨೧

ಕೊಳಚೆನೀರ ಹುಳು ಕುಡಿವುದು ಸರಿ[2]
ಪ್ರಳಯಕಲ್ಪಾಂತದ[3] ಸಮುದ್ರ
ಕ್ಕೆಪೆವೆನೆಂಬುದು ಬಾಲ ನೀ ನೆನೆದುದು ಸುದುಸ್ತರವು[4] ।
ಗಳಿಹು ಬಳಿಕೆಲ್ಲವನು ಬಿಡು ಬಿಡು
ಕುಲಿಶವನು ತನ್ನಾಣೆ ತನ್ನಲಿ
ಬಳಿಕ ಚಿಂತಿಸಬೇಡ ಮಾತಿನ್ನಿಲ್ಲ ತೆರಹೆಂದ ॥ ೨೨

ಆಗ ಇಂದ್ರನ ವಜ್ರಪ್ರಯೋಗ.

ಆದೊಡಿದೆ ಕಲ್ಪಾಂತಜಲಧಿಯ
ಸೇದುವೊಡೆ ಬಡಬಾಗ್ನಿ ತಾನಾ
ರಾದೊಡೇನಿದಕೊಳ್ಳನುತ ಕೋಪಾಗ್ನಿಯಲಿ ಬೆಂದು ।
ಕಾದ ಕಂಗಳಲುರಿಯನುಗುಳುತ
ಹೋದೆ ಯಿನ್ನೇನೆನುತ ದುರ್ಧರ
ನಾದದಲಿ ತೆಗದಿಟ್ಟನಾವಜ್ರದಲಿ ಖಗಪತಿಯ ॥ ೨೩

ಅದು ವ್ಯರ್ಥವಾಗಲು ಗರುಡನ ಅಪಹಾಸ.

ಇಟ್ಟನೋ ವಜ್ರದಲಿ ಸುರಪತಿ
ಕೆಟ್ಟನೋ ಖಗಪತಿ ನಿರರ್ಥಕ

---

1 ಹೊತ್ತೈಹುದು, ಕ. ಖ. 2 ಕುಡಿವುದದುಸರಿಯುಲಾ, ಕ. ಖ.
3 ಕಲ್ಪದ, ಕ. ಖ. 4 ದಂತೆ ದುಸ್ತರವಲುಲಾಭ, ಕ. ಖ.

ಮುಟ್ಟಿ ಬದುಕುವರುಂಟೆ ಹರ ಹರ ಯೆನುತ ಜನ ಬೆದಱೆ |
ಬೆಟ್ಟವನು ಕಡಿಗಳೆವ ವಜ್ರವು
ಬಟ್ಟೆದೆಗೆದುದು ಖಗನ ಸಮ್ಮುಖ
ಕೊಟ್ಟದ ಜ್ವಾಲೆಯಲಿ ನಿಂದಂತಾಯ್ತು ಮೂಲೋಕ ‖ ೨೪

ಕಂಡನಂದಾ ವಿಹಗಪತಿ ಕೈ
ಕೊಂಡನಿಂದ್ರನ [1] ವಜ್ರವನುಮಾ
ಖಂಡಲಂಗಿದನೆಂದನೊಯ್ಯನೆ ನಗುತ ಲೀಲೆಯಲಿ |
ಗಂಡುಗೆಡಿಸಿದೆ ಬಱಿದೆ ವಜ್ರವ
ಕೊಂಡು ಹೋಗದೆ ನೀನು ಬಿಸುಟರಿ
ಭಂಡನನೆ ಹೋಗಿನ್ನು ಸುಖದಲಿ ನೀನು ಹೋಗೆಂದ ‖ ೨೫

ಅಲ್ಲದೊಡೆ ತಾ ನಾಚಿಸುವನ
ಲ್ಲಲ್ಲ ನಿನ್ನನು ವೇಣಪ್ರೋಹವಿ
ದಲ್ಲ ತಾಪಸವರ [2] ದಧೀಚಿಯ ಕಾಯುದಸ್ಥಿಯನು ‖
ಬಲ್ಲಿದನೆ ನಿರ್ಮಿಸಿದೆ ಯೆಂಬುದ
ಬಲ್ಲೆ ನಿತ್ತೆನು ಗಱಿಯನೊಂದನು
ಹೊಳ್ಳು ಗಳೆಯಲಿ ವಜ್ರಕೆಂದನು ಸುರಪತಿಗೆ ಗರುಡ ‖ ೨೬

ಎಂದೆನುತ ಗಗನದಲಿ ಮೊಱಗುತ
ಮುಂದುವರಿದೈತಹಮಹಾಸ್ತ್ರ
ಕ್ಕೊಂದು ಗಱಿಯನು ಕೊಳ್ಳನುತ ಖಗರಾಜನೊಲವಿನಲಿ |
ಎಂದೊಡದನೇನೆಂಬೆನಮರರ
ವೃಂದವುಘೆಯೆನೆ ಬಿದ್ದುದಾಗಱಿ
ಸಂದೊಡೆಯ [3] ಗಿರಿಯಂತೆ ವಜ್ರದ ಹತಿಯುಲವನಿಯಲಿ ‖ ೨೭

ಉಱುವ ದಿವ್ಯಮಹಾಯುಧಕ್ಕೆ ಕಿ
ಗ್ಗಱಿಯನಿತ್ತೆನೆನುತ್ತ ಮನದಲಿ

1 ನೆನ್ನದು, ಕ. ಖ. 2 ತಾಪಸ, ಕ. ಖ. 3 ಸಂದುಡಿದ, ಕ. ಖ.

ಮಱುಗದಿರು ನೀನಾಂಪುದೊಂ[1] ದೇ ಗಱಿಯು ಕಡೆಸೆಱಗ ।
ಬಱಿದೆ ನಾಚಲದೇಕೆನಲು ಶಚಿ
ಯೆಱೆಯನದನಾಲಿಸುತ ಕಾಣದೆ
ಗಱಿಯು ಕಡೆಯನು ಮೇಣು ನಗಹಲು ಸೆರೆಯೆನಿಂತೆಂದ ॥ ೨೮

ಮೃದೂಕ್ತಿಪೂರ್ವಕ ಗರುಡನೊಂದಿಗೆ ಇಂದ್ರನ ಸ್ನೇಹ

ಆರು ನೀನೆಲೆ ವೀರ ನಿನ್ನಾ
ಕಾರವದುಭುತ ನಿಜಪರಾಕ್ರಮ
ವಾರಿಧಿಯು ನೆಲೆಗಾಣ್ಬುದರಿ[2] ದಾಯ್ತೆಲೆ ಸಖಿಯೆ ನಿನ್ನ ।
ಸಾರಬಲವಿನಿತೆಂದು ತಿಳಿಯೆ ಮ
ನೋರಥವು ಸೌಖ್ಯವನು ತನ್ನಲಿ
ಸೇರಿಸೆಂದನು ವಿನಯದಲಿ ಖಗಪತಿಗೆ ಸುರನಾಥ ॥ ೨೯

ಸೇರುತಿದೆಲಾ ಸಖ್ಯ ನಿನ್ನಲಿ
ವೈರವೆನಗಿನಿತಿಲ್ಲ ವೆನ್ನಶ
ರೀರದಲಿ ಹೇಱುವೊಡೆ ಯೋಗ್ಯವೆ ಆತ್ಮಸಂಸ್ತುತಿಯು ।
ಸೂರಿಗಳು ಮಾಡುವರೆ ಹೇಶಾ
ವೀರ ಸಖಿ ನೀನೆಂದೆ ಯದಱಿಂ
ದಾರು ಸಖಿಯರ್ಥಿಸುತಿರದನಾ[3] ಚರಿಸದಿಹರೆಂದ ॥ ೩೦

ಗರುಡನು ತನ್ನ ಸಾಮರ್ಥ್ಯವನ್ನು ಇಂದ್ರನಿಗೆ ತಿಳಿಸುವಿಕೆ.

ಸುರವರನೆ ಕೇಳಖಿಳಗಿರಿವನ
ವರವನಧಿ ಕಾನನ ಮಹಾಸಾ
ಗರವ ಸಪ್ತದ್ವೀಪ ಧರೆ ಸಹಿತಖಿಳ ಭುವನವನು ।
ಧರಿಸುವೆನು ತಾನೊಂದುಪಕ್ಕದ
ಲೊರವಡೆನಿತುಂಟನಿತರಧಿಕವ
ನೊರಪಲಱಿಯೆನಜಾಂಡಮಂಡಲ ತೃಣವಿದೆನಗೆಂದ ॥ ೩೧

1 ವೆಗಾಪಡೊಂದೇ, ಕ. ಖ. 2 ಗಾಣದ, ಕ. ಖ. 3 ಸಿಕರವ, ಕ. ಖ.

ಇಂದ್ರನ ಅಪೇಕ್ಷೆಯಂತೆ ಗರುಡನು ಸ್ವಾಕಾರವನ್ನು ತೋರಿಸುವಿಕೆ

ಎಂದೊಡಾ ಸುರವರನು ಮಗುೞಿಂ
ತೆಂದ ನಹುದೋ ವೀರ ಬಲ್ಲಿದ
ನೆಂದಱಿವೆ ನಾಕಾರದಳತೆಯ ತೋಱಬೇಹುದಲೆ ।
ತಂದೆ ಸಖಿ ಯಾನಾದೊಡೆನೆ ವಿಹ
ಗೇಂದ್ರನಿಂದ್ರನ ಮಾತ ಕೇಳುತ
ಮಂದಹಾಸದಲಮರಪತಿಗಿಂತೆಂದ ನೊಲವಿನಲಿ ॥ ೩೨

ನೋಡ ಬಹುದೇ ಪಕ್ಷದಗಲವ
ನೀಡುವೊಡೆ ತೆರಹಿಲ್ಲ ಕಮಲಜ
ನಾಡಲೇತಕೆ ಕೃಪಣನಾವನು ಗಗನದೃಷ್ಟಿಯಲಿ ।
ನೋಡುವರೆ ನನಗೊಂದು ಗಱಿಯನು
ನೀಡಲಿಂಬಿಲ್ಲಂಬರವ ಕಡೆ
ಮಾಡಿ ತೋಱಿಸುವೊಡಿಂದಿದನು ನಗುತ ಸುರಪತಿಗೆ ॥ ೩೩

ವೀರ ಕಂಡೇಗೈವೆ ವಜ್ರವಿ
ದಾರಿಸಿದ ತನ್ನೊಂದು ಪಕ್ಷದ
ಸಾರವನು ಮತಿಯುತನೆ ಮತ್ತಿನ್ನೇನ ಬೆಸಗೊಂಬೆ ।
ಭೂರಿಭಯರಸಸಬುದವಿದು ನಿ
ಸ್ಸಾರರಣ ನೋಡಾದೊಡೆನುತ ಮ
ಹೋರಗಾಂತಕನಮರರುಘೋಯೆನೆ ತೋಱಿದನು ನಿಜವ ॥ ೩೪

ಮುಱುಗಿದವು ದೆಸೆಯೆಂಟು ಪಕ್ಷದ
ವಳಯವೇಕಾಂಗದಲಿ ಧ್ರುವಮಂ
ಡಲಕೆ ಸಂಕಟವಾಯ್ತು ಶಿರವನು ನೆಗಹಿದನು ಮೇಲೆ ।
ಇಳೆ ರಸಾತಳಕಿೞಿದುದಂಘ್ರಿಯ
ನೆಲೆಯ ಕಂಡವರಾರು ಭುವನಾ
ವಳಿ ತದಾತ್ಮಕವಾದುದೊಂದೇ ನಿಮಿಷಮಾತ್ರದಲಿ ॥ ೩೫

ಘಾಸಿಯೊದನು ತರಣಿ ತೇಜೋ
ರಾಸಿಯಂಗಚ್ಛವಿಯ ನೀಕ್ಷಿಸಿ
ವಾಸವನು ನಡುಗಿದನು ಜಯ ಜಯ ಯೆಂದುದಮರಗಣ।
ಸೂಸಿದರು ಪೂಮಳೆಯ ನಾಕಮ
ಲಾಸನಾದ್ಯರು ಮೇಗೆ ಶಿರದಲಿ[1]
ಭಾಸುರಾಂಗಪ್ರಭೆಯಿನೆಸೆದನು ತೀವ್ರತೇಜದಲಿ॥ ೨೬

ವಿಸ್ಮಿತನಾದ ಇಂದ್ರನನ್ನು ಮನೆಗೆ ಹೋಗೆಂದು ಬೆಸಸುವಿಕೆ.

ಸಾಕು ಸಖಿಯೇ ಕಂಡೆನೆಂಬೊಡೆ
ನೂಕವಾಲಿಗಳಂಗವಟ್ಟದ
ಲೇಕದೇಶವ ಸೀಕ್ಷಿಸುವೊಡಾನಾವನೆಂದೆನುತ।
ಪಾಕಶಾಸನನೀಕ್ಷಿಸಲು ಸಾ
ಕ್ಷ್ಯಾಕೃತಿಯ ಕೈಕೊಂಡು ನುಡಿದನು
ಲೋಕಪಾಲನೆ ಹೋಗು ನಿಳಯಕೆ ಯೆಂದನಾ ಗರುಡ॥ ೨೭

ಬಳಿಕ ಅಮೃತವು ದುಷ್ಟರಿಗೆ ಭೋಗ್ಯವಾಗದಂತೆ ಆಲೋಚನೆ.

ಎಂದೊಡೆಂದನು ಸಖಿತನಕೆ ತಾ
ಸಂದೆನಲ್ಲೃ ತಂದೆ ನೀ ನಿದ
ನೊಂದ ಸಲಿಸಲು ಬೇಹುದೀವುದು ಸುಧೆಯನೆನಗೆನಲು।
ತಂದೆ ನಿನಗದಱಿಂದ ಫಲವೇ
ನಿಂದಿದನು ಸೇವಿಸಿದೊಡುರಗರು
ಕೊಂದರೆಂದಱಿ ತನ್ನನನುಚಿತವೂಡಬೇಡೆಂದ॥ ೨೮

ಕೊಟ್ಟು ಅಮೃತವನೆನ್ನ ಕಾರ್ಯವ
ನೆಟ್ಟನಾಗಿಸಿ ತಾಯ ಸೆಱೆಯನು
ಬಿಟ್ಟನೆನಿಸುವೆನೊಯ್ದು ಸುಧೆಯನುವಿಾವೆನುರಗರಿಗೆ।

---

1 ಶಿರವನು, ಕ. ಖ

ಮುಟ್ಟತೆನಿಸಿದ ಬೞಿಕದನು ನೀ
ನಿಷ್ಟವಾದರೆ ಕೊಂಡು ಬಹುದೆನೆ
ಕೊಟ್ಟು ಕಳುಹುವೆನೊಂದು ವರವನು ಬೇಡಿಕೊಳ್ಳೆಂದ ॥ ೩೯

ಇಂದ್ರನಿಂದ ಸರ್ಪಗಳು ತನಗಾಹಾರವಾಗುವ ವರವಂ ಪಡೆದು
ತಾಯ ಬಳಿಗೆ ಬಂದು ಹೇಳುವಿಕೆ.

ಅಶನವಾಗಲಿ ಕದ್ರುತನಯರ
ವಿಸರವೆನಗೆಲೆ ದೇವ ಕಾಂಕ್ಷಿಸಿ
ದೆಸೆವ ವರವಿದೆನಲ್ಕೆ ಕೊಟ್ಟೆನು ಜಯಿಸು ಹೋಗೆನಲು ।
ವಸುಧೆಗೈತಂದನು ಸುರೇಂದ್ರನ
ನೊಸಲು ಬೆದಱಲು ಜನನಿಯಂಘ್ರಿಯ
ವಿಸರುಹಕೆ ತಲೆವಾಗಿ ನಿಂದನು ವಿನಯದಲಿ ಗರುಡ ॥ ೪೦

ತಾಯ ಅಪ್ಪಣೆಯಂತೆ ಸರ್ಪಗಳಿಗೆ ಅಮೃತವನ್ನು ಸ್ವೀಕರಿಸಲು
ಸ್ನಾನಮಾಡಿ ಬನ್ನಿರೆನ್ನುವಿಕೆ.

ತಂದೆನಮೃತವನವ್ವೆ ತಂದೆನು
ತಂದೆ ಯಿದೆ ಯಿದೆ ಯೆನಲು ಬದುಕೆಲೆ
ಕಂದ ಕಲ್ಪಸಹಸ್ರವನು ದೀರ್ಘಾಯುವಾಗೆನಲು ।
ನಿಂದು ಹರಸಿದಳಬಲೆ ಕದ್ರುವ
ನಂದನರಿಗೀಯೆನಲು ಕರೆದನು
ಬಂದು ಕದ್ರುಕುಮಾರಕರ ಪೀಯೂಷವಿದೆ ಯೆನುತ ॥ ೪೧

ಕೊಟ್ಟೆನಮೃತವ ನಿದೆ ಯಿದನು ದಿಟ
ಕೊಟ್ಟೆನೊಲಿದಂತಿದನು ಕೊಂಬುದು
ದುಷ್ಟರಿರ ಹಾಸುವೆದು ದರ್ಭೆಯನವನಿಯಲಿ ಸುಧೆಯ ।
ನೆಟ್ಟನಿರಿಸುವೆಯಿಲ್ಲಿ ಯಿದೆ [1] ಯಿದೆ
ಮುಟ್ಟದಿರಿ ಶುಚಿ ಯಲ್ಲದವರಿದು
ಶಿಷ್ಟವಿಹಿತಸ್ನಾನರಾಗಿಯೆ ಕೊಂಬುದಿದನೆಂದ ॥ ೪೨

1 ನೆಟ್ಟನಿರಿಸಿದೆ, ಕ ಖ.

ಆಗ ಉತ್ಸಾಹದಿಂದ ಸ್ನಾನಕ್ಕೆ ಹೋಗಲು ದರ್ಭೆಯಲ್ಲಿಟ್ಟ ಸುಧೆಯನ್ನು ಇಂದ್ರನು ಅಪಹರಿಸುವಿಕೆ.

ಅಲ್ಲವೇ ತೊತ್ತಲ್ಲವೆ ಯಲ್ಲ
ಅಲ್ಲ ಬಿಡಿ ತೊತ್ತಲ್ಲ ಪನ್ನಗ
ರೆಲ್ಲವರು ಸುಸ್ನಾನರಹವೆಂದೆನುತ ತಮತಮಗೆ ।
ನಿಲ್ಲದೈದಿದರುರುನದಿಯ [1] ಜಲ
ದಲ್ಲಿ ಗಾಕ್ಷ್ಣಬಂದನಮರರ
ಬಲ್ಲಹನು ಕೊಂಡೊಯ್ದನಮೃತವನಱಿಯದಂದದಲಿ ॥ ೪೩

ತಿರುಗಿ ಅಮೃತಸ್ಥಳಕ್ಕೆ ಬರಲು ಅಮೃತವಂ ಕಾಣದೆ ಸರ್ಪಗಳ ದುಃಖ.

ಬಂದು ಮಡಿಗಳನುಟ್ಟು ಕುಂಕುಮ
ಚಂದನಾಗರುಭೂಷಣಂಗಳ
ನಂದದಲಿ ಧರಿಸಿದರು ತಮ್ಮೊಳಗೊಬ್ಬರೊಬ್ಬರನು ।
ಹಿಂದುಱುಹಿ ನಾ ಮುನ್ನ ತಾ ಮು
ನ್ನೆಂದು ತಿವಿದಾಡುತ್ತ ಪನ್ನಗ
ವೃಂದವೆಡರಿನೊಳುಂ [2] ಮುಱುಗಲೈತಂದುದಾಕ್ಷ್ಣಕೆ [3] ॥ ೪೪

ಕುಡಿಯಲಮೃತವನಖಿಳಲೋಕ
ಕ್ಕೊಡೆಯರಹೆವಜರಾಮರತ್ವವ
ಪಡೆದು ಬಱಿಕಿದಿರಾರು ಕಾಂಬೆವೆ ಗರುಡಗಿರುಡರನು ।
ಮೃಡವಿರಿಂಚಿಸುರೇಂದ್ರರೆಂಬರ
ನೆಡಹಿ ಕಾಂಬೆವೆ ನೂಕು ನೂಕೆನು
ತಡಸಿ ಕವಿತಂದರು ಮಹೋರಗನಿಕರ ಬೊಬ್ಬಿಱಿದು ॥ ೪೫

ತಂದನಾಯಾಸವನು ನೋಡದೆ
ವೃಂದದಮರರ ಸದೆದು ತನುಗುಣಿ
ಸಂದುದಲ್ಲಮೃತವದು ಭಾಗ್ಯಾಧಿಕರು ನಾವೆನುತ ।

1 ರ ಭುವನದಜಲ, ಕ. ಖ. 2 ವಂಬರ, ಕ. ಖ. 3 ದುರ್ದಾಂತ ತೀಕ್ಷ್ಣಕೆ, ಕ. ಖ

ಮುಂದಣವರನು ಕೆಡೆತುಳಿದು ಸಾ
ರೆಂದನುತಧಿಕ ಸಂಭ್ರಮದಲಿ
ಯ್ತಂದರೇನೆಂಬೆನು ಮಹೋರಗನಿಕರದುತ್ಸಹವ ॥ ೪೬

ಬೇಡ ಬೇಡೆಲೆ ಬಲ್ಲೆನೆಲ್ಲರು
ಕೂಡಿಕೊಂಡೇ ಕುಡಿವುದಮೃತವ
ನೋಡಲಾಗದು ಸಾಹಸ ಕ್ಷಮಿಸೆನುತ ಕೆಲಕೆಲರು ।
ಕೂಡೆ ಹುಲುಗೈಗಳನು ನೆಗಹಿದ
ರೋಡಿದರೆ ಕೇಳುವವರಾರಿದ
ನೀಡಿಱಿದು ತಾವೊಬ್ಬರೊಬ್ಬರು ಹರಿದರಾ ಸ್ಥಳಕೆ ॥ ೪೭

ಕಾಣೆವೇನಾಯ್ತಿರಿಸಿದೆಡೆಯಲಿ
ಮಾಣದಮೃತವ ಕದ್ದರಾರೋ
ಪ್ರಾಣವನು ನೆಱೆ ಕೊಂಡರಕಟಾ ಕೆಟ್ಟೆವೆಂದೆನುತ ।
ಹೋಣಿಗರು ನೆಕ್ಕಿದರು ದರ್ಭೆಯ
ತ್ರಾಣವಿದು ಸುಧೆಗೆನುತ ಜಿಹ್ವಾ
ಶ್ರೇಣಿ ಸೀಳಿದುದೊಂದೆರಡು ಸೀಳಾಗಲಹಿಕುಲದ ॥ ೪೮

ಇದುವೆ ಲಾಭವೆನುತ್ತ ದುಮ್ಮಾ
ನದಲಿ ಹಿಂಗಿದುದಹಿನಿಕರವಾ
ಪದುಮಮುಖಿಯನು ಬಿಟ್ಟು ವಿನತೆಯನಧಿಕತಾಪದಲಿ ।
ಕುದಿಯುತಿರ್ದುದು ನೋಡಿ ಖಗಪತಿ
ಯಧಿಕಬಲಪೌರುಷಪರಾಕ್ರಮ
ದುದಯುವನು ಶುಭವಹುದೆ ಹೇೞಿ ನ್ಯಾಯನಿಷ್ಠರಿಗೆ ॥ ೪೯

ಗರುಡನು ತಂದ ಅಮೃತವು ಸರ್ಪಗಳಿಗೆ ಏಕೆ ಸೇರಲಿಲ್ಲವೆಂಬ
ಶೌನಕಪ್ರಶ್ನೆಗೆ ಉತ್ತರ.

ಸೂತ ಹೇಳೈ ಗರುಡ ತಂದನು
ಪೂತವಾದಮೃತವನು ಸೇವಿಸ

ಲಾತುರದಿ ನಡೆತಂದು ಕಾಣದುದೇನು ಹೊಸತೆನಲು ।
ಮಾತ ಕೇಳುತಲುಸುರಿದನು ಸಂ
ಪ್ರೀತಿಯಲಿ ಋಷಿನಿವಹಕಂದಾ
ಖ್ಯಾತನಹ ಪೌರಾಣಿಕನು ಸುಧೆಯುಡಗಿದಂದವನು ॥ ೫೦

ಗರುಡ ಹೇಳ್ದನು ಮೊದಲು ಸಖ್ಯವ
ಬೆರಸುವಾಗಲು ಶಕ್ರನೊಡನೆಲೆ
ಸುರಪಗಹಿಗಳಿಗೆ ಸುಧೆಯನು ತೋಱಿ ಮುಂದಿರಿಸಿ ।
ಭರದಿ ತೊಲಗುವೆನದನು ಮುಟ್ಟೆನು
ಮರಳಿ ನೀನೊಲಿದಂತೆ ಮಾಡೆನೆ
ಧರೆಗಿಱಿದು ದೇವೇಂದ್ರ ಬಂದನದೃಶ್ಯರೂಪದಲಿ ॥ ೫೧

ಗರುಡನಹಿಗಳಿಗಿತ್ತು ಸುಧೆಯನು
ತೆರಳಿದನು ನಿಜಜನನಿ ಸಹಿತಾ
ದುರುಳರೆಲ್ಲರು ಪೋಗಿ ನದಿಗೆ ಸ್ನಾನವನು ರಚಿಸಿ ।
ಧರಿಸಿ ವಸನವಿಭೂಷಣಂಗಳ
ನುರುತರದ ಸೌಗಂಧ್ಯಮಾಲ್ಯಾಂ
ಬರದಿನುರಗರು ಬರುತಲಿರೆ ಯಿಂದ್ರನದನೊಲಿದೊಯ್ದ ॥ ೫೨

ಮತ್ತೆ ಬಂದರು ಕದ್ರುತನಯರು
ತತ್ತುಗೊಂಬೆವೆನುತ್ತ ಸುಧೆಯನು
ಸುತ್ತಿ ಕಾಣದೆ ಸತ್ತವೊಲು ಹಂಬಲಿಸಿ ಹಳವಿಸುತ ।
ಮೃತ್ಯುಮುಖರಳಲುತ್ತಲವರಿಗೆ
ವಿಸ್ತರದಿ ಸಿದ್ಧಿಸುವುದೆ ಸುಧೆಯು [1]
ಚಿತ್ತವಿಸಿ ಮುನಿಗಳಿರ ದೈವಪ್ರೇರಿತವನೆಂದ ॥ ೫೩

ವಿನತೆಯು ದಾಸ್ಯವನ್ನು ಬಿಡಿಸುವಿಕೆ.

ಅಡಗುವಿಕೆ ಕೇಳಂದಸಿಂದಿರ
ನಡಿ [2] ಗೆಱಗಿ ಸಿರಿಗರುಡದೇವರ

---

1 ಸುಧೆಯುನೀವು, ಕ. ಖ. 2 ಅಡಗಲಿಕಕೇಳೆಂದು ಇಂದ್ರನು ಯಡಿ, ಕ. ಖ.

ಝುಡಿತೆಯಲಿ ತಾ ಕಳುಹೆ ಬಂದನು ಕದ್ರುವಿನ ಮನೆಗೆ ।
ತಡೆಯದ್ಯೈದಿದ ಸುಧೆಯ ತೋಱಿಸಿ
ಯಡಿಗೆಱಗಿ ತನ್ನಾತ್ಮಜನನಿಯ
ಬಿಡಿಸಿದನು ತಾ ಸೆಱೆಯನಾಕ್ಷಣ ಮುನಿಪ ಕೇಳೆಂದ ॥ ೫೪

ಗರುಡನು ವಿತಳಕ್ಕೆ ಹೋಗಿ ಸರ್ಪಗಳನ್ನು ನುಂಗುವಿಕೆ.

ಇನ್ನು ಹೇಪ್ಪೆ ವ್ಯಾಳಜಾತಿಯ
ಕುನ್ನಿಗಳಗಿನ್ನಿಂತು ಯೆನುತಲಿ
ಪನ್ನಗಾರಿಯು ವಿತಳಕಿೞಿದನು ನಿಮಿಷಮಾತ್ರದಲಿ ।
ಪನ್ನಗರ ಮೋಹರವ ನೆಲ್ಲವ
ಮನ್ನಿಸದೆ ಲೇಸಾಗಿ ನುಂಗಿದ
ತನ್ನ ಜನನಿಯ ಹುಸಿದು ತೊತ್ತನು ಮಾಡಿ ಕೊಟ್ಟುದಕೆ ॥ ೫೫

ಆಗ ಸರ್ಪಮುಖ್ಯರು ಗರುಡನಿಗೆ ವರ್ಷಕ್ಕೊಮ್ಮೆ ಕಪ್ಪವಂ
ಕೊಡಲೊಪ್ಪಲು ಕೊಲೆ ಬಿಡುವಿಕೆ.

ಉರಗಜಾತಿಯನ್ಯೈದೆ ನುಂಗಲು
ನೆರೆದು ನಾಲ್ವರು ಬಂದು ನಮಗಿ
ನ್ನರಿದು ಬದುಕಲು ನಿನ್ನ ಕಯ್ಯಲದೆಂದು ಬಿನ್ನವಿಸೆ ।
ಗರುಡದೇವರು ಬೞಿಕ ನಾಗರ
ಹಿರಿಯರೊಳು ಪರಿವಿಡಿಯೆ ನುಡಿ
ದರು ಸುರರ ದಿನಕೊಂಮ್ಮೆ ಕೊಡುವ್ರದು ನಮಗೆ [1] ಕಪ್ಪವನು ॥
ಎನಲು ಶ್ರಾವಣಶುದ್ಧ ಪಂಚಮಿ
ದಿನದಿ ಕೊಡುವೆವು ನಿಮಗೆ ಕಪ್ಪವ
ನೆನಲು ಬಿಟ್ಟನು ಕೊಲೆಯನಾಕ್ಷಣ ಗರುಡನಹಿಕುಲದ ।
ಮನವೊಲಿದು ಕರ್ಕೋಟಕನ ತಾ
ವಿನತೆಯಾತ್ಮಜ ಕರೆದು ನುಡಿದನು
ಅನುಜ ಕೇಳ್ಳೈ ನಿನ್ನ ನೆನೆವರು ಧನ್ಯರಹರೆಂದು ॥ ೫೬

1 ಕೊಡುವೆವು ನಿಮಗೆ, ಕ. ಖ.

ತಾಯ ಬಳಿಗೆ ಹೋಗಿ ಇನ್ನೇನಪ್ಪಣೆಯೆನ್ನಲು ನನ್ನ ಮನೋರಥ
ಸಂಪೂರ್ಣವಾಯಿತೆಂದು ಹೇಳುವಿಕೆ.

ಇತ್ತಲಾಜನನಿಯ ಹೊರೆಗೆ ವಿಹ
ಗೋತ್ತಮನು ನಡೆತಂದನೆಱಗಿದ
ನುತ್ತಮಾಂಘ್ರಿಗಳಿಂಗೆ ಬೆಸಸಿನ್ನಾವುದೆನಗೆನುತ ।
ಪುತ್ರವಚನವನಾಲಿಸುತ ಪುಳ
ಕೋತ್ತರದ ಸುಪ್ರೇಮಜಲಸಂ
ವೃತ್ತಲೋಚನೆ ಯಪ್ಪಿದಳು ಸಂಪೂರ್ಣವಾಯ್ತೆನುತ ॥ ೫೮

ಎಸೆದನೀಪರಿ ಗರುಡದೇವನು
ದೆಸೆ ಹೊಗಳೆ ಯಶ್ರಮದಲತಿಮಾ
ನುಷಪರಾಕ್ರಮಸತ್ವಬಲಸಂಯುಕ್ತನೆಂದೆನಿಸೆ ।
ಶಶಿವದನೆ ವಿನತೆಯ ಮನೋರಥ
ದೆಸಕ ಫಲವಾದಂತೆ ರಮಿಸುತ
ಋಷಿಕುಲದ ಧರ್ಮವಲಿ ಸುಸ್ಥಿರವಾಗಿ ಯೆಸೆದಿರ್ದ ॥ ೫೯

ಆವನಿದನೋದುವನು ಕೇಳುವ
ನಾವನಿದನುತ್ತಮವಿಹಂಗಮ
ದೇವನುದಯವನಮಳಚಾರಿತ್ರವನು ಮನವೊಲಿದು ।
ಕಾವನವರನು ಪರಮಕಾರು
ಣ್ಯಾವಲೋಕನದಿಂದ ಸೌಖ್ಯವ
ನೀವ ಸಿರಿನಿತ್ಯಾತ್ಮನಾರಾಯಣನು ಕರುಣದಲಿ ॥ ೬೦

ಹತ್ತನೆಯ ಸಂಧಿ ಮುಗಿದುದು.

## ಹನ್ನೊಂದನೆಯ ಸಂಧಿ.

---:o:---

**ಸೂಚನೆ.**

ಹೇಳಿದನು ಗರುಡಪ್ರಭಾವದ
ಮೂಲಕಾರಣಸಂಗತಿಯಿನಾ
ವಾಲಖಿಲ್ಯರ ಚರಿತವನು ಸಂಕ್ಷೇಪದಲಿ ಸೂತ ‖

ಗರುಡನ ಪರಾಕ್ರಮಾದ್ಯತಿಶಯಕ್ಕೆ ಕಾರಣ ಪ್ರಶ್ನೆ.

ಕೇಳದೆನೆಲೈ [1] ಸೂತ ತ್ರಿಭುವನ
ಪಾಲಕರನೆಲ್ಲರನು ಖಗಪತಿ
ಸೋಲಿಸಿದನು ಸಮಗ್ರಬಲತೇಜಃಪ್ರತಾಪದಲಿ ।
ಏಳಿಗೆಯ ವಿಕ್ರಮದ ಲಕ್ಷ್ಮಿಯ
ಮೂಲಕಾರಣವಾವುದುತ್ತಮ
ಶೀಲಗುಣಸಂಪನ್ನ ಹೇಳೆನಗೆಂದನಾ ಮುನಿಪ ‖ ೧

ಉತ್ತರದಲ್ಲಿ—ಕಶ್ಯಪರ ಯಾಗಾರ್ಥವಾಗಿ ಸಮಿತ್ಕು
ಶಾದಿಗಳನ್ನು ತರಲು ಆಜ್ಞಾಪಿಸುವಿಕೆ.

ಎಂದೊಡೆಂದನು ಸೂತನಧಿಕಾ
ನಂದದಲಿ ಶೌನಕಗೆ ಭೃಗುಕುಲ
ನಂದನನೆ ಕೇಳಾದೊಡಾ ವಿಹಗೋತ್ತಮೋದ್ಭವವ ।
ಅಂದವನು ಹೇಳುವೆನು ಕಶ್ಯಪ
ನೊಂದುದಿನ ವರಯಾಗಕರ್ಮವ
ನಿಂದುಮಾಪ್ಪೆನೆನುತ್ತ ಬೆಸಸಿದನಾತ್ಮಜರಿಗೊಲಿದು ‖ ೨

---

1 ಕೇಳಿದೆನೈ, ಕ. ಖ.

ವರಸಮಿತ್ಕುಶಗಳನು ತಹುದ
ಧ್ವರಕೆ ನೀವೆಂದೆನುತ ನಿಜಪು
ತ್ರರಿಗೆ ವಾಸವಮುಖ್ಯರಿಗೆ ವರವಾಲಖಿಲ್ಯರಿಗೆ ।

ಅಪ್ಪಣೆ ಪಡೆದು ಮಕ್ಕಳೆಲ್ಲರು ಸಮಿತ್ಕುಶಾದಿಗಳನ್ನು ತರುವಿಕೆ.

ಕರೆದು ಬೆಸಸಿದರಿವರು ವಿಪಿನಾಂ
ತರಕೆ ಹೋಗಿ ಸಮಿತ್ಕುಶಾದ್ಯು
ತ್ತರಮಹಾಧ್ವರಸಾಧನವ ಸಾಧಿಸಿದರೊಲವಿನಲಿ ॥ ೩

ಸಂದ ಮಖಸಾಧನಸಮಿತ್ಕುಶ
ವೃಂದವನು ವಿಪಿನಾಂತರದ ವರ
ಕಂದಮೂಲಫಲಂಗಳನು ಸಂವರಿಸಿ ತಮತಮಗೆ ।
ತಂದು ಹೊರೆಗಳ ಕಟ್ಟಿ ವರಮುನಿ
ವೃಂದವಾಸವಮುಖ್ಯರಮರರು
ಬಂದರೆಲ್ಲರು ಹೊತ್ತುಕೊಂಡರು ಮರಳಿದರು ಮನೆಗೆ ॥ ೪

ಆಗ ಇಂದ್ರನು ಮಾರ್ಗದಲ್ಲಿ ಬರುತ್ತಿರುವ ವಾಲಖಿಲ್ಯರಂ ಕಂಡು
ಪರಿಹಾಸಮಾಡಿ ದಾಟಿ ನಡೆಯುವಿಕೆ.

ಕಂಡನಾಖಂಡಲನು ಬರುತ
ದ್ದಂಡತೇಜದ ವಾಲಖಿಲ್ಯರ
ಮಂಡಲವನಂಗುಷ್ಠಮಾತ್ರಶರೀರರೆಂದೆನಿಸಿ ।
ಮಂಡೆಗಳಲೊಂದೊಂದು ಸಮಿಧೆಯ
ಕೊಂಡು ಕೃಶತರಗಾತ್ರರೆನೆ ಮುಂ
ಕೊಂಡು ಹೋಗುತ್ತಿರಲು ಮುಮ್ಮಾರ್ಗದಲಿ ಮುನಿನಿಕರ ॥ ೫

ಬಳೆಯುತವೆ ಕೃಶಸೂಕ್ಷ್ಮಕಾಯರು
ಕೊಳಚೆನೀರಲಿ ಮುಳುಗುತೇಳುತ
ಬಳಲುತೈತರೆ ಮುಂದೆ ಹೋಪ ಮಹಾಮುನೀಶ್ವರರ ।
ಭಳಗವನು ಕಾಣುತ್ತ ನಕ್ಕನ

ತುಳಬಲಾನ್ವಿತನಧಿಕಗರ್ವದ
ಲಲಘುಭಾರವ ಹೊತ್ತು ಕೊಂಡ್ಯೈತರುತ ಮಾರ್ಗದಲಿ ॥ ೬
ಅಕಟಕಟ ಕೃಶಗಾತ್ರರತಿ ಬಾ
ಲಕರು ಭಾರಾಕ್ರಾಂತನಿಜಮ
ಸ್ತಕರೆನಿಸಿ ಕುಳಿಗಳಲಿ ಬೀಳುತ್ತೇಳುತಳಲುತ್ತಾ ।
ಶಕುತಿಹೀನರು ಹೋಹುದನು ಮತಿ
ವಿಕಳನೀಕ್ಷಿಸಿ ಗರ್ವದಲಿ ಪಾ
ವಕನವೋಲಿರೆ ದಾಂಟಿ ನಡೆದನು ವರತಪಸ್ವಿಗಳ ॥ ೭

ಆಗ ಇಂದ್ರನ ಮೇಲೆ ವಾಲಖಿಲ್ಯರ ಕೋಪ.

ಕೇಳು ಶೌನಕ ಕಂಡುದಾಮುನಿ
ಜಾಲವಮರೇಶ್ವರನ ನಿಜಕೃತ
ಹೇಳನವನುರುತರತಪೋಜ್ವಾಲೆ ಕೋಪದಲಿ ।
ಮೇಳವಡೆದುದು ನೋಡಿ ಮೇಲೆ ಕ
ರಾಳನಯನರುಸುರಿದನೆ ಯೆಡ
ಗಾಲನದಕೇನಾಯ್ತೆನುತ ಕನಲಿದರು ಸುರಪತಿಗೆ ॥ ೮
ಹೋ ಹೊ ಕಂಡಿರೆ ಗರ್ವವನು ಘನ
ವಾಹನನಸಮರೂಪ [1] ವಿಕ್ರಮ
ಬಾಹುಬಲಸಂಪನ್ನ ತಾನೆಂದಧಿಕತರವೆಸೆವ ।
ಸಾಹಸಿಕತನವವನು ದುರ್ಬಲ [2]
ದೇಹಿಗಳ ಸಾಮರ್ಥ್ಯಬಲವನು
ಹೂಹೆ ನೋಡಲಿ ಯೆನುತ ಗರ್ಜಿಸಿದುದು ಮುನಿಸ್ತೋಮ ॥ ೯

ಬೇರೆ ಇಂದ್ರನನ್ನು ಮಾಡಬೇಕೆಂತ ಯಾಗವನ್ನು ಆರಂಭಿಸುವಿಕೆ.

ಇಂದ್ರತನದೈಶ್ವರ್ಯಮದದಲಿ
ಮುಂದುಗಾಣನು ಮಾಪ್ಪೆವಿನ್ನೊ

1 ವಾಹನಮುವಾರೂಪ್ಯ, ಕ. ಖ.　2 ನಹನಾಹನುದುರ್ಲಭ, ಕ. ಖ.

ಬ್ಬಿಂದ್ರನನು ತೆಗದೀತನಿಂದ್ರತ್ವವನು ಬೇರೊರಿಸಿ |
ಕೊಂದೊಡಹುದಪಕೀರ್ತಿ ತಮಗದು
ಹೊಂದುವದು ಬೇಡೆನುತ ತಮ್ಮೊಳ
ಗೊಂದು ಮತವನು ಮಾಡಿದರು ತೊಡಗಿದರು ತಾವದಕೆ ‖[1] ೧೦

ಮೊದಲುಗೊಂಡರು ಬೇಱೆ ಮಖವನು
ಮದಮುಖನನೆಬ್ಬಟ್ಟಿ ಸುರಪನ
ಪದವನೇಱುವ ವೀರ್ಯಶೌರ್ಯಬಲೋಪಪನ್ನನನು |
ತ್ರಿದಶಪತಿಯನು ಪಡವೆವಾವೆಂ
ದುದಿತದಿವ್ಯಮನೋರಥದಲ
ಗ್ಗದ ಮಹಾಮುನಿವರರು ನೆಗಱಿದರಧ್ವರಕ್ರಿಯವ ‖ ೧೧

ಸರ್ವವಿಷಯದಲ್ಲಿ ಇಂದ್ರನಿಗಿಂತ ಅಧಿಕನಾದವನು ಜನಿಸಬೇಕೆಂದು ಆಹುತಿಕೊಟ್ಟು ಪ್ರಾರ್ಥಿಸುವಿಕೆ.

ಶೌರ್ಯದಲಿ ಶಕ್ರಂಗೆ ನೂರ್ಮಡಿ
ವೀರ್ಯದಲಿ ಸಾಸಿರ್ಮ್ಮಡಿ ಬಲ
ಸ್ಥೈರ್ಯವಿಕ್ರಮನಿಜಪರಾಕ್ರಮಗುಣಸಮೃದ್ಧಿಯೊಳಂ[2] |
ಧೈರ್ಯದಲಿ ಹದಿನಾಲ್ಕು ಜಗಕನಿ
ವಾರ್ಯನೆನಿಸಿ ಮಹಾಬಲಾಧಿಕ
ನಾರ್ಯನೊಬ್ಬನು ಜನಿಸಲೆಂಬಾಹುತಿಯ ನೀಡಿದರು ‖ ೧೨

ಕಾಮವೀರ್ಯನು ಕಾಮರೂಪನು
ಕಾಮಗಮನನು ಕಾಮತೇಜೋ
ಧಾಮ ಕಾಮಬಲಾನ್ವಿತನು ಕಾಮಪ್ರದನು ಧರೆಗೆ |
ಕಾಮಹರನಿಂದಧಿಕನೆನೆ ಸು
ತ್ರಾಮಲೋಕಭಯಂಕರನು ವರ
ಧೂಮಕೇತುವೆ ಜನಿಸಬೇಕೆಂದರು ಹುತಾಶನಗೆ ‖ ೧೩

---

1 ತಾಪಸನ, ಕ. ಖ. 2 ವಿಕ್ರಮಪರಾಕ್ರಮಬಲೈಶ್ವರ್ಯದ ಸಮೃದ್ಧಿಯಲಿ, ಕ. ಖ.

ಯಾಗ ಕಾರಣವೇನೆಂದು ಕಶ್ಯಪರ ಪ್ರಶ್ನೆ.

ಕಂಡನದ ಕಶ್ಯಪನು ಮಿಗೆ ಬೆಸ
ಗೊಂಡನೇನನು ಬಯಸಿದಿರಿ ಕೈ
ಕೊಂಡಿರೇತಕೆ ಯಾಗಕರ್ಮವನೆಲೆ ಮುನೀಂದ್ರರಿರ ।
ಚಂಡತೇಜೋನಿಧಿಗಳಿರ ಬ್ರ
ಹ್ಮಾಂಡಸುಖನಿಸ್ಪೃಹರಿದೇನೆನೆ
ಮಂಡಲದ ಮುನಿವರರು ಪಿತಗೆಂದರು ಮನೋರಥವ ॥ ೧೪

ಇಂದ್ರಗೆ ಶತ್ರುವಂ ಪಡೆಯಲೆನ್ನಲು ಇಂದ್ರನಪರಾಧವೇನೆಂದು ಕೇಳುವಿಕೆ.

ತಂದೆ ಕೇಳಾದೊಡೆ ಸುರೇಂದ್ರನ
ಕೊಂದು ಕೂಗುವ ವೀರನೊಬ್ಬನ
ನಿಂದು ತಾವಭ್ಯರ್ಥಿಸಿದೆವೀ ಹವ್ಯವಾಹನನ ।
ಎಂದೊಡೇನನ್ಯಾಯವನು ನಿಮ
ಗಿಂದ್ರನಾಚರಿಸಿದನು [1] ಕೊಲುವಿರಿ
ನಂದನರೆ ನೀವೇಕೆನಲು ಹೇಳಿದರು ಮುನಿವರರು ॥ ೧೫

ಐಶ್ವರ್ಯಮದದಿಂದ ನಮ್ಮನ್ನು ದಾಟಿ ಹೋದುದೇ ಯೆಂದುತ್ತರ.

ಮಱೆಯ ಮಾತೇಕಿಂದ್ರ ನಮ್ಮನು
ಕುಱಿತು ತನ್ನೈಶ್ವರ್ಯಮದದಲಿ
ನೆಱೆ ಕುರುಡುಗಣ್ಣಾಗಿ ನಮ್ಮನು ದಾಂಟಿ ಹೋದನಲೈ ।
ಕೊಱತೆ ಯೆಮಗಿಲ್ಲದೊಡೇನಾ
ಚರಿಸಬೇಹುದು ಮೂಢಮತಿಯನು
ಹಱಿದು ಕಂಗಳ ಪಟಲವನು ಕೇಳೆಂದರಾಮುನಿಗೆ ॥ ೧೬

ವರಪರಾಭವವೆಂಜನವಲಾ
ಸಿರಿಯ ಮದದಲಿ ಕಾಣದವರಿಗೆ
ಪರಮಶಾಂತಿಪ್ರದವದೇ ಸಾಧನವದಿಹಪರಕೆ ॥

---

1 ಚರಿಸಿದಿರಿ, ಕ. ಖ.

ಉರಿಯ ಹೋಲುವ ವೀರನನು ತಾ
ಹರಿಯನಭ್ಯರ್ಥಿಸುವೆವದಱಿಂ
ದುರಿವುದಿಂದ್ರನ ಮದವದೆಂದರು ಪರಮಋಷಿವರರು ॥ ೧೭

ಅಂತಹ ಯಜ್ಞವು ಬೇಡೆಂದು ಕಶ್ಯಪರ ವಚನ.

ಸಾಕು ಸಾಕನುಚಿತದ ಮುಖವನ
ದೇಕೆ ಮಾಡುವಿರುಪಶಮಿಸುವುದು
ಪಾಕಶಾಸನನಿದಿರೆ ನಿಮಗೆ ಮಹಾಮುನೀಂದ್ರರಿರ ।
ಲೋಕಪೂಜ್ಯರು ನೀವು ವಿಗತವಿ
ವೇಕನೊಡನೆ ವಿರೋಧ ನಿಮಗೇ
ಕಾಕುಳವ ಮಾಡದಿರಿ ಭುವನವನೆಂದನಾಮುನಿಪ ॥ ೧೮

ಪ್ರಳಯಮಾರುತಗೇಕೆ ನೂಕುವಿ
ರೆಳಮುಗಿಲ ಮೋಹರವನಿಂದ್ರನ
ಕೊಲೆಗೆ ಮೋಹವಿದೇಕೆ ನೋಡಿದೊಡಾಗದೇ ಮುನಿದು ।
ನಳಿನನಾಭನ ನೀವು ನಾವಿರ
ಲಱಿವೊಡುಱುಹುವರಾರು ನಿಮಗಾ
ನೆಲೆಯ ತೋಱುವರಲ್ಲ ಮೂಲವ ಬಲ್ಲವರಿಗೆಂದ ॥ ೧೯

ಸೃಷ್ಟಿಯನು ಮಾಡುವನು ಕಮಲಜ
ನಷ್ಟದಿಕ್ಪಾಲಕರು ಕಾಯ್ವರು
ದುಷ್ಟನಿಗ್ರಹಮುಖದಲಿ ತ್ರೈಲೋಕ್ಯಸಂಸ್ಥಿತಿಯ [1] ।
ಅಷ್ಟಮೂರುತಿ ಕಡೆಗೆ ಹಣೆಗಣ
ದೃಷ್ಟಿಯಲಿ ಹೋಮಿಸುವನಿದನು
ತೃಷ್ಟಮತಿ ಮೀಱುವನದಾವನು ತಂದೆಗಳಿರೆಂದ ॥ ೨೦

ಯತಿಗಳಿರ ಕೇಳಿಂ ಜಗತ್ಸಂ
ಸ್ತುತಿಗೆ ಕಾರಣವನುಪಮತಪೋ

1 ಸ್ತುತಿಯು, ಕ. ಖ.

ವ್ರತಗಳಿವು ವಿಪರೀತಹೇತುಗಳಾದರಾರಿದಕೆ ।
ಗತಿ ವೃಥಾಶ್ರಮವಾಗದೇ ಸುರ
ಪತಿಯುದಾರೆೊಳಗಾರು ಲಕ್ಷ್ಮೀ
ಪತಿಯ ಪರುಠವವೀಜಗತ್ತ್ರಯವೆಂದನಾ ಮುನಿಪ ॥ ೨೧

ಬೇಡ ಮುಖವಿದು ಪರಮಪುರುಷನ
ಜೋಡುಯಂತ್ರದ ಹಾಹೆ ಯಿಾಜಗ
ಮಾಡಬಾರದು ಮನದೆ ಮಾಡಿದ ಕರ್ಮವಿದನಾರೂ ।
ಕೋಡಗಕೆ ಕಲ್ಪದ್ರುಮವ ನೀ
ಡಾಡುವರೆ ಕಡಿದೀತಪಸ್ವಿನ
ಕೇಡ ನೋಡಿರಿ [1] ತಂದೆಗಳಿರೆಂದನು ಮುನಿವ್ರಜಕೆ ॥ ೨೨

ಅದಕ್ಕೆ ನಮ್ಮ ಸಂಕಲ್ಪದಂತೆ ನಿಮ್ಮುದರದಲ್ಲಿಯೇ ಮಗನು
ಜನಿಸಲೆಂದು ಋಷಿಗಳ ಪ್ರಾರ್ಥನೆ.

ಆದೊಡಾಗಲಿ ನಿಮ್ಮ ವಚನವ
ನಾದರಿಸಿದೆವು ತಮ್ಮ ಸಂಕ
ಲ್ಪೋದಯಬಲದೆ [2] ಸುರಪತಿಯ ಗರ್ವವನು ಖಂಡಿಸುವ ।
ಆದಪನು ನಿಮಗೊಬ್ಬ ಮಗನರಿ [3]
ಭೇದನೈಕಸಮರ್ಥನಿದಕನು
ಮೋದ [4] ಮಾತ್ರವನೀವುದೆಂದರು ವರಮುನೀಶ್ವರರು ॥ ೨೩

ಶಿಖಿಯುಪಾಸನದಿಂದ ಜನಿಸಿದ
ಸುಖಿಯು ಬಲವಂತನಹನೀ [5] ಶತ
ಮುಖನನಭಿಗಮಿಸಿ ಬಚಿಕಾವೀರನಿಂದ್ರನಲಿ ।
ಸಖಿತನವನಾಗಿಸಲಿ ಪಾಲಿಪು
ದಖಿಳಲೋಕಹಿತಾರ್ಥ ತಿರ್ಯ
ಙ್ಮುಖವ ಧರಿಸಲಿ ಬೇಡಿಕೊಂಡೆನು ನಿಮ್ಮನಾನೆಂದ ॥ ೨೪

---

1 ನೋಡದಿರಿ, ಕ. ಖ. 2 ದಯವದೆ, ಕ. ಖ 3 ನಲೆ, ಕ. ಖ.
4 ವಾದ, ಕ. ಖ. 5 ಸುಖಿಮುಖನು ಖಲವಂತನೀತನು, ಕ. ಖ.

ಆಗ ಬ್ರಾಹ್ಮಣಾತಿಕ್ರಮ ಮಾಡಬೇಡವೆಂದು ಇಂದ್ರನಿಗೆ
ತಂದೆಯ ಬುದ್ಧಿವಾದ.

ಎಂದು ಮುನಿಗಳ ಕೈಯ್ಯಲಿತ್ತು ಪು
ರಂದರನ ಕೈವಿಡಿದು ತಂದರ
ವಿಂದನಯನನ ವೊಮ್ಮನುಂ ಮಹವಿಂದು ತನಗೆನುತ ।
ಕುಂದಬಿಡಿಸಿದೆನವರ ಚಿತ್ತದ
ಮಂದಮತಿಯಾಗದಿರು ವಿಪ್ರರು
ವಂದ್ಯರಲ್ಲವೆ ಮಗನೆ ಯೆಂದನು ಸುರಪತಿಗೆ ಮುನಿಪ ॥ ೨೫

ಶ್ರೀ ಕೆಡುವುದಾಯುಷ್ಯ ಕೆಡುವುದು
ಲೋಕವೆರಡಱ ಸೌಖ್ಯ ಕೆಡುವುದು
ಬೇಕಲಹುದೈಶ್ವರ್ಯ ಕೆಡುವುದು ವಿಜಯವಿಕ್ರಮವು ।
ಲೋಕಪೂಜ್ಯದ್ವಿಜರವಜ್ಞೆ ಯ
ನೇಕಸುಕೃತವ ಕೆಡಿಸುವುದು ನರ
ಕೈಕಹೇತುವದೆಂದು ತಿಳಿ ನೀನೆಂದನಾಮುನಿಪ ॥ ೨೬

ಆಗ ಋಷಿಪ್ರಸಾದದಿಂ ಜನನವೇ ಗರುಡನ ಪರಾಕ್ರಮಕ್ಕೆ
ಕಾರಣವೆಂದು ಹೇಳುವಿಕೆ

ಎಂದು ಮರಳಿದನತ್ತಲಾ ಮುನಿ
ವಂದ್ಯಕಶ್ಯಪನಿತ್ತಲೀ ಮುನಿ
ವೃಂದಮಾಡಿದುದವಭೃಥವನೈದಿದನು ಸುರನಾಥ ।
ಇಂದುಮುಖಿ ವಿನತೆಯಲಿ ಮುನಿಕುಲ
ವಂದ್ಯನಾಕಶ್ಯಪನ ಬಸುಱಲಿ
ನಂದನನು ಜನಿಸಿದನು ವೀರವಿಹಂಗಕುಲನಾಥ ॥ ೨೭

ಭುವನವಂದ್ಯನೆ ಕೇಳು ಬೞಿಕಾ
ಹವಮಹಾವೀರಂಗೆ ಮುನಿಪ
ಟ್ಟವನು ಕಟ್ಟಿಸಿದನಭಿಷೇಕಾನೀಕವನು ರಚಿಸಿ ।

ಭುವನದಲಿ ಪಕ್ಷೀಂದ್ರನೀತನು
ದಿವಿಜರಿಂದ್ರನುವಾಮಹೇಂದ್ರನು [1]
ಸವನಿಸಲಿ ವರಸಖ್ಯವಿಬ್ಬರಿಗೆಂದು ಪತಿಕರಿಸಿ ॥ ೨೮

ಆರು ಸರಿ ಖಗಪತಿಗೆ ಭುವನಾ
ಧಾರ ವಿಷ್ಣುವನೊಲಿದು ಧರಿಸುವ
ಭೂರಿಬಲಸಾಮರ್ಥ್ಯವಿನ್ನೀಧರೆಗೆ ಗುಣನಿಧಿಗೆ ।
ಸಾರತಾಪಸವೀರತಪಕಾ
ಕಾರವಾಯ್ತೆನೆ ಗರುಡದೇವನ
ಭೂರಿಸುಮಹತ್ವ [2] ವನು ಬಣ್ಣಿಸಲರಿದು ತನಗೆಂದ ॥ ೨೯

ಫಲಕಥನ.

ಇದು ಮಹಾದುರಿತಾಘಹರ ವಿಂ
ತಿದು ಮನೋರಥಸಿದ್ಧಿಗಾಗರ
ವಿದು ವಿನಾಶನಶತ್ರುಬಾಧಾಹರಣಸೌಖ್ಯಕರ ।
ಇದನು ಹೇಳುವ ಕೇಳುವಾಸದು
ಹೃದಯರನು ರಕ್ಷಿಸುವ ನೊಲಿದು
ಪದುಮದೃಶನಿತ್ಯಾತ್ಮನಾರಾಯಣನು ಕರುಣದಲಿ ॥ ೩೦

ಹನ್ನೊಂದನೆಯ ಸಂಧಿ ಮುಗಿದುದು.

1 ಮತೀಂದ್ರನಿಂದ್ರನು, ಕ. ಖ.    2 ಭೂರಿಮಹತ್ವ, ಕ. ಖ.

## ಹನ್ನೆರಡನೆಯ ಸಂಧಿ.

ಸೂಚನೆ.

ಶೇಷನರ್ಥಿಸಿ ಪರಮಸಾಖ್ಯವಿ
ಶೇಷವನು ಚರಿಸಿದನು ತಪವನ
ಶೇಷವಿಷಯವ ತೊಱೆದು ಪಡೆದನಶೇಷಸಂಪದವ ॥

ಶೌನಕಪ್ರಶ್ನೆ.

ಸೂತ ಹೇಳೇನಾಯ್ತು ಬೞಿಕಾ
ಮಾತೆ ಯಿತ್ತಾಶಾಪವುರಗ
ವ್ರಾತ ಪತಿಗಳಿಗೇನ ಮಾಡಿದರವರು ಪ್ರತಿಕ್ರಿಯವ ।
ಆತೆರವ [1] ಹೇಳೆನಗೆ ಭುವನ
ಖ್ಯಾತರಲ್ಲವೆ ಕಾದ್ರವೇಯರು
ತಾತ ಹೇಳೆನಗೆನಲು ಮಗುೞಿಂತೆಂದನಾಸೂತ ॥ ೧

ಉತ್ತರದಲ್ಲಿ—ತಾಯ ಶಾಪದಿಂ ಸರ್ಪಗಳು ಚಿಂತಿಸುವಿಕೆ.

ಕೇಳು ಶೌನಕ ತಾಯ ಶಾಪವ
ಕೇಳುತವೆ ಮಱುಗಿದರು ಬಹಳ
ಜ್ವಾಲೆಯಲಿ ಮುೞುಗಿದರು ಮರಣಭಯಾತುರರು ಬೞಿಕ ।
ಹೇೞಿ ಫಲವೇಸಿನ್ನು ಮಾತೆಯ
ಕೀಳಶಾಪವ ಪರರಿಗುಸುರಿದೊ
ಡಾೞಿಗೊಂಬರು ಗತಿಯದಿದ [2] ಕಿನ್ನಾವುದಕಟೆನುತ ॥ ೨

---

1 ಆತುರರು, ಕ. ಖ. 2 ಖತಿಯುವಿದ, ಕ. ಖ.

ಈತೆಱದಿ ಕಾಕೋದರಾವಳಿ
ಭೀತಿ ಗೊಳುತವೆ ತಮ್ಮೊಳೊಂದ
ಖ್ಯಾತಿಯಲಿ ತಾವೆಱವ ತೆಱನಾಯ್ತೆನುತಲಳುಕುತಿರೆ ।

ಅದರಲ್ಲಿ ಶೇಷದೇವರು ವಿಶೇಷವಾಗಿ ದುಷ್ಟ ಸರ್ಪಗಳ
ಸಂಗವಂಬಿಟ್ಟು ತಪಸ್ಸನ್ನು ಮಾಡುವಿಕೆ.

ಜಾತಕಶ್ಯಪತನುಜರೊಳು ವಿ
ಖ್ಯಾತಮಹಿಮನು ಶೇಷನೆಂಬವ
ನಾತತುಕ್ಷಣ ಭೀತಿಗೊಂಡನು ತನ್ನ ಮನದೊಳಗೆ ॥ ೩

ಘೋರರೂಪರು ಘೋರಕರ್ಮರು
ಘೋರರೋಷವಿಶಿಷ್ಟಹೃದಯರು
ಘೋರತರವಿಷವೀರ್ಯ ದೂಷಿತಮುಖರು ಮೂಜಗಕೆ ।
ಘೋರತರಭಯದುಃಖಕಾರಿಗ
ಳಾರುವನು ಸೈರಿಸದ ಪಾಪವಿ
ಚಾರರುರಗರೆನುತ್ತ ಬಿಸುಟನು ಸಂಗವನು ಖಳರ ॥ ೪

ದುರ್ವಿನೀತರು ಸೈರಿಸರು ಕಿಱಿ
ಯುರ್ವಿಯನು ತತ್ಪುತ್ರವರ್ಯನು [1]
ಸರ್ವವೀರರ ದೇವನಲ್ಲಾ ಗರುಡನಾತನಲಿ ।
ನಿರ್ವಹಿಸುವರೆ ವೈರವನು ವಿಷ
ಗರ್ವಿತರು ದುಷ್ಪುತ್ರರವರನು
ಸರ್ವಥಾ ಬಿಡಳವ್ವೆ ತನಗಿನ್ನಾರು ಗತಿಯೆಂದ ॥ ೫

ವೈರವತಿಬಲನೊಡನೆ ಜನನಿಯು
ಘೋರತರವಹ ಶಾಪವಿಂತೆರ
ಡಾಱು ಮಾಣಿಸಬಹುದು ಬಂದುದು ಕೇಡು ತನಗಿನ್ನು ।

1 ರಿವರನು, ಕ. ಖ.

ಆರು ಗತಿ ಕಾಣರು ದುರಾತ್ಮರು
ಬೇರುಗೊಲೆಯನೆನುತ್ತ ಬಿಸುಟನು
ದಾರಮತಿ ಜನನಿಯನು ಸಹಜನಿಜಾಪ್ತಬಾಂಧವರ ॥ ೬

ಸಂಗವೇ ಸುಡು ಕಷ್ಟ ದುರ್ಜನ
ಸಂಗವದಱಿಂ ಕಷ್ಟ ಮಾಪ್ಪೆನು
ಸಂಗವನು ಸಜ್ಜನರಲತಿಶಯಪುಣ್ಯವಂತರಲಿ ।
ಸಂಗ ಸಕಲಸ್ವಾರ್ಥಸಾಧನ
ಸಂಗವಾತ್ಮಸುಖೈಕಬಾಧನ
ಸಂಗಹೀನರ ಸಂಗ ಗತಿಯೆನುತ ಹೊಱವಂಟ ॥ ೭

ಇರದೆ ಹೊಕ್ಕನು ಗಂಧಮಾದನ
ಗಿರಿಯ ಪುಣ್ಯಾಗ್ರಾಮವೊಪ್ಪುವ
ಪರಮಪಾವನವೆನಿಸಿ ಮೆಱೆವಾಬದರಿಕಾಶ್ರಮವ ।
ಚರಿಸಿ ತಪವನು ದೇಶದೇಶಾಂ
ತರದೊಳಗೆ ತೊಳಗುತ್ತ ಗಮಿಸಿದ
ನಿರದೆ ಗೋಕರ್ಣಾದಿಪುಣ್ಯಕ್ಷೇತ್ರವಿದ್ದೆಡೆಗೆ ॥ ೮

ಬಂದನಾಪುಷ್ಕರಕೆ ಮಗುೞ
ಲ್ಲಿಂದ ಹಿಮಗಿರಿಪಾರ್ಶ್ವದಾಶ್ರಮ
ವೃಂದವನು ಸಾರಿದನು ಸೇರಿದನುರುತಪೋಧನರ ।
ವೃಂದ[1] ವನು ಸಚ್ಚರಿತಗುಣಗಣ
ಕಂದವನು ಬಹುಕಾಲ ತಪದಲಿ
ನಿಂದು ನಿರ್ಮಲಹೃದಯನಿದ್ದನು ನಿಯಮನಿಷ್ಠೆಯಲಿ ॥ ೯

ಧರೆಯ ತೀರ್ಥಕ್ಷೇತ್ರನಿಕರವ
ನಿರದೆ ಸೇವಿಸುತಾತ್ಮನಿಷ್ಠೆಯ
ಅರಿವಿಜಯನಿಂದ್ರಿಯವನಡಗಿಸಿ ಮೌನಿಯೆಂದೆನಿಸಿ ।

1 ದಂದ, ಕ. ಖ.

ಪರಮಪಾವನಕೀರ್ತಿಸುಶ್ರವಣ
ವಿರಚಿತಾಮಳತಪವ ತಾನಾ
ಚರಿಸುತಿರ್ದನು ಶೇಷನಪಗತದೋಷನೆಂದೆನಿಸಿ ॥ ೧೦

ಭಾಸುರಾಮಲಮೃದುಶರೀರನು
ಶೇಷನಾಚರಿಸಿದನು ತಪವನು
ಭೂಶಯನನಿರಶನಮಹಾಕ್ಲೇಶಂಗಳನು ಧರಿಸಿ ।
ಪೈಸರಿಸಿ ನಡುಬಾನೊಳಡಗುವ [1]
ನೇಸಱಿನ ತಾಪದಲಿ ಮೃದುಲಶಿ [2]
ರೀಷಕುಸುಮದ ತೆಱದಿ ಬಾಡಿದನಧಿಕತಾಪದಲಿ ॥ ೧೧

ಈರೀತಿ ತಪಸ್ಸಿನಲ್ಲಿರುವ ಶೇಷದೇವರ ಬಳಿಗೆ ಬ್ರಹ್ಮನ ಆಗಮನ.

ಇನಿತು ತೀವ್ರತಪಃಪ್ರಭಾಸ್ಪದ
ನೆನಿಸಿ ಕೃಶತರಗಾತ್ರನನಶನ [3]
ಮುನಿಜನರ ಜಾಲದಲಧಿಷ್ಠಿತಿಮಂತ [4] ನೆಂದೆನಿಸಿ ।
ಅನಘ [5] ನಿರಲಾಪುಷ್ಕಲವನದಿ [6]
ನೆನೆಯುತಿರಲೈತಂದ [7] ಪದುಮಭ
ವನು ಮೆಱೆಯುತಖಿಳಾ [8] ಮರೇಶ್ವರಮುನಿವರರು ಸಹಿತ ॥ ೧೨

ಮೊಱೆವ ದುಂದುಭಿಶಂಖವೀಣಾ
ಮುರಜಪಟಹಪಟುಸ್ವನದಿನಂ
ಬರದಿನಿೞಿದನು ಸಿದ್ಧವಿದ್ಯಾಧರರ ಕಿನ್ನರರ ।
ಭರಿತಜಯರವಸಂಸ್ತುತಿಯುಲ
ಪ್ಸರಸಿಯರ ಸಂಗೀತನೃತ್ಯದ
ಪರಮವಿಭವದಲಂದು ಮೈದೋಱಿದನು ಕಮಲಭವ ॥ ೧೩

---

1 ಮರುದೇಹಕರಗುವ, ಕ. ಖ.
2 ನೇಸರಿಂಸೀತೊಯ್ದಶಿ, ಕ. ಖ.
3 ಕೃಶಗಾತ್ರನಸ್ರ್ಯಾಂಗದಾ, ಕ. ಖ.
4 ಜನಜಾಲದಲಧಿಷ್ಠಿಗಿಗಂತ, ಕ. ಖ.
5 ಅನಟು, ಕ. ಖ.
6 ಲಾರಣ್ಯದಲಿ, ಕ. ಖ.
7 ನೆನೆದೈತಂದನಲ್ಲಿಗೆ, ಕ. ಖ.
8 ವನಖಿಳಾ, ಕ. ಖ

ಬ್ರಹ್ಮನಂ ಕಂಡು ಶೇಷಕೃತಸ್ತುತಿ.

ಕಂಡನಿದಿರಲಿ ಹೊಳದು ತೋಱುವ
ಪುಂಡರೀಕಾಸನನ ಪದದಲಿ
ದಿಂಡುಗೆಡಸಿದನೊಡಲನವನಿಗೆ ಜಯು ನಮೋ ಯೆನುತ ।
ಗಂಡುಗಲಿ ತಾಪಸರ ದೇವನು
ಮಂಡೆಯಲಿ ಮುಕುಳಿತಕರಾಂಜಲಿ
ಪುಂಡರೀಕವ ಹೊತ್ತು ಕುಣಿದನು ಭಕ್ತಿಭಾವದಲಿ ॥ ೧೪

ಜಯು ನಮೋ ಜಗದೇಕಕರ್ತೃವೆ
ಜಯು ಜಯುತು ಜಗದೀಶ್ವರೇಶ್ವರ
ಜಯು ನಮೋ ಜಗದೇಕಭರ್ತೃವೆ ಜಯು ಮಹೇಶ್ವರನೆ ।
ಜಯು ನಮೋ ಜಗದುದ್ಭವಸ್ಥಿತಿ
ಲಯುವಿಹಾರನೆ ನಿಗಮಸಾರನೆ
ಜಯು ವರೇಣ್ಯ ಶರಣ್ಯ ಘನಕಾರುಣ್ಯವಿಗ್ರಹನೆ ॥ ೧೫

ರಕ್ಷಿಸೆಂದು ಪ್ರಾರ್ಥಿಸಲು ಬ್ರಹ್ಮನು ತಪಸ್ಸಿಗೆ ಕಾರಣವೇನೆಂದು
ಕೇಳಲು ಉತ್ತರ.

ತಂದೆ ರಕ್ಷಿಸೆನುತ್ತ ಚರಣ
ದ್ವಂದ್ವದಲಿ ಮೆಯ್ಯಿಕ್ಕಿ ಬಿದ್ದಿರ
ಲಿಂದಿರಾರಮಣಾತ್ಮಜನು ಕಾರುಣ್ಯದಲಿ ನೋಡಿ ।
ಕಂದ ಬಾರೈ ಹೇೞಿದೇತಕೆ
ಬಂದೆ ತಪದಲಿ ಕಾರಣವ ಹೇ
ೞೆಂದು ಮೈದಡವಿದನು ನಸುನಗುತಹಿಕುಲೇಶ್ವರನ ॥ ೧೬

ಕಾರಣವ ಬೆಸಗೊಂಬೆ ಜೀವ
ಪ್ರೇರಕನೆ ಚೈತನ್ಯರೂಪನೆ
ಬೇಱೆ ಬೆಸಗೊಳಲುಂಟೆ ಜೇರನು ಶಾಖೆಗಳ ತಿಳಿವ ।
ಕಾರಣಜ್ಞನೆ ಕದ್ರುಪುತ್ರರು

ಮೇರೆಯನು ಮೀಱಿದರು ಪಾಪಾ
ಚಾರರೊಡನಿರಲಾರದಿತ್ತಲು ಬಂದೆ ನಾನೆಂದ ‖ ೧೭
ಮಂದಮತಿಗಳು ವಿನತೆಯನು ನೆಱೆ
ನಿಂದಿಸುವರಾವಿನತೆಯಾತ್ಮಜ
ನೆಂದೊಡವನಸುವಿಂಗೆ ಮುನಿವರು ಪಾಪಕರ್ಮಿಗಳು ।
ಬಂದುದದಱಿಂದೞಿವು ವಂಶಕೆ
ತಂದೆ ಬಲ್ಲೈ ವೈರವೇ ಸಲೆ
ಸಂದೊಡೆನ್ನನು ಜಱಿದು ಕಳೆವರು ಖ್ಯಾತಿಯಲಿ ಖಳರು ‖ ೧೮
ಓವೆನೆನಗಿನ್ನೇನು ಗತಿ ಯೆನು
ತೀವಿಪಿನವನಗಿರಿನದೀಜಲ
ಸೇವೆಯಲಿ ಸಲೆ ಪಾಪಕರ್ಮವ ಜಱಿದು ಸದ್ಗತಿಗೆ ।
ದೇವ ಪದಸೇವೆಯನು [1] ಮಾಪ್ಪೆನು
ಸಾವೆನೆಂದೇ ನೆನೆದು ತಪದಲಿ
ಭಾವವನು ಮಾಡುವೆನು ಮನದಲಿ ನಿಮ್ಮ ಶ್ರೀಪದದ ‖ ೧೯
ಕಂಡೆನಿನ್ನಗ ದೇವ ನಿಜಪದ
ಪುಂಡರೀಕವನಿದನು ಬಹುಳೋ
ದ್ದಂಡಪುಣ್ಯದ ಫಲದಪೂರಾಯದ ಸಮೃದ್ಧಿಯಲಿ ।
ಹಿಂಡಿದೆನು ಮನದಳಲನಾರ್ತಿಯ
ಖಂಡಿಸಿದೆನಿನ್ನೊಂದು ಬಿನ್ನಹ
ಪುಂಡರೀಕೋದ್ಭವನೆ ಚಿತ್ತವ ಕರುಣಿಸುವುದೆಂದ ‖ ೨೦

ತಾಯ ಶಾಪಕ್ಕೆ ಸಹೋದರರ ದುಶ್ಚೇಷ್ಟೆಗು ಭೀತಿಪಟ್ಟು ತಪವಂ ಮಾ
ಡುವೆನೆನಲು ಬ್ರಹ್ಮನ ಅಭಯವಚನವು ವರಪ್ರದಾನವೂ.

ಎಂದು ತಪವನು ನೂಕಿ ಚರಣ
ದ್ವಂದ್ವದಲಿ ಹೊರಳುತ್ತ ರಕ್ಷಿಸು

1 ಸಂಬಳವ, ಕ. ಖ.

ತಂದೆ ತನ್ನನನಾಥನನು ಕಾರುಣ್ಯದಿಂದೆನಲು ।
ಮಂದಹಾಸದಲೆತ್ತಿದನು ಬಾ
ಕಂದ ಬಾರೆಲೆ ಕೊಡುವೆ ನೀ ಗೋ
ವಿಂದನಂಘ್ರಿಯ ಪ್ರಿಯನೆ ಬಾ ಯೆನುತಪ್ಪಿದನು ತೆಗೆದು ॥ ೨೧

ಭುವನವಂದ್ಯನೆ ಕೇಳು ಮೇಲೊರೆ
ವ ವರವೀವುದು ತನಗೆ ಮತಿ ಸಂ
ಭವಿಸಲಾಗದಸಂಗತದ ವರ್ಜಿಸಲಿ ಪಾಪಗಳು ।
ಸವನಿಸಲಿ ಸತ್ಸಂಗ ಸದ್ಧ
ರ್ಮವನು ಮಾಡುವ ಪುಣ್ಯಮತಿ ಬೇ
ಡುವೆನು ಪುಣ್ಯಕೃಪಾಕರನೆ ಕರುಣಿಸುವುದೆಮಗೆಂದ ॥ ೨೨

ತಾಯ ಶಾಪವು ಖಳರ ಜೀವವ
ಬೀಯ ಮಾಳ್ಪುದು ಬೆದಱದಿರು ಪಾ
ಪಾಯುಗಳು ಬದುಕುವರೆ ಭೂತದ್ರೋಹಿಗಳು ದಿಟಕೆ ।
ಆಯುವಂತನೆ ನೀನು ಮನದಲಿ
ಬೇಯದಿರು ಬಾಧಿಸದು ನಿನ್ನನು
ತಾಯ ಶಾಪವದಮಳಚರಿತನನೆಂದನಬುಜಭವ ॥ ೨೩

ಬೇಡು ವರವನು ಮಗನೆ ಸಂಶಯ
ಬೇಡ ಬಿಡು ಭೀತಿಯನು ಮನದಲಿ
ನಾಡೆ ಮೆಚ್ಚಿದೆನಮಳಚರಿತನೆ ಬೇಡಿಕೊಳ್ಳೆನಲು ।
ಕೂಡಿ ಕರಮುಕುಳವನು ಶಿರದಲಿ
ಬೇಡುವೆನು ಧರ್ಮವನು ಧರೆಯಲಿ
ಕೂಡೆ ಮತಿಯನು ಕರುಣಿಸುವುದೆಂದೆಱಗಿದನು ಪದಕೆ ॥ ೨೪

ಎಂದೊಡಹುದೈ ವೀರ ತನ್ನನು
ಬಂದಿ ಹಿಡಿದೈ ಮಗನೆ ಮೆಚ್ಚಿದೆ
ನಿಂದುಧರನಾಯುಷ್ಯವಾಗಲಿ ನಿನಗೆನುತ ಹರಸಿ ।

ನಿಂದು ತೆಗೆದಪ್ಪಿದನು ಕೊಟ್ಟೆನು
ಕಂದ ಕಾಂಕ್ಷಿತವರವನಾನಿ
ನ್ನೊಂದ ಹೇೞುವೆನದನು ಸುಸ್ಥಿರವಾಗಿ ಕೇಳೆಂದ ॥ ೨೫

ಭೂತಭೌತಿಕನಿಕರಸಹಿತೀ
ಭೂತಳವನಿದನೆಲ್ಲವನು ನೀ
ನೋತು ಧರಿಸೆಲೆ ಮಗನೆ ಚಲಿಸದ ವೋಲು ಸಂಗ್ರಹಿಸಿ ।
ಆತು ನಿಲ್ಲೆನಗಿಷ್ಟವದು ಸಲೆ
ಭೂತಹಿತವಾಪರಮಪುರುಷ
ಪ್ರೀತಿಕರವಿದಱಿಂದಧಿಕವಿಲ್ಲೆಂದನಬುಜಭವ ॥ ೨೬

ಇತ್ತೆನಜರಾಮರತೆಯುನು ನಿನ
ಗುತ್ತಮೋತ್ತಮವೀರ್ಯಶೌರ್ಯಗು
ಣೋತ್ತರದ ಸಂಸಿದ್ಧಿಸಾನ್ನಿಧ್ಯವನು ನಿನಗೆನುತ ।
ಸತ್ವನಿಧಿ ಬೋಳೈಸುತಿರಲುರ
ಗೋತ್ತಮನು ತಂದಿರಿಸು ಶಿರದಲಿ
ಹೊತ್ತುಕೊಂಬೆ ಚರಾಚರವ ಭೃತ್ಯ ನಿಮಗಾ[1] ನೆಂದ ॥ ೨೭

ವರದಾನವನ್ನನುಸರಿಸಿ ಭೂಮಿಯುನ್ನು ಹೊರೆಯುಲು ಪಾತಾಳಕ್ಕೆ
ಹೋಗೆಂದು ಬ್ರಹ್ಮನಾಜ್ಞೆ.

ಇೞಿ ಮಗನೆ ಪಾತಾಳಲೋಕಕೆ
ತಲೆಯುಲಿರಿಸುವುದಲ್ಲ ಬಡಹೋೞಿ
ಸಲೆ ಸಮಸ್ತದ್ವೀಪಸಾಗರಶೈಲವನಸಹಿತ ।
ವಿಳಸದಂಡಕಟಾಹವಿದು ತಾ
ತಲೆಯುಲಿರಿಸಿದ ಭಾರವಲಸದಿ
ರಿಳೆ ನಿನಗೆ ಮಾರ್ಗವನು ಕೊಡುವಳು ತಂದೆ ಹೋಗೆಂದ ॥ ೨೮

---

1 ನಿಮ್ಮಡಿಭೃತ್ಯನಾ, ಕ. ಖ

ಕಾರ್ಯವು ಸುಲಭವಾಗುವಂತೆ ಅನುಗ್ರಹಿಸಬೇಕೆಂದುಬೇಡಲು ಅನುಗ್ರಹಿಸುವಿಕೆ.

ನಿಮ್ಮಡಿಯ ಕೃಪೆಯುಂಟು ಹೊಱುವೆನು
ಹಮ್ಮ ನುಡಿವವನಲ್ಲ ಸಾಹಸ
ಸಮ್ಮತಬ್ರಹ್ಮಾಂಡವಲ್ಲಾ ನಿನ್ನ ಕಿಂಕರಗೆ ।
ಹೆಮ್ಮ ಗಂಡೆನು ಶಿರದಲಿಡು ನಿಜ
ರಮ್ಯ ಹಸ್ತಾಂಬುಜವನೆನುತಾ
ಬೊಮ್ಮನಂಘ್ರಿಯ ಬೀಱುಕೊಂಡನು ಶೇಷನಭಿನಮಿಸಿ ॥ ೨೯

ಹೋಗು ಸುಖಿಯಾಗೆನುತ ತಲೆಯನು
ತೂಗಿ ಶಿರದಲಿ ಕಯ್ಯನಿಟ್ಟನು
ರಾಗದಲಿ ಸಖ ನಿನಗೆ ಗರುಡನೆನುತ್ತ ಕೈವಿಡಿದು ।
ನಾಗವೈರಿಯು ಕರೆದು ಸಖ್ಯವ
ಭೋಗಿರಾಜನಲಾಚರಿಸಿ ಗುಣ
ಸಾಗರನ ಕಳುಹಿದನನಂತನನಧಿಕಕರುಣದಲಿ ॥ ೩೦

ಬ್ರಹ್ಮಗಮನಾನಂತರ ಶೇಷನ ಭೂಭಾರವಹನವರ್ಣನೆ.

ಇತ್ತಲಜನಡರಿದನು ನಭವನು
ಮೊತ್ತದಮರರು ಸಹಿತನಾಗಕು
ಲೋತ್ತಮನು ರಸೆಗಿೞಿದನಂದು ಮನೋನುರಾಗದಲಿ ।
ಹೊತ್ತು ನಿಂದನು ಧರೆಯ ನೊಂದೇ
ವೃತ್ತಫಣಿಮಂಡಲದಲರಳನು
ಮತ್ತಗಜ ಹೊಱುವಂತೆ ಶೇಷನಶೇಷಜನ ಹೊಗಳೆ ॥ ೩೧

ಸೃಷ್ಟಿಯನು ನೆಱೆ ಧರಿಸಲೆಂದಜ
ನಟ್ಟಕಂಬವೊ ಮೇಣು ಬೆಳ್ಳಿಯ
ಬೆಟ್ಟವೋ ಭವಗಿರಿಯೊ ಹೇಳೆನಲಧಿಕತೇಜದಲಿ ।
ವಿಷ್ಟಪಾಧೀಶ್ವರನ ಹೊಗಳಲು

ದೃಷ್ಟಿ ಮೋಹನಮೂರ್ತಿ ನಿಂದನು
ವಿಶ್ರವಸನಾಜ್ಞೆಯಲಿ ನಿಜಯೋಗಲೀಲೆಯಲಿ ॥ ೩೦

ಓಲಗಿಸಿದುದು ಸಕಲಪನ್ನಗ
ಜಾಲವಾತನ ಪದವನವನತ
ಮೌಳಿಯಲಿ ಸುರಸಿದ್ಧಕಿನ್ನರದೈತ್ಯದಾನವರು ।
ಹೇೞಿದುದನಾಚರಿಸುವರು ತಾ
ಹೇೞಲಱಿಯೆನು ಯೋಗಸಿದ್ಧಿಗೆ
ಮೂಲಭವನದ ತೆಱದಿ ರಂಜಿಸಿದನು ಜಗತ್ತ್ರಯವ ॥ ೩೩

ಇಂತು ಧರಿಸಿದನೊಂದು ಮುಖದಲ
ನಂತಭೂಮಿಯ ನಾಥನಾಜಗ
ದಂತರಂಗನಿವಾಸವಿಷ್ಣುವನೊಂದು ರೂಪದಲಿ ।
ಕಂತುಹರಭೂಷಣನೆನಿಸಿದನ
ನಂತಗುಣನಿಧಿ ಯೊಂದುರೂಪಿನ
ಲೆಂತು ಬಣ್ಣಿಸಲಱಿವೆ ನಾ ನಿಜಯೋಗಸುಖನಿಧಿಯ ॥ ೩೪

ಎಸೆದನಿಂತು ಸಹಸ್ರಗುಣಗಣ
ವಿಸರನೆನಿಸಿ ಸಮಸ್ತಲೋಕಕೆ
ಶಶಿನಿಭಾಂಗನು ಮಂಗಳಪ್ರದನಾಗಿ ನೆಱೆ ಧರಿಸಿ ।
ವಸುಧೆಯನು ಲೀಲೆಯಲಿ ಭುವನ
ಪ್ರಸರಪಾವನನೆನಿಸಿ ಕರುಣಾ
ರಸಮಹೋದಧಿ ಯೋಗಸಾಂಖ್ಯಜ್ಞಾನನಿಧಿಯೆನಿಸಿ ॥ ೩೫

ಫಲಕಥನ.

ಆವನಿದನೋದುವನು ಕೇಳುವ
ನಾವನಿದನೊಲಿದೀ ಮಹೋರಗ
ದೇವನಮಳಚರಿತವನು ಪಾವನಚರಿತ್ರನನು ।

[1] ಭುಜಭವನ, ಕ. ಖ.

ಈವಿಮಳಪುಣ್ಯಾತ್ಮರನು ಕರು
ಣಾವಲೋಕನದಿಂದ ಸಂತತ
ಕಾವನಾನಿತ್ಯಾತ್ಮನಾರಾಯಣನು ಮನವೊಲಿದು ॥ ೩೬

ಹನ್ನರಡನೆಯ ಸಂಧಿ ಮುಗಿದುದು.

## ಹದಿಮೂರನೆಯ ಸಂಧಿ.

### ಸೂಚನೆ.

ವಾಸುಕಿಯ ತಂಗಿಯಲಿ ತೇಜೋ
ರಾಶಿಯೆನಲಾಸ್ತೀಕನೆಂಬ ಮ
ಹೀಸುರೋತ್ತಮನುದಿಸಿದನು ಸಂಪನ್ನಗುಣವನಧಿ ॥

ಇತರ ಸರ್ಪಗಳು ತಾಯ ಶಾಪಭಯದಿಂದ ಚಿಂತಿಸುವಿಕೆ.

ಕೇಳು ಶೌನಕ ವರಮಹೋರಗ
ಜಾಲವಾನಿಜಜನನಿಯಿತ್ತಾ
ಕೀಳ ಭೀಕರಶಾಪದಲಿ ನೆಱೆ ಬೆಂದು ತಮ್ಮೊಳಗೆ ।
ಬಾಳುವಂದವದೆಂತೆನುತ ಸುವಿ
ಶಾಲಮತಿಗಳು ಸುಯ್ದು ಚಿಂತಿಸಿ
ಕೋಳುವೋದರು ಮರಣಭಯದಲಿ ಬಹಳದುಸ್ಥಿತಿಗೆ ॥ ೧

ಈಸಮಸ್ತಮಹೋರಗರ ಕುಲ
ಭೂಷಣನು ಭುವನೈಕವಂದ್ಯನು
ವಾಸುಕಿಯೆನಿಪ್ಪುರಗಪತಿ ನೆರಹಿದನು ಮತಿಯುತರ ।

ಭಾಸುರೋರಗಮಂತ್ರಿಗಳನವಿ
ನಾಶವೆಂತಹುದೆನುತಿದಕೆ ಮ
ತ್ತೋಸರಿಸದಾಳೋಚನೆಯ ಮಾಡಿದರು ತಮ್ಮೊಳಗೆ ॥ ೨

ಬಂದುದಲ್ಲೈ ಶಾಪವೆಲ್ಲರಿ
ಗಿಂದು ಸುಕುಲಕ್ಷಯಕೆ ಕಾರಣ
ತಂದುದಲ್ಲೈ ನಮ್ಮ ಮನದಲಿ *ಘೋರತರಭಯವ ।
ಮಂದಮತಿಗಳು ನಾವು ತಪ್ಪಿಸು
ವಂದವನು ನಿಶ್ಚಯಿಸದೀಪರಿ
ತಂದೆಗಳಿರಿಹುದನುಚಿತವು ನೀವಱಿಯಿರೇ ಯೆಂದ ॥ ೩

ಹುಟ್ಟಿ ಜನಮೇಜಯನು ತಂದೆಯ
ಮುಟ್ಟಿದನು ತಕ್ಷಕನೆನುತ್ತವೆ
ಸುಟ್ಟು ಬೂದಿಯ ಮಾಳ್ಪ ನೆಱೆ ನಮ್ಮೆಲ್ಲರನು [2] ದಿಟಕೆ ।
ಇಟ್ಟು ಕಿಚ್ಚಿದು ಜನನಿ ನಮ್ಮನು
ಬಿಟ್ಟು ಹೋಹುದ ಕಾಣೆನೇತಕೆ
ದೃಷ್ಟಿವಿರಹಿತರಾಗಿ ನೀವಿಹಿರೆಂದನುರಗೇಂದ್ರ ॥ ೪

ಹೇಳಿ ಬುದ್ಧಿಯನಿಲ್ಲಿ ಶಾಪವ
ಸೋಲಿಸುವ ಪರಿಯೆಂತು ಬಂದುದು
ನಾಳೆ ನಿಶ್ಚಯವೆಲ್ಲರಿಗೆ ಕಡು ಗೇಡು ನಾವಿನ್ನು ।
ಬಾಳುವುದು ಹುಸಿ ಬಱಿದೆ ಚಿಂತಾ
ಲೋಲಮತಿ ಮಱುಗಿದೊಡೆ ಫಲ ಕೈ
ಮೇಳವಿಸುವುದೆ ಭಾಗ್ಯಹೀನರಿಗೆಂದು ಬಿಸುಸುಯ್ದ ॥ ೫

ಸುಯ್ದು ಸಭೆಯಲಿ ನೊಂದು ವಿಧಿಯನು
ಬಯ್ದು ಬಸವೞಿದಳಲಿ ಕೊರಳನು

1 ತಹುದನುಚಿತಕೆ. ಕ. ಖ.　　2 ನಿಮ್ಮನೆಲ್ಲರನು, ಕ. ಖ.

* ಮೂಲದಲ್ಲಿ ಯಿಲ್ಲದ್ದರಿಂದ ಈಪರ್ಯಂತ ಪಾಠಪೂರ್ತಿಮಾಡಿದೆ.

ಕೊಯ್ದುದೋ ವಿಧಿ ಕೆಟ್ಟುದೋ ಕುಲವೆನುತ ಚಿಂತಿಸಲು ।
ನೆಯ್ದ ನೆಯ್ಗೆಯ ಬಿಡಿಸಲಱಿಯೆನು
ಗೆಯ್ದುದಿದು ಸಂಭ್ರಾಂತಿ ಚಿಂತೆಯ[1]
ನಯ್ದಿತಿರಲೇ ಯೆಂದನೇಲಾಪುತ್ರನವರೊಡನೆ[2] ॥ ೬

ಶಾಪಪರಿಹಾರೋಪಾಯವನ್ನು ಒಬ್ಬರೊಬ್ಬರು ಹೇಳುವಿಕೆ.

ಸಾಸಿಗರಿರಬಿಲದಿರಿ ತನ್ನಭಿ
ಲಾಷೆಯನು ಕೇಳುವುದು ಪಾಂಡುಮ
ಹೀಶನಂದನನಂದನನ ಸುಕುಮಾರಕನ ಸುತನಾ ।
ವಾಸವನು ನಾವೈದಿ ವಿಪ್ರನ
ವೇಷದಲಿ ಬೋಧಿಸಲು ಸರ್ವವಿ
ನಾಶಕರವಾ ಮಾತನಾಡದಿರೆಂದು ಭೂಮಿಪನ ॥ ೭

ಸತ್ಯಸಂಧನು ವಿಪ್ರವಚನವ
ನುತ್ತರಿಸಲಱಿಯನು ಮಹಾಮತಿ
ಮೃತ್ಯುವಱಿಂದುರಗರಿಗೆ ತಪ್ಪುವುದು ನಮಗೆನಲು ।
ಮತ್ತದೇತಕೆ ದೈನ್ಯವಾನೃಪ
ಸತ್ತಮಗೆ ಮಂತ್ರಿಗಳಹೆವವನ[3]
ಚಿತ್ತವನು ವಶವಾಪ್ಪೆವೆಂದರು ಪನ್ನಗರು ಕೆಲರು ॥ ೮

ಚಂಡಮಖಕರ್ಮವನು ನೃಪ ಬೆಸ
ಗೊಂಡೊಡಲ್ಲೆಂದೆಂಬೆವಘವನು
ಪಾಂಡುನಂದನ ಮಾಡಲಾಗದು ನಾಶವಿಹಪರಕೆ ।
ಕೊಂಡೆಚಿವುದಘವಡಿಗೆ ನರಕದ
ಕೊಂಡದೊಳಗಾಡುವರೆನುತ್ತು
ದ್ದಂಡಮತಿಯನು ಬೋಧಿಸುವೆವೆಂದರು ನಯಾನ್ವಿತರು ॥ ೯

---

1 ಗೆಯ್ದುವಾಸಂಭ್ರಾಂತಚಿತ್ತವ, ಕ ಖ 2 ಪುತ್ರರವರೊಡನೆ, ಕ. ಖ
3 ಮಂತ್ರಿಗಳವರ, ಕ. ಖ

ಅಲ್ಲತೆಗೆ ಯಜ್ಞಾಂಗಕರ್ಮವ
ಬಲ್ಲೆನೆಂದೈತಂದ ವಿಪ್ರರ
ನೆಲ್ಲರನು ಕಚಚ್ಚುವುದು ಹೋಹುದು ವೇಷವನು ಮರೆಸಿ ।
ಇಲ್ಲ ಬಚಿಕಾ ಯಜ್ಞ ಗಿಜ್ಞ ದ
ತಲ್ಲಣದ ತನಿಬೇಗೆ ನಮಗೇನು
ತಲ್ಲಿ ಕೆಲರು ಕುಮಂತ್ರಿಗಳು ಹೇಳಿದರು ನಿಜಮತವ ॥ ೧೦

ಆಗದಾಗದು ವಿಪ್ರವಧೆ ನಿ
ರ್ಭಾಗಧೇಯರೆ ಹೆಸಿದರಾವರೆ
ಭೋಗಿಸುವರೆ ವಿಷವನು ನಿಮ್ಮಡಿ ಕೇಡ ತಂದಿರೆಲೈ ।
ಲೋಗರಾದಿರಿ ನಿಮಗೆ ನೀವೇನು
ತಾಗವಜ್ಞರು ಜಱಿದರವರನು
ಭೋಗಣವ ಕೇಳೆಂದರವರೊಳು ಮತ್ತೆ ಕೆಲಕೆಲರು ॥ ೧೧

ಕೊಲಲದೇತಕೆ ವಿಪ್ರರನು ನೆಱೆ
ಕೊಲುವುದಾ ಯಜಮಾನಿಯರ್ಗಳ
ಲಲನೆ ಯಿಲ್ಲದೆ ಮಾಡಲಾಗದು ಯಜ್ಞ ಕರ್ಮವನು ।
ಕೊಲೆಗೆ ನಾವಳುಕಿದರೆ ಶಾಪವ
ಗೆಲುವ ಪರಿಯೆಂತೆಂದರವರೊಳು
ಕೆಲರು ಜಲವನು ರೂಷಿಸುವೆವೆಂದರು ದುರಾತ್ಮಕರು ॥ ೧೨

ಕೆಲರು ಋತ್ವಿಜರಹೆವು ಬೇಡುವೆ
ವಲಘುಮಿತಿಯನು ದಕ್ಷಿಣೆಯುನಿದ
ನುಱಿವುದಧ್ವರಕರ್ಮವನು ನೀವೆಂದು ನಾವವನು ।
ಗೆಲುವೆವೆಂದರು ಕೆಲರು ಕೆಲರಾ
ಚಲನಸಖನಲಿ ಮೂತ್ರಿಸುವೆವು ಬೊ
ಗಳುವ ನಾಯಿಗಳಾಗಿ ಯೆಂದರು ಮಂತ್ರಕೋವಿದರು ॥ ೧೩

ಗಳಹಲಱಿಯೆವು ಹಲವು ಮಾತನು
ಕೊಲುವೆವಾವವನಿಪನ ಶಾಖಾ

ವಳಿಯ ಸವರಲದೇಕೆ ಬಱಿದೆ ಬಣಗುವತೞಿರುತಿದಾ ।
ಕೊಲೆ ನಿರರ್ಥಕ ಮೇಣು ಮುನಿದರೆ
ಕುಲವನುರುಹುವಭೂಮಿಪಾಲನ
ಛಲ ನಮಗೆ ದುಸ್ಸಹವೆ[1] ತಮಗೆಂದೊವರಿದರು ಕೆಲರು ॥ ೧೪

ವಿರುದ್ಧ ಪಕ್ಷಗಳನ್ನು ವಾಸುಕಿಯು ನಿವಾರಣೆಮಾಡುವಿಕೆ.

ಸಾಕು ಸಾಕೆಲವೆಲವೊ ಹೋಹೋ
ವ್ಯಾಕುಲತೆ ಫಲವೇನು ಮಂತ್ರವ
ನೇಕಮುಖವಾಯ್ತಾಗಲಾಗದು ನಿಮ್ಮ ಮತವೆನ್ನ ।
ಲೋಕನೀತಿಗೆ ಬಾಧೆದೊಂದೇ
ಸಾಕು ಪೂರ್ವಕೃತಾಘವೃತ್ತರ
ವೇಕೆ ನೆರವಿರಿ ಖೂಳರಿರ ನೀವೆಂದನುರಗೇಂದ್ರ ॥ ೧೫

ಮೃತ್ಯು ವಿಹಿತ ಪರಾಘದಿಂದೊ
ತ್ಪ್ರೋತ್ತೆಯಲಿ ಸಾಯ್ವಿರನು[2] ಪಾತಕ
ಚಿತ್ತರಿರ ಪರಿಹಾರವೆಂತಹುದಘಕೆ ಮೇಣಘಕೆ ।
ಮತ್ತುಪಾಯುವ ಬಲ್ಲೆವೆಂಬುದೆ
ಚಿತ್ತನಿರ್ಮಳವಾದವರು ತನ
ಗುತ್ತಮರಹರು ನುಡಿದನೇಲಾಪುತ್ರನಗ್ರಜಗೆ ॥ ೧೬

ಇದಕೆ ಉಪಾಯವನ್ನು ನೀನೇ ಚಿಂತಿಸೆನಲು ದೈವಾನುಗ್ರಹಸಾಧ್ಯವೆಂದು ಪೂರ್ವಕಥೆಯನ್ನು ಹೇಳುವಿಕೆ.

ಅಣ್ಣ ಚಿತ್ತೈಸದಕೆ ನಿಷ್ಕೃತಿ
ಪುಣ್ಯಕರ್ಮದಲಲ್ಲದಾಗದು
ಕಣ್ಣ ಹುಡಿ ಯಿರೆ ಕಯ್ಯಲೇತಕೆ ಕೊಡುವೆ ದರ್ಪಣವ ।
ಪುಣ್ಯಹೀನರ ಮಾತ ಕೇಳ್ದೊಡೆ

---

1 ದುರ್ಲಭವೆ, ಕ. ಖ.    2 ಸ್ವಾಮಿಯನು, ಕ. ಕ.

ಮಣ್ಣ ಹೊಯ್ವುದು ಕಡೆಗೆ ಬಾಯಲಿ
ತಿಣ್ಣವಹುದೀರಾಜಕಾರಣಭಾರ ನಿನಗೆಂದ ॥ ೧೭

ಮೆಱೆಪುಗುವದಾಪತ್ತು ಬಂದರೆ
ಮೆಱೆಯುದಧಿದೈವವನು ವಿಪ್ರರ
ನಱಿತು ತಮಗುಳ್ಳವರು ನಾವವರಿಗೆ ವಿರೋಧವನು ।
ನೆಱೆ ರಚಿಸೆ ಬಂದೀವಿಪತ್ತನು
ಹೊಱಗೆಗಳೆವ ಪರಿಯೆಂತು ಬಾಹಿರ
ರಱಿಚಿದರೆ ಬಲ್ಲವರು ಕೊಂಬರೆ ಪಾತಕವನೆಂದ ॥ ೧೮

ಹೇೞುವೆನು ತಾನೊಂದುಪಾಯವ
ಕೇಳಿದೆನು ಪೂರ್ವದಲಿ ವಿಬುಧರ
ಜಾಲ ಜಗದ ಪಿತಾಮಹನ ಸನ್ನಿಧಿಗೆ ನಡೆತಂದು ।
ಹೇೞಿದರು ಜಗವಿದು ಮಹೋರಗ
ಮೂೞಿಗದಲುೞಿವುದನು ಕಾಣೆವು
ಪೊೞಿದರು ಪನ್ನಗರು ಧರಣಿಯನೆಂದು ಭೀತಿಯಲಿ ॥ ೧೯

ಅಂಜದಿರಿ ಸುರವರರೆ ಭೂಪತಿ
ಸಂಜನಿಸುವನು ಪಾಂಡುಕುಲದಲಿ
ಭಂಜಿಸುವ ಭುವನದಲಿ ನಿಜಜನಕನನು ತಕ್ಷಕನು ।
ಅಂಜಲಿಸಲದ ಕೇಳಿ ರಿಪುಕುಲ
ಭಂಜನನು ಹೋಮಿಸುವನುರಗರ
ಪುಂಜವನು ನಿಮಗೇಕೆ ಭಯವೆಂದನು ಸರೋಜಭವ ॥ ೨೦

ದುಷ್ಟರನು ಹೋಮಿಸುವನೆಲ್ಲರ
ನಿಷ್ಠೆಯಲಿ ಕೆಲಕೆಲರು ಧರ್ಮವಿ
ಶಿಷ್ಟರುೞಿವರು ಲೋಕಹಿತಕಾರಿಗಳು ಸಾಧುಗಳು ।
ನಷ್ಟವದಱಿಂದಾಗದೀಜಗ
ಕಿಷ್ಟರಹ ನಿಮಗೇಕೆ ಚಿಂತಾ
ವಿಷ್ಟರಾಗಲದೇಕೆ ನೀವಿನ್ನೆಂದನಬುಜಭವ ॥ ೨೧

ನಿರುತವನು ಕೇಳ್ವೊಡೆ ಯಯಾವರ
ವರಕುಲೋದ್ಭವನೆನಿಪ ಭೂಸುರ
ವರಜರತ್ಕಾರುವಿಗೆ ಮಗನಾಸ್ತೀಕನೆಂಬುವನು ।
ಪರಮಧಾರ್ಮಿಕನುದಿಸುವನು ತ
ದ್ಧರಣಿಪಾಧ್ವರಕರ್ಮವಿದು ಪರಿ
ಹರಿಸುವುದು ಬಟುಕಾತನಿಂದವೆ ಯಂಜ ಬೇಡೆಂದ ॥ ೨೦

ಪಂಕಜಾಸನನಿಂತುಸುರಲಾ
ತಂಕವನು ಮೋಣಿಸಿದನಾ ತಾ
ಯಂಕದಲಿ ಕುಳ್ಳಿರ್ದು ಕೇಳಿದೆ ನಾನು ಬಾಲ್ಯವಲಿ ।
ಸಂಕಟವ ತಾಳದಿರು ಮನವನು
ಮುಂಕೊಳಿಸು ಧರ್ಮದಲಿ ಮತಿಯನು
ಶಂಕೆ ಬೇಡಟಿವಿಲ್ಲ ಧರ್ಮಪರಾಯಣರಿಗೆಂದ ॥ ೨೩

ಸಾಧುಗಳಿಗೆ ಹಾನಿಯಾಗಲಾರದೆಂಬುದಂ ಕೇಳಿ ಆಸ್ತೀಕಜನನಪ್ರಶ್ನೆ.

ಎನಲು ತಪ್ಪದು ತಮ್ಮ ತನ್ನಯ
ಮನಕೆ ಘನಪರಿತೋಷವಾಯ್ತೆ
ನ್ನನುಜ ಬಾ ಯೆನ್ನರಸ ಬಾ ಯೆನ್ನಯ್ಯ ಬಾ ಯೆನುತ ।
ತನುವ ತೆಗೆದಪ್ಪಿದನು ಬಲ್ಲೊಡೆ
ತನಗೆ ಹೇಟಾ ವಿಪ್ರನಾವೆಡೆ
ಜನಿಯಿಪ ಜರತ್ಕಾರುನಂದನ ತಮ್ಮ ಹೇಟೆಂದ ॥ ೨೪

ಉತ್ತರದಲ್ಲಿ—ಜರತ್ಕಾರುವು ಭಾವಿಯಲ್ಲಿ ಜೋಲಾಡುತ್ತಿದ್ದ ಪಿತೃಗಳಂ
ಕಂಡು ಹೀಗಿರಲು ಕಾರಣಪ್ರಶ್ನೆ.

ಬಲ್ಲೆನದನಂಭೋಜಸಂಭವ
ಸೊಲ್ಲಿಸಿದನಮರರಿಗೆ ಮದುವೆಯ
ನೊಲ್ಲದಾ ದ್ವಿಜನಡವಿಯಲಿ ಸಂಚರಿಸುತಿರಲೊಮ್ಮೆ ।
ಬಳ್ಳಿಯನು ಹಿಡಿದೊಂದು ಭಾವಿಯ

ಲೆಲ್ಲ ತಲೆಕೆಳಗಾಗಿ ಪಿತೃಗಳು
ತಲ್ಲಣಿಸುತಿರೆ ಕಂಡು ನೀವಾರೆಂದನಾ ವಿಪ್ರ ॥ ೧೫

ಇಲಿಯು ಕಡಿದಾಬಳ್ಳಿಯನು ಹಿಡಿ
ದಲಘುವೆಹಿವೆರು ಜೋಲುವಿರಿ ಕೈ
ಗಳನು ನೀಡುವುದೆತ್ತಿಕೊಂಬೆನು ನಿಮ್ಮನಾನೆನಲು ।
ಸಲುವುದಿದ ನೀನಾರು ಕರುಣವೆ
ನಲಘುಮತಿ ನಮ್ಮಲ್ಲಿ ಮಾಡಿದೆ
ತಿಳುಹೆನೆ ಯಯಾವರಕುಲೋದ್ಭವನಹುದು ತಾನೆಂದ ॥ ೧೬

ನಿನ್ನ ವಿರಕ್ತಿಯಿಂದ ಸಂತತಿಯಿಲ್ಲದೆ ನಮಗೀಯವಸ್ಥೆಯೆಂದು
ಪಿತೃಗಳ ಉತ್ತರ.

ನಿರುತ ತವೆ ಲೇಸಾಯ್ತು ಯಾಯಾ
ವರರು ನಾವೆಲೆ ತಂದೆ ನೀನೀ
ವಿರತಿಯನು ಕೈಕೊಂಡಕಾರಣ ದುಃಸ್ಥಿತಿ ಯಿದೆಮಗೆ ॥
ದೊರಕಿದುದುಸಂತಾನವಿಲ್ಲದೆ
ಪೂರೆವರಾರಿನ್ನೆಮ್ಮನೇತಕೆ
ಮರುಳು ಮಗನೆ ವಿರೋಧಿಸುವೆ ಹೇಹೆಂದರವರೆಂದು ॥ ೧೭

ತನ್ನ ಹೆಸರಿನ ಕನ್ಯೆಯು ದೊರಕಿದರೆ ವಿವಾಹವಾಡಿಕೊಳ್ಳುವೆನೆಂದು
ದೇಶಸಂಚಾರ ಮಾಡುವಿಕೆ.

ಬಳಿಯ ಕಯ್ಯನು ನೀಡಿದರೆ ಬಹ
ಪರಿಯ ಕಾಣೆವೆನಲ್ಕೆ ಮೊಣಲೆ
ವಿರತಿಯನು ಸತಿ ತನ್ನಪೆಸರುಳ್ಳಾದೊಡಹುದೆನಗೆ ।
ಬರೆವೆ ನಾನಿನ್ನೊಂದನಪ್ರಿಯ
ಕರವ ಮಾಡಿದೊಡಾಕೆಯೊಡನಾ
ಸಿರೆನು ಸಂಶಯವಿಲ್ಲೆನುತ್ತವರಿಂದ ಬೀಳ್ಕೊಂಡ ॥ ೧೮

ತಿರುಗುತಿರ್ಪನು [1] ಧರೆಯಲಾದ್ವಿಜ
ವರನು ತನ್ನಯ ಹೆಸರ ಸತಿಯನು
ನಿರುತ ಕಾಣದೆ ದೇಶದೇಶಾಂತರಗಳಲಿ ತೊಳಲಿ ।

ಆಗ ಆ ಜರತ್ಕಾರುವಿಗೆ ಅದೇ ಹೆಸರ ಕನ್ಯೆಯನ್ನು ಕೊಡಲು
ಸರ್ಪಗಳು ನಿಶ್ಚಯಿಸಿ ವನದಲ್ಲಿ ಅದೃಶ್ಯರಾಗಿರುವಿಕೆ

ಉರಗರಾಜನೆ ಕೇಳು ಕೊಡುವುದು
ನಿರುತ ತಂಗಿಯ ಮುನಿಗೆ [2] ನಿನ್ನಯ
ವರ ಪರಮಕ್ಷೇಮವನು ನೀ ಬಯಸುವೊಡೆ ಕೇಳೆಂದ ॥ ೧೯

ಲೇಸನಾಡಿದೆ ತಮ್ಮ ತನ್ನೊಡ
ಲಾಸಱಡಗಿತು ತಮ್ಮ ನಿನ್ನಯ
ಭಾಷಿತವನಿದ ಕೇಳಿ ಕಳೆದೆವು ಶಾಪದುರುಭಯವ ।
ಭೂಸುರೋತ್ತಮನನು ವಿಚಾರಿಸು
ಮೀಸಲಳಿಯಳು ತಂಗಿ ಕರೆದಾ
ದೇಸಿಗನನೀಕ್ಷಣವೆ ಮದುವೆಯ ಮಾಡಬೇಕೆಂದ ॥ ೨೦

ಆಮುನೀಶ್ವರನೊಂದು ಸಮಯವ
ನಾಮಹಾಪಿತೃಗಳಿಗೆ ಮಾಡಿದ
ನಾಮುನಿಪ ಬೇಡಿದ ಮುಹೂರ್ತಕೆ ಕೊಟ್ಟೊಡದನೊಲಿದು ।
ಸಾಮದಲಿ ತಾ ಮದುವೆಯಪ್ಪೆನು
ರಾಮಣೀಯಕವೆನಿಸಿ ಬೇಡಿದೊ
ಡಾ ಮುಹೂರ್ತಕೆ ದೊರಕದಿರೆ ಬೞಿಕೆಲ್ಲಪರಿಣಾಮ ॥ ೨೧

ಅದಱಿನೆಲೆ ಕೇಳಣ್ಣ ನಾವೀ
ಪದುಮಮುಖಿ ಸಹ ತೊಳಲಬೇ
ಹುದು ಸವಮಳನ ಬೞಿವಿಡಿಯಬೇಕೇಷೆಂದು ತವಕದಲಿ ॥
ಪದುಳದಲಿವರು ಕಾಮರೂಪಿಗ

1 ತಿರುಗುತ್ತೈದನೆ, ಕ. ಖ. 2 ನನ್ವಯಕೆ, ಕ. ಖ.

ಳದು ವೊದಲು ತನ್ಮ್ನನಿಯುನು ಬಿಡುವು
ದದುಭುತವೆನೆ ತೊಳಲಿದರು ವನಕದೃಶ್ಯರೂಪದಲಿ ॥ ೨೦

ಆಗ ಜರತ್ಕಾರು ತಾನು ಕನ್ಯಾರ್ಥಿಯಾಗಿರುವೆನೆಂದೊದರುವಿಕೆ.

ಇರೆ ವರಜರತ್ಕಾರು ವೊಂದಿನ
ಭರದಲೈದಿದರಣ್ಯವ ಗಿರಿಶಿ
ಖರದಲಿ ವೊದದಿ ನಿಂದು ವಿಜನವಿದೆಂದು ನಿಶ್ಚಯಿಸಿ ।
ವರಜರತ್ಕಾರುವಿಗೆ ಕನ್ನಿಕೆ
ವರಜರತ್ಕಾರುವನು ಪಡೆದತಿ
ಭರದಲಿರಲುಂಟೆ ತನಗೆಂದೊಯ್ಯನವೆ ನೆಱೆ ನುಡಿದ ॥ ೨೨

ಪರಮಋಷಿ ತನಗನ್ಮತ ಹೊದ್ದದ
ತೆಱದಿ ಕರೆದನು ಗಿರಿಶಿಖರದಲಿ
ನಿರುತವಚನವಿದೆಂದು ಕಟ್ಟೇಕಾಂತದಲಿ ನುಡಿದ ।

ಅದನ್ನು ಕೇಳಿ ಸರ್ಪಗಳು ಆಕ್ಷಣವೇ ಇದೋ ಕನ್ಯೆ ಯೆಂದೊಪ್ಪಿಸಲು
ಜರತ್ಕಾರುವಿನ ವಚನ

ಸ್ವರಹೊಱಡುವುದೆ ತಡವದಾಗಲು
ತರಳಲೋಚನೆ ಯಿಾಕೆ ನಿನ್ನಪೆ
ಸರಿನ ಸತಿ ಯಿಹಳದ ಕೊ[1] ಯೆಂದರು ಪನ್ನಗೇಶ್ವರರು ॥ ೨೪

ಅಕಟ ವಿಜನವಿದೆಂದು ನುಡಿದರೆ
ಪ್ರಕಟಿಸಿತು ವಿಧಿ ಯಿದಕೆ ತಕ್ಕಂ
ತಕುಟಿಲವ ನೆನೆಯುತ್ತ ನುಡಿದನು ಕುಂಡಲಿಗಳೊಡನೆ ।
ವಿಕಲೆ ಯೆನ್ನಯ ಮನವನಱಿಯದೆ
ಸುಕರವಲ್ಲದ ಕ್ರಿಯೆಯ ವೆಸಗಿದೊ
ಮುಕುತಿಪೂರ್ವಕದಿಂದ ತೆಜಿಸುವೆನೀ ಮಹಾಸತಿಯು ॥ ೨೫

---

1 ಪೆಸರಿನವಳಿದಕೊ, ಕ. ಖ.

ನನಗೆ ಅಪ್ರಿಯವನ್ನು ಮಾಡಿದರೆ ಇವಳನ್ನು ತ್ಯಜಿಸುವೆನೆಂಬುದಂ ಕೇಳಿ
ಅದಕ್ಕೊಪ್ಪುವಿಕೆ.

ಎಂದು ಸಮಯವ ನುಡಿಯಲವರಹು
ದೆಂದು ನಿಶ್ಚಯವನು ಬಳಿಕ್ಕವೆ
ರೊಂದಿದರು ಸಂತೋಷಸಾಗರದೊಳಗೆ ಮನಮುಳುಗೆ ।
ಕುಂದನುಳಿದರು ತಮ್ಮಕುಲದೊಳ
ಗಿಂದು ಬೆಳಸಿತು ಯಾಯವರಸಂ
ಬಂಧವೆಂದತಿಮುದವ ತಾಳ್ದರು ಪನ್ನಗೋತ್ತಮರು ॥ ೩೬

ಅವರಿಗೆ ವಿವಾಹವಾಗಿ ಗರ್ಭಧಾರಣ.

ತಂದರಾತನ ನೊಲಿದು ಮಾಡಿದ
ರಿಂದು ವೈವಾಹವನು ಸಾರಾ
ನಂದದಲಿ ಬಳಿಕಾ ಜರತ್ಕಾರುಗೆ ಜರತ್ಕಾರು ।
ಇಂದುಮುಖಿಯಾಗಿರಲು ವಧು ತಾ
ವೆಂದು ಸುಖಿಯಾಗಿರಲು ಧರಿಸಿದ
ಳಂದು ಗರ್ಭವನಾಮಹಾಸತಿ ಸಕಲಗುಣವಸತಿ ॥ ೩೭

ಸತಿಯ ತೊಡೆಯ ಮೇಲೆ ಜರತ್ಕಾರು ಮಲಗಿರಲು ಸಂಧ್ಯಾತಿಕ್ರಮ
ಭಯದಿಂದ ಸತಿ ಎಬ್ಬಿಸುವಿಕೆ

ಮುನಿಪ ಕೇಳೊಂದುದಿನ ತನ್ನಯ
ವನಿತೆಯಂಕದ ಮೇಲೆ ತಲೆಯಿ
ಟ್ಟನುಪಮನು ಮಲಗಿರ್ದನುಜಿ ನಿರ್ವಿಣ್ಣನೆಂದೆನಿಸಿ ।
ಇನನಿಳಿದನನ್ನೆಗ ಮಹಾಬ್ಧಿಯ
ಮನೆಗೆ ಮುನಿ ನಿದ್ರೆಯಲಿ ಮುಳುಗಿರ
ಲನುಪಮಾಂಗನೆ ತಾನೆ ತನ್ನೊಳಗೆಂದಳೀಹದನ ॥ ೩೮

ಸಂದನಿನನಂಬುಧಿಗೆ ಸಂಧ್ಯಾ
ವಂದನೆಯ ಹೊತ್ತಾಯ್ತು ಮುನಿಪತಿ

ಕಂದೆಱೆಯನಿನ್ನವನನೆಬ್ಬಿಸದೊಡೆ ಮಹಾತ್ಮಕನು ।
ಇಂದು ಮುನಿವನೊ ಕೋಪಯುಕ್ತನು
ಮಂದಮತಿಯೆಬ್ಬಿಸಿದೆ ತನ್ನನು
ಕೊಂದೆ ಯೆಂಬನೊ ಮಾಳ್ಪುದೇನೆಂದಳಲಿದಳು ತರಳೆ ॥ ೩೯

ಕೋಪವನು ಮಾಡಿದರೆ ಮಾಡಲಿ
ತಾಪವೆನಗದಕಿಲ್ಲ ಧರ್ಮದ
ಲೋಪವನು ಕಾಣುತ್ತ ತಾನಿಹುದುಚಿತವಲ್ಲೆನುತ ।
ಓಪನನು ತರಳಾಕ್ಷಿ ಮಧುರಾ
ಳಾಪದಲಿ ಬೋಧಿಸಿದಳಂತೀ
ರೂಪಗುಣಸಂಪನ್ನೆ ಧರ್ಮವಿನಾಶಕಾರ್ಪಣ್ಯೆ [1] ॥ ೪೦

ಎದ್ದು ಕೋಪದಿಂದ ನಿನ್ನ ತ್ಯಜಿಸಿದೆನೆಂದು ಹೇಳುವಿಕೆ.

ಎದ್ದನಾಮುನಿ ಕೋಪ ತನುಗೊಂ
ಡೆದ್ದವೊಲಂಗನೆಯನೀಕ್ಷಿಸಿ
ನಿದ್ರೆಯನು ನೆಱೆ ಕೆಡಿಸಿದೆ ಯಲಾ ತನಗೆ ವಿಪ್ರಿಯವ ।
ಹೊದ್ದಿಸಿದೆ ನಿನ್ನೊಡನೆ ತಾನಿರೆ
ಗೆದ್ದನಿದೆ ಇದೆ ಮೋಹಪಾಶವ
ನೊದ್ದೆನೆಂದನು ಮುನಿಪನಾಮಾನಿನಿಗೆ ಮುನಿದಂತೆ ॥ ೪೧

ಸಂತಾನವಿಲ್ಲದೆ ನನ್ನನ್ನು ತ್ಯಾಗಮಾಡಿದರೆ ತಮ್ಮ ಪಿತೃಗಳ ಮನೋರಥ
ಪೂರ್ಣವಾಗಲಾರದೆಂದು ಪ್ರಾರ್ಥಿಸಲು ಪುತ್ರನಾಗುವನೆಂದು
ಹೇಳುವಿಕೆ.

ಕೆಟ್ಟೆನಾನೇನೆನುತ ತನ್ನನು
ಬಿಟ್ಟುಹೋಹ ಮಹಾತಿಸಿಷ್ಟ್ಯೆಯು
ಬಿಟ್ಟು ಶೀಲಾನ್ವಿತೆಯನಂಘ್ರಿ [2] ಸರೋಜಸಂಶ್ರಿತೆಯ ।
ಮುಟ್ಟಲಾಗದೆ ಧರ್ಮಲೋಪದ

1 ಕರಪಿಣ್ಯೆ, ಕ. ಖ 2 ಬಿಟ್ಟೆಲಾ ತನ್ನಂಘ್ರಿ, ಕ. ಖ.

ಕೆಟ್ಟದೆಶೆಯಿಂದೆಚ್ಚರಿಸಿದೆನು
ಬಟ್ಟೆದಪ್ಪುವೆಳಲ್ಲ ನೆಱೆ ತಾನೆಂದಳಿಂದುಮುಖಿ ‖ ೪೧

ಸುಮ್ಮನಿರು ಸಾರೆತ್ತ ವೆತ್ತಣ
ಧರ್ಮಗಿರ್ಮದ ಲೋಪ ತನ್ನನು
ನೆಮ್ಮುವುಗೆ ಘತ ತಾನದಾರೆಂದಱಿಯೆ ಧರ್ಮವನು ।
ನಿರ್ಮಿಸಿದವರದಾರು ತನ್ನವಿ
ಕರ್ಮಕಂಜುವೆ ನೀನಿದೇತ
ಕ್ಕುಮ್ಮಳಿಸದಿರು ಕಾಂತೆ ಸುಖಿಯಾಗೆಂದನಾ ವಿಪ್ರ ‖ ೪೩

ಆವ ಗತಿಯನು ಕಂಡೆ ತನಗೆಲೆ
ದೇವವರವಂದಿತನೆ ತನ್ನಯ
ಜೀವವುೞಿವುದೆ ಬಿಸುಟಹೋಡೆನ್ನನನಾಥೆಯನು ದಿಟಕೆ ।
ಆವ ಮನದಭಿಸಂಧಿಯಲಿ ಭೂ
ದೇವವರ ನಿನಗಿತ್ತರೆನ್ನನು
ಜೀವದೊಡೆಯನೆ ವಿಫಲವಾಯ್ತೆಂತೆನುತ ಹಲುಬಿದಳು ‖ ೪೪

ತಂಗಿ ಮಗನನು ಪಡೆದಳಾದರೆ
ಹಿಂಗುವುದು ಮೃತ್ಯುವಿನ ಭಯವೆಂ
ದಂಗವಣೆಯನು ಮಾಡಿ ಕೊಟ್ಟರು ತನ್ನ ನಿನಗೆಂದು ।
ಭಂಗವಾಯ್ತು ಮನೋರಥಕೆ ಮುನಿ
ಪುಂಗವನೆ ಹೇಪೆಂತು ಗತಿ ತ
ನ್ನಂಗಿಯನು ನಡುನೀರೊಳದ್ದಿದೆ ಯೆಂದಳಿಂದುಮುಖಿ ‖ ೪೫

ನನಗೆ ಗತಿ ಮತಿ ನೀನೆ ಕೆಟ್ಟೆನು
ಹಾನಿಗೊಳಗಾಯ್ತುರಗಕುಲ ಕರು
ಣಾನಿಧಿಯೆ ಕಾರುಣ್ಯವನು ಮಾಡುವದನಾಥೆಯಲಿ ।
ಜ್ಞಾನವಂತನೆ ಯೆನುತ ಕಂಬನಿ
ಯಾನನದಲುಕ್ಕಾಡಲತ್ತು ಮ
ಹಾನಿತಂಬಿನಿ ಹೊರಳಿದಳು ಪತಿಯಂಘ್ರಿಕಮಲದಲಿ ‖ ೪೬

ಏಱು ಮಗನಹನಂಜಬೇಡೆಲೆ
ಬಾಲೆ ಬೆದಱದಿರರ್ಕವಹ್ನಿ
ಜ್ವಾಲೆಗಳ ಬೆಳಂಬೆಯ ವೊಲುರುತರತೇಜನೆಂದೆನಿಸಿ ।
ಪಾಲಿಸುವನುರಗರನೆಲೆ ಬಱಿದೆ
ತಾಳದಿರು ಶೋಕವನೆನುತ್ತವೆ
ಬೀೞುಕೊಟ್ಟು ಮುನೀಂದ್ರನೈದಿದ ವರತಪೋವನಕೆ ॥ ೪೭

ಪತಿಯಗಲಲು ವಾಸುಕಿಯು ಮನೆಗೆ ಹೋಗಿ ನಡೆದ ವೃತ್ತಾಂತವನ್ನು
ಹೇಳುವಿಕೆ.

ಬೞಿಕ ಗರ್ಭಿಣಿ ಪೋದಳಗ್ರಜ
ನಲಘುಮಂದಿರದಲ್ಲಿಗಾತನು
ಲಲನೆಯನು ಬೆಸಗೊಂಡನೇನ[2] ತಂಗಿ ದುಮ್ಮಾನ ।
ಇೞವುತದೆ ಕಂಬನಿ ಮುಖಾಬ್ಜದ
ಲುೞಸದುಳ್ಳುದ ಹೇೞೆನಲು ಕಾ
ವಲನ ಕಳುಹಿಯೆ ಬಂದೆನೆಂದಳು ಕಾನನಕೆ ತರಳೆ ॥ ೪೮

ಹದನನೆಲ್ಲವ ಕೇಳಿ ವಾಸುಕಿ
ಬೆದಱಿ ನುಡಿದನು ತಂಗಿ ನೀಂ ಕೆಡಿ
ಸಿದೆ ಮನೋರಥವನು ಗತಪ್ರಾಣದ ಮಹೋರಗರ ।
ಉದರವಾಸನದಾರು ಪುತ್ರನೊ
ಇದು ಸುಪುತ್ರಿಯೊ ಕೊಂದೆ ತನ್ನನು
ಕುದಿದು ಫಲವೇನೆಮಗೆ ಪುಣ್ಯವಿಹೀನರಾವೆಂದ[1] ॥ ೪೯

ಅಣ್ಣ ಚಿಂತಿಸ ಬೇಡ ನೀವೇ
ಪುಣ್ಯವಂತರು ತಾಪಸಾಗ್ರಿಮ
ಗಣ್ಯನಹ ಗಂಡಳಿಯನನೃತವದಲ್ಲ ಮುನಿವಚನ ।
ತಿಣ್ಣದಿನ್ನಂತೇಕೆ ಪಾಪವ

1 ಫಲವೇನು ಪುಣ್ಯಹೀನರು ತಾವೆಲೆಯೆಂದ, ಕ. ಖ.  2 ಕುಲವನೇತಕೆ, ಕ. ಖ.

ನುಣ್ಣ ಉರಗರ ಕುಲಕದೇತಕೆ [2]
ಬಣ್ಣಿಸುವೆ ಭಂಗವನು ನೀನೆಂದಳು ಸರೋಜಮುಖಿ ॥ ೫೦

ಆಗ ವಾಸುಕಿಯು ಸಂತೋಷಪಡಲು ಅದರಂತೆ ಪುತ್ರಜನನ.

ಎನಲು ತಂಗಿಯ ನುಡಿಗೆ ವಾಸುಕಿ
ಮನದ ಸಂತಾಪವನು ಬಿಟ್ಟನು
ವನಿತೆ ಪಡೆದಳು ಪುತ್ರನನು ಕಾಲದಲಿ ಕಮನೀಯ ।
ನನಲಸನ್ನಿಭತೇಜನನು ಬಳಿ
ಕನುಪಮನು ತಾ ಬಳೆವುತಿರ್ದನು
ಮನೆಯೊಳಗೆ ವಾಸುಕಿಯ ಮನದುತ್ಸಾಹ ಬಳೆವಂತೆ ॥ ೫೧

ಆಸ್ತೀಕನೆಂಬ ಹೆಸರುಳ್ಳ ಬಾಲಕನ ವಿದ್ಯಾಭ್ಯಾಸ.

ಚ್ಯವನನಲಿ ಬಳಿಕಾತನಭ್ಯಾ
ಸವನು ಮಾಡಿದನಖಿಳವಿದ್ಯಾ
ನಿವಹವನು ಸೇಱಿಸಿದನಾಸ್ತೀಕಾಖ್ಯೆಯಲಿ ಮುನ್ನ ।
ಯುವತಿಗಸ್ತಿಯೆನುತ್ತ ಮುನಿ ಗ
ರ್ಭವನು ಮುಟ್ಟಿದನಾಗಿ ಕೇಳಾ
ಭುವನಪಾವನಮೂರ್ತಿಯಿರ್ದನು ನಾಗವಾಸದಲಿ ॥ ೫೨

ಹೇಳಿದೆನು ಮುನಿನಾಥ ದುರಿತ
ವ್ಯಾಳವಿಷಹರವೆನಿಪ ಮುನಿಕುಲ
ಮೌಳಿಚಾರಿತ್ರವನು ಭುವನಪವಿತ್ರವನು ನಿನಗೆ ।
ಹೇಳುವೆನು ತಾನೇನನಿನ್ನು ಗು
ಣಾಲಯನೆ ಹೇಳೆನುತ ಸೂತನು
ಹೇಳಿದನು ನಿತ್ಯಾತ್ಮನಾರಾಯಣಪರಾಯಣಗೆ ॥ ೫೩

ಹದಿಮೂರನೆಯ ಸಂಧಿ ಮುಗಿದುದು.

# ಹದಿನಾಲ್ಕನೆಯ ಸಂಧಿ.

ಸೂಚನೆ.

ಹೇಳಿದರು ಜನಮೇಜಯಗೆ ಸುವಿ
ಶಾಲಮತಿಗಳು ಮಂತ್ರಿಗಳು ಮುಖ
ಮೂಲಕಾರಣವಹ ಪರೀಕ್ಷಿತನೃಪನ ಸಂಗತಿಯ ॥

ಸರ್ಪಯಾಗಕಾರಣವನ್ನು ಕುರಿತು ಶೌನಕಪ್ರಶ್ನೆ.

ಸೂತ ಹೇಳ್ಳೆ ಸರ್ಪಯಾಗ
ಖ್ಯಾತದುಷ್ಕರಕರ್ಮನಿಷ್ಠೆಗೆ
ಹೇತುವಾವುದ ಹೇಳು ತನಗಾಪಾಂಡುನಂದನರು ।
ಧೂತಪಾತಕನಿಕರರಲ್ಲೈ
ಘಾತಿಸಿದನೆಂತುರಗಕುಲವನು
ಭೂತಳಾಧಿಪನೆನಲು ಮಗುಳಿಂತೆಂದನಾಸೂತ ॥ ೧

ಉತ್ತರದಲ್ಲಿ—ಪರೀಕ್ಷಿತನ ಆಖ್ಯಾನಪ್ರಾರಂಭ.

ಕೇಳು ಶೌನಕ ಪರಹಿತೈಕವಿ
ಶಾಲಸಂಪನ್ನಿಧಿಯೆ ಯಾಗಕೆ
ಮೂಲವೆನಿಪ ಪರೀಕ್ಷಿದಾಖ್ಯಾನವನು ಮನವೊಲಿದು ।
ಹೇಳುವೆನು ಜನಮೇಜಯಕ್ಷಿತಿ
ಪಾಲ ವೊಂದಿನವಖಿಳಮಂತ್ರಿಗ
ಳೋಲಗದೊಳೊಪ್ಪಿದನು ಕುಳ್ಳಿರ್ದಂದನವರೊಡನೆ ॥ ೨

ಏನು ಹದನಯ್ಯನನು ತಕ್ಷಕ
ಕಾನನದಲೇಕುರುಹಿತೆಂಬುದ

ಕೇನು ಕಾರಣ ಹಗೆಗೆ ಹರ ಹರ ಪನ್ನಗಾಧಿಪಗೆ ।
ದಾನವಾಂತಕನೊಲವಿನವರಿಗೆ
ಹಾನಿಯೆಂತೋ ಹೇಳಿ ನೀವೆನ
ಲಾನೃಪೋತ್ತಮನೊಡನೆ ಬಿನ್ನೈಸಿದರು ಮಂತ್ರಿಗಳು ॥ ೩

ಪರೀಕ್ಷಿತನಲ್ಲಿ ತಕ್ಷಕನಿಗೆ ಏಕೆ ವಿರೋಧವೆಂದು ಜನಮೇಜಯಪ್ರಶ್ನೆಗೆ ಮಂತ್ರಿಗಳುತ್ತರಾರಂಭ.

ಉಂಟು ಕೃಷ್ಣನ ಕರುಣ ನಿಮ್ಮೊಳ
ಗೆಂಟುಮಡಿ ನೃಪನಳಿಯಲುಳಿವನೆ
ಗಂಟಲೊಳಗಾತಕ್ಷಕನ ಹಗೆಯಿಲ್ಲ ತಾತನಲಿ ।
ವೆಂಟಣಿಸಿದುದು ವಿಪ್ರತನಯನ
ಕುಂಟಣಿಯು ಬಲು ಶಾಪ ತಂದೆಯ
ಕಂಠವನು ಕೊಯ್ದುದನು ಚಿತ್ತೈಸೆಂದರವನಿಪಗೆ ॥ ೪

ಹೇಳಿದೇತಕೆ ತನಗೆ ತನ್ನಯ
ಬಾಲತನದಲಿ ಮಡಿದನಯ್ಯನು
ಹೇಳನವದೇಕಾರ್ಯರಲ್ಲಾ ವಿಪ್ರವರರೆಮಗೆ ।
ಹೇಳಿರಿ ದ್ವಿಜಸುತನ ಕೋಪಕೆ
ಮೂಲವೇನಾರಾತನಾರೆನೆ
ಹೇಳಿದರು ಮಂತ್ರಿಗಳು ತದ್ವೃತ್ತಾಂತಸಂಗತಿಯ ॥ ೫

ಪರೀಕ್ಷಿತನು ಬೇಟೆಗೆ ಹೋದಾಗ ಆಶ್ರಮದಲ್ಲಿ ಉಪೇಕ್ಷಿತನಾಗಿ ಅವರ ಕೊರಳಲ್ಲಿ ಮೃತಸರ್ಪವನ್ನು ಹಾಕುವಿಕೆ.

ಆದೊಡವಧರಿಸಾ ಪರೀಕ್ಷಿತ
ಮೇದಿನೀಪತಿ ಧರ್ಮರಕ್ಷಾ
ಪಾದನೈಕಪರಾಯಣನು ಸುರವಿಪ್ರಪೂಜಿತನು ।
ಹೋದನವನಿಪನೊಂದುದಿನ ಮೃಗ

ಭೇದಿಗಳ ಸಹಿತೊಂದುವಿಪಿನವಿ
ಭೇದದಲಿ ಮುನಿವರಶಮೀಕಸಮಾಖ್ಯನಾಶ್ರಮಕೆ ॥ ೬

ವಸುಮತೀಪತಿ ಕಂಡ ವರತಾ
ಪಸನನಾಮೃಗ ಹೋದ ಮಾರ್ಗವ
ಬೆಸಗೊಳಲು ಬೇಱೊಂದನಱಿಯದೆ ಯೋಗನಿಷ್ಠೆಯಲಿ ।
ಉಸುರದಿರಲುರಗನನು ಕೊಂದಾ
ಹಸಿವುತೃಷೆಯಲಿ ನೃಪನು ತನು ತು
ಟ್ಟಿಸಲು ಕೊರಳಲಿ ಸುತ್ತಿ ಬಂದನು ಮರಳಿ ನಿಜಪುರಕೆ ॥ ೭

ಅದನ್ನು ಕಂಡು ಋಷಿಪುತ್ರನು ಏಳುದಿನದೊಳಗೆ ತಕ್ಷಕನಿಂದ ನೃಪಗೆ
ಮರಣವಾಗಲಿ ಎಂದು ಶಪಿಸುವಿಕೆ.

ಅದನಱಿತು ತತ್ಪುತ್ರನಾಡುತ
ವಿದಿತಶೃಂಗಿಯೆನಿಪ್ಪನತಿಕೋ
ಪದಲಿ ಕೊಟ್ಟನು ಶಾಪವನು ಬಾಲಕನು ಭೂಪತಿಗೆ ।
ಮದಮುಖನನವನಿಪನನೇಳ್ದಿವ
ಸದೊಳಗುರುಹಲಿ ತಕ್ಷಕನು ತ
ಪ್ಪದು ಮಮುಕ್ತಿಯೆನುತ ಬಂದನು ತಂದೆಯಿದ್ದೆಡೆಗೆ ॥ ೮

ತಂದೆಯು ಬಳಿಗೆ ಹೋಗಿ ಕೊಟ್ಟ ಶಾಪವನ್ನು ಹೇಳಲು ಅಯುಕ್ತ
ಮಾಡಿದೆ ಯೆಂದು ಶಮೀಕರು ನೃಪನ ಬಳಿಗೆ
ಗೌರಮುಖನನ್ನು ಕಳುಹುವಿಕೆ.

ತಂದೆಯನು ಕಾಣುತ್ತ ವರಮುನಿ
ನಂದನನು ಬಾಯ್ವಿಡಲು ಕೇಳುತ
ಕಂದೆಱೆದು ಗಳದುರಗನನು ತೆಗೆದಿಟ್ಟು ಮಗನೊಡನೆ ।
ಎಂದನೇತಕ್ಕಳುವೆ ಸೀಸೆಲೆ
ತಂದೆ ಯೆನುತವೆ ಕೇಳಿದನು ಮುನಿ
ನಂದ ವೃತ್ತಾಂತವನು ಮಱುಗಿದನಂದು ಮನದೊಳಗೆ ॥ ೯

ಸುಯ್ದು ಚಿಂತಿಸಿ ನೃಪನ ಕೊರಳನು
ಕೊಯ್ದ ಪಾತಕಿ ಯೆನುತ ವೇಗನನು
ಬಯ್ದು ಬಹಳಕೃಪಾವನಧಿ ಭೂಪೋತ್ತಮನ ಹೊರೆಗೆ ।
ನೈದೆಗೆಯುದಟ್ಟಿದನು ಶಿಷ್ಯನ
ನೈದಿದನು ತಾ ಗೌರವಮುಖನೊಲಿ
ದೈದಿ ಬಿಸುಟನು ವಾರ್ತೆಯನು ಬೆದಱಿದುದು ಸಭೆ ನೃಪನ ॥ ೧೦

ಮಂತ್ರಿಗಳೊಡನೆ ಪರೀಕ್ಷಿತನ ಆಲೋಚನೆ.

ಮುನ್ನವೇ ತಾ ನೆನೆವುತಿರ್ದನು
ತನ್ನ ಮಾಡಿದ ಕರ್ಮವಿದು ನೆಱೆ
ಬನ್ನಬಡಿಸದೆ ಹೋಹುದಲ್ಲೆಂದದುವೆ ಬಂದುದಲ ।
ಇನ್ನು ಮಾಡುವದೇನೆನುತ ನೃಪ
ಖಿನ್ನನಾದುಂತಿರಲು ನೆನೆದೆವು
ಪನ್ನಗೇಂದ್ರನ ಭಯವನಪಹರಿಸುವ ಮನೋರಥವ ॥ ೧೧

ಬಂದು ಕಂಭದಲೊಂದು ಮನೆಯನು
ತಂದೆ ಮಾಡಿದೆವಮರನದಿಯಲಿ
ಬಂದು ತಕ್ಷಕನೇಱದಂತಿರೆ ರಚಿಸಿ ರಕ್ಷೆಯನು ।
ಸಂದ ಸಚಿವರು ಸಹಿತ ನೃಪನಾ
ಮಂದಿರದಲಿರಲೇೞನೆಯ ದಿನ
ಬಂದೊಡಾರಿದ ಸಾಧ್ಯಕೆ ತರುವರೆಂದರವನಿಪಗೆ ॥ ೧೨

ಏೞನೆಯ ದಿನದೊಳಗೆ ಪನ್ನಗ
ಪಾಲತಕ್ಷಕನುರುಹುವನು ಭೂ
ಪಾಲನನು ಗಡ ನೋೞ್ಪೆನೆನುತವೆ ಕಾಶ್ಯಪಾಹ್ವಯನು ।
ಕೇಳಿ ಧನಕಾಂಕ್ಷೆಯಲಿ ಬರುತಿರೆ
ಖೂಳತಕ್ಷಕನವನ ಕಂಡನು
ಪೇೞದೆಲ್ಲಿಗೆ ವಿಪ್ರ ಪಯಣವದೆನುತ ಬೆಸಗೊಂಡ ॥ ೧೩

ಪರೀಕ್ಷಿತನನ್ನು ತಕ್ಷಕನು ಕಚ್ಚಿದಾಗ ಬದುಕಿಸಲು
ಹೋಗುವೆನೆಂದು ಬ್ರಾಹ್ಮಣವಚನ.

ತಕ್ಷಕನು ತಾ ಮುನಿವನು ಗಡ ಪ
ರೀಕ್ಷಿದವನೀಶ್ವರನ ಮೇಲೆ ತ
ತುಕ್ಷಣದಲೆತ್ತುವೆನು ವಿಷಯೋಗವನು ಕೆಡೆಯೊದೆದು ।
ರಕ್ಷಿಸುವೆನುರುಮಂತ್ರಜಲದಿಂ
ದಾಕ್ಷಣವೆ ತಾ ಬಂದೆನದಕದ [1]
ಪೇಕ್ಷಿತವಲಾ ಸಕಲಲೋಕಕ್ಕೆಂದನಾ ವಿಪ್ರ ॥ ೧೪

ಅದು ನಿನಗಸಾಧ್ಯವಾದಕಾರಣ ಹಿಂದಿರುಗಿ ಹೋಗೆಂದು
ತಕ್ಷಕನೆನಲಾಗಿ ಆ ಉಭಯರ ಸಂವಾದ.

ಉಂಟು ಸಂಶಯವಿಲ್ಲ ನೃಪತಿಗೆ
ಕಂಟಕನು ತಕ್ಷಕನು ನಿನಗದು
ಗಂಟಲೊಳಯಿಂಕಿಚಿವೆ ತುತ್ತೇ ವಿಪ್ರ ಮರುಳನಲ ।
ನಂಟ ಪರಿಹರಿಸಿದರೆ ನಿನಗೇ
ನುಂಟು ಬಚಿದೆ ಮನೋರಥಕೆ ಕಡೆ
ಯುಂಟೆ ಬಳಿಲದೆ ಭಂಗವಡೆಯದೆ ಮನೆಗೆ ತಿರುಗೆಂದ ॥ ೧೫

ಗಳಹದಿರು ನಡೆ ತನ್ನ ಮಂತ್ರದ
ಬಲುಹನದನೀನಱಿಯೆ ಬೋಕಳಿ
ಗಳಯದಿರು ನೃಪವರನು ಭಸ್ಮೀಭೂತನಾಗಿರಲುಂ ।
ತಳದು ಮಂತ್ರದ ಜಲದಲೆತ್ತುವೆ
ನಲಘುಧರ್ಮಾತ್ಮನನು ಪಾಂಡವ
ಕುಲಜನನು ನೀನೇಕೆ ತನ್ನನು ಬೆದಱಿಸುವೆ ಯೆಂದ ॥ ೧೬

ವೃದ್ಧವಿಪ್ರನೆ ಹೇಳು ಕಡೆಯು ವಿ
ರುದ್ಧವೆನ ದಿನನಾಥನಿಚಿದಪ
ವೃದ್ಧಿಗೆರಡೇ ಘಟಿಗೆ ವಿಘ್ನವ ಮಾಪ್ಪೆ ನೀನೇಕೆ ।

---

1 ಬಂದೆನ ಕ. ಖ.

ಶ್ರದ್ಧೆಯುಂಟೈ ಬರುವ ಭಂಗದ
ಸುದ್ದಿಯನು ನೀ ಹೇಳಬೇಡೆನೆ
ಸಿದ್ಧಿಯೇನೆಲೆ ವಿಪ್ರ ತಕ್ಷಕನಾನು ಹೇಳೆಂದ ॥ ೧೭

ಎನ್ನ ವಿಷವನು ಪರಿಹರಿಸುವೊಡೆ
ಪನ್ನಗಾಭರಣಾದ್ಯರಿಂಗರಿ
ದುನ್ನತರಲಾ ವಿಪ್ರ ಪರಿಹರಿಸುವ ಸಮರ್ಥರೆನೆ ।
ಅನ್ಯ ನಾನಲ್ಲೀಶ್ವರನ ಕೃಪೆ
ತನ್ನದೈ ಸಲೆ ಸರ್ಪ ತಾನದ
ನೆನ್ನಲೀ ಹೊತ್ತೇನು ಫಲ ಕಂಡಱಿಯಬಹುದೆಂದ ॥ ೧೮

ಕಂಡಱಿವೆನೀ ಕ್ಷಣದಲಾನೆಲೆ
ಪಂಡಿತನೆ ತೋಱುವುದು ನಿನ್ನು
ದ್ದಂಡಮಂತ್ರದ ಗಿಂತ್ರದಳವನು ನೋಪ್ಪೆನೀಮರನ ।
ಕೊಂಡು ಮುಗಿಸುವೆ ನೆತ್ತು ನೆಱೆ ನೀ
ಗಂಡುತನವುಂಟಾದೊಡೆನೆ ಕೈ
ಕೊಂಡೆನಾನದ ಬಣಗುಸರ್ಪನೆ ಬೇಗ ಮಾಡೆಂದ ॥ ೧೯

ನನ್ನ ವಿಷದಿಂದ ಸುಟ್ಟು ಬೀಳುವ ಈ ಮರವನ್ನು ಬದುಕಿ
ಸೆನಲು ಅದೇರೀತಿಯಾಗಿ ಬದುಕಿಸುವಿಕೆ.

ಆತುರಿಸಬೇಡಾದೊಡಿದ ಕೋ
ಕೌತುಕವ ನೋಡೆನುತ [1] ಕ್ರೋಧಾ
ಘಾತಯುತತಾ [2] ವ್ರಾಕ್ಷನೊಂದಾಲದ ಮಹಾಮರನ ।
ಘಾತುಕನು ಮುಟ್ಟಿದೊಡೆ ಭಸ್ಮೀ
ಭೂತವಾದುದು ಬಿದ್ದುದವನಿಗೆ
ಚೇತರಿಸು ನೀನಾಪೊಡಿದ ಕೊಳ್ಳೆಂದನಾ ದ್ವಿಜಗೆ ॥ ೨೦

1 ಮುಳುಗುವೆ ಕ. ಖ. 2 ಗ್ನಿಯುಲಿ ತಾ ಕ. ಖ.

ಮುಟ್ಟಿ ಮಂತ್ರಿಸಿದರೆ ಮಹಾದ್ವಿಜ
ಸೃಷ್ಟಿಗದುವೇ ಭಂಗ ನೋಡಾ
ದುಷ್ಟಪನ್ನಗ ಮಂತ್ರಜಲವನು ನೋಡು ನೋಡೆನುತ ।
ದೃಷ್ಟಿಯಲಿ ಮಂತ್ರಜ್ಞ ನೀಕ್ಷಿಸೆ
ಕೊಟ್ಟುದಸುವನು ಭಸ್ಮಭಾವವ
ಬಿಟ್ಟುದಂಕುರಿಸಿತ್ತು ಪಲ್ಲವಿಸಿತ್ತು ಮರನಾಯ್ತು ॥ ೨೧

ಹೊನ್ನಬಣ್ಣ ವದಾಯ್ತು ಮರವದು
ಹೊನ್ನಶಾಖೆಗಳಿಂದ ಮೆಱೆದುದು
ಮುನ್ನಿನಿಂದತಿಶಯಸಮಗ್ರತರಾಗ್ರಪರ್ಣದಲಿ ।

ಅದನ್ನು ಕಂಡು ತಕ್ಷಕನು ಕೇಳಿದಷ್ಟು ಧನವನ್ನು ಕೊಟ್ಟು
ಬ್ರಾಹ್ಮಣನನ್ನು ಹಿಂತಿರುಗಿಸುವಿಕೆ.

ಪನ್ನಗೇಂದ್ರನು ಕಂಡನವನತಿ
ಖಿನ್ನನಾದನು ವಿಫಲವಾದುದು
ತನ್ನ ಮನದಂಗವಣೆಯೇನೆಂತೆಂವನಾ ದ್ವಿಜಗೆ ॥ ೨೨

ಏನನಭ್ಯರ್ಥಿಸುವೆ ಹೋಹೆ ಯ
ದೇನು ಕಾರಣ ಮಾಳ್ಪುದೇನಾ
ಮಾನವೇಶ್ವರನಾವುದದು ಕರ್ತವ್ಯ ನಿನಗೆನಲು ।
ಹಾನಿಯಿಂ ವಿರಹಿತರ ಮಾಡಿ ಮ
ಹಾನುಭಾವರ ಕೆಡುವರೇ ಧನ
ಹೀನಗೆನಗವನೀವನಿಷ್ಟಾರ್ಥವನು ಕೇಳೆಂದ ॥ ೨೩

ಐಸಲೇ ತಾನೀವೆನರ್ಥವ
ನೇಸನಭ್ಯರ್ಥಿಸುವೆ ಹೇಳೆನೆ
ಲೇಸನಾಡಿದೆ ಬಱಿದೆ ಧನವನು ಕೊಂಡು ಫಲವೇನು ।
ನಾಶವಲ್ಲೈ ಪರರ ಜೀವವ

ಸಾಸಿಗನು ರಕ್ಷಿಸಿದ ಫಲವವಿ
ನಾಶಪದವೆಂದೆಂಬರುಭಯಾರ್ಥವದು ತನಗೆಂದ ‖ ೨೪

ವಿಪ್ರಶಾಪದಲಟಿವ ನೃಪನನು
ತಪ್ಪಿಸುವೆನೆಂತೆಂಬೆ ವಿಧಿಕೃತ
ತಪ್ಪಲಱಿವುದೆ ಕಾವರಾರಾಯುಷ್ಯವಿಲ್ಲದನ ।
ತಪ್ಪಿದಲ್ಲಿ ಲಘುತ್ವ ನಿನಗೆಲೆ
ವಿಪ್ರ ಭಾವಿಸಿ ನೋಡು ಧನವನು
ಕೊಪ್ಪರಿಗೆಯಲಿ ತುಂಬಿ ಕೊಡುವೆನು ಹೋಗು ನೀನೆಂದ ‖ ೨೫

ಏಕೆ ನಿನಗೀ ವೈರ ತಕ್ಷಕ
ಸಾಕು ನಾ ರಕ್ಷಿಸುವೆನೆನೆ ಹಿಂ
ದೇಕೆ ಖಾಂಡವದಹನವಲಿ ಫಲುಗುಣನು ಸಲೆಮುಳಿದು ।
ಸೋಕಿದನು ತನ್ನವನು ಬಱಿದೇ
ಕಾಕುಳವ ಮಾಡಿದನು ಹಗೆಯನು
ಸಾಕುವೆನು ಬಲು ವಿಪ್ರಶಾಪ ಸಹಾಯವಾಯ್ತೆಂದ ‖ ೨೬

ಎಂದೊಡಾಲಿಸಿ ನೋಡಿ ತನ್ನೊಳ
ಗಂದು ತಿಳಿದನು ವಿಗತಜೀವನ
ನಿಂದು ಬಱಿದೆ ಚಿಕಿತ್ಸೆ ಮಾಡಲದೇನು [1] ಫಲವೆನುತ ।
ಎಂದವನನಿತು ಧನವನುಂ ಕೊಡ
ಲಂದು ಮರಳಿದನಾದ್ವಿಜೋತ್ತಮ
ನೊಂದುಪಾಯವ ಗೆಲಿದೆನೆಂದನು ತನ್ನ ಮನದೊಳಗೆ ‖ ೨೭

ತಾನು ರಾಜನನ್ನು ಸೇರುವುದಕ್ಕಾಗಿ ತನ್ನ ಸಂಗಡ ಇರುವರನ್ನು
ಬ್ರಾಹ್ಮಣವೇಷದಿಂದ ಫಲಪಾಣಿಗಳಾಗಿ ಹೋಗೆಂದು
ಹೇಳುವಿಕೆ.

ಇಂತು ತಪ್ಪಿಸಿ ಬರುತ ತನ್ನಲಿ
ಚಿಂತಿಸಿದನಾ ತಕ್ಷಕನು ನೃಪ

---

1 ಕಿತ್ಸೆಯಲೇನು, ಕ. ಖ.

ನೆಂತು ಗೋಚರವಹನು ಕೊಲುವೆನದೆಂತು ತಾನವನ ।
ಮಂತ್ರಿಗಳ ಬಲುಮಂತ್ರವಾದಿಗ
ಳಂತರಾಳದಲಿರ್ದವನನೆಂ
ದಿಂತು ತನ್ನೊಡನಿರ್ದವರಿಗಿದನೆಂದನುರಗೇಂದ್ರ ॥ ೧೮

ಭೂಸುರರು ನೀವಾಗಿ ಹೋಗಿ ಮ
ಹೀಶನಲ್ಲಿಗೆ ಮರೆಸಿ ಕೊಂಡೀ
ವೇಷದಲಿ ಕೊಡುವುದು ಸುಪುಷ್ಪಫಲಾವಳಿಯನೆನುತ ।
ಸಾಸಿಗನು ಕಳುಹಿದರೆ ಬಂದರು
ಭೂಸುರಾಕಾರದಲಿ ಕೊಟ್ಟರು
ಲೇಸೆನಿಪ ಫಲಪುಷ್ಪನಿಕರಂಗಳನು ಭೂಪತಿಗೆ ॥ ೧೯

ಅವರೊಪ್ಪಿಸಿದ ಒಂದು ಫಲದಲ್ಲಿ ತಕ್ಷಕನು ಹುಳವಾಗಿದ್ದು
ಹೊರಟು ರಾಜನನ್ನು ಕಚ್ಚುವಿಕೆ.

ಅದಱೊಳಗೆ ತಾನೊಂದು ಫಲದ
ಲ್ಲೊದಗಿ ಬಂದನು ಕುಹಕತಕ್ಷಕ
ಹೃದಯಹರವೆಂದೆನಿಪಬಹಳಾಮೋದ ಮಘಮಘಿಸೆ ।
ಅದಱೊಳುತ್ತಮವಾದ ಫಲವನು
ಮೊದಲಲವನಿಪ ತಾನೆ ಕೊಂಡುಱ
ದುದನು ಕೊಟ್ಟನು ಮಂತ್ರಿಗಳಿಗಿವ ಮೆಲ್ಲಿ ನೀವೆನುತ ॥ ೨೦

ಇಱದಿನಪರಾಂಬುಧಿಗೆ ರವಿಯುರ
ಳಿಗೆಗಂಜುವನಲ್ಲ ತಾನಿ
ನ್ನೆಲವೊ ತಕ್ಷಕಗಿಕ್ಷಕನಿನಿನ್ನೇನೆಂದು ಹರುಷದಲಿ ।
ಫಲವ ಕಯ್ಯಲಿ ಹಿಡಿದು ಮಂತ್ರಿಗ
ಳೊಲಿಯೆ ಸುಗಿಸುತ ಕಂಡನೊಂದನು [1]
ಹುಳುವನದಱೊಳು ಕೃಷ್ಣವರ್ಣದ ಸೂಕ್ಷ್ಮರೂಪದಲಿ ॥ ೨೧

---

1 ಕಂಡನು ಕ ಖ.

ಬಾರನೇತಕೆ ತಕ್ಷಕಾಖ್ಯಮ
ಹೋರಗನು ವಿಪ್ರಾತ್ಮಜನ ನುಡಿ
ಘೋರಶಾಪವಿದೆಂತು ತಪ್ಪಿಸಬಲ್ಲರಾರದನು ।
ಸಾರವಿದೆಲೇ ಹುಳುವಿದೆನ್ನಸು
ಹಾರಿ ತಕ್ಷಕನಾಗಿ ಸುಡಲಿ ಶ
ರೀರವನು ಭೂಸುರನ ಶಾಪವ ಸಲಿಸಬೇಕೆಂದ ॥ ೨೧

ನಕ್ಕು ಸರಸವ ಮಾಡಿ ಮುದದಲಿ
ಸೊಕ್ಕಿ ಕೊರಳನು ಹೊಡೆಯೆ ಫಲದಲಿ
ಡೊಕ್ಕರಿಸಿದನು ನಾಗರಾಜನು ಕೊರಳನವನಿಪನ ।
ಧಿಕ್ಕೆನಲು ಚಲಿಸಿದುದು ಸಭೆ ನೃಪ
ಚಕ್ರವರ್ತಿಯನುರಗ ವೇಷ್ಟಿಸ
ಲಿಕ್ಕಲದ ಮಂತ್ರಜ್ಞರೋಡಿದರಂಜಿ ದೆಸೆದೆಸೆಗೆ ॥ ೨೨

ಭೂಪನನುನೀಕ್ಷಿಸುತ ಸಂವಿ
ದ್ರೂಪಪರಮಾತ್ಮನಲಿ ಬಂದನು
ಕಾಪಟಿಗನುರುಹಿದನು ಕಾಯುವೆನುರುವಿಷಾಗ್ನಿಯಲಿ ।
ತಾಪಗೊಂಡುದು ಸಕಲಜನವಾ
ಭೂಪನಟವನು ಕಂಡು ಮನದಲು
ತಾಪವುದಿಸೆ ವಿಷಾಗ್ನಿಮಾತ್ರದಲೊಂದು ನಿಮಿಷದಲಿ ॥ ೨೪

ಹಳಚಿ ಹೋದನು ಮಿಂಚಿನಂತಿರೆ
ಥಳಥಳಿಸಿ ಗಗನದಲಿ ಸೂರ್ಯನ
ಹೊಳಹು ಹುರಿಗೊಂಡಂತೆ ತಕ್ಷಕನಾ ನಿಜಾಲಯಕೆ ।
ಬಳಿಕ ನಿಜಸಂಸಾರಕರ್ಮವ
ನೊಲಿದು ಮಾಡಿದುದಾಪ್ತಜನವೆಲ
ವೆಲವೊ ವಿಪ್ರನ ಹದನಿದೆಂದರು ಮಂತ್ರಿಗಳು ನೃಪಗೆ ॥ ೨೫

ನೋಡಿದೆವು ಬಾಲ್ಯದಲಿ ನಿನ್ನನು
ರೂಢಿಗಾಶ್ರಯವಾಗಿ ನಿನ್ನಯ
ಪ್ರಾಢ ಮಗನೇ ಕಲ್ಪತರುವಿನ ಬೀಜದಂಕುರವು ।
ಬೇಡಿಕೊಂಬೆವು ದೇವ ಸಂಶಯ
ಬೇಡ ನಿನ್ನಲಿ ಕರುಣವನು ನೆಱೆ
ಮಾಡುವನು ನಿತ್ಯಾತ್ಮನಾರಾಯಣನು ಮನವೊಲಿದು ॥ ೩೬

ಹದಿನಾಲ್ಕನೆಯ ಸಂಧಿ ಮುಗಿದುದು.

## ಹದಿನೈದನೆಯ ಸಂಧಿ.

ಸೂಚನೆ.

ಗುರುಚರಣಸೇವೆಯಲಿ ಪಡೆದರು
ಪರಮಪಾವನವಾದ ಕೀರ್ತಿಯ
ಧರೆಯೊಳುದ್ದಾಲಕನು ಮುನಿಕುಲತಿಲಕನುಪಮನ್ಯು ॥

ಶೌನಕ ಪ್ರಶ್ನೆ.

ಸೂತ ಹೇಳೈ ಪೂರ್ವದಲಿ ವಿ
ಖ್ಯಾತನೆನಿಸುವುದಂಕಮುನಿಯೊಡ
ನಾತಪೋಸಿಧಿಯೆನಿಸುವುದ್ದಾಲಕನುನುಪಮನ್ಯು ।
ಭೀತಿಯನು ನೆಱೆ ತೋಱಿದು ಸಹಜ
ಪ್ರೀತಿಯಲಿ ಗುರುವಿನ ನಿರೂಪವ
ನೋತು ಶಿರದಲಿ ಧರಿಸಿ ನಡೆದುದನಱುಹು ನಮಗೀಗ ॥ ೧

ಉತ್ತರದಲ್ಲಿ—ಉದ್ದಾಲಕನೂ ಉಪಮನ್ಯುವೂ ಧೌಮ್ಯರಿಗೆ
ಶಿಷ್ಯರಾಗುವೆವೆನಲು ಸಂವಾದ.

ಎನಲು ಹೇಳ್ದನು ಸೂತನಾವರ
ಮುನಿಗಳಿಗೆ ಭೃಗುವರಕುಲಜನಿತ
ರೆನಿಸುವನುಪಮಚರಿತನುದ್ದಾಲಕನುನುಪಮನ್ಯು ।
ಘನತಪೋನಿಧಿಯೆನಿಪುದಂಕನು
ಮನದ ಧೃತಿಯಿಂದಾದರದಲಂ
ದನುನಯದಲಾಯೋಧಧೌಮ್ಯನ ಕಂಡು ನಮಿಸಿದರು ॥ ೧

ಮುನಿವರೇಣ್ಯ ಮಹಾಮಹಿಮ ನೀ
ನನಘನೆಂಬುದ ಕೇಳ್ದು ಬಂದೆವು
ಮನವೊಲಿದು ವೇದಾದಿವಿದ್ಯವ ಕಲಿಸಿ ಸಲಹೆಂಮ ।
ನಿನಗೆ ಶಿಷ್ಯರು ನಾವು ನಮ್ಮಯ
ಮನವಚನಕಾಯದಲಿ ತವ ಪದ
ವನಜಸೇವೆಯನೆಮಗೆ ತಾರಣವಾಗಿ ಚರಿಸುವೆವು ॥ ೨

ಎನಲು ನಗುತಾ ಮುನಿಪ ನುಡಿದನು
ಘನವಲಾಗುರುಭಜನೆ ಲೋಕಕೆ
ಮನವೊಡಲು ತಾ ಸಕಲ ಸಾರ್ಥವು ತಪ್ಪಿದರೆ ಘನದುರಿತ ।
ನೆನೆಯಬಾರದ ತೆಱದಲಪ್ಪವು
ದನುನಯವು ನೀವ್ ನೆನೆದು ನಿಶ್ಚಯ
ವನು ತಿಳಿದು ಹೇಳುವುದು ನೀವೆನೆ ನುಡಿದರವರಂದು ॥ ೪

ಎಲೆ ಮುನೀಶ್ವರ ನಿಮ್ಮ ಚರಣದ
ಲಲಿತಸೇವೆಯೆ ಗತಿಗೆ ಸಾಧನ
ವೆಲಸದೆಮ್ಮವಧಾನ ತ್ರಿಕರಣ ಶುದ್ಧಿ ನಿಮ್ಮಡಿಯ ।
ಸುಲಭದಲಿ ಭಜಿಸುವೆವು ವಿದ್ಯೆಯ

ಕಲಿಸುವುದು ಕರುಣದಲಿ ನೀವೆಯೆ
ನಲು ಸುಶಿಷ್ಯರನಂದು ಪತಿಕರಿಸಿದನು ಮುನಿ ನಗುತ ॥ ೫

ಎಲೆ ಮುನಿಗಳಿರ ಮೇಲೆ ಪೇಳ್ವೆನು
ಸಲೆ ವುದಂಕಚರಿತ್ರವನು ಮ
ತ್ತೊಲಿದು ವುದ್ದಾಲಕನ ಯುಪಮನ್ಯುವ ಮಹಾಕಥೆಯ ।
ಸುಲಭದಲಿ ನಾನೊರೆವೆ ನೀವಿದ
ನೊಲಿದು ಕೇಳುವುದೆನುತ ಮತ್ತಾ
ಲಲಿತಸನ್ಮತಿ [1] ಸೂತ ಹೇಳಿದನಾ ಮಹಾಕಥೆಯ ॥ ೬

ತನ್ನ ಭೂಮಿಗೆ ಹರಿಯುವ ನೀರನ್ನು ಹೊರಗೆ ಹೋಗದಂತೆ ಮಾಡೆಂದು ಗುರುವಿನಾಜ್ಞೆಯಂತೆ ಉದ್ದಾಲಕನು ನಡೆಯುವಿಕೆ.

ಗುರುವಿನಾಜ್ಞೆಯ ತಲೆಯಲಾನುತ
ಪರಮವೇದಾಧ್ಯಯನಪರರಾ
ಗಿರಲು ಸಂತೋಷದಲಿ ಮಿಗೆ ಮತ್ತೊಂದುದಿವಸದಲಿ ।
ಗುರು ಕರೆದನುದ್ದಾಲಕನನೆಲೆ
ತರುಣ ನಮ್ಮಯ ಮಾನ್ಯವೃತ್ತಿಯ
ಲುರುತರಧರಣಿಯಲ್ಲಿ ಬೆಳದಿಹುದಲ್ಲಿ ಘನಶಾಲಿ ॥ ೭

ಹರಿವ ಜಲವನು ನಮ್ಮಧರಣಿಯ
ಹೊರಗಿರಿಸಲನ್ಯರು ಕೊಂಡು ಹೋ
ಹರು ಘನದುರಾತ್ಮಕರವರ ಸೀಮೆಗೆ ಪೋಗದಂದದಲಿ ।
ಭರದಿನುದಕವ ತಿರುಹು ನಮ್ಮಯ
ಧರೆಗೆ ನೀನೆನೆ ಶಿರದಲಾನುತ
ಭರವಸದಿ ತಾ ಬಂದು ಕಂಡನು ಹರಿವ ಶಂಬರವ ॥ ೮

ಪರರ ಭೂಮಿಗೆ ಪೋಪುದಕಟಾ
ಭರದೆ ಜಲವನು ತಾನು ತಿರುಹಲು

1 ಲಲಿತಮಹಾಮತಿ, ಕ. ಖ.

ತರಳೆ ಗುದ್ದಲಿಯೆಂದು ಪೋದರೆ ತಡವಲಾ ಯೆನುತ ।
ಭರದಿ ಪೋಪೀಯುದಕವನು ತಾ
ತಿರುಹಿಸುವೆನೆಂದೆನುತಲಲ್ಲಿಯೆ
ಕರದ ತಲೆದಿಂಬಿನಲಿ ಪವಡಿಸಿದನು ನಿಜೇಚ್ಛೆಯಲಿ ॥ ೯

ಸಂದಿಯಲಿ ಜಲ ಪೋಗಲೀಯದೆ
ತಂದು ಮೃತ್ತಿಕೆಯಿಂದ ಕಟ್ಟಿಯೆ
ಬಂದ ಜಲವೆಲ್ಲವನು ತಿರುಹಿದನಾತ್ಮಧಾರುಣಿಗೆ ।

ಆ ಸ್ಥಿತಿಯಲ್ಲಿರುವಾಗ ಗುರುವು ಬಂದು ಕಂಡು ಸಂತೋಷಿಸಿ ನಿನಗೆ ಸಕಲವಿದ್ಯಾಪ್ರಾಪ್ತಿಯಾಗಲಿಯೆಂದು ಮನೆಗೆ ಕಳುಹಿಸುವಿಕೆ.

ಸಂದುದೀಪರಿ ಹಲವು ದಿನವದ
ಕಂದು ಗುರು ತಾ ನೆನೆದನಾಗಳ
ಕಂದನಾವೆಡೆ ಯೆನುತ ಬಂದನು ಕಂಡನೀಹವನ ॥ ೧೦

ಅಕಟ ಮಗನ ನಿರರ್ಥದಲಿ ತಾ
ನಕುಟಿಲನ ಕಳುಹಿದರೆ ನಮ್ಮಯ
ಬಕುತಿಯಲಿ ತನ್ನೊಡಲ ಮೋಹವ ತೊಱೆದು ದೃಢತೆಯಲಿ ।
ಪ್ರಕಟದಲಿ ತಾನಡ್ಡಬಿದ್ದೀ
ಸಕಲಜಲವನು ನಮ್ಮ ಭೂಮಿಗೆ
ಸುಕರದಲಿ ತಿರುಹಿದನು ಹರ ಹರ ಯೆನುತ ಹರುಷಿಸಿವ ೧೧

ಬಂದು ಕೈವಿಡಿದೆತ್ತಿ ಕೇಳ್ಳಲೆ
ಕಂದ ಮೆಚ್ಚಿದೆನೆಂದು ಬಹಳಾ
ನಂದದಲಿ ಹರಸಿದನು ಮಸ್ತಕಕಿರಿಸಿ ಹಸ್ತವನು ।
ಸಂದ ಸಕಲಸುವಿದ್ಯೆಗಳು ನಿನ
ಗಿಂದು ಫಲಿಸಲಿ ಗಾರುಹಸ್ತ್ಯಕೆ
ಛಂದದಲಿ ನಡೆ ಯೆಂದು ಕಳುಹಿದರಾತ ಬೀಳ್ಕೊಂಡ ॥ ೧೨

ಬಳಿಕ ಉಪಮನ್ಯುವನ್ನು ಮನಃಪರೀಕ್ಷಾರ್ಥವಾಗಿ ಗೋರಕ್ಷಣೆ
ಮಾಡೆಂದು ವನಕೆ ಕಳುಹಿಸುವಿಕೆ.

ಬೞಿಕಲಂದುಪಮನ್ಯುವಿರುತಿರೆ
ಕಳೆದು ಪೋದುದು ಕೆಲವು ದಿನ ಮ
ತ್ತೞುಕದವನಧ್ಯಯನಪಾಠದ ಕಾಂಕ್ಷೆಯಿಂದಿರಲು ।
ತಿಳಿಯಲೆಂದೀತನ ಮನವನಾ
ಕಳನು ಕಾವುದು ಹೋಗು ನೀನೆಂ
ದೞುಹದಟ್ಟಲು ಕಾದನವ ಗೋವುಗಳ ಮನವೊಲಿದು ॥ ೧೩

ಆಗ ಬಂದು ಮಧ್ಯಾಹ್ನ ಹಸಿವಿನಿಂದ ಗೋವನ್ನು ಮನೆಗೆ ತರಲು
ಗುರುವು ಕೋಪಿಸಿ ಅರಣ್ಯದಲ್ಲಿಯೇ ಆರ್ಕಪತ್ರಗಳನ್ನು ತಿಂದು
ಸಾಯಂಕಾಲಕ್ಕೆ ಗೋಸಹಿತ ಬಾಯೆಂದು ಹೇಳುವಿಕೆ.

ಬಂದುದಿನ ಗೋವೃಂದವನು ಸಾ
ನಂದದಲಿ ಮಧ್ಯಾಹ್ನಸಮಯದ
ಲಂದು ತರಲಾಶ್ರಮಕೆ ಗುರು ಕಂಡಧಿಕಕೋಪದಲಿ ।
ಬಂದೆಯೇತಕೆ ಪಶುಗಳನು ನೀ
ನಿಂದು ಮಧ್ಯಾಹ್ನದಲಿ ತಂದರೆ
ನೊಂದವುಪವಾಸದಲಿ ಕೆಡಿಸಿದೆ ಯೆಂದು ಗರ್ಜಿಸಿದ ॥ ೧೪

ಎಲೆ ಗುರುವೆ ನಿರ್ವ್ಯಾಜದಲಿ ತಾ
ನೊಲಿದು ಬಂದವನಲ್ಲ ನನಗಿಂ
ದಲವಕ್ಷುಧೆಯನು ತಾಳಲಾರದೆ ಬಂದೆನೆಂದೆನಲು ।
ಘೇೞಲನಾಮುನಿ ನುಡಿದನಡವಿಯ
ಲಲಿತಕೋಮಲದರ್ಕಪತ್ರವ
ಸುಲಭದಲಿ ನೀ ಭುಜಿಸಿ ಕಾವುದು ದಿನವ ಕಡೆಗಣಿಸಿ ॥ ೧೫

ಎನೆ ಹಸಾದವೆನುತ್ತ ಹೋದನು
ಮನದೊಳನುಮಾನಿಸದೆ ಗೋವುಗ
ಳನು ಗೊಳಿಸಿ ಘನದರ್ಕಪತ್ರವ ಭುಜಿಸಿ ಹಲಕಾಲ ।

ಅನುನಯದಿ ಸಾಯಾಹ್ನ ಸಮಯಕೆ
ಮನೆಗೆ ಬಹನೀ ತೆಱದಲಿರುತಿರೆ
ಘನತರೋಷ್ಣವದಡರಿ ಕೆಟ್ಟವು ನಯನವಾಮುನಿಗೆ ॥ ೧೬

ಹೀಗೆ ಬಹುಕಾಲ ನಡೆಯಲು ಶಿಷ್ಯನಿಗೆ ದೇಹತ್ರಾಣ ಕಡಿಮೆ ಯಾದುದಂ ಕಂಡು ಗುರುವುಪದೇಶಿಸಿದ ಮಂತ್ರಜಪದಿಂದ ಸೂರ್ಯ್ಯೋಪಾಸನೆ ರೋಕ್ಷವಂ ಹೊಂದಿ ರೋಗನಿವೃತ್ತಿಯಾಗುವಿಕೆ.

ಇರಲಿರಲು ಪಥ ಕಾಣಬಾರದೆ
ಕರದ ಸನ್ನೆಯ ಸೋಹೆವಿಡಿದಾ
ಚರಿಸುತಿರೆ ಗುರುವಱಿದನಕಟಾ ಶಿಷ್ಯನಾಯುಸವ ।
ಪರಿಹರಿಪೆನೀ ಕ್ಷಣದಲೆನುತವೆ
ಕರೆದು ಮನದೆರಕದಲಿ ಪೇೞ್ದನು
ತರಣಿ ಮೆಚ್ಚುವ ಮಂತ್ರಗಳನತಿಸಾಧ್ಯತರವಿಧಿಯ ॥ ೧೭

ಒರೆದು ಘನಮಂತ್ರೋಪದೇಶವ
ನಿರದೆ ಕಳುಹಲು ಬಂದು ಮಿಂದಾ
ಸುರನದಿಯ ತೀರದಲಿ ನಿಂದಾವಶ್ಯಕವ ರಚಿಸಿ ।
ವರಮುನೀಶ್ವರನಿತ್ತ ಮಂತ್ರವ
ಸ್ಮರಿಸಿ ಕರಗಳನೆತ್ತಿ ರವಿಯ
ನುಱೆ ಮನದಿನೀಕ್ಷಿಸಿ ಸುರುಚಿರಧ್ಯಾನಪರನಾದ ॥ ೧೮

ಜನನರಹಿತನೆ ಲೋಕಭಾವನ
ನೆನಿಖಿಳಾತ್ಮಕನೆಯಜರವರೇ
ಣ್ಯನೆ ಯನುಪಮಾನಘಶುಭದಧರ್ಮ[1] ಸ್ವರೂಪಕನೆ ।
ಘನಮಹಿಮ ಸೃಷ್ಟಿಸ್ಥಿತಿನಿಧಾ
ನನೆ ಪ್ರಳಯರೂಪಕಸೂರ್ಯನೆ
ಯನುಪಮಾರ್ಣವ ಕಾರುಣಿಕ ರವಿ ನಿನಗೆ ಶರಣೆಂದ ॥ ೧೯

1 ನನುಪಮಧರ್ಮ, ಕ. ಖ.

ಘನವಿವಸ್ವಾನುವೆ ಮಹಾಜಗ
ವನು ಧರಿಸಿಯಿರ್ದಂತರಾತ್ಮನೆ
ಜನವಬೆಳಗುವ ದೀಪರೂಪನೆ ಲೋಕಹಿತಕಾರಿ ।
ಅನುದಿನವು ನೀನಾದಿ ನಿನ್ನನು
ನೆನೆವೊಡರಿದು ಸಹಸ್ರಲೋಚನ
ಗನುಪಮಿತತೇಜನೆ ಸುರರೊಳುತ್ತಮ ನಮೋಯೆಂದ ॥ ೨೦

ನಮಿಸುವೆನು ಸವಿತೃಸ್ವರೂಪನೆ
ನಮಿಸುವೆನು ಜಗದೇಕಚಕ್ಷುವೆ
ನಮಿಸುವೆನು ಜಗದುದಯರಕ್ಷಾಪ್ರಳಯಕಾರಣನೆ ।
ನಮಿಸುವೆನು ವೇದಸ್ವರೂಪನೆ
ನಮಿಸುವೆನು ತ್ರಿಗುಣಾತ್ಮಕಾರಣ
ನಮಿಸುವೆನು ಬ್ರಹ್ಮೇಶ ನಾರಾಯಣ ನಮೋ ಯೆಂದ ॥ ೨೧

ಎಂದು ಬಹುವಿಧವಾದ ತುತಿಗಳ
ಲಂದು ಹೊಗಳೆ ಮಹಾಮಹಿಮನಹ
ಛಂದದಲಿ ವೇದಾತ್ಮನನು [1] ಮೆಚ್ಚಿಸಲು ರವಿ ಬಂದು ।
ಕುಂದದಾನಂದದಲಿ ದೃಷ್ಟಿಗ
ಳೊಂದೆ ಕಾಣಿಸಿ ಬೇಗನಾ ರವಿ
ಸಂದನಂದಾಕಾಶಕತ್ತಲು ಮುನಿಪ ಹರುಷಿಸಿದ ॥ ೨೨

ಅದನ್ನು ಗುರುವು ಕೇಳಿ ಸಂತೋಷದಿಂದ ವರವನ್ನು ಕೊಟ್ಟು
ಉಪಮನ್ಯುವಂ ಕಳುಹಿಸುವಿಕೆ

ಬಂದು ಗುರುಚರಣಾರವಿಂದಕೆ
ವಂದಿಸಲು ಮಿಗೆ ಕೇಳ್ದನಧಿಕಾ
ನಂದದಲಿ ಪರಿಣಮಿಸೆ ಮೆಚ್ಚಿದನಾತ ಶಿಷ್ಯನಿಗೆ ।
ತಂದೆ ನಿನಗೆ ಸಮಸ್ತವೇದಗ

---

1 ಛಂದವೇದೋರೂಪನನು, ಕ. ಖ.

ಳಿಂದು ಫಲಿಸಲಿ ಹೋಗು ನೀನೆಂ
ದಂದು ಮಸ್ತಕಕಿರಿಸಿ ಕರವನು ಕಳುಹಿದನು ನಲಿದು ॥ ೨೩

ಬಂದನಂದುಪಮನ್ಯು ಬಹಳಾ
ನಂದದಲಿ ಲೋಕದಲಿ ಕೀರ್ತಿಯು
ನಂದು ಪಡೆದನು ಗುರುಪ್ರಸಾದ ಕರುಣದ ಬಲದಿಂದ ।
ಇಂತಿದನು ಹೇಳಿದೆನು ನಿಮಗಿ
ನ್ನೊಂದಿತೇ ಘನಹರುಷವೆನೆ ಮನ
ದಂದು ನಿತ್ಯಾತುಮನ ನೆನೆದರು ಭಾವಶುದ್ಧಿಯಲಿ ॥ ೨೪

ಹದಿನೈದನೆಯ ಸಂಧಿ ಮುಗಿದುದು.

## ಹದಿನಾರನೆಯ ಸಂಧಿ.

ಸೂಚನೆ.

ಬಂದು ಕಂಡನುದಂಕನವನಾ [1]
ಕಂದಜನಮೇಜಯಮಹೀಪತಿ
ಗಂದು ಕಥನವನರುಹಿ ಸರ್ಪಾಧ್ವರಕೆ ತೊಡಗಿಸಿದ ॥

ಸಶಿಷ್ಯರಾದ ಉದಂಕರು ಬರಲು ಅವರನ್ನು ಪೂಜಿಸಿ ಆಗಮನಕಾರಣ ಪ್ರಶ್ನಕ್ಕೆ ಉತ್ತರರಾಂಭ.

ಹೇಳಿದರು ಮಂತ್ರಿಗಳು ಭೂಮೀ
ಪಾಲಜನಮೇಜಯಗೆ ಬಳಿಕಾ
ವೇಳೆಯಲಿ ಶಿಷ್ಯಪ್ರಶಿಷ್ಯರು ಸಹಿತುದಂಕಮುನಿ ।

1 ರಾಜವನವಾ, ಕ. ಖ.

ಜಾಳಿಸಿದ ಶಾಂತಿಯಲಿ ಪೂರ್ವದ
ಕಾಲದಲಿ ತಕ್ಷಕನು ಮಾಡಿದ
ಖೂಳತನವನು ನೆನೆದು ಬಂದನು ನೃಪನ ಹೊರೆಗಾಗಿ ‖ ೧

ಬರಲು ಮುನಿಗಿದಿರೆದ್ದು ಭಕ್ತಿಯ
ಭರದಿ ವಂದಿಸಿ ಸತ್ಕೃತಿಯನಂ
ದರಸ ವಿರಚಿಸಿ ಬಳಿಕ ಬರವೇನೆಂದು ಬೆಸಗೊಳಲು ।
ಕಿರಿದು ಸಲ್ಲಾಪಗಳ ಮಾಡುತ
ಪರಮತತ್ತ್ವವನೊರೆದು ಮೆಲ್ಲನೆ
ದುರುಳತಕ್ಷಕಗುಪಹತಿಯ ನೆನೆದಾಗಳಿಂತೆಂದ ‖ ೨

ರಾಜ್ಯಪಾಲನವೂ ಶತ್ರುಸಂಹಾರವೂ ರಾಜಧರ್ಮವು.

ಆದೊಡೇನೆಲೆ ಭೂಪ ರಾಜರು
ಮೇದಿನಿಯ ನಾಳ್ವವರೆಗೊಂದೇ
ಕಾದ ಕರಣ ಪದುಳದಿ ರಾಜ್ಯವನಾಳಿ ಧರ್ಮದಲಿ ।
ಕಾದಿದರೆ ಪ್ರತಿಭಟನ ನಿಱಿವುದು
ಭೇದದಲಿ ನೆಱೆ ಕೊಂದವರ ಮಿಗೆ
ಭೇದಿಸಿಯೆ ಕೊಲಬೇಕು ಹಿಂಸೆ ಯದಲ್ಲ ಶಾಸ್ತ್ರದಲಿ ‖ ೩

ಪೂರ್ವದಲ್ಲಿ ಪಾಂಡವರು ನಾರದೋಪದೇಶದಿಂದ ರಾಜಸೂಯ ಮಾಡಿದ ಕಥೆಯನ್ನು ಹೇಳುವಿಕೆ.

ಎನುತ ಯತಿವರನೆಂದ ಕೇಳೈ
ಜನಪ ನಿನ್ನಯ ಪಾಂಡುಪುತ್ರರ
ವಿನುತಶೌರ್ಯವನಱಿಯಲುಶ್ರೀಸೋಮಕುಲದವರ ।
ಜನಪತಿಲಕರ ಕುಂತಿಪುತ್ರರ
ಮನೆಗೆ ನಾರದ ಬಂದ ಪಾಂಡುವಿ
ಗನಿತು ದುರ್ಧರವೃತ್ತಿಯೆಂಬುದ ಹೇಪೆಯಾಕ್ಷಣದಿ ‖ ೪

ಜನಪತಿಯು ಬಲ ಬಹಳವಿರಲಿಕೆ
ವಿನುತಭಂಡಾರವನು ತರಿಸಿದ
ಜನಪ ಮಾಡಿದ ರಾಜಸೂಯುವನಂದು ಪಾಂಡುವಿಗೆ ।
ಎನಿತೊ ಫಲ ಮೇಳವಿಸೆ ಯಿಂದ್ರನ
ವನಿತೆಯುರು ಬಚ್ಚಕಾತನೋಲಗ
ದನುವ ಕಾಣರು ಪಾಂಡುನೃಪತಿಯು ಭೂಪ ಕೇಳೆಂದ ॥ ೫

ತಾಯಿತಂದೆಗಳಿಗೆ ವಿರೋಧಿಗಳನ್ನು ವ್ಯಥೆಪಡಿಸುವುದು ಪುತ್ರನ ಕರ್ತವ್ಯ
ವಾದ ಕಾರಣ ಸರ್ಪಾಧ್ವರವ ಮಾಡೆಂದು ಹೇಳುವಿಕೆ.

ಮಾತೃಪಿತೃಗಳ ಹಗೆಯು ತೆಗೆಯದ
ನೇತಕಾ ಸುತ ಜನಿಸಿ ಫಲವೇ
* ಭೂತನಿಕರದುವರದಲಿ ಜನಿಸಿದರೆ ಜಗತ್ತುಗಳು ।
ಓತು ಕೇಳ್ಕ ಸಗಣಿಯೊಳು ತಾವ್
ನೇತು ಸಾವಿರಹುಳುಗಳೆಂಬೀ
ಮಾತು ಪೊದಗುಗು ಜನದ ವಚನದಿ ರಾಯ ಕೇಳೆಂದ ॥ ೬

ಆ ಮಹಾಪಾಂಡವರ ಕುಲದಲಿ
ಭೂಮಿಪತಿ ನೀ ಜನಿಸಿ ತಂದೆಯೊ
ಳಾ ಮಹಾಹಗೆ ವುರಗತಕ್ಷಕನಿರಲು ಕೈಗಾದೆ ।
ಭೂಮಿಯೊಳಗಹಿವಂಶವಾದ

---

ಗ. ಪುಸ್ತಕಪಾಠ—

* ನಾತಗನಿತೈಶ್ವರ್ಯಸಂಪದವಿದ್ದು ಫಲವೇನು ।
ಖ್ಯಾತಿಯನಿತಿದ್ದೇನು ಸುಜನ
ಪ್ರೀತಿಕರವೆನೆ ತಂದೆಗಧಿಕಸು
ಖಾತಿಶಯುವನು ದೊರೆಯಿಸುವುದೇ ಧರ್ಮವತಸೆಂದ ॥ ೬
ಕಾಮವಾಗಲಕಾಮವಾಗಲಿ
ಭೂಮಿಗಧಿಕದ್ವೇಷಿಗಳ ನಿ
ಸ್ಸೀಮತನದಿಂ ಕೊಲುವುದೇ ಸಜ್ಜನರ ಧರ್ಮವದು ॥

ಸ್ತೋಮವನು ನೀ ಕೆಡಿಸಬೇಕೆನೆ
ಭೂಮಿಪತಿ ಬೞಿಕೆಂದನಾಮುನಿಗಧಿಕಹರುಷದಲಿ ॥ ೭

ಅದು ಹೇಗೆ ಸಾಧ್ಯವೆಂದು ರಾಜನೆನ್ನಲು ವಿಪ್ರಾನುಗ್ರಹದಿಂದ ಸರ್ವವೂ ಸಾಧ್ಯವಾಗುವುದೆಂದು ಉತ್ತರ.

ಹುದುಗಿಹೆನು ತಾನೆಂಬ ಭೇದದ
ಹದನನಱಿಯೆನದೆಂದೊಡಾಯತಿ
ಯಿದು ಬೞಿಕ ತಾನೊಂದು ಗಹನವೆ ದ್ವಿಜರ ಭಜಿಸಿದೊಡೆ ।
ಹದನ ಕಾಂಬರು ಭೂಸುರೋತ್ತಮ
ರದಕೆ ತತ್ಕ್ಷಣ ಹೋಮದಲಿ ತಾವ್
ಸದೆದು ಕೊಡುವರು ನಿನಗೆ ವಿಪ್ರರು ಭೂಪ ಕೇಳೆಂದ ॥ ೮

ಅನಿಮಿಷರ ಮುಖರೂಪನಪ್ಪ[1] ನ
ಲನ ಕರೆದು ಸರ್ಪಗ್ರಸನವಹು
ದೆನೆ ವಸಧಿಯು ಗಭೀರತನವನು ನಿಮಿಷಮಾತ್ರದಲಿ ।
ಮುನಿಪನೊಬ್ಬನು ಕುಡಿದು ಕಳೆಯನೆ
ಜನಪ ನಿನ್ನಯ ಪೂರ್ವಪುರುಷನ
ತನುವಿನ ಕ್ಷಯ ತಳೆಯಲಾಕ್ಷಣ ಹೀನಕಳಗಳನು ॥ ೯

ಕೂಡಿ ತಳೆಯರೆ ಶಶಿಯನೆಂದರೆ
ರೂಢಿಯುಹ ಹದಿನಾಲ್ಕು ಲೋಕವ
ಮಾಡನೇ ಕಮಲಜನು ಭೂಮಿಗೆ ತಾನು ಗೋಹಲನ ।
ನೋಡಿ ಕಳೆಯರೆ ಯಾ ಸುರೇಶನ
ಗಾಢದೈಶ್ವರ್ಯವನು ರೂಢಿಸಿ
ರೂಢಿಯಲಿ ಭಿಕ್ಷುಕನ ಮಾಡರೆ ತೀರ್ಥಮೌಳಿಯನು ॥ ೧೦

ತಾಮಸಕ್ಕಧಿಕಾರಿ ಮಾಡರೆ
ಭೂಮಿಯೊಳ್ ದ್ವಿಜರಿಂಗೆ ತಾನದು

1 ಮುಖನಪ್ಪನ, ಕ. ಖ. ಮುಖನಪ್ಪೊಡನ, ಗ.

ನೇಮಿಸಲು ನಿಲಲುಂಟೆ ಯೆಂದರೆ ಭೂಪನಿಂತೆಂದ ।

ರುದ್ರಾದಿಗಳನ್ನು ಶಪಿಸಿದವರ ಹೆಸರುಗಳ ಪ್ರಶ್ನೆ.

ಸೋಮಶೇಖರಮುಖ್ಯನಾಕಿ
ಸ್ತೋಮವನು ಶಪಿಸಿರ್ದವರ್ಗಳ
ನಾಮವನು ತನಗರುಹಿ ಯೆಂದರೆ ಮುನಿಪನಿಂತೆಂದ ॥ ೧೧

ಉತ್ತರದಲ್ಲಿ—ಸುರರು ಸರ್ವೋತ್ತಮದೇವತೆಯನ್ನು ತಿಳಿಯಲು ಭೃಗು ಋಷಿಯನ್ನು ಕಳುಹಿಸುವಿಕೆ.

ಮೊದಲು ಮನ್ವಂತರದ ಕೃತಯುಗ
ವಿದಿತದಲಿ ತೆತ್ತೀಸಕೋಟಿಯ
ತ್ರಿದಶರೆಲ್ಲರು ನೆರೆದು ಪದ್ಮಜವಿಷ್ಣುರುದ್ರರಲಿ ।
ಅದಟುದೈವವದಾರು ನಂಬಲು
ವಿದಿತವನು ತಾವೆಳುಪೆವೆಂದಾ
ತ್ರಿದಶಗಂಗೆಯ ತಡಿಯ ನೆರೆಯಲಿ ಕೂಗಿ ಭೃಗುಋಷಿಯ ॥ ೧೨

ಆಗ ಭೃಗುವು ಈಶ್ವರನ ಸ್ಥಾನಕ್ಕೆ ಹೋಗಿ ಕೋಪದಿಂದಿರುವದಂ ಕಂಡು ಶಪಿಸುವಿಕೆ.

ನೆರೆದು ಕಳುಹಿದರವರ ಗ್ರಾಮಕೆ
ವರಮಹಾಋಷಿ ಮೊದಲು ಹರಿದನು
ಹರನ ಗ್ರಾಮಕೆ ಹೋಗಿ ಶೂಲಿಯ ಸಮಯವೇನೆನಲು ।
ಹರನು ಕೇಳುತ ಕೋಪದಿಂದವೆ
ಬರೆ ಮಹಾಋಷಿ ಕಂಡು ಶಾಪವ
ನೊರೆದ ಗಂಗಾಧರಗೆ ತಾಮಸಜನಕೆ ಗುರು ನೀನು ॥ ೧೩

ಬಳಿಕ ಬ್ರಹ್ಮನ ಬಳಿಗೆ ಬರಲು ಆತನು ತನಗೆ ಮಾನವಾಡದೆ ಇದ್ದದ್ದರಿಂದ ಬ್ರಹ್ಮನಿಗೆ ಶಾಪವಂ ಕೊಡುವಿಕೆ.

ಎಂದು ಬೇಗದಿ ಕಮಳಭವನನ
ಮಂದಿರಕೆ ಬರೆ ಪದ್ಮಸಂಭವ

ಬಂದ ಮುನಿಗಾಸನವನೀಯದೆ ಯಿರಲಿಕಾಮುನಿಪ ।
ಅಂದು ಶಾಪವ ಕಮಲಜಂಗಿಂ
ತೆಂದನೀಜಗದಲ್ಲಿ ಮೇಣೊಂ
ದೊಂದು ಗ್ರಾಮದ್ವಾರಬಂಧದ ಮುಂದೆ ಗೋಹಲನ ॥ ೧೪

ಛಂದದಿಂದಿರುತಿಹುದದಗಸೆಯೊ
ಳಿಂದು ತಾ ಶೀತೋಷ್ಣವಾತಕೆ
ನೊಂದು ಸದ್ದ್ವಿಜರಿಂಗವುವಸರವೀಯದನ ಗತಿಯು ।
ಲೆಂದುವೀ ಪರಿಯುಹುದು ಧರೆಯುಲಿ
ಸಂದ ಜನರ ವಿವಾಹದಾದಿಯು
ಲೊಂದು ರಾತ್ರಿಯು ನಾಲ್ಕುಹಗಲಿ ಬಂದು ಗೋಹಲನ ॥ ೧೫

ವೇದಿಸಿದ ನೈವೇದ್ಯನಿಂದವೆ
ಯಾದರಿಸಿ ತಾ ಮಿಥುನವರ್ಗಕೆ
ಸಾಧಿಸಿದ ಪರಮಾರ್ಥಭೋಗವ ಭೂಪ ಕೇಳೆಂದ ।
ಆದುರಾಗ್ರಹಿಮಿಥುನಕೆಯು ಬಹು
ಬಾಧೆ ತಾನಹುದೆಂದು ಭೃಗುಋಷಿ
ಮೇದಿನಿಯುಲಿದನಖಿಹಿ ಬಂದನು ಕ್ಷೀರಸಾಗರಕೆ ॥ ೧೬

ಕ್ಷೀರಸಾಗರಕ್ಕೆ ಬಂದು ಮಲಗಿದ್ದ ವಿಷ್ಣುವಿನ ಎದೆಗೆ ಒದೆಯಲು ಕೋಪಿಸದೆ ಪರಮಾದರದಿಂದ ತನ್ನನ್ನು ಪೂಜಿಸಿದ್ದರಿಂದ ವಿಷ್ಣುವೇ ಸರ್ವೋತ್ತಮನೆಂದು ತಿಳಿಸುವಿಕೆ.

ಬೇಗದಲಿ ಬಂದುರಗವಾಸಿಯು
ಯೋಗನಿದ್ರಾಂಗನೆಯ ಭೇದದ
ರಾಗದಲಿ ಪವಡಿಸಿದ ಮಧುಮರ್ದನನ ಬಂದೊದೆದ ।
ಆಗಳಾತನ ವಕ್ಷಭಾಗವ
ತಾಗಿಸಿದ ತಾನಗ್ರಪಾದದಿ
ಮೇಗಳಖಿತಾದೇವನೆದ್ದನು ಮುನಿಯು ಚರಣವನು ॥ ೧೭

ಹಿಡಿಕಿಸುತ ಕುಳ್ಳಿರ್ದು ಮುನಿಪಗೆ
ನುಡಿವನೈ ಶ್ರೀವಿಷ್ಣು ನಿನ್ನಯ
ಯಡಿಗಳಿವು ಭರದೊದ್ದಪೀಗಳು ತನ್ನ ಹೇರುರವ ।
ಅಡಿಗಡಿಗಮಾ ಸರ್ವದೈತ್ಯರ
ಹೊಡೆಗಳಿಂದವೆ ಕಠಿಣವಾದುದ
ನೆಡಹಿ ನೊಂದವವೆನುತಲಿದಿರಾಗೆದ್ದನಸುರಾರಿ ॥ ೧೮

ಎನಲು ಹರುಷದಿ ಮುನಿಪನಾಕ್ಷಣ
ವನಿಮಿಷರು ಮುಂತಾಗಿ ಹೊಗಳಲು
ಜನಜನಿತ ತಾನೊಬ್ಬ ತಾಮಸನೊಬ್ಬ ರಾಜಸನು ।
ವಿನಯದಲಿ ತಾನೊಬ್ಬ ಸಾತ್ವಿಕ
ವನಜಲೋಚನದೇವ ತಾನೇ
ಜನಜನಿತ ಸರ್ವೋತ್ತಮೋತ್ತಮನೆಂದು ಹೊಗಳಿದನು ॥ ೧೯

ಹೊಗಳಲಾತನ ಪದದ ಹೆಜ್ಜೆಯು
ಬಗೆಯಲಾ ಶ್ರೀವತ್ಸಲಾಂಛನ
ಜಗಕೆ ಶ್ರೀವತ್ಸಾಂಕನಾದನು ಭೂಪ ಕೇಳೆಂದ ।
ನಿಗಮಗೋಚರದೇವನನು ತಾ
ಜಗವಱಿಯಲೊದೆದಾಮಹಾಮುನಿ
ವಿಗಡದೇವೋತ್ತಮನ ಕಂಡನು ದ್ವಾಪರಾಂತ್ಯದಲಿ ॥ ೨೦

ಹಿರಿಯರನು ತಮ್ಮಂಘ್ರಿ ಸೋಂಕಿದ
ವರಮುನಿಪಗಾಮ್ಲೇಚ್ಛಜನ್ಮವು
ಭರವಸವು ತಾನೆಂದು ಮುಂದಣಕಥೆಯು ಕೇಳೆಂದ ।
ಸುರಪತಿಯು ಸಕಲಾನುವಿಭವವ
ನುಱುಹಿ ಮುನಿ ದೂರ್ವಾಸನಾಕ್ಷಣ
ಶರಧಿಯೊಳು ತಾ ಮುಳುಗಿಸಿದನಾಸುರೇಶ್ವರನ ॥ ೨೧

---

1 ಪ್ರವು, ಕ. ಗ.

ಅಗಸ್ತ್ಯರ ಕಥೆಯಲ್ಲಿ ಸುರರು ಬ್ರಹ್ಮನ ಬಳಿಗೆ ಬಂದು ವಾತಾಪೀಲ್ವರ
ಬಾಧೆಗಳನ್ನು ಹೇಳುವಿಕೆ.

ಮತ್ತೆ ಕೇಳ್ಬ ನೃಪಶಿರೋಮಣಿ
ಚಿತ್ತವಿಸು ಮತ್ತಾಯಗಸ್ತ್ಯನ
ಸತ್ತ್ವದುನ್ನತಿಯನು ಮಹಾಂಬುರಾಶಿಯನು ಕುಡಿದುದನು ।
ಬಿತ್ತರದಿ ತಿರುಗುವೆನು ಲೋಕಕೆ
ಹತ್ತಿದವು ನಾಲ್ಕೈದುವಸ್ತ್ರಗ
ಳೊತ್ತಿ ಯಿಾತ್ರೈಲೋಕ್ಯಜೀವನ ಕಾದುತಿರೆ ಬಳಿಕ ॥ ೭೨

ಸಕಲಸುರಗಣ ನೆರೆದು ಬಂದಾ
ಬಕುತಿಯಲಿ ಬ್ರಹ್ಮಂಗೆ ಲೋಕವ
ವಿಕಳಗೊಳಿಸುವ ಹದನ ಬಿನ್ನಹ ಮಾಡಿದುದು ಬಳಿಕ ।
ವಿಕಳವಾಗಲು ವಾತಪೀಲ್ವಲ
ರಕಟ[1] ಭೂಸುರನಿಕರ ವೆಲ್ಲವ
ಪ್ರಕಟದಲಿ ಭಕ್ಷಿಸುತಲಿರ್ಪರು ವಿಂಧ್ಯಪರ್ವತದಿ ॥ ೭೩

ನಿಂದಿರದೆ ತಾವಂದವಾಗಿಯೆ
ಮುಂದೆ ಸೂರ್ಯನ ರಥದ ಮೇಲಕೆ
ನಿಂದು ಲಕ್ಷದ ಮೇಲೆ ಯಿಪ್ಪತ್ತೈದು ಸಾವಿರಕೆ ।
ಇಂದಿಳೆಯ ಪೊಡೆಗೆಡುವುತ್ತೈದೆಳೆ
ತಂದ ರಾಕ್ಷಸರೆಲ್ಲ ತೆಂಕಣ
ಸಿಂಧುವಿನೊಳಡಗಿದ್ದು[3] ತಂಮನು ಕೊಂದು ಕೂಗುವೆರು॥ ೭೪

ಅವರಿಗವದಿರು ನೆರವುಗೊಡುತಿವ
ರವನಿಯುಲಿ ಲಂಕಾಧಿಪತಿಸಹ
ಶಿವಶಿವಾಅಯ್ದ್ವೈದುಬಾಧೆಗೆ ಯೇನು ಹದನೆನಲು ।
ಅವರಿಗೆಂದನು ಕಮಲಸಂಭವ

1 ಸಕಲ, ಕ. ಗ. 2 ವಾದುದು, ಕ. ಗ. 3 ಧುಂದುಭಿಯುಲಡಬಿದ್ದು, ಕ. ಗ.

ದಿವಕೆ ನಿಂದಿರಲಾಪ ದೈವ
ಪ್ರವರವಿಲ್ಲದೆ ಸಕಲಋಷಿಕುಲಕಾಗಿ ಯರಿದೆಂದ ॥ ೨೫

ಆವನೊಬ್ಬನು ರಾಜರಾಜರ
ಠಾವನೈದಿಯೆ ರಾಜದರುಶನ
ಸೋವನವನಾ ರಾಜದ್ರವ್ಯವ ಕೊಂಬ ರಾಜರಲಿ ।
ಆವ ಮನ್ನಿಸಿಕೊಂಬನಾತನೆ
ಯೀವಿಷಯವ ಗೆಲಲರಿದೆಂ ದರೆ
ದೇವಗಣ ತಮಗಱಿಯನಲ್ಕೀಬ್ರಹ್ಮನಿಂತೆಂದ ॥ ೨೬

ಆವ ರಾಜರ ದರುಶನಂಗಳು
ಭಾವಿಸಲು ತಮಗಿಲ್ಲವಾದರೆ
ದೇವಕುಲಕಿನ್ನಾರು ಗತಿ ಹೇಪೆಂದರಾಸುರರು ।

ಅಗಸ್ತ್ಯರ ಬಳಿಗೆ ಹೋದರೆ ನಿಮ್ಮ ಇಷ್ಟಸಿದ್ಧಿಯಾಗುವುದೆಂದು ಬ್ರಹ್ಮನ ಉತ್ತರ.

ನೀವು ಹೇಳಿದುದೈದು ಠಾವಿನ
ದೇವವಿಗ್ರಹಕೊಬ್ಬ ಪರಿಭವ
ಭಾವಿಸಲು ನೀವೀಸು ಜಠರವನಗಸ್ತ್ಯಮುನಿರಾಯ ॥ ೨೭

ಆತನಲ್ಲಿಗೆ ಹೋಗಿ ನುಡಿವುದು
ವೀತರಾಗದಲಿದು ಸಮಸ್ತ
ಪ್ರೀತಿಯನ ನೆಱೆ ಮಾಡಬೇಕೆಂದಾತಗುಸುರುವುದು ।
ಆತ ಹೇಳಿದ ತೆಱದೆ ಯಮರರು
ಯಾತತುಕ್ಷಣದಲ್ಲಿ ಬಂದರು
ವೋತು ಹರವರಮುನಿಪಕುಂಭಜನಾಶ್ರಮಕ್ಕೊಲಿದು ॥ ೨೮

ದೇವತೆಗಳು ಅಗಸ್ತ್ಯರಲ್ಲಿ ಬಂದು ತಮ್ಮ ಅಭಿಪ್ರಾಯವನ್ನು ತಿಳಿಸುವಿಕೆ.

ಬಂದು ಸಾಷ್ಟಾಂಗದಲಿ ಮುನಿಪಗೆ
ವಂದಿಸಿದುದಾದೇವನಿಕರವು

ಹಿಂದುಗಳೆಯದೆ ತಮ್ಮಭೀಷ್ಟವ ನುಡಿದರಾಮುನಿಗೆ ।
ತಂದೆ ಕೇಳೈ ತಮ್ಮವಸ್ಥೆಯು
ನಿಂದು ವಿಧಿಪನ ಬಳಿಗೆ ಹೋದರೆ
ಯಿಂದು ನಿಮ್ಮಯ ಬಳಿಗೆ ಕಳುಹಿದನೆಂದರವರಂದು ॥ ೧೯

ದಿನಕರನ ರಥಕಡ್ಡಲಾಗಿಯೆ
ತನು ಬಳೆದುದಾವಿಂಧ್ಯಪರ್ವತ
ಕನಿತುವಾಗಿಯೆ ಭೂಮಿ ತಗ್ಗಿತು ಬಡಗದಿಕ್ಕಿನಲಿ ।
ಮುನಿನಿಕರವೊಂದೆಸೆಗೆ ಸಾರಲು
ವನಧಿಯೊಳಗಡಗಿದ್ದ ರಾಕ್ಷಸ
ರನಿತು ತಾವೈನೂರುಕೋಟಿಯಲೆಂಮ ಕಾಡುವರು ॥ ೨೦

ನಿಮ್ಮವಸ್ಥೆಯನೇನು ಕಾರಣ
ನಮ್ಮ ಮುಂದಱುಹುವಿರಿ ನೀವೆನೆ [1]
ಘಮ್ಮನಾಕ್ಷಣ ಮುನಿಗೆ ಬಿನ್ನಹ ಮಾಡಿದರು ಸುರರು ।
ನರ್ಮದಾತೀರದಲದಿಬ್ಬರು
ಕರ್ಮಿಗಳು ವಾತಾಪಿ ಯಿಲ್ವಲ
ರೆಮ್ಮ ಕಾಡುವ ಕಥೆಯು ನೀ ಕೇಳೆಂದರಾಮುನಿಗೆ ॥ ೨೧

ಮುನ್ನ ನಮ್ಮೆಲ್ಲರನು ಕೃತಕದಿ
ಮನ್ನಿಸಿಯೆ ತಾವ್ ಕರೆದು ರಾಕ್ಷಸ
ರಿನ್ನು ತಮಗರಿದೆನುತ ಬಂದೊಳಹೊಕ್ಕರಂಬುಧಿಯ ।
ಭಿನ್ನವಿಲ್ಲದೆ ತಮ್ಮು ತನಿಬರ
ಮನ್ನತಿಯು ಕಾಡುತಿವರವರಿಗೆ
ಕುನ್ನಿಗಳ ಕಾಡುವರು ಬಪ್ಪರು ಲಂಕೆಯತಿಖಳರು ॥ ೨೨

1 ಮುಂದಱಿದಪುದುಯೆನಲಿಕೆ, ಕ. ಖ.

ಅವರ ಪ್ರಾರ್ಥನೆಯಂತೆ ಬಂದು ಗ್ರಾಸವಂ ಬೇಡಲು ಪದ್ಧತಿಯಂತೆ ವಾತಾಪಿಯನ್ನು ಕೊಂದು ಅಗಸ್ತ್ಯರಿಗೆ ಆಹಾರ ಕೊಡುವಿಕೆ.

ಆವನಾನೊಬ್ಬನನು ಕಾಣೆವು
ದೇವಮುನಿ ಯೆನೆ ಮುನಿಪನಾಗಳು
ದೇವಸಿಕರಕೆ ನುಡಿದ ತಾಪವನೀಗ ನೀಗಿಸುವೆ ।
ತಾವೆನುತ ಪರಿತಂದನಾಕ್ಷಣ
ದೇವಮುನಿ ವಾತಾಪಿಯಿಲ್ವಲ
ರಾವಸಥಕೈದಿ [1] ವರ ಗ್ರಾಸವನಾಗ ಬೇಡಿದನು ॥ ೩೩

ಬೇಡಲಿಕೆ ಹರಿತಂದು ಯಿಲ್ವಲ
ಕೇಡ ನೆನೆ ವಾತಪಿಯ ಕರೆದುಟಿ
ನೋಡಿ ಭಿಕ್ಷವ ಕೊಡುತ ಕೆಟ್ಟನು ಕೊಂದ ಪಾತಕದಿ ।
ರೂಢಿ ಮೆಚ್ಚಲು ಬಟಿಕ ವಿಪ್ರನ
ಘಾಡದಲಿ ಕಾಲ್ತೊಳದು ಭೋಜನ
ಮಾಡಿಸಿದ ತಾನಧಿಕಹರುಷದೊಳರಸ ಕೇಳೆಂದ ॥ ೩೪

ಪೂರ್ವದಂತೆ ವಾತಾಪಿಯನ್ನು ಕರೆಯಲು ವಾತಾಪಿ ನನ್ನುದರದಲ್ಲಿ ಜೀರ್ಣನಾದನೆಂದು ಹೇಳಿ ಹೊರಡುವಿಕೆ.

ಅನ್ನವಿಕ್ಕಿದೊಡುಂಡ ಮುನಿಪನು
ತನ್ನ ಮನದೊಳು ನೆನೆದು ಮಂತ್ರವ
ಮುನ್ನಲಾವಾತಾಪಿಯೆಂದುಟಿ ನೆನೆದು ತಾ ಕರೆಯೆ ।
ಸನ್ನುತದಿ ಮುನಿ ಕೇಳ್ದು ಮೌನದಿ
ನನ್ನಲಿಯೆ ವಾತಾಪಿ ಜೀರ್ಣವು
ಮುನ್ನೆನುತ ಮುನಿ ಸಂದ ವಿಪ್ರರ ಹಾನಿಯೆಲ್ಲವನು ॥ ೩೫

1 ತಾವಿಗೈದಿದನ, ಕ. ಗ.

ಅಗಸ್ತ್ಯರು ಮಾರ್ಗವ ಕೇಳಲು ಉಪೇಕ್ಷಿಸಿದ ವಿಂಧ್ಯಾಚಲವನ್ನು ಭೂಮಿಯಲ್ಲಿ ಒತ್ತುವಿಕೆ.

ಪರಿಹರಿಸಿ ವಿಂಧ್ಯಾಚಲೇಂದ್ರಕೆ
ಹರಿದು ಬಂದಾ ಮುನಿಪ ಶಿಷ್ಯನ
ಕರೆದು ನುಡಿದನು ಶಿರವ ಕೊಡು ಶೂಲಿಯ ನಿರೀಕ್ಷಿಸುವೆ ।
ಅರಸ ಕೇಳ್ಕೆ ಮುನಿಯ ಮಾತನು
ಸರಕುಗೊಳ್ಳದಲಿರಲಿಕಾಕ್ಷಣ
ಪುರವಣಿಸಿ ಶಿರವೇರಿ ಪೊತ್ತಿದ ವಾಮಪಾದವಲಿ ॥ ೨೬

ಒತ್ತಲಿಕೆ ವಿಂಧ್ಯಾಚಲೇಂದ್ರನು
ವತ್ತ ಸರಿದನು ಭೂಮಿಯೊಳಗಾ
ವಿಸ್ತರಿತ ತಾ ಲಕ್ಷಯೋಜನದುದ್ದದಳತೆಯನು ।
ಇತ್ತಲಾವಿಂಧ್ಯಾಚಲೇಂದ್ರನು
ಮತ್ತೆ ಭೂತಳದಿಂದ ಕೇಳ್ಕೆ
ಬಿತ್ತರದಿ ನೋವುತ್ತ ಬಂದನು ಮನದಿ ಯೋಚಿಸುತ ॥ ೨೭

ಅಳವು ನಮಗಿಲ್ಲೆನುತ ವಿಂಧ್ಯನು
ನೆಲೆಯ ಕಾಣದೆ ತನ್ನ ಮನದಲಿ
ತಿಳಿದು ನೋಡುತ ಹಮ್ಮನುಳಿದಾಪಾದಘಾತದಲಿ ।
ಇಳಿದ ವಿಂಧ್ಯನ ತನ್ನನುಜ್ಞೆಯ
ಬಳಿಕ ಸಲಿಸುವುದೆನುತ ಹೇಳಿದ
ಮುಳಿದು ದಕ್ಷಿಣಕಡಲಿನತ್ತಲೆ ಯಜ್ಞಪುರುಷನನು ॥ ೨೮

ಅಗ್ನಿಯು ಮರ್ಯಾದೆಯಿಂದ ಮುಕ್ಕಳಾದ ನಳನೀರನ್ನೊಪ್ಪಿಸುವಿಕೆ.

ಕಾಣುತವೆ ಬರೆ ಯಾತನೆದ್ದನು
ಗೋಣ ಮಣಿದು ನುಡಿದನು ತನ್ನಯ
ಜಾಣರಪ್ಪಾ ಪುತ್ರರನು ನಿಮಗೀವೆ ಕೇಳುವುದು ।

ಕ್ಷೀಣಮತಿಯುಪ್ಪೆನ್ನ ಪುತ್ರರ
ಕ್ಷೋಣಿಯೊಳಗಾದ್ಯರನು ಮಾಡೆನು
ತಾಣೆಯಲಿ ತಾ ಕೊಟ್ಟ ಮುನಿಪತಿಗಗ್ನಿ ಯಾತ್ಮಜರ ॥ ೩೯

ಅವರೊಡನೆ ಸಂಚರಿಸುತ ಸಮುದ್ರತೀರದಲ್ಲಿ ಮುನಿಯು ಶೌಚಮಾಡಿ ಬರುವುದರೊಳಗೆ ಶಿಷ್ಯರಲ್ಲಿದ್ದ ಪೂಜೋಪಕರಣಗಳು ಸಮುದ್ರ ಸೇರುವಿಕೆ.

ಕೊಂಡನಾ ನಳನೀಲರಿಬ್ಬರ
ಚಂಡಮುನಿ ತಾ ಬರುತಲವನಿಯ
ಮಂಡಲದಿ ಬೆಸಗೊಂಡ [1] ಶಿಷ್ಯರ ದೇವಪೂಜನಕೆ ।
ಕಂಡು ಮಕರಾಕರವನೀ ಋಷಿ
ಪಂಡಿತನು ತಾ ಶೌಚಕೆಂದಾ
ದಂಡೆಯಲಿ ತಿರುಗಿದನು ಮುನಿ ವೆತ್ತರಸ ಕೇಳೆಂದ ॥ ೪೦

ಶಿಷ್ಯರಿಬ್ಬರು ದೇವಪೂಜೆಯ
ವಶ್ಯದುಪಕರಣಗಳ ಬೆಳಗುತ
ಮಾಸ್ಯದಲಿ ಕೈಯಿಂದಲೊಂದಾ ಗಿಂಡಿಯುದಕವನು ।
ದೃಶ್ಯದಲಿ ಬುಡುಬಡನೆ ಬಿಡುತವೆ [2]
ಹಾಸ್ಯದಲಿ ತಮ್ಮರ್ಥಿಯಂತಿರೆ [3]
ಮೃಶ್ಯವೀಚಿಗಳೆಳೆದವೆಲ್ಲವೆಬಿಸುಟುದಬ್ಧಿಯಲಿ [4] ॥ ೪೧

ಗುರುವು ಬಂದ ಬಳಿಕ ಸಮುದ್ರನ ಅಪರಾಧವನ್ನು ತಿಳಿಸಲು ಕೋಪದಿಂದ ಸಮುದ್ರಪಾನಮಾಡುವಿಕೆ.

ವರಮುನಿಯು ತಾ ಬರವ ಕಾಣುತ
ಪರಮದೇವರ ಪೂಜೆ ಯೆಲ್ಲವ
ಶರಧಿಯೊಳು ಬಿಟ್ಟಾಗ ವಹ್ನಿತನಯರು ಚಿರಕಾಲ [5] ।

1 ಕಂಡಾಗ, ಕ. ಗ. 2 ಗಳವ್ರಾತ, ಕ. ಗ. 3 ಯಾಗಲು, ಕ. ಗ.
4 ಯಸ್ಯನೀಕ್ಷಿಸಿದಲ್ಲಿ ಯೆಲ್ಲವಬಿಸುಡೆ ಶರಧಿಯಲಿ, ಕ, ಗ.
5 ಜರಿರಲುಬಿರುಘಾಯು, ಕ. ಗ

ಇರುತ ನೆನೆದರು ತಮ್ಮ ಗುರುವಿನ
ನಿರುತಕೋಪಾಟೋಪವೆಲ್ಲವ
ನಱಿದುತತ್‌ಕ್ಷಣ ಶರಧಿಯುದಕವ ತೋಡಿ ಹಾಕುತಿರೆ ॥ ೪೨

ಚಲ್ಲಿತಾಕ್ಷಣ ದೇವಪೂಜನ
ಕೆಲ್ಲ ಹರಿದುದು ಬರುತಿರಲು ಬೞಿ
ಕೆಲ್ಲ ತರುಮರಗಳನು ಗಿರಿಗಳ ಕಿತ್ತು ಮೊಱಿಯುತವೆ ।
ಕಲ್ಲುವರೆಗಾ ವಾಹಿನಿಯು ಬರೆ
ನಿಲ್ಲದಾನಳನೀಲರಿಬ್ಬರು
ಮಲ್ಲಿ ಮೊಂದಾಲದೊಳು ವೃಕ್ಷದ ಮೇಲೆ ಕುಳ್ಳಿದರು ॥ ೪೩

ಇರುತಿರಲಿಕೊಂದೆರಡು ಜಾವದ
ನಿರುತದಲಿ ಶೌಚಾಚಮನಗಳ
ನಿರದೆ ಮಾಡಿಯೆ ದೇವಪೂಜೆಯ ಮಾಳ್ಪ ಭರದಿಂದ ।
ಬರಲಿಕಲ್ಲಿಯು ತರುಗಿರಿಗಳಾ
ಧರಣಿಯಲಿ ಕೆಡೆದಿರಲು ವಿಸ್ಮಯ
ಭರದಿ ಚಿರ ನಿಂದಿರಲು ಬಂದರು ಶಿಷ್ಯರಾಕ್ಷಣಕೆ ॥ ೪೪

ವಂದಿಸಿದರತಿಭಯದಿ ಚಾಚಿದ
ರಂದು ಶಿರಗಳನಾಗಳುತ ತಾ
ವೆಂದರಾಗುರುವಿಂಗೆ ವಿನಯದೆ ಬಾಗಿ ಭಾವದಲಿ ।
ಇಂದು ನದಿಯಧಿಪತಿಯು ನುಂಗಿದ
ತಂದೆ ಯಾಲದ ಮರನ ಹತ್ತಿಯೆ
ಕುಂದದುೞಿದೆವು ನಾವೆನಲು ಮುನಿಯಧಿಕರೋಷದಲಿ ॥ ೪೫

ಕೋಪಿಸಿದನಾಕದಲುವಾಗಳು
ವಾಪುರಂದರಮುಖ್ಯನಾಕಿಗ
ಳಾಪಸತ್ವಾಧಿಕಮಹಾಬ್ಧಿಯ ತಡಿಯ ಸಾರುತಿರೆ [1] ।

[1] ಧಿಡಿದು ಸಾಗರವ, ಕ. ಗ.

ತಾಪದೀಕ್ಷೆಸಿ ಮುನಿಪ ತನ್ನಯ
ರೂಪವನು ತೋಱಿಸುವೆನೆನುತಿರೆ
ಕೋಪದಿಂದೀತನ ಮಹತ್ತ್ವವ ಸಮುದ್ರ ಬಗೆಯದಿರೆ ॥ ೪೬

ನುಂಗಿದನು ತಾನೊಂದು ಲಕ್ಷತ
ರಂಗದಗಲಸಮುದ್ರದೇವರ
ನುಂಗೆ ನುಣ್ಣಗೆ ಯಿರಲಿಕಾತನ ಪಾತ್ರ ಬಯಲಾಯ್ತು ।
ಅಂಗವಿಸಿ ಬೞಿಕಿತ್ತ ಮುಂದಣ
ತುಂಗಶರಧಿಯದೆರಡು ಲಕ್ಷವ
ನುಂಗಿ ಸುಮ್ಮನೆ ಯಿರದೆ ಮುಂದಣಬುಧಿಗನುವಾದ ॥ ೪೭

ಬಂದುಲಕ್ಷದ ಘಾತವದಱೊಳು
ಕುಂದದಿರುತಿಪಜೀವ [1] ಕೋಟಿಯ
ಲೊಂದನೞಿಯದೆ ನುಂಗಿದನು ಬೞಿಕಂದಗಸ್ತ್ಯಮುನಿ ।

ಆಗ ಖಿನ್ನನಾಗಿ ಬೇಡಿಕೊಂಡ ಸಮುದ್ರನನ್ನು ಮೂತ್ರರೂಪವಾಗಿ ಬಿಡಲು ಅಲ್ಲಿ ಪರ್ವಕಾಲದಲ್ಲಿ ಸ್ನಾನಮಾಡಿದವರಿಗೆ ಮಾಸಸ್ನಾನ ಫಲದ ವರವಂ ಕೊಡುವಿಕೆ.

ಅಂದು ನಾನಾ ಪರಿಯ ಸತ್ವವು
ಛಂದದಲಿ ನೆಱೆ ಕೋಳು ಪೋಗಲಿ
ಕಂದು ಗಂಗಾಪತಿಗೆ ಸಂಕಟವಾಗೆ ಮುನಿಪತಿಯ ॥ ೪೮

ಪೊಗೞಿದರೆ ತಾನಾಗ ಮುನಿಪನು
ವುಗುಳಲಿಕೆ ಮನದಿಚ್ಛೆ ಮಾಡಲು
ಜಗದ ನದಿನದವಾಗಳಾಯಿತು ಮುನಿಯ ಕರುಣದಲಿ ।
ಉಗುಳುಗಳಿದಾಬಳಿಕಲಂಬುಧಿ
ಯುಗುಳೆ ತಾನುಚ್ಛಿಷ್ಟವೇ ಯಹ
ದುಗುಳಬೇಡ್ಯೆ ಯೆನಲು ಮೂತ್ರಿಸಿ ಕಳೆದನಾಕಡಲ ॥ ೪೯

---

1 ಪ್ರತ್ತೀಳು, ಕ. ಗ.

ಕಡಲ ಮೂತ್ರಿಸಿ ತುಂಬಿ ಮುನ್ನಿನ
ತಡಿಯನೆಲ್ಲವನಾಗ ಶರನಿಧಿ
ನುಡಿಯಿತ್ತೈ ತಾನಾಗಗಸ್ತ್ಯಗೆ ಭೂಪ ಕೇಳೆಂದ ।
ಪೊಡವಿಯಲಿ ತಾನಶುಚಿಯಾದೆನು [1]
ಮಡುಹುವಾದೆನದೊಬ್ಬರಾವರು [2]
ಬಿಡದೆ ಪಾನಸ್ನಾನವಾಡುವರಿಲ್ಲ ತನ್ನೊಳಗೆ ॥ ೫೦

ಎನಲು ಕುಂಭಜನಾ ಸಮುದ್ರಗೆ
ವಿನಯದಿಂದುಸುರಿದನು ಚಂದ್ರಮ
ದಿನಪತಿಯು ತಾನೊಂದು ರಾಸಿಗೆ ಬಂದ ದಿನಗಳಲಿ ।
ಮನವೊಲಿದು ತಾ ಮಿಂದ ಮನುಜಗ
ದೆನಿತು ಫಲ ತಾನಹುದದೆಂದೊಡೆ [3]
ಘನತರಶ್ರೀಮಾಸವಾಸದ ಫಲವನೈದುವರು ॥ ೫೧

ಎಂದು ತನ್ನಯ ದೇವಪೂಜೆಯ
ನಂದು ಕಂಡನಗಸ್ತ್ಯ ಕಡಲಿಂ
ಗಂದು ತನ್ನಾಜ್ಞೆಯನು ಕೊಟ್ಟನು ಭೂಪ ಕೇಳೆಂದ ।
ಇಂದು ಮೊದಲಾಗೆನ್ನ ಶಿಷ್ಯರು
ಛಂದದಲಿ ಮುಟ್ಟಿದುದ ನುಂಗಿದ
ರೆಂದು ವೀಪರಿಯೆನಲಿಕೆಂದನು ಜಲಧಿ ಮುನಿವರಗೆ ॥ ೫೨

ನಿಮ್ಮ ಶಿಷ್ಯರು ಮುಟ್ಟದೊಂದುವ
ನುಮ್ಮನಾನುಂಗಿದರೆ ಲೋಕದ
ಧರ್ಮವೈದುವೆವೆಂದು ಮುನಿಪನ ವರುಣ ಬೀಳ್ಕೊಟ್ಟ ।
ಬೊಮ್ಮರಕ್ಕಸಕೋಟಿ ನೆರೆದಿಹ

1 ತಾನಾವೆಯಾದುದು, ಕ. ಗ. 2 ಮುಡುಗಪೋದೆನು ವೊಬ್ಬರಾಗಿಯೆ, ಕ. ಗ.
3 ತಾನಹುದುವಂದಿಸಿ, ಕ. ಗ.

ಗವ್ಯದಾಸ್ಥಾನಕ್ಕೆ ಮಾಡಿದ
ರಮ್ಮನವತಾರಕ್ಕೆ ಪೂರ್ವದೊಳೆಂಟು ಚೌಕಡಿಗೆ ॥ ೫೩

ಆಯಿತ್ತೈ ತಾ ಕೇಡು ಲಂಕೆಗೆ
ನ್ಯಾಯಗತಿಯಲಿ ನೀಲನಳರಿಂ
ದಾಯಿತ್ತೈ ತೆತ್ತೀಸಕೋಟಿಗೆ ಹರುಷದುಬ್ಬುಗಳು ।
ರಾಯ ಕೇಳೈ ಬಳಿಕಗಸ್ತ್ಯನು
ವಾಯದಲಿ ದಕ್ಷಿಣಕೆ ನಿಲಲಿಕೆ
ಯಾಯಿತ್ತೈ ತಾ ರೂಢಿ ಸಮತಳ ನಿಮಿಷಮಾತ್ರದಲಿ ॥ ೫೪

ದೇವರೆಂದಾಯ್ತೈದು ಕಾರ್ಯವ
ನೋವಿ ಮಹಮುನಿ ನಿಮಿಷಮಾತ್ರಕೆ
ತಾವು ಮಾಡಿಯೆ ಮೆಱೆದರುನ್ನತತೇಜದಳತೆಯಲಿ ।
ಆವುದೈ ಕೌಂಡಿನ್ಯಋಷಿಪರ
ಠಾವಿನಲಿ ತಾ ಕಾಣಬಪ್ಪುದು
ಬೂವಿಯಿಂ [1] ಹದಿನೆಂಟು ಲಕ್ಷಕೆ ಭೂಪ ಕೇಳೆಂದ ॥ ೫೫

ಆಯಿತ್ತೈ ತಾನಾಗಗಸ್ತ್ಯನು
ನ್ಯಾಯವಲ್ಲೆಂದಱಿದು [2] ಶಿಷ್ಯರ
ಮಾಯ [3] ಶಪಿಸಿದ ನೀವು ಮರ್ಕಟರೂಪು [4] ಗೊಂಡಿಹುದು ।
ಮಾಯದೀಸಾಗರನ ಮೇಲೆಯು
ದೇವಪೂಜೆಯ ಕೊಂಡೆನೆಂಬೀ
ನ್ಯಾಯವಱಿಯದಪರಾಧವಿಟ್ಟರೆ ಯೆಂದು ಕಳುಹಿದನು ॥ ೫೬

ಚಂದ್ರನು ದಕ್ಷಪುತ್ರಿಯರಾದ ಅಶ್ವಿನ್ಯಾದಿಗಳಂ ವಿವಾಹಮಾಡಿಕೊಂಡು ಸಮವಾಗಿ ವರ್ತಿಸದೆ ಇರಲು ಕ್ಷಯಪ್ರಾಪ್ತಿಯಾಗಲೆಂದು ದಕ್ಷನ ಶಾಪ.

ಈಮಹಾಚಂದ್ರಮಗೆ ದಕ್ಷನು
ನೇಮಿಸನೆ ತನ್ನ ಮಳಪುತ್ರಿಯ

---

1 ಭೂವರದಿ, ಕ. ಗ. 2 ನ್ಯಾಯದಲುಯೆಂದೆನಲು, ಕ. ಗ. 3 ತಾಯಿ, ಕ. ಗ. 4 ವರವಾರಾಹ, ಕ. ಗ.

ಕಾಮಸಂಗವ ವರ್ಜಿಸಲು ಕ್ಷಯವೆಂದು ಶಾಪವನು ।
ಭೂಮಿಪತಿ ಕೇಳ್ಸಪ್ತವಿಂಶತಿ
ಯೀ ಮಹಾತಾರೆಗಳು ದಕ್ಷನ
ಪ್ರೇಮಪುತ್ರಿಯರಾದರಿಪ್ಪತ್ತೇಳು ನಾಮದಲಿ ॥ ೫೭

ವರಸತಿಯರವರೊಳಗೆ ಮೋಹದ
ಪರಮಪುತ್ರಿಯರಿರಲಿಕೆಲ್ಲರ
ಧರೆಯು ಪೊಗಳಲು [1] ಕರ್ಮಕಾರಿಯರೆಂದು ಮನ್ನಿಸುತ ।
ನಿರುತದಿವರಿಂ ಹಿರಿದು ರೋಹಿಣಿ
ವರಸುತೆಯ ಮೇಲಧಿಕಮೋಹದಿ
ಹರಿಯ ಜನ್ಮದ ತಾರೆಯೆಂದೇ ಹಿರಿದು ಮನ್ನಿಸುವ ॥ ೫೮

ಆಸುತೆಗೆ ಮೊದಲಲ್ಲಿ ಜನಿಸಿದ
ವಾಸುದೇವನ ಹಿರಿಯ ಕಂದನು
ಭೂಸುರರ ಮೊದಲಿಗನು ಕಮಳಜನೆಂದು ಮನ್ನಿಸುವ ।
ಈಸು ಧನ್ಯರದಾರು ಮಕ್ಕಳ
ಕೋಶದಲು ರೋಹಿಣಿಯನೆಂದಾ
ಭೂಸುರೋತ್ತಮ ದಕ್ಷ ಕೊಂಡಾಡಿದನು ರೋಹಿಣಿಯ ॥ ೫೯

ಆಕೆಮೊದಲಾಗಮಳಸತಿಯರ
ನೇಕಲಗ್ನದಿ ಮದುವೆಮಾಡಿದ
ಲೋಕದಲು ಚಂದ್ರಮಗೆ ದಕ್ಷನು ಪರಮಪ್ರೀತಿಯಲಿ ।
ಆಕುವರಿ ರೋಹಿಣಿಯು [2] ಮೋಹವ
ನೇಕವಿಧದಲಿ ಚಂದ್ರ ತಾಳ್ದುಜೆ [3]
ನಾಕಜರ ಹನ್ನೆರಡು ವರುಷವಿರಲದ [4] ಸೈರಿಸದೆ ॥ ೬೦

ಪುರುಷಸಂಗಮ ವಿಲ್ಲವೆಂದಾ
ಹಿರಿದು ಖಾತಿಯ ತಾಳ್ದು ತಂದೆಗೆ

---

1 ಷೋಡಶ, ಕ, ಗ. 2 ಆಕೆ ಕೃತ್ತಿಕೆಯೊಳಗೆ, ಕ. ಗ.
3 ಇರಲಿ ರೋಹಿಣಿ, ಕ. ಗ. 4 ವದೊಂದು, ಕ. ಗ.

ಪರಿಯನಱುಹಲು ದಕ್ಷ ಕೋಪಿಸಿ ಶಾಪವಿರಿಸಿದನು ।
ಪಿರಿದು ಸತಿಯರ ಸಂಗ ನಿನಗದು
ಹರಿದು ಹೋಗುವುದೆನಲು ತಾರಾ
ವರಸನನಿಬರು ಬಿನ್ನವಿಸಿ ತಾತನುಱೆ ಬೇಡಿದರು ॥ ೬೧

ಬೇಡಲಿಕೆ ಪೂರ್ಣಿಮಿಯಲೊಂದಿನ
ಕೂಡಲೀತನ ಕಳೆಯು ಷೋಡಶ
ರೂಢಿಪತಿ ಕೇಳೆಂದು ಕ್ಷಯಕಳೆಯಾದ ವಿವರವನು ॥
ಮಾಡಿದಂತವ ಹೇೞಿ ಪುನರಪಿ
ರೂಢಿಪತಿ ಬೆಸಗೊಂಡನಗ್ನಿಯ
ನೋಡಿ ಶಾಪವನಿತ್ತನಾವನದೆಂಬುದನು ತಿಳಿಪಿ ॥ ೬೨

ಇಂದ್ರನು ವೃತ್ರಾಸುರನ ಸಂಹಾರಕ್ಕಾಗಿ ದಧೀಚಿಯ ಬೆನ್ನೆಲುವನ್ನು ತೆಗೆದುಕೊಂಡು ಹೋಗುವಿಕೆ.

ಎನಲಿಕೆಂದನು ಪೂರ್ವಕಾಲದಿ
ವಿನುತಮುನಿಪ ದಧೀಚಿ ಯೊಂದಿನ
ಮನೆಯಲಗ್ನಿಷ್ಟೋಮಯಾಗವ ಮಾಡುತಿರಲಂದು ।
ಅನಿಮಿಷಾಧಿಪ ಬಂದನಗ್ರದ
ಘನತೆಯಿಂದಾ [1] ತಿಥ್ಯಕಾಲದಿ
ವಿನುತವಿಜ್ಞಾಪನೆಯ ಮಾಡಲಿಕಾತ ಬೆಸಗೊಂಡ ॥ ೬೩

ಏನು ಪರಿಣತಿ ನಿನಗದೆನೆ ಹರಿ
ಯಾನತದಿ ಮುನಿಗೆಂದ ನಿಮ್ಮಯ
ಸ್ಥಾನದಲಿ ಪೃಷ್ಠಾಸ್ಥಿಯನು ಕೊಡಿ ಯಾಗ ತನಗೆಂದು ।
ಮೌನದಲಿ ಕ್ಷಣವಿದ್ದು ಯಾತ್ಮ
ಜ್ಞಾನದಲಿ ಭಾವಿಸಲು ತನುವಿಗೆ
ಹಾನಿಯಹುದೆಂದಿದಿರ್ನುಡೊಮ್ಮೆಗೆ ವಿಧಿ ವಿಧಾತ್ರನಲಿ ॥ ೬೪

[1] ಘನತರದಯಾ, ಕ. ಗ.

ಎಂದು ನಿಶ್ಚಯಿಸಿಗೆಯ್ದ ನಾಕ್ಷಣ [1]
ವೆಂದನಿಂದ್ರಗೆ ತನ್ನ ಯಸ್ಥಿಯ
ನಿಂದು ತಾ ತೆಗೆದೀವೆನಾದೊಡವಾತ್ಮಘಾತವಲಿ ।
ಬಂದು ಹತ್ಯವು ಸಮನಿಸುವುದೆನು
ತೊಂದು ತೆಗೆವೊಡೆ ನಿನಗೆ ಹತ್ಯದ
ದಂದುಗವು ದೊಡ್ಡಿಯದು ಸಮನಿಪುದೆನುತಲುಭಯರಿಗೆ ॥ ೬೫

ಪಾಪವಿಲ್ಲದ ಲೆಕ್ಕ ನೀನೇ
ಕೋಪವಿಲ್ಲದೆ ತನ್ನ ಯಸ್ಥಿಯ
ರೂಪವನು ತೆಗೆ ಯೆನಲಿಕಿಂದ್ರನ ಕಾಮಧೇನುವನು ।
ಆಪುರಂದರ ತರಿಸಿ ಮುನಿಪತಿ
ಯಾಪವಿತ್ರಾಂಗವನು ನೆಕ್ಕಿಸೆ
ಪಾಪರಹಿತಳ ಜಿಹ್ವೆಮಧ್ಯಕೆ ಯಿಂದ್ರವಜ್ರವನು ॥ ೬೬

ತೇದು ಕೊಡದನು ಬಳಿಕ ಮುನಿಪನೊ
ಳಾದ ತನುವಿನ ಮಜ್ಜೆ ಮಾಂಸವ
ನಾದಯಾಂಬುಧಿ ನೆಕ್ಕಿ ಹೋಯಿತು ಚರ್ಮರುಧಿರಗಳ ।
ತೇದು ಹೋಗಲಿಕುಳಿದವಾತನ
ಶೋಧಿಸಿದ ಸರ್ವಾಂಗದೆಲುಗಳೊ
ಳಾವಧೀಚಿಯ ಬೆನ್ನ ಬೆಳಗಿನ ಯೆಲುವನಮರೇಂದ್ರ ॥ ೬೭

ಆಗ ದಧೀಚಿಯ ಪತ್ನಿ ತನ್ನ ಪತಿಯ ಸ್ಥಿತಿಯನ್ನು ಕುರಿತು ಅಗ್ನಿಯನ್ನು
ಕೇಳಲು ಉತ್ತರಹೇಳದೇ ಇರಲು ಸರ್ವಭಕ್ಷಕನಾಗೆಂದು ಶಪಿಸುವಿಕೆ

ಕೊಂಡು ಹೋಗಲಿಕಾತನಂಗನೆ
ಕಂಡಳಾಗ ದಧೀಚಿಯಂಗದ
ದಂಡಿಯನು ಪರದೆಲುವಿನಿರವನು ಪರಯಶೋನ್ನತಿಯ ।
ಕುಂಡಮಧ್ಯದೊಳಿರ್ದ ಸ್ವಾಹೆಯ

1 ನಿಶ್ಚಯಿಸಿದನು ಯಾಕ್ಷಣ, ಕ, ಗ.

ಗಂಡನನು ಕೇಳಿದಳು ತನ್ನಯ
ಗಂಡನೇನಾದಪನೊ ಯೆನಲಾಗನಲನುಸುರದಿರೆ ॥ ೬೮

ಕೋಪಿಸಿಯೆ ಶಪಿಸಿದಳು ನಾಕಜ
ಪಾಪರಹಿತರ ಮುಖನನಾಗಳು
ನೀಪತಿವ್ರತೆ ಸರ್ವಭಕ್ಷಕನಾಗು ಹೋಗೆನಲು ।
ಭೂಪ ಕೇಳೈ ಮುನ್ನವನಲನು
ತಾ ಪುರೋಡಾಶನವನುಂಬನು
ತಾಪಸನ ಕೈಯಿಂದ ಮತ್ತೇನಾದ ವಸ್ತುವನು ॥ ೬೯

ಅನಲನಾಹುತಿಗೊಳ್ಳದಿರುತಿರೆ
ವನಿತೆ ಶಪಿಸಿದಳಂದುವೊದಲಾ
ಗನಲನಾದನು ಸರ್ವಭಕ್ಷಕನಾದನದಱಿಂದ ।

ಆ ಎಲುವಿನಿಂದ ವೃತ್ರಸಂಹಾರವಾಯಿತೆನಲು ವಜ್ರಪಿರಲು ಅಸ್ಥಿಯನ್ನು ಯಾಚಿಸಿದ ಕಾರಣಪ್ರಶ್ನೋತ್ತರದಲ್ಲಿ ಮಧುಕೈಟಭರಿಂದ ಬಾಧಿತರಾದ ದೇವತೆಗಳ ಆಯುಧಗಳನ್ನು ನುಂಗಿದುದರಿಂ ದಧೀಚಿಯ ಅಸ್ಥಿಯು ಬಲಿಷ್ಠವೆಂದುತ್ತರ.

ಅನಿಮಿಷಾಧಿಪನಾದಧೀಚಿಯ
ಘನತರತೆ ಯೆಲುವಿಂದ ವೃತ್ರನ
ತನುವನು ಕೆಡಹಿದನುರುಮಾರ್ಗಣದಂತೆ ಬೆಳಗುತಿರಲ್ [1]॥ ೭೦

ವೊದಲು ವಜ್ರವೆ ನುಂಗೆ ತ್ವಷ್ಟನ
ಯುದಟಪುತ್ರನ ಜಯಿಸಲಿಚ್ಛೆಯು [2]
ಹದನ ಕೇಳನ್ನಿಂದ್ರನೇತಕೆ ಮುನಿಯಲಸ್ಥಿಯನು ।
ಹದನ ಹೇಳೆನಲೊರೆದ ಬೇಡಿದ
ವಿಧಿಯು ಪೂರ್ವದ ಕದನದನಿಮಿಷ
ತುದರು [3] ಮಧುಕೈಟಭರು ರಾಕ್ಷಸರಿಬ್ಬರಿರಲಿಕ್ಕೆ ॥ ೭೧

---

1 ಬೆಳವ ದಿನ ದಿನದ, ಕ. ಗ. 2 ಯೆನಲು ಭೂತಿಲ, ಕ. ಗ.
3 ಷದವರು, ಕ. ಗ.

ದೇವರೆಲ್ಲರು ನೆರೆದು ತಮ್ಮಯ
ದೇವಕರ್ಮದ ಕೈದುವೆಲ್ಲವ
ನೋವಿ ಕೊಟ್ಟರು ಜತನ ಮಾಡಲು ಮುನಿಯ ಕರಗಳಲಿ ।
ದೇವದೈತ್ಯರಿಗೀಯದಿರಿ ಯೆಂ
ದಾವಿಬುಧಸಂತತಿಗಳಾಗಲು
ದೇವಲೋಕಕ್ಕೇಱಲಿತ್ತಲವರ್ಗಳ ಕೈದುವನು ॥ ೩೦

ಆದಧೀಚಿಯು ಕಾದುಕೊಂಡಿರ
ಲಾದವೈ ಹದಿನಾಱು ಸಾವಿರ
ವೇದಿನಿಯ ವತ್ಸರವು ಮುನಿ ಬೞಿಕಂದು ಚಿಂತಿಸಿದ ।
ಈ ದುರಾಗ್ರಹದಿಂದ ಕಾಯಲು
ಮಾದವೈ ತಮ್ಮಂಗಮಂತ್ರವು
ವೇದ ವೈದಿಕಜಾಪ್ಯಪೂಜಾಯಜ್ಞ ಮೊದಲಾಗಿ । ೩೩

ಎಂದು ತಾನಾಕೈದುಗಳ ವರ
ವೃಂದವನು ನುಂಗಿರಲವಸ್ಥಿಯೊ
ಳಂದು ಕೂಡಿರಲಸ್ಥಿಗತವಾಗಿರಲು ಹಲಕಾಲ ।
ಮೂರುತಲೆಯುಳ್ಳ ವಿಶ್ವರೂಪನ ತಲೆಗಳನು ಇಂದ್ರ ಕಡಿಯಲು ಇಂದ್ರ
ಸಂಹಾರಾರ್ಥ ತ್ವಷ್ಟೃ ವೃತ್ರನನ್ನು ಪಡೆಯುವಿಕೆ.
ಸಂದಿರಲಕೀನಾಲ್ಕು ಯುಗಗಳು
ಕುಂದದೈವತ್ತಾಱು ಸಾವಿರ
ವೃಂದ ತಿರುಗಲು ತ್ವಾಷ್ಟ್ರನಿಂದ್ರನ ವರಪುರೋಹಿತನು ॥ ೩೪

ಆತನಲಿ ಶಿರ ಮೂಱು [1] ತಾವಿರ
ಲೋತು ವೊಂದಱಲಮೃತಪಾನವು
ಕಾತರಿಸದೊಂದಱಲಿ ಸುರೆ ತಾ ನೊಂದಱಲಿಸೋಮ [2] ।
ಈತೆಱದಿ ವರಋಷಿಯ ಸುತನಿಂ

1 ನೆರಡು, ಕ. ಗ, 2 ಸೋಮಘಾನದಲಿ, ಕ. ಗ.

ತಾ ತರುಣಲತೆಯಂತೆ ಕಡಿದನ
ದಾ ತತುಕ್ಷಣ ವರಪುರೋಹಿತಶಿರವಮೂಱಱನು [1] ॥ ೭೫

ಬಂದು ವರ್ಷವು ಕಳೆಯುತಿರೆ ವು [2]
ತ್ತಂದು ಹೊಱಗಣ ಹೊಲಸು ಹಾದ
ತ್ತಂದು ವಿಪ್ರರ ಮುಖದಿ ಯಾಗವ ಮಾಡಿ ದೇವಪನ ।
ಇಂದು ಕೊಲುವುವೆನುತ್ತ ತೊಡಗಿದ
ನಂದು ತನ್ನಯ ಕಯ್ಯ ಸಾಗದ
ಕಿಂದು ಯಜ್ಞವ ಮಾಡೆ ಭೇದಿಸಿ ಬಂದ ಕೊಲುವುದಕೆ ॥ ೭೬

ಅಂದು ಹುಟ್ಟಿದ ವೃತ್ರದೈತ್ಯನ
ಯುಂದವನು ಕೊಲಲೆನುತಲಿಂದ್ರನು
ಬಂದು ಬೇಡಿದನಾದಧೀಚಿಯನೆಲುವಿನುಬ್ಬಟೆಯ ।
ಬಂದು ಬೇಡಲಿಕಾದಧೀಚಿಯು
ನೊಂದು ಕೊಟ್ಟನು ತನ್ನ ದೇಹವ
ನಂದು ನೋಡದೆ ಪರರ ಕಾರ್ಯವ ಮಾಡಿ ಯಿಹಪರವ ॥ ೭೭

ಸಾದಿಸಿದ ಕೈವಲ್ಯವಾಸವ
ಮೇದಿನಿಯಲತಿದಾನಶೂರರು
ವಾದಿವಾಕರತನಯನೊಬ್ಬನು ತಿದಿಯು ಸುಲಿದಿತ್ತ ।
ಮೇದಿನೀಪತಿ ಶಿಬಿಯು ಖಂಡವ
ಶೋಧಿಸಿಯೆ ತೆಗದಿತ್ತ ಕೀರ್ತಿಯ
ಸಾಧಿಸಿದ ತನ್ನೆಲುವನಿತ್ತು ದಧೀಚಿ ಕೇಳೆಂದ ॥ ೭೮

ಜೀವನವನೊಲಿದಿತ್ತ ಯಕ್ಷನು
ಭಾವಿಸಲು ಸತ್ಕೀರ್ತಿಕಾಮಿನಿ
ಯಾವಿರಿಂಚಿಯ ಲೋಕಪರಿಯಂತಾಗಿ ಬಳೆದಿರಲು ।
ಆವೆಧುವಿಗೊಂದಮಳವಸ್ತ್ರವ

---

1 ನೆರಡುಶಿರಗಳನು, ಕ. ಗ. 2 ಕೋಟೆಯುವುಬ್ಬಿದೈವ, ಕ. ಗ.

ಭೂವಧೂವಲ್ಲಭನು ಕೊಡಲಿಕೆ
ದೇವ ನಿನ್ನಯ ಪಿತನನಿತ್ತನು [1] ದ್ವಾಪರಾಂತ್ಯದಲಿ ॥ ೭೯

ಪರೀಕ್ಷಿತನ ಬೇಂಟೆಯ ಕಥೆ ತಕ್ಷಕನಿಂದ ಮೃತಿಹೊಂದುವ ಪರ್ಯಂತ.

ಅದು ನಿಮಿತ್ತವೆ ಭೂಪ ನಿಮ್ಮಯ
ಸದಮಲಾನ್ವಯಚಂದ್ರಮನು ತಾ
ನದಟು ಮಿಗೆ ನಿಮ್ಮಯ್ಯ ರಾಜ್ಯವನಾಳುತೊಂದುದಿನ ।
ವಿದಿತವೆನಲೈದಿದನು ಬೇಂಟೆಗೆ
ಹೃದಯದಲಿ ನೀರಡಿಸಿ ಬಂದನು
ಸದನವೊಂದಱಲೊರ್ವ ಸಂಯಮಿ ಯೋಗದಿಂದಿರಲು ॥ ೮೦

ನೃಪತಿ ಬಂದಿರೆ ಯೋಗದಿಂದಾ
ತಪದಿ ಮುನಿ ಯಿರೆ ಲೆಕ್ಕಿಸನಲಾ
ತಪಸಿ ಯೆಂದೆನುತಾಗ ಖಾತಿಯ ಧರಿಸಿ ಮೃತವಾದ ।
ಕುಪಿತಕಾಳೋರಗನ ನೊಂದನು
ತಪವ ಗೆಡಿಸುವೆನೆನುತ ಕೊರಳಿಂ
ಗಪಯಶವದೆಂದಱಿಯದಾತಗೆ ಸುತ್ತಿ ಮರಳಿದನು ॥ ೮೧

ಇತ್ತಲಾಮುನಿಸೂನು ಶೃಂಗಿಯು
ಹತ್ತೆ ಬಂದಾ ಪಿತನ ಕಾಣುತ
ಲತ್ತು ತನ್ನಯ ಜನಕನೊಡಲಲಿ ಕ್ರೂರಸರ್ಪವಿದ ।
ಸುತ್ತಿದವಗಿಂದೇೞುದಿನದಲಿ
ಮತ್ತೆ ಬಂದಾತಕ್ಷಕನು ಮಿಗೆ
ಮೃತ್ಯುವಾಗಲೆನುತ್ತ ಶಪಿಸಿದನಾಂತ ರೋಷದಲಿ ॥ ೮೨

ಅರಸ ವಿಪ್ರೋತ್ತಮರ ಶಾಪವ
ಪರಿಹರಿಸಲಾರಳವು ಹೋಗಲಿ
ಬರುತ ತಕ್ಷಕ ಕಂಡನಾ ಕಶ್ಯಪನ ವಂಶಜನ ।
ತಿರುಗಿಸುವೆ ತಕ್ಷಕನ ವಿಷವನು

1 ರರಿಯರಿತೆನಲಿಕಿತ್ತನು, ಕ. ಗ.

ಕರುಣದಲಿ ಸಲಹುವೆನು ಭೂಪನ
ಪರಮಪುಣ್ಯಾತ್ಮಕನನೆನುತಿರೆ ಕಂಡನುರಗೇಂದ್ರ ॥ ೮-೩

ಬಂದ ವಿಪ್ರಗೆ ಧನವ ತಾ ಮುದ
ದಿಂದಲಿತ್ತಾತನನು ಕಳುಹಿಯೆ
ಸಂದ ವಿಪ್ರಾಕಾರದಲಿ ನಾಗವರರನು ಕಳುಹಿ ।
ಅಂದು ಫಲರೂಪದಲಿ ತಾನೇ
ಬಂದು ನೃಪತಿಯು ಕಚ್ಚಿ ಪೋದುದ
ರಿಂದ ಮೃತಿ ಪರುಠವಿಸಿದುದು ನಿಮ್ಮ ಪಿತಗಕಟೆಂದ ॥ ೮-೪

ಅಕಟ ಹರೆಯದ ರಾಜನಾತನ
ನಕುಟಿಲನನಿವ ಕೊಂದು ಪೋದನು
ಪ್ರಕಟದಿಂದಾವಿಪ್ರನನು ಮರಳಿಸಲು ತನಗೇಕೆ ।
ಸುಕರದಲಿ ನಾಗರುಗಳೆಲ್ಲರ
ವಿಕಳರನು ನೆಱೆ ಮಾಡಿ ತಕ್ಷಕಗಿ
ಕ್ಷಕನುಱುವ ತೆಱ ನೆನೆವುದೆನೆ ಕೈಕೊಳಲು ಪೊಱವೆಂಟ ॥ ೮-೫

ಉದಂಕಮುನಿಗೆ ತಕ್ಷಕನಲ್ಲಿ ವೈರಕ್ಕೆ ಕಾರಣವೇನೆಂದು ಶೌನಕಪ್ರಶ್ನೆ.

ಎನಲು ಕೇಳ್ದರು ಶೌನಕಾದಿಗ
ಳನಘಸೂತನಿಗೆಂದರೇತಕೆ
ಮುನಿಸುದಂಕಗೆ ವೈರ ತಕ್ಷಕನೊಡನೆ ತನಗಿನಿತು ।
ಘನಮಹಿಮನಹ ವ್ಯಾಸಮುನಿಪತಿ
ನಿನಗೆ ಪೇಟ್ದಂದವನು ನೀನೆಮ
ಗನುವಿನಲಿ ಪೇಟೊಲಿದು ತತ್ಕಾರಣವನೆಲ್ಲವನು ॥ ೮-೬

ಉದಂಕಮುನಿಯು ಅಯೋಧಧೌಮ್ಯರಲ್ಲಿ ವಿದ್ಯಾಭ್ಯಾಸವಾಡಿ ಗುರುದ
ಕ್ಷಿಣಾರ್ಥವಾಗಿ ಪೌಲಸ್ತ್ಯನ ಪಟ್ಟಣಕ್ಕೆ ಹೋಗುವಿಕೆ.

ಎನಲು ನುಡಿದನು ಸೂತನೆಲೆ ಎಲೆ
ಮುನಿಗಳಿರ ಕೇಳೀವುದಂಕನ

ಮನಮುನಿಸು ತಕ್ಷಕನೊಳೇತಕೆ ಬಂದುದೆಂಬುದನು ।
ಘನತಪೋನಿಧಿ ಭೃಗುಮುನಿಕುಲಜ
ನನುಪಮನು ತಾಳ್ದು ದ್ವಿಜತ್ವವ
ನನುವು ಮಿಗೆ ವೇದಾಧ್ಯಯನಪರನಾಗಿ ಪೊಱವಂಟ ॥ ೮೭

ಬಂದು ಕಂಡನದೊರ್ವಮುನಿಸಂ
ಕ್ರಂದನನೆನಿಸಿವಯೋಧಧೌಮ್ಯನ
ನಂದು ವಂದಿಸಿ ಯಧ್ಯಯನಕಾಂಕ್ಷೆಯಲಿ ತಾ ನೆನೆದ ।
ಸಂದ ವೃತ್ತಾಂತವನು ಪೇೞಲಿ
ಕಂದು ಹರುಷದಲಾತನೀತಂ
ಗಂದು ಮೊದಲಾಗೆ ಕಲಿಸಿದ ವೇದಾದಿವಿದ್ಯೆಗಳ ॥ ೮೮

ಹಲವು ಶಾಸ್ತ್ರವ ಕಲಿತುದಂಕನು
ಕೆಲವು ದಿನ ಗುರುವರರ ಸೇವೆಯ
ಸಲೆ ರಚಿಸುತಿರಲಾತ ಕರೆದು ಮನೋನುರಾಗದಲಿ ।
ಬಲುವಿಡಿದು ಶುಶ್ರೂಷೆಯನು ನೀ
ಸಲೆ ರಚಿಯಿಸೆಂದೆನಲು ಪೋದುದು
ಪಲವು ವತ್ಸರ ಪೋಗಿ ಗಾರ್ಹಸ್ಥ್ಯವನು ಧರಿಸೆಂದ ॥ ೮೯

ಬಂದುದೆಮಗೆಲೆ ಮಗನೆ ನೀ ಕೊಡು
ವಂದವೆನಿಸಿದ ದಕ್ಷಿಣಾರ್ಥವಿ
ದಿಂದು ಪರಿಯಂತರವು ನೀ ಶುಶ್ರೂಷೆ ಯಿಂದೆಮ್ಮ ।
ಛಂದದಲಿ ಮೆಚ್ಚಿಸಿದೆ ಬೇಡೆನ
ಲೊಂದಿದರೆ ಭಕ್ತಿಯಲಿ ಮತ್ತಿಂ
ತೆಂದ ದಕ್ಷಿಣೆ ಯಿತ್ತರಲ್ಲದೆ ಪೋಪೆನಲ್ಲೆಂದ ॥ ೯೦

ಎಂದು ನುಡಿಯಲು ಕೇಳುತಾ ಗುರು
ವೆಂದು ಮನಕದು ಸೊಗಸದಿರೆ ಮ
ತ್ತಿಂದುಮುಖಿಯುಪ ತನ್ನ ಸತಿಯು ಸಿರೂಪವನು ಕೇಳೆ ।

ತಂದು ಕೊಡು ತತ್ಕಾಂತೆ ಬೇಡಿದ
ಛಂದವಹ ವಸ್ತುವನು ನೀನೆನ
ಲೊಂದಿದತಿಹರುಷದಲಿ ಸತಿಯಿದ್ದೆಡೆಗೆ ನಡೆತಂದ ॥ ೯೧

ಬಂದು ವಂದಿಸಿ ಗುರುನಿರೂಪದಿ
ಛಂದವನು ಪೇಪೆನಲಿಕಾಸತಿ
ಯೆಂದು ನುಡಿದಳು ತನಗೆ ವಾಂಛಿತವೆನಿಸಿದಂದವನು ।
ಸಂದ ಪೌಲಸ್ತ್ಯನೃಪತಿಯ ವಧು
ವಿಂದು ಧರಿಸಿದಳಲೆ ಮಗನೆ ನೀ
ತಂದುಕೊಡು ಕುಂಡಲವನಮರಾವಳಿಗೆ ದುರ್ಲಭವ ॥ ೯೨

ಎಂದಿಗಾದರು ತಂದು ಕೊಡುವೊಡೆ
ಮಂದಮತಿ ತರಬೇಡ ಕೇಳದ
ಱಿಂದ ಫಲವೆನಗಿಲ್ಲ ವಿಂದಿಗೆ ಮೂಱು ದಿವಸದಲಿ ।
ಸಂದ ಪತಿ ಮನವೊಲಿದು ಮಾಳ್ಪನು
ಛಂದವಹ ಪಿತೃಯಜ್ಞವನು ನೀ
ನಂದಿಗಪ್ಪಂದದಲಿ ತಹುದೆನಲಾತ ಕೈಕೊಂಡ ॥ ೯೩

ಬರುತ ಗಂಗಾಧುನಿಯ ಕಂಡನು
ಭರದಿ ಕಾಲ್ಮೊಗದೊಳೆದು ಶುದ್ಧಾ
ಚರಣವಿರಚಿತನಾಗಿ ಗುರುಪಾದಾಬ್ಜಕಭಿನಮಿಸಿ ।
ಹರುಷದಲಿ ತಾ ನಿತ್ಯ ಸೇವಿಪ
ಸುರುಚಿರಾಗ್ನಿಯ ತುತಿಸಿ ಹರುಷದ
ಭರವಸದಿ ತಾ ಬರುತ ತವಕಿಸುತಿರ್ದನಡಿಗಡಿಗೆ ॥ ೯೪

ಧರಣಿಯೊಳು ಪೌಲಸ್ತ್ಯರಾಯನ
ಪುರವು ತಾನಿನ್ನೆನಿತು ದೂರವೊ
ಹರ ಹರಾ ಗುರುಪತ್ನಿಯಭಿಮತವೆಂತು ಸಿದ್ಧಿಪುದೋ ।

ಪರದ ಸುಖವೀಥರೆಯೊಳಗೆ ತಾ
ಗುರುಭಜಕರಾದವರಿಗಲ್ಲದೆ
ದೊರಕಲರಿಯದೆನುತ್ತ ಬರುತಿರ್ದನು ಸರಾಗದಲಿ ॥ ೯೫

ಬರಲು ಪೌಲಸ್ತ್ಯನ ಪುರವರವು
ಸುರನಗರಕೆಣೆಯೆನಲು ಮತ್ತಾ
ಪುರದ ಬಹಿರುದ್ಯಾನವೆಸೆದುದು ಚೈತ್ರರಥವಂತೆ ।
ಪರಿವ ನದಿ ಕಣ್ಗೆಸೆದುದುತ್ತಮ
ತರದ ಗಂಗೆಯ ತೆಱದಲಲ್ಲಿಯ
ಪರಿಜನರು ಕಾಣಿಸಿದರಮರರ ತೆಱದಿ ಸೌಖ್ಯದಲಿ ॥ ೯೬

ಬರಬರಲು ಮುನಿವರನ ಸನ್ನಿಧಿ
ಗುರುತರಶ್ವೇತಾಂಗದಲಿ ಬಂ
ಧುರಮನೋಹರರೂಪದಲಿ ದೇವೇಂದ್ರ ಮನವೊಲಿದು ।
ಗುರುಚರಣಸೇವಕಗೆ ಹರುಷಿಸಿ
ನಿರುತ ವೃಷಭಾಕಾರದಲಿ ತಾ
ನಿರಲು ಬಂದನು ವತ್ಸಲತೆಯಲುದಂಕಗಿಂತೆಂದ ॥ ೯೭

ಎಲೆ ಮುನಿಪ ನೀ ಬಂದ ಕಾರ್ಯಕೆ
ಹಲವು ಲೇಸಾದಹುದು ಬೇಗದ
ಲಲಸದೆನ್ನಯ ಗೋಮಯವ ನೀ ಭುಜಿಪುದೆಂದೆನುತ ।
ಸಲೆ ಸುಧೆಯನಾ ತೆಱದಿನೀಯಲು
ಲಲಿತಮತಿ ಕೈಕೊಂಡು ಬಂದನು
ವಿಲಸದಭಿನವರಾಜಮಂದಿರಕಾಗಿ ಶೀಘ್ರದಲಿ ॥ ೯೮

ಬಂದು ರಾಜಮಂದಿರದಲ್ಲಿ ಪೋಗಿ ರಾಜನ ಅಪ್ಪಣೆಯ ಪ್ರಕಾರ ಆತನ ಸತಿಯ ಬಳಿ ರತ್ನ ಕುಂಡಲಗಳನ್ನು ಪಡೆಯುವಿಕೆ.

ಬಂದು ದ್ವಾಸ್ಥರ ಕರೆದುದಂಕನು
ಸಂದ ವಿಪ್ರನು ಬಂದನೆಂದೆನ

ಲಂದು ತನ್ನೃಪಗಱುಹಲಾತನ ಕರೆಸಿ ಭೂವರನು ।
ಛಂದವಹ ಸತ್ಕೃತಿಯ ನೀವುತ
ಲಂದು ತತ್ಕಾರಣವ ಮನದೊಳ
ಗಂದು ತಾ ತಿಳಿವುತ್ತ ಬೆಸಗೊಂಡನು ಮುನೀಶ್ವರನ ॥ ೯೯

ಏನು ಬೇಹುದು ನಮ್ಮೆಡೆ ಯೆಲೆಲೆ
ಭೂನುತನೆ ಹೇಷೆನಲುದಂಕನು
ಮಾನಿಸದೆ ಸಂದೇಹವೆಲ್ಲವನುೞಿದು ನೃಪನೊಡನೆ ।
ನಾನು ಗುರುಸೇವಾರ್ಥವಾಗಿಯೆ
ಮಾನವೇಶ್ವರ ಬಂದೆ ನಿನ್ನಯ
ಮಾನಿಸಿಯ ಘನರತ್ನಕುಂಡಲಕಾಂಕ್ಷೆಯಿಂದೆಂದ ॥ ೧೦೦

ಎನಲು ನಕ್ಕನು ನೃಪತಿ ನಿನ್ನಯ
ಮನದಭೀಷ್ಟವನೀವಳನ್ನಯ
ವನಿತೆಯಲ್ಲಿಗೆ ಹೋಗು ಬೇಡಿದೊಡೀವಳೆಂದೆನಲು ।
ಘನಮಹಿಮನೈತಂದು ಕಾಣದೆ
ವನಜಮುಖಿಯನಿದೇನು ವಿಸ್ಮಯ
ವೆನುತ ತನ್ನೃಪನೆಡೆಗೆ ಬಂದಿಂತೆಂದನಾಮುನಿಪ ॥ ೧೦೧

ಹೋಗೆನೆಂತಃಪುರಕೆ ಕಾಣೆನು
ಮೇದಿನೀಶ್ವರ ನಿನ್ನ ಸತಿಯುನಿ
ದಾದ ಕಾರಣವೇನು ಬೆಸಗೊಳಲಾತ ನಸುನಗುತ ।
ಭೂದಿವಿಜ ನೀನಶುಚಿ ಯೆನಿಸುವೆ
ಪಾದಕರಪ್ರಕ್ಷಾಲನಾಚಮ
ನಾದಿಪರಿಶುದ್ಧಿಯಲಿ ಪೋದರೆ ಕಾಂಬೆ ನೀನೆಂದ ॥ ೧೦೨

ಮುನಿಪನಾರೀತಿಯಲಿ ಪೋದನು
ಘನಪತಿವ್ರತೆಯೆಡೆಗೆ ಮತ್ತಾ
ವನಿತೆ ಯಿದಿರೆದ್ದರ್ಘ್ಯಸತ್ಕಾರಂಗಳನು ರಚಿಸಿ ।

ಮನವಭೀಷ್ಟವನಱಿದೆನೆನ್ನಯ
ಮನುಜನಾಯಕನೊಲಿದ ಕಾರ್ಯವು
ತನಗೆ ಬೇಕದಱಿಂದಲೀವೆನು ಕುಂಡಲವ ನಿನಗೆ ॥ ೧೦೩

ಎಡೆಯಲತಿವಿಘ್ನಗಳು ಬಹವವ
ಕೊಡನೆ ತಕ್ಕುದನೆನೆವುದೆಲೆ ಮುನಿ
ಬಿಡು ಮನದ ಸಂದೇಹವನು ಕೋ ಯೆನುತ ಹರುಷದಲಿ ।
ಮಡಗಿ ಧಾರೆಯ ನೆಱೆದು ಕೊಟ್ಟಳು
ಪೊಡವಿಗತಿಶಯಕುಂಡಲಂಗಳ
ನಡಱಿದುದು ಸಂತೋಷಸಾಗರವಾಮುನೀಶ್ವರನ ॥ ೧೦೪

ಬೀಳುಕೊಂಡನು ನೃಪಸತಿಯ ಭೂ
ಪಾಲನನು ಹರಸಿದನು ಬಂದನು
ಮೇಲು ಮದದುಬ್ಬಾಳುತನದಲಿ ಪಥದ ಬೞಿವಿಡಿದು ।
ಮೇಲೆ ಮಾಧ್ಯಾಹ್ನಿಕಕ್ರಿಯೆಯನಾ
ಲಾಲಿಸುವೆನೆಂದೆನುತಲಾಗಳು
ಲೋಲಕುಂಡಲಗಳನು ಶಿರದಲ್ಲಿರಿಸಿ ನದಿಗಿೞಿದ ॥ ೧೦೫

ಎಲೆ ಮುನಿಗಳಿರ ಲೇಸ ಕಾಂಬರೆ
ಪಲವು ವಿಘ್ನಗಳಹವು ನೋಡಲು
ಸುಲಭವಲ್ಲದು ನಿಯಮನಿಷ್ಠರಿಗದುವೆ ಪುಸಿಯಲ್ಲ ।

ಆಗ ದಕ್ಷನು ಅದೃಶ್ಯನಾಗಿ ಕುಂಡಲವನಪಹರಿಸಲು ಅದನ್ನು ಜ್ಞಾನ ದೃಷ್ಟಿಯಿಂದ ತಿಳಿಯುವಿಕೆ.

ಸಲೆಯುದಂಕನು ನಿತ್ಯಕರ್ಮಾ
ವಳಿಯ ವಿರಚಿಸುತಿರಲು ತಕ್ಷಕ
ನೊಲಿದದೃಶ್ಯದಿ ಬಂದು ಕುಂಡಲಗಳನು ಕೊಂಡೊಯ್ದ ॥ ೧೦೬

ಮಾಯವಾದನು ತಕ್ಷಕನು ಬೞಿ
ಕಾಯುವಂತನುದಂಕ ತಂನ ವಿ

ಧೇಯನಿಯಮವೆನಿಪ್ಪ [1] ನಿತ್ಯಕ್ರಿಯೆಯ ನೆಱೆ ರಚಿಸಿ ।
ಆಯಿತಿಲ್ಲಿಯೆ ತಡವು ಹೋಹೆನು
ವಾಯುವೇಗದಲೆನುತ ನೋಡಿದ
ನಾಯುವತಿ ತನಗಿತ್ತ ನಿರುಪಮದಿವ್ಯಕುಂಡಲವ ॥ ೧೦೭

ಕಾಣದಾಕ್ಷಣ ಮುನಿಪ ತನ್ನಯ
ಪ್ರಾಣ ಹೋದಂದವಲಿ ಚಿಂತಿಸಿ
ಸ್ಥಾಣುವನು ನೆನೆದಱಿದ ದಿವ್ಯಜ್ಞಾನದೃಷ್ಟಿಯಲಿ ।

ತಕ್ಷಕನಿರುವ ನಾಗಲೋಕಕ್ಕೆ ಹೋಗಲು ಭೂಮಿಯಂ ಅಗಿಯುವಿಕೆ.

ಕ್ಷೋಣಿಯಲಿ ತಕ್ಷಕನು ನೆನೆಹಿದ
ನೂಣೆಯುವನಕಟಕಟೆನುತಲಿನ್ನೀ
ಕ್ಷೀಣವಾಗಿರ್ದವೆಗುಪಾಯವ ಕಾಣಬೇಕೆಂದ ॥ ೧೦೮

ನಾಗಲೋಕದಲಿಹ ನೆಲೆಯು ತಾ
ನಾಗಲದಕೇನೆನುತ ಕಾಂಬೆನ
ದೀಗ ತಡವಲ್ಲೆನುತ ಕಾಷ್ಠವ ತಾನು ಕೈಕೊಂಡ ।
ಬೇಗ ಪೋಪೆನು ಬಿಲನಿವಾಸ
ಕ್ಕಾಗಳವ ಕೊಡದಿರ್ದೊಡವನನು
ನೀಗಿಸುವೆನೆಂದೆನುತ ಧಾರುಣಿಯುಗಿದನಾಮುನಿಪ ॥ ೧೦೯

ಎಲೆ ಮುನಿಗಳಿರ ಹೋದ ಕಾರ್ಯದೊ
ಳಲಘುಧೈರ್ಯವೆ ಮುಖ್ಯ ಮತ್ತಾ
ಲಲಿತಗುರುಭಕ್ತಿಯ ಮಹಾಲವಲವಿಕೆ ಯಿನ್ನೆಂತೊ ।
ಬಲಿದು ಭೂಮಿಯನಗಿದು ಪಥವನು
ಸುಲಭದಿಂದಾಗಿಸುವೆನೆಂದಾ
ಸಲೆ ಮರದ ಕಾಷ್ಠದಲಿ ಖನನವನೆಸಗಿದನು ಮುಳಿದು ॥ ೧೧೦

1 ತಂನಯ ಮಾನನೀಯವೆನಿಪ್ಪ, ಕ. ಗ.

ಅಲ್ಲಿಗೆ ಇಂದ್ರನು ವಿಪ್ರವೇಷದಿಂದ ಬಂದು ವೃತ್ತಾಂತವನ್ನು ವಿಚಾರಿಸಿ ಗುರುಭಕ್ತಿಗೆ ಮೆಚ್ಚಿ ವಜ್ರವಂ ಕೊಡುವಿಕೆ.

ಇದನು ಕಂಡನು ಶಕ್ರನೀತನ
ಮದವಮುಖವ ಗುರುಭಕ್ತಿಯೆಡೆಯಲಿ
ಸದಮಳನಲಾ ಯೆನುತ ವಿಪ್ರಾಕಾರದಲಿ ಬಂದು ।
ಅದಱ ವೃತ್ತಾಂತವನು ಬೆಸಗೊಳ
ಲುದಿತಧೈರ್ಯದಲೆಂದನಂದತಿ
ಮೃದುನುಡಿಯ ನೀಕೇಳು ಭೂಸುರ ನೆನಹಸಿಂತೆಂದ [1] ॥ ೧೧೧

ನಾನಯೋಧನ ಧೌಮ್ಯಮುನಿಪಗೆ
ಮಾನನೀಯಸುಶಿಷ್ಯನಾತನ
ಮಾನಿನಿಯು ಪ್ರೀತಿಯಲಿ ಪೌಲಸ್ತ್ಯವನೀಶ್ವರನ ।
ಸೂನೃತೆಯು ಕುಂಡಲವ ತಹುದೆನ
ಲಾನುಡಿಗೆ ತಾ ಪೋಗಿ ತಂದೆನು
ಮಾನಹಾನಿಯನೆಸಗಿ ತಕ್ಷಕ ಚೌರ್ಯದಿಂದೊಯ್ದ ॥ ೧೧೨

ಅದಕೆ ತಕ್ಕುದನೆಸಗಿ ತಕ್ಷಕ
ನದಟ ಮುಱಿದಿಂದಿನಲಿ ಗುರುವಿನ
ಪದರಜವ ತಾ ಕಾಣಬೇಹುದು ತನ್ನಿಮಿತ್ತದಲಿ ।
ಬದಗಿದೀಕಾಷ್ಠದಲಿ ಭೂಮಿಯು
ನಿದನಗುಂಟಿ ಪಾತಾಳಕೈದಿಯೆ
ಮದಮುಖನ ನಿಗ್ರಹಿಸಿ ಕುಂಡಲಗಳನು ತಹೆನೀಗ ॥ ೧೧೩

ಎನಲು ನಕ್ರನು ಕಪಟಭೂಸುರ
ನಲಘುವಿಪ್ರೋತ್ತಮನೆ ಕಾಷ್ಠದ
ಲೊನೆದು ನೆನೆಹಿನಲಿರ್ದ ಕಾರ್ಯವನೆಸಗಿ ಕಡೆಗಂಡು ।
ಮನವೊಲಿದು ತಿರುಗುವುದು ತಾ ಸಂ

1 ಮೃದುನುಡಿಯ ಭೂಸುರಕೇಳು ತನ್ನಯ ನೆನಹನೀನೆಂದ, ಕ. ಗ.

ಜನಿಸುವಚ್ಚರಿಯೆನಲು ಮತ್ತಾ
ಘನಮಹಿಮನೆನಿಸಿಪೀವುದಂಕನು ನಗುತಲಿಂತೆಂದ । ೧೧೪

ಎನಗೆ ಗುರು ಕರುಣದಲಿ ಸಾಧ್ಯವ
ದೆನಿಸದಿಹುದೇ ಯೆನದಚ್ಚರಿ
ಯೆನಲುತಾನದ [1] ಕಾಗ ಹರುಷಿಸಿ ವಾಸವನು ಬೞಿಕ ।
ಘನತರದ ವಜ್ರವನು ಕೊಟ್ಟದ
ನನುವಿನಿಂದಾ ವಹಿಸಿ ನೆನೆದಂ
ತನುನಯದೆ ಫಲ ಸಿದ್ಧಿಸಲಿ ಸಿನಗೆನುತಲಡಗಿದನು ॥ ೧೧೫

ಭೂಮಿಯನ್ನಗಿದು ಹೋಗಲಾಗಿ ಅಗ್ನಿಯು ಸಹಾಯ ದೊರೆಕುವಿಕೆ.

ಬೞಿಕಲಗಿದನು ಧರೆಯನಾಕ್ಷಣ
ವಿೞಿದು ಪೊಇದನು ಬಿಲದ ವಿವರದ
ಲೊಳಗೆ ಕಾಣಿಸಿ ಕೊಂಡು ಬಾಡಬ ದಿವ್ಯತೇಜದಲಿ ।
ಹಳಹಳಿಸಿ ನೋಡಿದನುವಲ್ಲಿಯು
ಘಟಿಲನೆಲ್ಲಿಗೆ ಪೋಪೆ ಯೆನಲಾ
ಗಳು ಮನೋಮುದದಿಂದಲೆಂದನುದಂಕಗಿಂತೆಂದ ॥ ೧೧೬

ನೀನು ರಚಿಪುದ್ಯೋಗದೆನ್ನಯ
ಮಾನಸಕೆ ಪರಿತೋಷವಾದುದು
ನಾನು ವೈಶ್ವಾನರನು ನೀ ಭಜಿಸಿದ ಮನೋರಥವು ।
ಹಾನಿಹೊಗದಂದದಿ ಸಹಾಯುವ
ನ್ಯೂನವಿಲ್ಲದೆ ಮಾಡುವೆನು ಘನ
ಮಾನನೀಯಮಹಾತ್ಮ ನಡೆ ತಕ್ಷಕನ ಸ್ಥಳಕೆಂದ ॥ ೧೧೭

ನಾಗಲೋಕಕ್ಕೆ ಬರಲು ಅಗ್ನಿಯು ತನ್ನ ಜ್ವಾಲೆಯಿಂದ ಪಾತಾಳ ಲೋಕವನ್ನು ದಹಿಸಲು ವಾಸುಕಿ ಮೊದಲಾದವರು ತಕ್ಷಕನಿಂದ ಕುಂಡಲಗಳನ್ನು ತಂದು ಕೊಟ್ಟು ಸ್ತುತಿಸುವಿಕೆ.

ಎಂದೊಡಾಕ್ಷಣ ನಡೆದು ಬಂದನು
ನಿಂದು ಕಂಡನು ನಾಗಲೋಕವ

---

1 ನೋಡನೀನಚ್ಚರಿಯು ನೆನಲದ, ಕ. ಗ.

ನಿಂದಿದನು ದಹಿಸುವೆನೆನುತಲಾವೆಡಬನನು ಕರೆದು ।
ನಿಂದು ಪರಭಾಗದಲಿ ಪೃಷ್ಠವ
ನಂದವೆನಲೂದಿದನು ಹುತವಹ
ನಂದು ಪ್ರಜ್ವಲಿಸಿದನು ಶಿಖಿಯಾವರಿಸಿತಾಸ್ಥಳವ ॥ ೧೧೮

ನಾಗಲೋಕವನೈದೆ ತುಂಬಿದು
ದಾಗ ಪ್ರಳಯಾನಳನವೊಲು ಮಿಗೆ
ಬೇಗೆಗಾಱದೆ ವಾಸುಕಿಪ್ರಭೃತಿಗಳು ತಾವಾಗ ।
ಆಗಲವರ್ಗಳು ತಕ್ಷಕನ ಕರೆ
ದೀಗ ತಾ ಕುಂಡಲವನೆಂದು ಮ
ಹಾಗಮಜ್ಞಗೆ ಕೊಟ್ಟು ಸಂಸ್ತುತಿಸಿದರು ಭಕ್ತಿಯಲಿ ॥ ೧೧೯

ಲೇಸು ಲೇಸುವುದಂಕ ಕರುಣಾ
ರಾಶಿ ಗುರುಚರಣಾರವಿಂದೋ
ಪಾಸಕನೆ ಸರ್ವಾಂಗವೇದಾಂಗೈಕಶರಣನಿಧಿ ।
ಯೇಸು ದುರ್ವೃತ್ತಿಯುತರಾದೊಡ[1]
ದ್ವೈಸುವನು ನೀ ಕ್ಷಮಿಸು ನಮ್ಮನು
ಸಾಸಿಗನೆ ನೀ ಸಲಹಬೇಕೆಂದರು ಮಹೋರಗರು ॥ ೧೨೦

ದುರುಳನೀತಕ್ಷಕನದೀತನ
ಭರದ ತಪ್ಪನು ನೋಡಲಾಗದು
ಕರುಣದಲಿ ನೀನೆಮ್ಮ ಸಲಹೆನೆ ನಗುತುದಂಕಮುನಿ ।
ಗರುವರಿರ ನಿಮ್ಮಿಂದಲನುಚಿತ
ಬೆರಸುವರೆ ಸಾಕೆನುತಲವರನು
ಕರೆದು ಕಳುಹುತಲಗ್ನಿಯುನು ಸಂಸ್ತುತಿಸಿ ಬೀಳ್ಕೊಟ್ಟು ॥ ೧೨೧

ಪರಮಹರುಷದಲಂದು ಬಂದನು
ಗುರುಚರಣಗಳಿಗೊಲಿದು ವಂದಿಸಿ

1 ದುರ್ವೃತ್ತರಾಗಳಾದೊಡ, ಕ. ಗ.

ನಿರುಪಮಿತಭಕ್ತಿಯೊಳ್ ಯಾತನ ವನಿತೆಯೆಡೆಗೈದಿ ।
ಪರಮಮಾತೆ ಮಹಾತ್ಮ ತಂದೆನು
ವರಪತಿವ್ರತೆ ಕುಂಡಲಗಳನು
ಸುರರು ಬಯಸುವರಿದನು ದೊರಕಿತು ನಿಮ್ಮ ಕರುಣದಲಿ ॥ ೧೨೦

ಎಂದು ಮುಂದಿರಿಸಿದನು ಕಂಡಳು
ಮಂದಗಮನೆ ಮನೋನುರಾಗದ
ಲಂದು ಕೈಕೊಂಡಧಿಕಹರುಷೋದ್ರೇಕದಲಿ ಹರಸಿ ।
ಕಂದ ನೀ ಸುಖಿಯಾಗು ನಿನಗೆ ಮು
ಕುಂದ ತೋಱಲಿ ವಿಶ್ವರೂಪದ
ಛಂದವನು ನಿನಗೊಲಿದು ಮೆಚ್ಚಲಿ ಶಕ್ರವಿಧಿಶಿವರು ॥ ೧೨೩

ಗುರುವಿನ ಆಪ್ಪಣೆಯಂತೆ ಗಾರ್ಹಸ್ಥ್ಯವಂ ಪಡೆದಿರುವಾಗ ಜನಮೇಜಯಗೆ
ಮಂತ್ರಿಗಳ್ ತಕ್ಷಕನ ಅಪರಾಧವಂ ತಿಳಿಸಿದುದಂ ಜ್ಞಾನದೃಷ್ಟಿಯಿಂ
ತಿಳಿದು ನೃಪನ ಬಳಿಗೆ ಬರುವಿಕೆ.

ಅಂದು ಕಳುಹಿಸಿ ಕೊಂಡುದಂಕನು
ಬಂದು ಗುರುವಿಂಗೆಱಗಿ ಪೇೞ್ದವ
ರಿಂದನುಜ್ಞೆಯ ಕೊಂಡು ಬಂದು ನಿಜೇಚ್ಛೆಯಿಂದೀಗ ।
ಸಂದ ಗಾರ್ಹಸ್ಥ್ಯದ ಸುಧರ್ಮದ
ಲೊಂದಿ ನಡೆದು ಮಹಾನುಭಾವತೆ
ಯಿಂದಿರುತಲಾ ತಕ್ಷಕನ ನೆನೆವನು ಸರೋಷದಲಿ ॥ ೧೨೪

ಧರಣಿಪತಿ ಜನಮೇಜಯುಂಗಾ
ಸುರುಚಿರದ ಮಂತ್ರಿಗಳು ಪೇೞ್ದುದ
ಪರಮದಿವ್ಯಜ್ಞಾನದಿಂದಱಿದಧಿಕಹರುಷದಲಿ ।
ಧರೆಯೊಳಗೆ ತಾನಾಗ ಬಂದಾ
ಭರದ ವೈರದಲಂದು ನೃಪತಿಗೆ
ಪರುಷಕಾರ್ಯಗಳಿಂದಱುಹಲಂದಾತನೊಡಬಟ್ಟ ॥ ೧೨೫

ಮನದೊಳಗೆ ಪಿರಿದಾಗಿ ಹುಟ್ಟಿದು
ದನಘಜನಮೇಜಯಗೆ ಖತಿ ಯೆಲೆ
ಮುನಿಗಳಿರ ನೀವ್ ಕೇಳ್ದ ಮಾತಿಂಗುತ್ತರವಿದೆಂದ ।

ಜನಮೇಜಯನು ಉದಂಕರ ಉಪದೇಶಾನುಸಾರ ಯಾಗಪ್ರಯತ್ನವಂ ನಡೆಸುವಿಕೆ.

ಘನಮಹಿಮನೆಂತೆನಿಪುದಂಕನ [1]
ವಿನಯದಿಂ ಸತ್ಕರಿಸಿ ಬಳಿಕಾ [2]
ಜನಪ ಸರ್ಪಾಧ್ವರಕೆ ನೀವನುನಯದಿ ಬಹುದೆಂದ [3] ॥ ೧೭೬

ಮೊದಲು ತನ್ನಯ ಮಂತ್ರಿಗಳು ತನ
ಗೊದವಿದಗ್ಗದ ಕೋಪಪುಟ್ಟುವ
ವಿದಿತದಲಿ ಬಿನ್ನೈಸೆ ಬಳಿಕಲುದಂಕಮುನಿ ಬಂದು ।
ಪದುಳದಲಿ ತನಗೊರೆಯಲಾಕ್ಷಣ
ವೊದವಿದುರುಕೋಪದಲಿ ಸದಮಲ
ಹೃದಯ ನಿತ್ಯಾತುಮನ ನೆನೆದು ಮುಖಗೆಯ್ಯಲನುವಾದ ॥ ೧೭೭

ಹದಿನಾರನೆಯ ಸಂಧಿ ಮುಗಿದುದು.

---

1 ಘನವೆನಿಪುದಂಕನನುಮಿಗೆಸತ್ಕರಿಸಿ, ಕ. ಗ.
2 ವಿನಯವಮಾಡಿಸರ್ಪಾಧ್ವರಕೆನೀ, ಕ. ಗ.
3 ವನುನಯದಿಬಹುದೆಂದವರ ಬೀಳ್ಕೊಟ್ಟ, ಕ. ಗ.

## ಹದಿನೇಳನೆಯ ಸಂಧಿ.

**ಸೂಚನೆ.**

ಸರ್ಪಯಾಗವ ಮಾಡಿದನು ರಿಪು
ದರ್ಪಖಂಡನ ಪಾಂಡುಕುಲಮುಖ
ದರ್ಪಣನು ಜನಮೇಜಯಕ್ಷಿತಿಪಾಲನೊಲವಿನಲಿ ॥

ತಕ್ಷಕನ ದ್ರೋಹವಂ ನೆನೆದು ರಾಜನು ಪರಿತಪಿಸುವಿಕೆ.

ಕರವ ಕರದಲಿ ಹಿಡಿದು ಮುಱಿದನು
ಬೆರಳನಕಟಾ ಪಾಪಿ ತಕ್ಷಕ
ಮರಳಿಚಿದನೇ ವಿಪ್ರನನು ಭೈಷಜ್ಯಕೋವಿದನ ।
ಉರುಮಹಾಧನದಾನದಲಿ ಹಗೆ
ಧರಣಿಸುರಸುತನಲ್ಲ ಕೊಯ್ದನು
ಕೊರಳನುರಗನೆನುತ್ತ ಕಿಡಿ ಕಿಡಿ ಯಾದನವನೀಶ ॥ ೧

ಅವನಿಸುರಸುತ ಶಾಪದಲಿ ಕೊಂ
ದವನು ತಕ್ಷಕನಹುದೆ ನೆಱೆ ಭ
ಸ್ಮವನು ಮಾಡುವೆ ಹಾನಿಯಿಂದಲಿದೇನು ಬದುಕುವೊಡೆ ।
ಅವಗೆ ಹಗೆ ಹರಹರ ಮಹಾಪಾ
ಪವನು ಮಾಡಿದೆನೆನುತ ಕಂಬನಿ
ಯವನಿಗಿೞಿಯಲು ಶೋಕಮೂರ್ಛಿತನಾದನವನೀಶ ॥ ೨

ಹೊಳ್ಳುಮಾತಿನಲೇನಹುದು ಕೊಲು
ಬಲ್ಲಿರೇ ನೀವವನ ಜೀವವ
ಕೊಳ್ಳದೀಪರಿ ಜೀವಿಸುವ ನಾನಲ್ಲ ದುರ್ಮತಿಯ ।

ಹಲ್ಲ ಬಲುಹನು ನೋಡುವೆನು ನೆಱೆ
ಬಲ್ಲ ಮಾಂತ್ರಿಕರುಳ್ಳರೆನುತಲಿ
ಮಲ್ಲಮರ್ದನನೆಸೆಬಲದ ಮಂತ್ರಿಗಳ ನೀಕ್ಷಿಸಿದ ॥ ೩

ಪುರೋಹಿತರನ್ನು ಕರೆಸಿ ಸರ್ಪಾಧ್ವರ ಮಾಡಿಸಬಲ್ಲಿರಾ ಯೆಂದು ಕೇಳುವಿಕೆ.

ಕರೆಸಿದನು ಭೂಪತಿ ಪುರೋಹಿತ
ವರರನಾಪ್ತರಿಗೆಂದನೀಪರಿ
ನಿರುತ ಸರ್ಪಾಧ್ವರವ ಮಾಪ್ಪೆನು ನಿಮ್ಮನುಜ್ಞೆಯಲಿ ।
ವರವಿಧಾನವ ಬಲ್ಲಿರಾದೊಡೆ
ವಿರಚಿಸುವುದು ಮಹಾಗ್ನಿ ಕರ್ಮವ
ನುರಗರಾಜನ ಕುಲವನುಱುಹುವೆನೆಂದನವನೀಶ ॥ ೪

ತಾತ ನೋಡು ವಿಷಾಗ್ನಿಯಿಂದುರಿ
ದಾತುರದಲಧ್ವರಮಹಾಗ್ನಿಯು
ಲಾತತಾಯಿಗಳುರಿದು ಹೋಗಲಿ ಧರ್ಮಕಂಟಕರು ।
ಭೂತಳದ ಮೇಲುರಗರೆಂಬರ
ಮಾತನಾಡದವೋಲು ಮಾಪ್ಪೆನು
ಕೌತುಕಾಧ್ವರವಿಧಿಯದಾವುದು ಬೆಸಸಬೇಕೆಂದ ॥ ೫

ನಾವು ಮಾಡಿಸಬಲ್ಲೆವೆಂದು ಹೇಳಿ ಸಂಭಾರವನ್ನು ಸಿದ್ಧಪಡಿಸುವುದೆಂದು ಹೇಳುವಿಕೆ.

ಎನಲು ನುಡಿದರು ಮುನ್ನ ಕಮಲಾ
ಸನನೆ ವಿಧಿಸಿದನಮರರಿಗೆ ಕೇ
ಳನುಪಮನೆ ವರಸರ್ಪಯಾಗಕೆ ಕರ್ತೃ ನೀನೆಂದು ।
ಮನುಜಲೋಕದಲನ್ಯರಿಲ್ಲದ
ನನುಗೊಳಿಸಿ ನಡೆಸುವ ಸಮರ್ಥರು
ಜನಪ ಬಲ್ಲೆವು ತದ್ವಿಧಾನವನೆಂದರಾದ್ವಿಜರು ॥ ೬

ಬೇಗ ಮಾಡೆಲೆ ತಂದೆ ಕರೆಸು ಮ
ಹಾಗಮಜ್ಞರನಮಲಮಂತ್ರವಿ

ದಾಗತೋದಯವಿಪ್ರರನು ಋತ್ವಿಕುಸದಸ್ಯರನು ।
ಈಗ ಸಂಭಾರವನು ತರಿಸು ಸ
ರಾಗವುಳ್ಳೊಡೆ ತಡವದೇತಕೆ
ತೂಗಿ ನೋಡದಿರೆಂಮನೆಂದರು ನೃಪಪುರೋಹಿತರು ॥ ೭

ನೃಪನು ಉತ್ಸಾಹದಿಂದ ಮಂತ್ರಿಗಳಿಗೆ ಬೆಸಸಲು ಸಂಭಾರವನ್ನು ಸಿದ್ಧಪಡಿಸುವಿಕೆ.

ಬಂದನಾಗಳ್ ತಕ್ಷಕನ ಹೋ
ಕೊಂದೆನುರಗರ ಕುಲವನೆನ್ನಯ
ತಂದೆಗಾಂ ಮಗನಾದೆ ನಿಂದಿನಲೆನುತ ನೃಪನೆದ್ದು ।
ನಿಂದು ಬೆಸಸಿದನೆಲವೊ ಮಾಡುವೆ
ನಿಂದು ತನ್ಮಖಸಾಧನಂಗಳ
ವೃಂದವನು ತಹುದೆಂದು ಮಂತ್ರಿಗಳಂಗೆ ಪರಿಜನಕೆ ॥ ೮

ಬೆಸಸಲಿಕೆ ತಾ ಮುನ್ನ ಬಂದುದು
ವಿಷಧರಾಧ್ವರಕರ್ಮಸಾಧನ
ವಿಸರವಿದ್ವದ್ದೀಪ್ಯವರಭೂವರದಿಶಾವರರು ।
ಮುಸುಕಿದುದು ವರಯಾಗಭೂಮಿಯು
ನೆಸಗಿದರು ಶಾಸ್ತ್ರೋಕ್ತದಂದದಿ
ಋಷಿವರರು ಮಾಡಿಸಿದರಗಲಕೆ ಕೊಂಡವನು ಶಿಖಿಗೆ ॥ ೯

ಸ್ಥಪತಿಮುಖ್ಯರು ಯಾಗಶಾಲೆಯ
ವಿಪುಳವೆನೆ ನಿರ್ಮಿಸಿದರದಱೊಳು
ನಿಪುಣಮತಿಯೊರ್ವನು ನಿಮಿತ್ತವ ಕಂಡು ಭಯಗೊಂಡು ।

ಈಯಾಗಕ್ಕೆ ಬ್ರಾಹ್ಮಣನಿಂದ ವಿಘ್ನ ಬರುವುದೆಂದು ಬಡಿಗನು ಹೇಳುವಿಕೆ.

ನೃಪತಿಯಧ್ವರಕರ್ಮವಿದು ಕೆ
ಟ್ಟಪುದು ಕಡೆಗೀಡೇಱದೆಂದಾ
ನೃಪನ ಸಭೆಯೊಳು ಘೋಷಿಸಿದನತಿಬಹಳರಭಸದಲಿ ॥ ೧೦

ಹೇೞು ಹೇೞಿದಕಾರು ವಿಘ್ನವ
ನೇೞಿಸುವರೈ ಯೆನಲು ಭೂಸುರ
ಮೌಳಿಮಣಿವಿಪ್ರೋತ್ತಮನದೆಸೆಯಿಂದ ವಿಘ್ನವಿದು ।

ಒಳಗೆ ಬ್ರಾಹ್ಮಣರನ್ನು ಬಿಡಬೇಡವೆಂದು ರಾಜನ ಅಪ್ಪಣೆ.

ಕೇಳೆನಲು ಕೇಳುತ್ತ ಪೃಥ್ವೀ
ಪಾಲ ದ್ವಾಸ್ಥನ ಕರೆದು ನೀನೀ
ಕೋಲ ತೆಗೆಯದಿರಱಿಕೆ ಯಿಲ್ಲದೆ ವಿಪ್ರರಿಂಗೆಂದ ॥ ೧೧

ಅರಿದೆನಿಸಿದ ಗೃಹವಿತರ್ದಿಕೆಯುಂ
ಹೊಱುವುದೇ ಕೇಳ್ ಭೂಮಿಲಂಬದ
ನೆರವಿಯುಂ ಋತ್ವಿಕ್ಸಭಾಸದವರ್ಗದುತ್ಸವದ ।
ಭರಿತಲಕ್ಷ್ಮಿಯನೇನನೆಂಬೆನು
ಪರಮಋಷಿಮುಖ್ಯರಲಿ ಋತ್ವಿ
ಗ್ವರಮಹಾಕರ್ಮಕ್ಕೆ ವಿನಿಯೋಗವನು ಕೇಳೆಂದ ॥ ೧೨

ಚಂಡಕೌಶಿಕನೆಂಬವನು ಕೈ
ಕೊಂಡನಾಹೋತೃತ್ವವನು ಕೈ
ಕೊಂಡನುದ್ಗಾತೃತ್ವವನು ವರಜೈಮಿಸಿವ್ರತಿಪ ।
ಮಂಡಿಸಿದನಾಬ್ರಹ್ಮಪದದಲಿ
ಪಂಡಿತನು ಭಾರ್ಗವನು ನೆಱೆ ಕೈ
ಕೊಂಡನಾಧ್ವರ್ಯವನು ಪಿಂಗಲಮುನಿಯು ಕೇಳೆಂದ ॥ ೧೩

ತಿಳಿಯೆ ವೇದವ್ಯಾಸ ಮುದ್ಗಲ
ನಲಘುಮುನಿ ನಾರದನು ಕಶ್ಯಪ
ಕುಲಯುತನು ವರದೇವಲಚ್ಯವನಕಣ್ವಪಟುಭಟರು ।
ಅಲಘುಮತಿ ಗಾಲವನು ಕೋಮಲ[1]

1 ಗಾಲವನುಕೋ, ಕ. ಗ.

ಲಲಿತನನುಪಮ [1] ದೇವಶರ್ಮನು
ಜ್ವಲಿತಜಠರಶ್ವೇತಕೇತು ಸದಸ್ಯರಿವರೆಂದ ‖ ೧೪

ಇವರು ಶಿಷ್ಯಜನಪ್ರಶಿಷ್ಯ
ಪ್ರವರಜನಸಹಿತಾಮಹಾಧ್ವರ
ಭವನದಲಿ ಕುಳ್ಳಿರಲು ವಿಮಲಸದಸ್ಯರೆಂದೆನಿಸಿ ।

ಶ್ರೇಷ್ಠರಾದ ಋತ್ವಿಕ್ಸಭಾಸದರಿಂದ ಕೂಡಿ ರಾಜನು ಯಾಗವಂ ಮಾಡಿಸಿಕೆ.

ಅವನಿಪತಿ ಕೈಕೊಂಡನಂತಾ
ಸವನ ದೀಕ್ಷೆಯನತುಳಪನ್ನಗ
ನಿವಹ ಬೆದಱಲು ಹೋಮವನು ತೊಡಗಿದರು ಋತ್ವಿಜರು ‖ ೧೫

ಕರಿಯ ವಸ್ತ್ರವ ಧರಿಸಿ ನೊಸಲಲಿ
ಕರಿಯ ತಿಲಕವನಿಟ್ಟು ರೌದ್ರದೆ
ವರಭಯಂಕರನಯನಬದ್ಧಭ್ರುಕುಟಭೂನಿಕರ ।
ಕರೆದರುರಗವ್ರಾತವನು ಮೋ
ಹರಿಸಿ ವಹ್ನಿಜ್ವಾಲೆ ಗಗನಕೆ
ಥರವಿಡಿದು ಕುಳ್ಳಿರ್ದ ವಿಪ್ರರು ಘೋರಮಂತ್ರದಲಿ ‖ ೧೬

ಆಗ ಉದಂಕಮುನಿಯು ಬರುವಿಕೆ.

ಬಂದನಾಸಮಯದಲುದಂಕನು
ನೊಂದ ಮೃಗಪತಿಯಂತಕರುಣದೆ
ಕಂದು ಬಿಡುವುದ್ದಂಡತಕ್ಷಕ ಮಡಿವ ತೆಱನೆಂತೋ ।
ಇಂದು ನಾಮದ ನೋಪ್ಪೆವೆಂದಾ
ಸಂದಶಿಷ್ಯವ್ರಜಸಹಿತಲಾ
ನಂದ ಮಿಗೆ ತಾನಯ್ದೆ ಮಖಕನುಕೂಲನೆನಿಸಿದನು ‖ ೧೭

---

1 ಮಳನಸಿತನಾ, ಕ. ಗ.

ನಾನಾರೀತಿಯಿಂದ ಸರ್ಪಗಳು ಅಗ್ನಿಕುಂಡದಲಿ ಬೀಳುವಿಕೆ.

ಏನನೆಂಬೆನು ಮುನಿಪ ಮಂತ್ರಾ
ಧೀನವಲ್ಲಾ ಲೋಕ ವಿಪ್ರಮ
ಹಾನುಭಾವವನಱಿವರಾರಾಕ್ಷಣದಲಹಿನಿಕರ ।
ಸ್ಥಾನಕಂಪಿತವಾಯ್ತು ಗತಿಯಿ
ನ್ನೇನು ಕೆಟ್ಟೆವೆನುತ್ತ ಶೋಕದೆ
ಹಾನಿಮುಖರೊರಲುತ್ತ ಬಂದರು ಗಗನಮಂಡಲಕೆ ॥ ೧೮

ಹಲವು ಸುತ್ತನು ಸುತ್ತಿ ತೆಕ್ಕೆಯು
ವಳಯದಲಿ ತಲೆಸುತ್ತಿ ಕೊಳ್ಳಂ
ದಲೆದು ತಲೆಕೆಳಗಾಗಿ ಬೀೞುತಲಿರ್ದುದಗ್ನಿಯಲಿ ।
ಕೆಲರು ಕೆಲವರ ಹಿಡಿದು ಹೊಕ್ಕರು
ಕೆಲಕೆಲರು ಮಕ್ಕಳನು ಕರೆಯುತ
ಳಲುತ ಸಂಕುಳವಾಯ್ತು ಸರ್ಪವ್ರಾತವಭ್ರದಲಿ ॥ ೧೯

ಕೆಲರು ವಿಷ್ಠಿಸುತಭ್ರದಲಿ ಕೆಲ
ಕೆಲರು ಮೂತ್ರಿಸುತೊಡಲು ಕಂಪಿಸೆ
ಕೆಲರು ಕಾಱುತ ರಕುತವನು ವೀರ್ಯವನು ಕೆಲಕೆಲರು ।
ಕೆಲರು ಬಾಲವನೂಱಿ ಮತ್ತಾ
ಕೆಲರು ತಲೆಗಳನೂಱಿ ತೆಕ್ಕೆಯು
ವಳಯುವನು ಕೆಲರೂಱಿ ಬೀೞುತ್ತಿರ್ದರುರಿಯೊಳಗೆ ॥ ೨೦

ಹೆಡೆಗಳುರಿದವು ವರಫಣಾಮಣಿ
ಸಿಡಿದು ಹಾಱಿದುದುರಿಯ ಹೊಯ್ಲಲಿ
* ಕಿಡಿಗಳಂತಿರೆ ಠಣಠಣತ್ಕಾರಗಳು ರಂಜಿಸಲು ।
ಅಡಸಿ ಬೆಂದುದು ಭೋಗಿಭೋಗದ
ಗಡಣದಭ್ರದಲೆಂಟುದೆಸೆಯಲಿ
ತಡವಿಡುತ ಸೀಕರಿಸಿದುದು ಧೂಮೋಳಿಧೂಳಿಡಲು ॥ ೨೧

* ಕಿಡಿಗಳಂತಿರ ರೆಕ್ಕೆ ಸೀದವು ಗಱಿಹರಿದು ಕೆಡೆದು, ಗ.

ಬಸೆಯು ನದಿಗಳು ಬೀದಿವರಿದವು
ದೆಸೆದೆಸೆಗೆ ನಿಲಲಱಿಯದಾಯ್ತು
ವಸುಧೆ ಸುತ್ತಲು ಮಸಗಿಮದು ದುರ್ಗಂಧ ವೃತಿಯಿಂದ।
ಬೆಸನಿಗಳು ಬೇಳದರು ಬೇಸರ
ದುಸುರಲರಿದೆನೆ ಪನ್ನಗರ ಕುಲ
ವಿಸರವನು ವಿಧಿಕೋವಿದರು ಕೆಂಗೆಡಿಸಿದರು ಜಗವ॥ ೬೦

ಅತ್ತಲನ್ನೆಗ ಪನ್ನಗನ ತನು
ಹೊತ್ತಿದುದು ಸಂತಾಪವಹ್ನಿಯು
ನುತ್ತರಿಸುವೆನದೆಂತೊ ನರಪತಿ ಮಾಡಿದನು ಮಖವ।

ತಕ್ಷಕನು ಇಂದ್ರನನ್ನು ಮರೆಹೊಗುವಿಕೆ.

ಮೃತ್ಯುವಿದು ಹಾ ಯೆನುತ ಹೋದನು
ವೃತ್ರವೈರಿಯ ಹೊರೆಗೆ ರಕ್ಷಿಸು
ಭೃತ್ಯನನು ಮಱಿಹೊಕ್ಕೆನೆಂದನು ನಡುಗಿ ಸುರಪತಿಯ॥ ೬೩

ಅಂಜಬೇಡೆಲೆ ಮಗನೆ ತಾ ಪವಿ
ಪಂಜರವು ನಿನಗಿನ್ನು ಯಾಗಥ
ನಂಜಯನು ಸುಡುವನೆ ನಿಜಾಂಘ್ರಿಸಮಾಶ್ರಿತರನಕಟ।
ಅಂಜಲಿಸಬೇಡೆನುತ ದಾನವ
ಭಂಜನನು ಮಸ್ತಕದಲಭಯಕ
ರಾಂಜಲಿಯನಿರಿಸಿದನು ಸುಖದಿಂದಿರ್ದನುರಗೇಂದ್ರ॥ ೬೪

ವಾಸುಕಿಯ ಅಪ್ಪಣೆಯಂತೆ ಜರತ್ಕಾರುವು ಆಸ್ತೀಕನನ್ನು ಯಾಗವಿಘ್ನ
ಕ್ಕಾಗಿ ಕಳುಹುವಿಕೆ.

ಹೋದವರನೀಕ್ಷಿಸುತ ವಾಸುಕಿ
ಗಾದುದಂತಸ್ತಾಪ ಮನದಲಿ
ತೀದುದಿನ್ನೇನುರಗಕುಲ ನೆಱಿ ಬೆಂದುದವನಿಪನ।
ಬೀದಿಗಿಚ್ಚೆ ನಲುರಿದು ಹೋದಂ

ತಾದುದೆಮಗಿನ್ನೇನು ಗತಿ ಕರೆ
ಮೈದುನನ ಮಗನೆಲ್ಲಿ ಯೆಂದನು ತಂಗಿಯನು ಕರೆದು ॥ ೧೫

ಕಳುಹು ಕಳುಹೆಲೆ ತಂಗಿ ಮಗನನು
ಕಳುಹು ತಡೆಯದೆ ಕಳುಹು ತನ್ನಸು
ವುಳಿವುದಾತನ ಕಯ್ಯಲದಲೇ ತಾಯೆ ಕಳುಹೆನಲು ।
ನಳಿನಲೋಚನೆ ಯೆಲ್ಲವನು ನೇಱಿ
ತಿಳಿಹಿ ಪೂರ್ವಾಪರವನವನಿಪ
ನಲಘುಮುಖಭಂಗವನು ಮಾಡೆಂದಳು ನಿಜಾರ್ಭಕಗೆ ॥ ೧೬

ಇದು ನಿಮಿತ್ತವೆ ನಿನ್ನ ತಂದೆಗೆ
ಮದುವೆಯನು ಮಾಡಿದರು ತನ್ನನು
ಬದುಕುವಭಿಲಾಷೆಯಲಿ ಮಾವಂದಿರು ಮಹಾಮುನಿಗೆ ।
ಪದುಮಭವನಾಜ್ಞಾಪಿಸಿದ ಗಡ
ತ್ರಿದಶಂಗೆ ನಿನ್ನಿಂದ ಕುಲವಿದು
ಬದುಕುವುದು ಗಡಬೇಗ ಮಾಡೆಂದಳು ಸರೋಜಮುಖಿ ॥ ೧೭

ಬೇಗಲೆಂದೇನೆಂಬೆ ನಿಲಿಸುವೆ
ನೀಗಳಂತಿರೆ ಭೂಮಿಪಾಲನ
ಯಾಗವನು ನೀನೇತಕಂಜುವೆ ತಾಯೆ ತನ್ನಳವ ।
ತೂಗಿ ನೋಡಿದರಡವಿಯಲ್ಲಾ
ಭೋಗಿಭೂಷಣನೊಂದುಬಾರಿಗೆ
ಭೋಗಿಕುಲವನು ರಕ್ಷಿಸುವನೆಂದೆನುತ ಹೊಱವಂಟ ॥ ೧೮

ಕಾಲಿಗೆಱಗಲು ಹರಸಿ ಪನ್ನಗ
ಪಾಲನಪ್ಪಿದನಳಿಯನನು ಕ
ಣ್ಣಾಲಿಗಳು ನೀರೇಱಲಧಿಕಾನಂದಭಾವದಲಿ ।
ಪಾಲಿಸೆನ್ನನು ಪರಮಧಾರ್ಮಿಕ

ಮೌಳಿರತ್ನವೆ ನಿನ್ನ ಕೈಲೆಡೆ
ಹೂಳಿದರ್ಥವಿದೆಮ್ಮ ಜೀವನವೆಂದನುರಗೇಂದ್ರ ॥ ೨೯

ಏತಕಂಜುವೆ ಮಾವ ಬಱಿದೇ
ಕಾತರಿಸದಿರು ತನ್ನ ಮೇಲಾ
ಭೂತನಾಥನ ಕರುಣವುಂಟಂಜದಿರು ನೀನೆನುತ ।
ಮಾತೆ ಮಾತುಳರಂಘ್ರಿಗೆಱಗಿಯು
ಭೀತನೆದ್ದನು ಬೀೞುಕೊಂಡಾ
ಭೂತಳಾಧಿಪನಧ್ವರಕೆ ನಡೆತಂದನೊಲವಿನಲಿ ॥ ೩೦

ಆಸ್ತೀಕನು ಯಾಗಮಂದಿರದ ಬಾಗಿಲಗೆ ಬರಲು ಒಳಗೆ ಬಿಡದಿರಲು ನಾನಾ ರೀತಿಯಾಗಿ ಯಾಗವನ್ನೂ ರಾಜನನ್ನೂ ಸ್ತುತಿಸುವಿಕೆ.

ಬಂದನಾಸ್ತೀಕಾಖ್ಯನಧ್ವರ
ಮಂದಿರದ ಬಾಗಿಲಿಗೆ ಹೋ ನಿ
ಲ್ಲೆಂದು ಪಡಿವಳನಡ್ಡವಿಸಲಿದು ಮಾರಿಯಾಯ್ತೆನುತ ।
ನಿಂದನಲ್ಲಿಯೆ ಯಾಗಶಾಲೆಯ
ಮುಂದೆ ನೃಪನಾ ಯಜ್ಞವನು ಮುನಿ
ವೃಂದವನು ಹೊಗೞಿದನು ವಿನಯೋಪೇತನೆಂದೆನಿಸಿ ॥ ೩೧

ಯಮನ ವರುಣನ ವೈಶ್ರವಣನಾ
ಕಮಲತನಯನ ರಂತಿದೇವನ
ಹಿಮಕರನ ಗಯನೃಪನ ನೃಗನಜಮೀಢಲೋಹಿತನ ।
ವಿಮಲದಶರಥನಂದನನ ಭೂ
ರಮಣಧರ್ಮಾತ್ಮಜನ ಭರತನ
ಸಮಮಹಾಯಜ್ಞಂಗಳೀನೃಪಯಜ್ಞಕೆಣೆ ಯೆಂದ ॥ ೩೨

ಈಸಮಾಹಿತಮಖಕೆ ತೇಜೋ
ರಾಶಿ ಮುನಿಕುಲವರ್ಯ ವೇದ
ವ್ಯಾಸನಲ್ಲಾ ವರಸದಸ್ಯನು ಭುವನಭೂಸುರರು ।

ಈ ಸಕಲಋತ್ವಿಜರು ಮುಖ್ಯರು
ಲೇಸನೊಡವಿಟ್ಟಂತೆ ನೆರೆದಿರೆ
ಯೇಸು ಧನ್ಯನೊ ಭೂಪವರ ಯಜಮಾನನಕಟೆಂದ ॥ ೩೩

ಏನನೆಂಬೆನು ಸಕಲದಿವಿಜರಿ
ಗಾನನವಲಾ ಪಾವಕನು ಪವ
ಮಾನಸಖನಾ ದಕ್ಷಿಣಾಮೂರ್ತಿಯಿವನೆಂದೆನಿಸಿ ।
ಮಾನವೇಂದ್ರನ ವರಮನೋರಥ
ದಾನಿಯಲ್ಲಾ ಕೃಷ್ಣವರ್ತ್ಮಕೃ
ಶಾನುಮುಖ್ಯಾನಲಸುನಾಮನನಂತಗುಣನೆಂದ ॥ ೩೪

ಆರು ನೀನೆಲೆ ಭೂಪ ಸಾಕ್ಷಾ
ದ್ವಾರಿಜಾಸನನೋ ಮಹೇಂದ್ರನೊ
ಘೋರನಯನನೊ ಮೇಣು ವಿಷ್ಣುವಿನಂಶಸಂಭವನೋ ।
ಆರು ನೆನೆವರು ಮಖವನಿದಮೇ
ಣಾರು ಮಾಳ್ಪರು ಸಮಿಧೆಯಾಯ್ತು ಮ
ಹೋರಗರ ಕುಲ ನಿನ್ನ ಹೋಲುವ ನೃಪನದಾರೆಂದ ॥ ೩೫

ಭೂಪವರ ಖಟ್ವಾಂಗ ನಹುಷದಿ
ಳೀಪ ಮಾಂಧಾತೃಪ್ರಮುಖಮಹಿಪ
ರೀಪರಿಯ ಮಖವರವ ಮಾಡಿದರುಂಟೆ ಪೂರ್ವದಲಿ ।
ಭೂಪ ತೇಜೋನಿಧಿಯೆ ವರಧೃತಿ
ರೂಪಗುಣಸುಂದರನೆ ತನ್ನಾ
ಳಾಪವನು ಚಿತ್ತೈಸು ವಿಕ್ರಮಶೌರ್ಯವಾರಿಧಿಯೆ ॥ ೩೬

ರವಿಯ ವೊಲು ತೇಜೋಭರದಲಿಹು
ತವಹಗೆಣೆ [1] ದುರ್ದರ್ಶತೆಯಲಿಂ
ದುವಿನ ವೊಲು ಸೌಖ್ಯದಲಿ ಶಕ್ರನ ವೊಲು ಪ್ರಭುತ್ವದಲಿ ।

---

[1] ಪಾವಕನವೊಲು, ಕ. ಖ.

ಭವನ ಪೋಲಾಸುಪ್ರಸಾದದ
ಲವನಿಯ ಪೊಲು ಕ್ಷಮೆಯಲಿ ಹುತ್ತಶಿ
ಶುವಿನ [1] ಪೋಲಾಯತಿಯಲಿ ವಸಿಷ್ಠಗೆಣೆ ಶಾಂತಿಯಲಿ ॥ ೩೭

ಸಮತೆಯಲಿ ಸಾಕ್ಷಾತ್ತು ನೀನೇ
ಕಮಲಭವನೆಲೆ ಭೂಪ ಧರ್ಮದ
ಮಮತೆಯಲಿ ಯಮನಸ್ತ್ರಶಸ್ತ್ರಂಗಳಲಿ ಧರಣಿಜೆಯ ।
ರಮಣನಖಿಳೈಶ್ವರ್ಯದಲಿ ಶಿವ
ನಮಲಶೌರ್ಯದ ಮಹಿಮೆಯಲಿ [2] ಸಂ
ಭ್ರಮದಲಿರೆ ಸಾಕ್ಷಾತ್ತು ನಾರಾಯಣನು ನೀನೆಂದ ॥ ೩೮

ರಾಜನು ಈತನ ಸ್ತುತಿಯನ್ನು ಕೇಳಿ ಬ್ರಾಹ್ಮಣನನ್ನು ಒಳಗೆ ಕರೆಯಲು ಮತ್ತು ಸ್ತುತಿಸುವಿಕೆ.

ಆರದಾರೋ ಸ್ತುತಿಸುವವ ನೀ
ಭೂರಿಮಖವನು ಋತ್ವಿಜರನಾ
ಘೋರಭೂಭುಜನೆನ್ನನೇತಕೆ ಶೌರ್ಯವೇನೆನುತ ।
ಭೂರಮಣನಾತನನು ಕರೆ ಕರೆ
ಕಾರಣವ ಬೆಸಗೊಂಬೆನೆನಲಾ
ದ್ವಾರಪಾಲರು ಹುಗಿಸಿದರು ವಹಿಲವಲಿ ಭೂಸುರನ ॥ ೩೯

ಮೆಚ್ಚಿದೆನು ಮೆಚ್ಚಿದೆನು ಹೇಳೆಲೆ
ಸಚ್ಚರಿತ ಮನದಿಚ್ಛೆಯಾವುದು
ಮುಚ್ಚು ಮಱೆಯದೆ ಕೀವೆನಭಿಮತಸಿದ್ಧಿಯನು ನಿನಗೆ ।
ಅಚ್ಯುತಾಂಘ್ರಿಯೆ ಸಾಕ್ಷಿ ಬೇಡಿದ
ನೊಚ್ಚು ತೀವೆನು ತನ್ನ ಧರೆಯನು
ನಿಚ್ಛಯದಿ ಸರ್ವಸ್ವವನು ಮಿಗೆ ಚಿಂತೆ ಬೇಡೆಂದ ॥ ೪೦

---

1 ವಾಲ್ಮೀಕಿಯ, ಕ. ಖ.

2 ಶಮಗುಣವೀರ್ಯ ಶೌರ್ಯದ ಮಹಿಮೆಯಲಿ, ಕ, ಖ.

ವಸುಮತೀವಲ್ಲಭನೆ ನಿನಗಿದು
ಪೊಸತೆ ಪಾಂಡುನೃಪಾಲವಂಶ
ಪ್ರಸರಪುಣ್ಯಶ್ಲೋಕನಲ್ಲಾ ತಂದೆ ನೀ ದಿಟಕೆ ।
ಎಸೆವ ಗುಣವಿನಿತಿಲ್ಲದಿರೆ ಸುರ
ವಿಸರಸನ್ನುತಪಾದಪೀಠನು
ವಶವಹನೆ ನಿತ್ಯಾತ್ಮನಾರಾಯಣನು ನಿಮಗೆಂದ ॥ ೪೧

ಹದಿನೇಳನೆಯ ಸಂಧಿ ಮುಗಿದುದು.

## ಹದಿನೆಂಟನೆಯ ಸಂಧಿ.

ಸೂಚನೆ.

ಲೋಕ ಬೆದಱಲು ಮಾಣ್ಬ ಸರ್ಪಾ
ನೀಕಮುಖವನು ಮಾಣಿಸಿದನಾ
ಸ್ತೀಕಮುನಿ ಮುಂಕೊಂಡು ಸಲಹಿದ ಸಕಲಬಾಂಧವರ ॥

ವಿಪ್ರವಚನದಿಂದ ಸಂತೋಷಿಸಿ ವಿಪ್ರನನ್ನು ರಾಜನು ಸ್ತುತಿಸುವಿಕೆ.

ಕೇಳು ಶೌನಕ ವಿಪ್ರವಚನವ
ಕೇಳುತವೆ ಹಿಗ್ಗಿದನು ಲಕ್ಷ್ಮೀ
ಲೋಲನೊಲವಿನ ದಾಸರಹ ನಿಜಪಿತೃಪಿತಾಮಹರ ।
ಬಾಳಿಕೆಗೆ ಫಲವೇನು ಸಭ್ಯರ
ಜಾಲವನು ನೋಡುತ್ತ ಭೂಪತಿ
ಬಾಲನಲ್ಲಿವನಧಿಕವೃದ್ಧನೆ ಯಾಗಬೇಕೆಂದ ॥ ೧

ಇಲ್ಲದಿದ್ದರೆ ಪೂರ್ವಕಥನವ
ಬಲ್ಲನೆಂತೀ ಹಸುಳೆ ಲಕ್ಷ್ಮೀ
ವಲ್ಲಭನ ಕೀರ್ತಿಯನು ವಾರ್ತೆಯನಱವಸಿವನೆಂತು ।

ಸೊಲ್ಲು ಸರಿಯಾಯ್ತೀವಸೇನನು
ವಲ್ಲಭನೆ ಹೇಳೆನುತ ಕರಪುಟ
ಪಲ್ಲವಕ್ಕೊಸರಿಸಿದನಂಗವ ವಿಪ್ರಪುಂಗವನ ‖ ೧

ಇತ್ತಲಾದ್ವಿಜನೊಡನೆ ಮಾತಾ
ಡುತ್ತ ಕಂಡನು ತಿರುಗಿ ವರಭೂ
ಪೋತ್ತಮನು ಬೆಸಗೊಂಡನಂದಾ ಚಂಡಕೌಶಿಕನ ।

ಬಳಿಕ ರಾಜನು ಯಾವಯಾವ ಸರ್ಪಗಳು ಹುತವಾದವೆಂದುಕೇಳಲು ಕೌಶಿಕರ ಉತ್ತರ.

ಮತ್ತೆ ಬೆಂದವರಾರು ಬಹುದು
ವೃತ್ತರತರೀ ಶಿಖಿಗೆ ಹೇಳಿದ
ತುತ್ತಲಾತಕ್ಷಕನು ತಡೆದನಿದೇನು ಹೇಳೆಂದ ‖ ೩

ಉತ್ತರದಲ್ಲಿ ಬೆಂದವರ ಹೆಸರುಗಳು.

ಎಂದೊಡೆಂದನು ಹೋತೃ ಲೆಕ್ಕಿಸ
ಲಿಂದುಧರಗರಿದನಲಮುಖದಲಿ
ಬೆಂದವರ ಸಂಖ್ಯೆಯನು ಮಿಕ್ಕವರಳವೆ ಮುಖ್ಯರನು ।
ತಂದೆ ಕೇಳಾವಾಸುಕಿಯ ನಿಜ
ನಂದನರು ಹದಿಮೂರುಲಕ್ಷದ
ಮಂದಿ ಬಿದ್ದರು ಗಿರಿಶಿಖರಸಂನಿಭರು ಕೇಳೆಂದ ‖ ೪

ಅಿದರಷ್ಟಾದಶಮಹೋರಗ
ಕುಲಪತಿಗಳಾ ತಕ್ಷಕಾತ್ಮಜ
ರಲಘುವಿಷವೀರ್ಯೋದ್ಭಟ[1]ರು ಗಿರಿಶೃಂಗಸಂನಿಭರು ।
ಬಲವದೈರಾವತಮಹೋರಗ
ಕುಲದಲೀರ್ರೈವರು ಹುತಾಶನ
ನೊಳಗೆ ಮುಗ್ಗಿದರುಗ್ರವಿಷದೋಷರು ಜಗತ್ತ್ರಯದಿ ‖ ೫

---

[1] ರ್ಯೋತ್ಕಟ, ಗ.

ಹೊತ್ತಿದರು ಕೌರವ್ಯಕುಲದಲಿ
ಹತ್ತು ಹುತವಹಮುಖದಲಱಿವೊಡೆ
ಮತ್ತಗಜಸನ್ನಿಭರು ನಾನಾವರ್ಣಸಂಯುತರು ।
ಮತ್ತೆ ಧೃತರಾಷ್ಟ್ರಾಂಕಕುಲ ಮೂ
ವತ್ತು ನಾಲಕು ನಾಗಪತಿಗಳು
ಮೃತ್ಯುವಿಗೆ ಮಾಱಿದರು ತನುವನು ಘೋರವಿಕ್ರಮರು ॥ ೬

ಕನಕವರ್ಣದ ವಿನುತಪಿಂಗಲ
ದಿನಪತೇಜದ ರೂಪ್ಯವರ್ಣದ
ಘನತರಶ್ಯಾಮಾಕೃತಿಯು ಕಾಮಸ್ವರೂಪಿಗಳು ।
ಅನಲನೆಱಕದ ಕಣ್ಣ ಕೆಂಪಿನ
ಕೊನರು ಗಿಡಿಗಳ ವಿಷದ ಹೊಗೆಗಳ
ಹೊನಲ ಹೊಗೆಗಳ ದುರುಳರೊಡೆ ಮುಗ್ಗಿದರು ಶಿಖಿಯೊಳಗೆ ॥ ೭

ಎರಡುಯೋಜನದೀರ್ಘದೇಹರು
ನಿರುತ ಯೋಜನಗಳ ಶರೀರರು
ಗಿರಿನಿಭರು ಪಾವಕನಿಭರು ರವಿನಿಭರು ಶಶಿನಿಭರು ।
ಎರಡು ಹೆಡೆಗಳ ಮೂರುಫಣೆಗಳ
ತರದೊಳೈದಾಱೇೞು ಹೆಡೆಗಳ
ದುರುಳದುಷ್ಟೋರಗರು ಮುಗ್ಗಿದರಗ್ನಿಯೊಳಗೆಂದ ॥ ೮

ಲೆಕ್ಕವನು ತಾನೀಗಲಱಿಯೆನು
ಹೊಕ್ಕವರ ಹೊಗುವವರ ಬಾರಿಯು
ತೆಕ್ಕೆಯನು ಮಂಡಳಿಸಿ ಸಭದಿಂದೊಲುತಿಳಿಯುವರ ।
ಮಕ್ಕಳನು ಮಱಿಮಕ್ಕಳನು ಹೆ
ಮ್ಮಕ್ಕಳನು ಹೋಮಿಸಿದೆವಾವುದ
ಶಕ್ಯವೆಮಗೆಲೆ ಭೂಪ ಕಾಣೆವು ತಕ್ಷಕನನೆಂದ ॥ ೯

ರಾಜನು ಬೆಂದ ಸರ್ಪಗಳ ಹೆಸರನ್ನು ಕೇಳಿ ತಕ್ಷಕನು ಏಕೆ ಬೀಳಲಿಲ್ಲವೆಂದು ಕೇಳಲು ಇಂದ್ರಾಶ್ರಯದಿಂದ ಬೀಳಲಿಲ್ಲವೆಂದು ಹೇಳುವಿಕೆ.

ಹಗೆಯು ಮೂಲಿಕೆ ಯುಳಿದುದೇತಕೆ
ಮಗುವ್ರುತನವನು ಮಾಟ್ಪಿರಕಟಾ
ನಗೆಯಲಾ ಕೊಂದವನ ಕೊಬದಿರಲೇಕೆ ನೀವೆನಲು ।
ಮುಗುಧ ಭೂಪತಿ ಕೇಳುತೆಮ್ಮಲಿ
ಮಗುವ್ರುತನವಿಲ್ಲಿಂದ್ರನಾತನ
ತೆಗೆದು ಕೊಂಡಿರುತಿಹನು [1] ಬಿಡ ಶರಣಾಗತನನೆಂದ ॥ ೧೦

ಕೊಟ್ಟನಾತಂಗಾತನಭಯವ
ಶಿಷ್ಟನವನೆಂದೊಲಿದು ಭೂಪತಿ
ಯಿಷ್ಟಿಯಲಿ ನೀ ಬೀಬಿದಿರು ತಾಸಿತ್ತೆ ವರವೆಂದು ।
ವಿಷ್ಟಪೇಶ್ವರನಾತನನು ಹಿಂ
ದಿಟ್ಟು ಕೊಂಡಿರುತಿಹ [2] ಸುಧರ್ಮಾ
ವಿಷ್ಟನನು ತಾವೆಱಿವೆವೆಂದರು ಋತ್ವಿಜರು ನೃಪಗೆ ॥ ೧೧

ರಾಜನು ಇದನ್ನು ಕೇಳಿ ಕೋಪದಿಂದ ಇಂದ್ರಸಹಿತನಾಗಿ ಬೆಂಕಿಯಲ್ಲಿ ಬೀಳುವಂತೆ ವಿಧಿಸಿ ಎಂದು ಹೇಳುವಿಕೆ.

ಐಸಲೇ ತಪ್ಪೇನು ವರವನು
ಬಾಸೆ [3] ಕೊಟ್ಟನೆ ತಕ್ಷಕಂಗಾ
ವಾಸವನು ಲೇಸಾಯ್ತು ಲೇಸಾಯ್ತಿದುವೆ ಲೇಸಾಯ್ತು [4] ।
ತಾ ಸಹಿತ ಬೀಬಲಿ ಸಮೃದ್ಧ ಹು
ತಾಶನನ ಮುಖಕೆನುತ ಭೂ
ವಿಾಶನಾಋತ್ವಿಜರಿಗೆಂದನು ಹೋವಿಸುವುದೆಂದು ॥ ೧೨

---

1 ಡೈಧಾನೆ, ಕ. ಖ. ಗ.
2 ಡೈಧಾನೆ, ಕ. ಖ. ಗ.
3 ಹಾಸಿ, ಕ. ಖ.
4 ಸೊಗಸಾಯ್ತು, ಗ.

ಅರೀತಿ ಮಾಡಲು ಇಂದ್ರನು ಭಯದಿಂದ ತಕ್ಷಕನನ್ನು ಬಿಡುವಿಕೆ.

ಅಹುದು ಭೂಪನ ಮಾತು ತಪ್ಪದು
ಕುಹಕಿಗಭಯವನಿತ್ತೊಡೇನಾ
ಯ್ತು ಹಿತನು ಫಡ ಮೃಡನ ಮಱೆ ಹೊಗೆಯು ಕೊಲುವೆವೆಂದೆನುತ।
ದಹನದಲಿ ಬೀಳದಲಿ ಬರಲಾ
ಕುಹಕಿ ಮೇಣಲ್ಲದೊಡೆ ಸುರಪತಿ
ಸಹಿತ ಬೀೞುವುದೆನುತ ಕರೆದರು ಮಂತ್ರಕೋವಿದರು ॥ ೧೩

ನಡುಗಿದನು ದೇವೇಂದ್ರನೊಡಲೊಳ
ಗುಡಿದುದಲಗೆನೆ ಮೇಣು ಸುಣ್ಣವ
ನಿಡಿಯನುಂಗಿದವೋಲು ಬೆಂದನು ನೊಂದನಡಿಗಡಿಗೆ ।
ಹಿಡಿದು ನೂಕಿದವೋಲು ಸುರಸಭೆ
ನಡುಗಲೇಱಿದ ಸಿಂಹಪೀಠವ
ತಡೆದುರಗನನು ಬೀೞುಕೊಟ್ಟನು ತೊಡಕು ಬೇಡೆನುತ ॥ ೧೪

ಆಶ್ರಯ ತಪ್ಪಲು ತಕ್ಷಕನು ಸಂತಾಪದಿಂ ಅಗ್ನಿಯಲ್ಲಿ ಬೀಳಲು ಬರುವಿಕೆ.

ಸುಡು ಬದುಕಲೇಕಿನ್ನು ಮೂಜಗ
ಕೊಡೆಯು ನಾನೆಂದೆನ್ನ ಮಱೆ ಹೊ
ಕ್ಕೊಡೆ ಗತೋದಕಸೇತುವಾದುದು ತನ್ನ ಸಾಮರ್ಥ್ಯ।
ಪೊಡವಿಯಮರರು ಕೊಂದರೆನುತವೆ
ತಡೆಯದೇಱಿ ವಿಮಾನವನು ನಭ
ದೆಡೆಗೆ ಬಂದನು ಬಹಳಸಂತಾಪದಲಿ ಸುರನಾಥ ॥ ೧೫

ಇಂಬಿನಲಿ ಬೀೞುತ್ತ ನುಗ್ಗಿಯ
ಕೊಂಬ ಹಿಡಿದಂತಾಯ್ತು ಕೆಟ್ಟೆನು
ನಂಬಿ ನಯನಸಹಸ್ರನನು ತಾನೆನುತ ತಕ್ಷಕನು ।
ಅಂಬರಕ್ಕೆಲ್ತಂದನೊಡಲಲಿ
ತುಂಬಿದಂತಸ್ತಾಪ ಶಿಖಿಯಲಿ
ಬಂಬಲಿನ ಬಲುಗಿಡಿಯ ಧೂಮದ ಧಾಳಿಗಿದಿರಾಗಿ ॥ ೧೬

ಉರುಳುತುರುಳುತಜಾಂಡಮಂಡಲ
ಬಿರಿಯಲೆಂದರು ತನಿಯ ಹೊಗೆಗಳ
ಹೊರಳಿಯಲಿ ಹೊಡಕರಿಸಿ ಮಂಡಳಿಸುತ್ತ ನೀಗುರುತ ।
ಕರೆಕರೆದು ಬಸವೞಿದು ನೆಱೆ ಕಂ
ಡರಿಗೆ ಕಾರುಣ್ಯವನು ತೋಱು
ತ್ತುರಗರಾಜನು ಸಿಗುಳಿಕೆಯ ಸಸಿಯಾದನಭ್ರದಲಿ ॥ ೧೭

ಬೆಂಕಿಯ ಸಮೀಪಕ್ಕೆ ಬಂದು ಮೇಲೆ ಹೋಗಿ ಇಂದ್ರನನ್ನು ತಿರುಗಿ ಮರೆಹೋಗಲು ಆಸ್ತೀಕನು ತಕ್ಷಕನನ್ನು ನೋಡಿ ನಿಲ್ಲೆಂದು ಹೇಳುವಿಕೆ.

ಉರಿಯ ಸಮ್ಮುಖಕಿೞಿಯುತಿೞಿಯುತ
ಭರದಲಂಬರಗತಿಗೆ ಗಮಿಸುತ
ತಿರುಗಿ ಸುರನಾಥನನು ನೋಡುತ್ತ ಕಾಯ್ದುಕೊಳ್ಳನುತ ।
ಹೊರಳುತಿರ್ದನು ಹೊಗೆಯೊಳಗೆ ಖೇ
ಚರರು ಹಾ ಹಾ ಕೆಟ್ಟನುರಗೇ
ಶ್ವರನುರಿದನೆನೆ ಕಂಡನಾಸ್ತಿಕನಾದ ದುಸ್ಥಿತಿಯ ॥ ೧೮

ಹೋ ಹೊ ನಿಲುನಿಲ್ಲೆನುತಲಾನಿಜ
ಬಾಹುದಂಡವ ನೆಗಹಿದನು ಮುನಿ
ಸಾಹಸಿಗನೇತಕ್ಕೆ ಬಾರನು ಪಾವಕನ ಮುಖಕೆ ।

ತಕ್ಷಕನು ಏಕೆ ಉರಿಯಲ್ಲಿ ಇನ್ನು ಬೀಳಲಿಲ್ಲವೆಂದು ಕೇಳಲು ಯಾಚಕನಿಗೆ ದಾನಮಾಡಿದ ಬಳಿಕ ಬೀಳುವನೆಂದು ಪುರೋಹಿತರ ಉತ್ತರ.

ದ್ರೋಹಿ ತಕ್ಷಕನೆಂದು ನೃಪವರ
ನಾಹಿತಾಗ್ನಿಗಳಿಂಗೆ ಬೆಸಸಲು
ದೇಹಿಯೆಂಬವಗಿತ್ತ ಬೞಿಕಿನ್ನಹುದು ಖಳದಹನ ॥ ೧೯

ಸುಡುವುದರಿದಲ್ಲಹಿಪನನು ನಭ
ದೊಡೆಯನಲ್ಲಿಂ ಬಂದನಿದೆ ಯಿದೆ
ಕೊಡು ಕುಮಾರಂಗಿಷ್ಟವರವನು ಮುನ್ನ ನೀನೆನಲು ।

ಬ್ರಾಹ್ಮಣನನ್ನು ನಿನಗೇನಬೇಕೆಂದು ಕೇಳುವಿಕೆ.

ನುಡಿದನೇನಿಷ್ಟಾರ್ಥ ಹೇಳೆನೆ
ನುಡದಿರಹಿಂಗಳ ನಿನ್ನ ಮುಖಕೀ
ತಡೆಯುದಿಹುದಿದಱಿಂ ಮದೀಪ್ಸಿತವರವಿದೇ ಯೆಂದ ॥ ೨೦

ಏನು ಹೇಳೇನೇನು ಹೇೞು ಮ
ಹಾನುಭಾವನೆ ಧರಣಿಯಮರನ
ಸೂನುವಲ್ಲವೆ ನೀನು ಹೇಳ್ವೈ ತಂಗೆ ಏಂ ನಿನಗೆ ।
ಹಾನಿ ಹೇೞೆನ್ನೊಂದ ಬೇಡೆನೆ
ತಾನಱಿಯೆನಿನ್ನೊಂದಗಿಂದನು
ಮಾನವೇಶ್ವರ ಸಲಿಸು ಕೃಪೆಯುಂಟಾದೊಡೆನಗೆಂದ ॥ ೨೧

ರಾಜನು ಋತ್ವಿಜರು ಮುಂತಾದವರಿಂದ ಹೇಳಿಸಲು ಯತ್ನಿಸಿ ಅವರೂ ಅಸಾಧ್ಯವೆಂದು ಯಾಗ ಮುಗಿಸು ಎನ್ನುವಿಕೆ.

ಹೇೞಿರೈ ಋಷಿವರರು ಸಭ್ಯರು
ಹೇೞಿರೈ ಋತ್ವಿಜರು ವಿಪ್ರರು
ಹೇೞಿರೈ ಬುದ್ಧಿಯನು ವಿಪ್ರಕುಮಾರನಿಂಗೆಂದ ।
ಹೇೞಿದರು ಮುನ್ನವೆ ನೃಪೋತ್ತಮ
ಹೇೞಲೇಕಿನ್ನಾ ಮಹಾತ್ಮರ
ಕಾಲಧೂಳಿಯ ಶಿಷ್ಯನೆಂದನು ನಗುತ ಮುನಿನಾಥ ॥ ೨೨

ತಪ್ಪದೆಂದರು ಋತ್ವಿಜರು ನೃಪ
ಕಲ್ಪಿತವಿದೆಂದರು ಸಭಾಸದ
ರೊಪ್ಪುವುದು ನಿನಗೆಂದರಾಭೂಸುರರು [1] ಪಾವಕನ ।
ಉಪ್ಪರವ ಮಾಣೆಂದನಿಂದ್ರನು
ನೊಪ್ಪವಾಯ್ತೆಮಗೆಂದರಮರರು
ತಪ್ಪದೈ ಪೂರ್ಣಾಹುತಿಯ ಮಾಡೆಂದರವನಿಪಗೆ ॥ ೨೩

---

1 ಭೂದ್ವಿಜರು, ಕ ಖ.

ರಾಜನು ಯಜ್ಞವು ನೆರವೇರಲಿಲ್ಲವೆಂದು ಚಿಂತಿಸಲು ಋತ್ವಿಜರು ಬ್ರಹ್ಮ
ದೇವರ ಸಂಕಲ್ಪವೇ ಇದೆಂದು ಪೂರ್ವಕಥೆಯನ್ನು ಹೇಳುವಿಕೆ.

ಬಂದೆ ಮತವಾಯ್ತೆಲ್ಲರಿಗೆ ನಾ
ನೆಂದು ಫಲವೇನೊಬ್ಬನಾನಕ
ಟಂದಗೆಡಿಸಿದನಧ್ವರವ ನೀ ಭೂಸುರೋತ್ತಮನ ।
ನಂದನನು ಹಾ ಯೆನುತ ಭೂಪತಿ
ನೊಂದು ಸುಯ್ಯುತ್ತಿರಲು ಪೇಳಿದ
ರೊಂದು ಕಥೆಯನು ಋತ್ವಿಜರು ಕೋವಿದರು ಭೂಪತಿಗೆ ॥ ೨೪

ಅಮೃತಮಥನಾಂತರದಲಂದಾ
ಯಮರರಿಗೆ ತಾ ಹೇಳಿದನು ತನ್ನಲಿ
ಮಮತೆಯುಳ್ಳೊಡೆ ತಾಯ ಶಾಪವ ಮೋಚಿಸುವುದೆಂದು ।
ಸುಮತಿ ವಾಸುಕಿ ಬೇಡಿಕೊಳಲಂ
ದಮರರೈದಿದರಾತ ಸಹಿತಾ
ಕಮಲಭವನೋಲಗಕೆ ಬಿನ್ನಹಮಾಡಿದರು ಹದನ ॥ ೨೫

ಜೀಯ ಬಿನ್ನಹವನ್ನ ಲಾಲಿಸು
ತಾಯ ಶಾಪವನುರಗಪತಿಯಿದ
ಬೀಯ್ಯಮಾಡುವೆನೆಂದು ಜನಮೇಜಯನು ಮಖವೆರವ ।
ಕಾಯಲರಿದೆಮಗೀತನನು ಕೈ
ಗಾಯಬೇಹುದು ಜಲಧಿಮಥನಸ
ಹಾಯನನು ನಿಮ್ಮಡಿಗಳೆಂದರು ಸುರರು ಕಮಲಜಗೆ ॥ ೨೬

ಎಂದೊಡಾತನು ಬೆದಱಬೇಡೆಲೆ
ಕಂದ ಕಲ್ಪಾಂತರ ಬದುಕು ಕುಲ
ನಂದನ ಜರತ್ಕಾರು ನಂದನನಭಯವನು ನಿಮಗೆ ।
ಕಂದ ಮಾಱ್ಪನು ಮಖಕೆ ತಡೆಯುವ
ನಿಂದ ಜನಿಸುವುದಂಜಬೇಡುರ
ಗೇಂದ್ರಕುಲಕೀವಿಪ್ರ ವರ್ಧನನೆಂದಬುಜಭವ ॥ ೨೭

ವೀರ ತೆಗೆ ಕೇಳದುನಿಮಿತ್ತ ಮ
ಹೋರಗರ ಕುಲರಕ್ಷಕ ಜರ
ತ್ಕಾರುನಂದನನೀತನಧ್ವರಘಾತಕನು ವಿಧಿಯು ।
ಪ್ರೇರಣೆ ಯದಲ್ಲದೆ ತಳವಡೆವು
ದಾರವಶವೆಲೆ ತಂದೆ ಹೋಗಲಿ
ಬೇಱುಗೊಳೆ ಬೇಡೆಂದು ಸಂತೈಸಿದರು ಋತ್ವಿಜರು ॥ ೧೮

ಸರ್ವಸಂಮತವಾಗಿ ಯಾಗಸಮಾಪ್ತಿಮಾಡಿ ಬಂದವರ ಪೂಜಿಸುವಿಕೆ.

ಸತ್ತವನಲಾ ವುರಿಯೊಳಗೆ ಹೊರ
ಳುತ್ತಲೈದನೆಯಾಜ್ಞೆಯನು ತಾ
ನುತ್ತರಿಸಲಳವಲ್ಲವೈ ದ್ವಿಜಮಂತ್ರಶಕ್ತಿಯನು ।
ಹೊತ್ತಿ ಹೋಗದ ಮುನ್ನವೇ ನೀ
ನಿತ್ತ ವರವನು ಪಾಲಿಸೆನೆ ಭೂ
ಪೋತ್ತಮನು ನಸು ನಗುತ ನುಡಿದನು ವರಸದಸ್ಯರಿಗೆ ॥ ೧೯

ಮಾನಭಂಗವೆಮರಣ ಹೋಗಲಿ
ದೀನನನು ಕೊಲಲೇಕೆ ವಿಪ್ರನ
ಸೂನುವನು ಮನ್ನಿಸಿದೆನಿಷ್ಟಾತಿಥಿಯಲಾ ತನಗೆ ।
ಏನನಿತ್ತು ದಧೀಚಿ ಮುಖ್ಯಮ
ಹಾನುಭಾವರು ಪಡೆದರಭಯ
ಸ್ಥಾನವನು ಮಖವಿದು ಮಹಾಸಂಪೂರ್ಣವಾಯ್ತೆಂದ ॥ ೨೦

ಮಾಡಿ ಪೂರ್ಣಾಹುತಿಯನೆನಲಾ
ಖೋಡಿಯೊಳಗಿನಿತಿಲ್ಲ ಸುರಪನ
ಜೋಡು ಮಾಡಲದೇಕೆ ಮಾತನು ಮನ್ನಿಸಿದೆ ಯೆನಲು ।
ಕೂಡೆ ಲೇಸೆಂದಾಮಹಾಜನ
ಕಾಡಮರನೇ ಕಲ್ಪತರು ದಯ
ಮಾಡುತಿಷ್ಟಾರ್ಥವನೆನುತಲಿರ್ದುದು ಸುರಸ್ತೋಮ ॥ ೨೧

ಎಸಗಿದರು ಪೂರ್ಣಾಹುತಿಯ ನಾ
ಋಷಿವರನು ಸರ್ವರನು ಸಂತ
ರ್ಪಿಸಿದನಿಷ್ಟಧನಪ್ರದಾನದಲಾತಪೋಧನರ ।
ವಸುಧೆಯರಸನು ಮುದದಲವಭೃಥ
ದೊಸಗೆ ಮಿಗೆ ಮಜ್ಜನವ ಮಾಡಿದ
ನಸಮವಿಭವದಲಖಿಳಜನ ನಿಜಬಂಧುಜನ ಸಹಿತ ॥ ೩೦

ತಕ್ಷಕನು ಬದುಕಿ ಹೋಗಲು ರಾಜನು ಆಸ್ತೀಕನನ್ನು ಸನ್ಮಾನಿಸುವಿಕೆ.

ಹೋ ಹೊ ಬದುಕಿದೆನೊಮ್ಮೆಗೆನ್ನಯ
ದೇಹ ವುಳಿದುದೆನುತ್ತ ವೀರಮ
ಹಾಹಿ ತಕ್ಷಕ ತೊಲಗಿದನು ಪಾವಕನ ಮುಖದಿಂದ ।
ಬೇಹ ಧನವನು ಕೊಟ್ಟನವನಿಪ
ನಾಹುತಿಯ ಶಾಲೆಯಲಿ ವಿಪ್ರನ
ನೂಹಿಸಿದ ಬಿನ್ನಾಣಿಗಧಿಕಮನೋನುರಾಗದಲಿ ॥ ೩೩

ಕಳುಹಿದನು ಕೈಮುಗಿದು ಮುನಿಸಂ
ಕುಳವನುಚಿತೋಕ್ತಿಯಲಿ ಮನ್ನಿಸಿ
ಬಲದಲಾಸ್ತೀಕನನಭೀಷ್ಟಧನಪ್ರದಾನದಲಿ ।
ಒಲವೆ ಮೆಱೆಯುದಿರ್ದೈ ತಹುದು ಮೇ
ಲಲಘುಹಯಮೇಧವನು ಮಾಪ್ಪೆನು
ಕೇಳಯ ಋತ್ವಿಜನಾಗಬೇಕೆಂದವನನವನೀಶ ॥ ೩೪

ತಂದೆ ನಿನ್ನವರಾವೆನುತ ಮುನಿ
ನಂದನನ ಕಳುಹಿದನು ಧರ್ಮದ
ಲಂದು ಧರೆಯನು ಪಾಲಿಸುತಲಿರ್ದನು ಮಹೀಪಾಲ ।
ಸಂದ ಪಿತೃಪೈತಾಮಹರ ಪದ
ದಿಂದ ಹರಿಪದಭಕ್ತನೆನಿಸಿ ಮು
ಕುಂದದಾಸನು ಮಾಡಿದನು ರಾಜ್ಯವನು ಮನವೊಲಿದು ॥ ೩೫

ಈ ರೀತಿ ಕೃತಕಾರ್ಯನಾಗಿ ಬಂದ ಆಸ್ತೀಕನನ್ನು ಶ್ಲಾಘಿಸಲು ಸಂತೋಷ ದಿಂದಿರುವಿಕೆ.

ಅತ್ತಲಾಸ್ತೀಕಾಖ್ಯನೈದಿದ
ನುತ್ತಮೋರಗರಾಜಮಂದಿರ
ದತ್ತ ಪರಿಜನ ವಿದುರುಗೊಳಲತ್ಯಧಿಕವಿಭವದಲಿ ।
ಎತ್ತು ಗನ್ನಡಿ ಗಳಶವಾದ್ಯದ
ಮೊತ್ತದೊಳಗಿಕ್ಕೆಲದಿ ಪಾಡಲು
ಹೆತ್ತ ತಾಯಣ್ಣಂದಿರಂಘ್ರಿಗೆ ನಮಿಸಿದನು ಮುನಿಪ ॥ ೩೬

ತೆಗೆದು ಬಿಗಿದಪ್ಪಿದನು ಹರುಷಾಂ
ಬುಗಳ ನಯನದ ತಳದ ಪುಳಕದ
ಹೊಗರ ಹೊಳಹಿನ ನಗೆ ಮೊಗದ ನಾಗೇಂದ್ರನೈತಂದು ।
ಬಗೆಯ ಬಯಕೆಯನಿತ್ತೆ ಮುನಿಮೌ
ಳಿಗಳ ರತ್ನವೆ ತನ್ನ ಹೃದಯದ
ದಗೆಯ ಡಾವರವಡಗಿತೆಂದರು ಹರಸಿ ಬಾಲಕನ ॥ ೩೭

ಬದುಕಿದೆವೆಲ್ಲೈ ತಂದೆ ನಾವಿಂ
ದುದಿಸಿದೆವೆಲ್ಲೈ ಪಾವಕನೊಳಗೆ
ಕುದಿವುತಿರ್ದೆವೆ ಯಂತ್ಯಕಾಲದ ಭಯಮಹಾಗ್ನಿಯಲಿ ।
ಉದಕಸುರಿಸಿದುದಾಯ್ತು [1] ತಂಗಿಯ
ಮದುವೆಯು ಫಲಿಸಿತೆಮ್ಮವೋಲಾ
ವುದಿತಭಾಗ್ಯರದಾರೆನು [2] ತ ಕೊಂಡಾಡಿದರು ಮುನಿಯ ॥ ೩೮

ಬೇಡು ಬೇಡೆಲೆ ಮಗನೆ ವರವೆನು
ಬೇಡು ಮೆಚ್ಚಿದೆವೆಮ್ಮ ವಂಶದ
ಕೇಡ ತಪ್ಪಿಸಿದಧಿಕಕರುಣಾನಿಧಿಯೆ ಗುಣನಿಧಿಯೆ ।

1 ಉದಿಸಿದುದುಪಲುವಾ ಕ, ಖ. 2 ದಾರುಭಾಪನುತ, ಕ. ಖ.

ನೋಡಲಪ್ರತಿಯಲ್ಲವೇ ನೀ
ಮಾಡಿದುಪಕೃತಿ ತಂದೆ ಬಯಕೆಯ
ಬೇಡಿಕೊಳ್ಳ ತಡೆಯದಿರು ನೀನೆಂದರನುಪಮಗೆ ॥ ೩೯

ಈ ಕಥೆಯನ್ನು ಕೇಳಿ ಹೇಳಿದವರಿಗೆ ಸರ್ಪಗಳ ಬಾಧೆ ಕೂಡದೆಂದು ಆಸ್ತಿಕನಪ್ಪಣೆ.

ಆವನಿದನೋದುವನು ಕೇಳುವ
ನಾವನಿದ ಮೆಚ್ಚರಿತವನು ಸಂ
ಭಾವಿಸುವ ದಿನದಲುದಯಾಸ್ತಮಯದೊಳಗವರುಗಳ [1] ।
ನೀವು ನಮ್ಮಯ ಕುಲಜರೊಳಗಾ
ರಾವರಾಗಲಿ ಮುಟ್ಟಲಾಗದು
ಕಾವುದಾಪುಣ್ಯಾತ್ಮರನು ನೀವೆಂದನಾಮುನಿಪ ॥ ೪೦

ಐಸಲೇ ನೀ ಬೇಡಿಕೊಂಡುದಿ
ದೇಸು ಘನವೆಲೆ ತಂದೆ ನೆನೆವರ
ದೇಶದೊಳಗಿದ್ದವರ ಮುಟ್ಟುವ ಮಾತದೇಕೆನುತ ।
ಸಾಸಿಗನನಪ್ಪಿದರು ಹರುಷಾ
ವೇಶದಲಿ ಮನಮುಬ್ಬಿಗಿ ಫನಪರಿ
ತೋಷದಲಿ ಕೊಂಡಾಡಿದರು ಮುನಿವರಕುಮಾರಕನ ॥ ೪೧

ವರಜರತ್ಕಾರುವಿಗೆ ನಾಗೇ
ಶ್ವರಿಜರತ್ಕಾರುವಿನಲುದಿಸಿದ
ಪರಮಋಷಿ ಯಾಸ್ತೀಕನುನ್ನತಕೀರ್ತಿ ಸತ್ಯನಿಧಿ ।
ಉರಗದತ್ತಣದಹಿಯ ಭಯವಿ
ಲ್ಲುರುತರದಿ ರಕ್ಷಿಪುದು ಪಠಿಸುವ
ನರರಿಗಿಲ್ಲಹಿಬಾಧೆ ಯೆಂದನು ಶೌನಕಗೆ ಸೂತ ॥ ೪೨

1 ದಯಮೇಣಾಸ್ತಮಯಸಮಯದಲಿ, ಕ. ಖ.

ಏನನೆಂಬೆನು ಪನ್ನಗರ ಸ
ನ್ಮಾನವನು ಸುಖದಿಂದ ತಂಗಿಯ
ಸೂನುವನು ಮುಂದಿಟ್ಟುಕೊಂಡು ಮಹಾನುಭಾವನನು ।
ಜ್ಞಾನವಂತರವೋಲು ಭಾವವ
ನೇನುವನು ತಾವಱಿಯದಾನಂ
ದಾನುಭವದಲಿ ಚರಿಸುತಿರ್ದರು ಧರ್ಮನಿಷ್ಠೆಯಲಿ ॥ ೪೩

ಫಲಕಥನ.

ಇದು ಮಹಾಮಂಗಳಮಹೋದಯ
ವಿದು ಮಹಾಯುಃಕೀರ್ತಿವರ್ಧನ
ವಿದು ವಿಷಯುಭಯರೋಗದಾರಿದ್ರ್ಯಾದಿದುಃಖಹರ ।
ಇದನು ಶೌನಕ ಕೇಳು ಸಂಕ್ಷೇ
ಪದಲಿ ಹೇೞಿದೆನಿನ್ನು ತಾನಾ
ವುದನು ನಿನಗಭಿವರ್ಣಿಸುವುದೆಂದಱುಹಿದನು ಸೂತ ॥ ೪೪

ಲೇಸನಾಡಿದೆ ಸೂತ ನೀನವ
ನೀಶ ಜನಮೇಜಯುಗೆ ಮುನಿಯುಂ
ದೈಸೆ ವೈಶಂಪಾಯನನೊರೆದ ಭಾರತಾಮೃತವ [1] ।
ವಾಸುದೇವನ ಪುಣ್ಯಕೀರ್ತನ
ವಾ ಸಭಾಗ್ಯರ ಪಾಂಡವರ ಕಥೆ
ಯೇಸಹುದದನು ವರ್ಣಿಪುದೆಮಗೆ ಪುಣ್ಯಕಥನವನು ॥ ೪೫

ಮನ್ನಿಸಿದ ನಾಸೂತನವ ಸಂ
ಪನ್ನಗುಣನಿಧಿ ಪಾವನಕಥಾ
ಕರ್ಣನ ಸುಕೌತುಕರಸಾಸ್ವಾದನಸುಲಂಪಟರ ।

[1] ನುಸುರಿದಭಾರತವನಾದ್ಯಂತವನುತವುಗೆ, ಕ. ಖ.

ಧನ್ಯನಾದೆನೆನುತ್ತ ನೆನೆದನು
ತನ್ನ ಮನದಲಿ ಪರಮಕಾರು
ಣ್ಯಾರ್ಣವನ ನಿತ್ಯಾತ್ಮನಾರಾಯಣನ ಶ್ರೀಪದವ ॥

ಕರಿವದನವಾಗ್ದೇವಿನಾರದ
ಪರಮವೇದವ್ಯಾಸಷಣ್ಮುಖ
ಗಿರಿಜೆಸುರರಧಿನಾಥಸನಕಾದಿಗಳ ದಿಗಧಿಪರ ।
ಹರಿಹರರ ಕಮಲಜನ ರವಿಶಶಿ
ಧರಣಿಶುಕವಾಲ್ಮೀಕಿಗಳ ವರ
ಚರಣಗಳ ನೆನೆವುತ್ತ ಭಾರತಕಥೆಯ ಹೇಳಿದನು ॥

ಹದಿನೆಂಟನೆಯ ಸಂಧಿ ಮುಗಿದುದು.